ಶುಕ್ರವಾರ, ಏಪ್ರಿಲ್ 4, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 93 | ಪುಟ 14
www.prajavani.net
prajavani.net prajavani prajavani prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಟ್ರಂಪ್ ಪ್ರತಿಸುಂಕ: ಆರ್ಥಿಕತೆಗೆ ಹೊಡೆತ?
ಸಾಹಿತಿ ಪಿ.ವಿ ನಾರಾಯಣ ಇನ್ನಿಲ್ಲ 5
25 ಸಾವಿರ ಶಿಕ್ಷಕರ ನೇಮಕ ಅಸಿಂಧು 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
76,295	23,250	₹93,400 (ಬೆಂಗಳೂರು)	₹1.01 ಲಕ್ಷ (ಬೆಂಗಳೂರು)	85.30

ಬಾಹ್ಯಾಕಾಶ ಸಂಶೋಧನೆ: ಅನುದಾನ ಕಡಿತ

ಕೇಂದ್ರ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ಇಸ್ರೊ ಮತ್ತು ಬಾಹ್ಯಾಕಾಶ ಸಂಶೋಧನೆಗೆ ಬಜೆಟ್‌ನಲ್ಲಿ ಮೀಸಲಿಟ್ಟ ಅನುದಾನದಲ್ಲಿ ಕಡಿತವಾಗಿದೆ



(ಆಧಾರ: ರಾಜ್ಯಸಭೆಗೆ ಕೇಂದ್ರ ಸರ್ಕಾರ ನೀಡಿದ ಮಾಹಿತಿ)
(*2025ರ ಫೆಬ್ರುವರಿ ವರೆಗಿನ ಮಾಹಿತಿ)

ಭಾರತದ ಸರಕುಗಳ ಮೇಲೆ ಶೇ 27ರಷ್ಟು ಪ್ರತಿಸುಂಕ ಹೇರಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್

ವ್ಯಾಪಾರ ಸಮರಕ್ಕೆ ರಣಕಹಳೆ

ನವದೆಹಲಿ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತ ಸೇರಿ ತನ್ನ ಪಾಲುದಾರರಾದ 180 ರಾಷ್ಟ್ರಗಳ ಮೇಲೆ ಪ್ರತಿ ಸುಂಕದ ಅಸ್ತ್ರವನ್ನು ಗುರುವಾರ ಝಳಪಿಸಿದ್ದು, ಜಾಗತಿಕ ವ್ಯಾಪಾರ ಸಮರಕ್ಕೆ ರಣಕಹಳೆ ಊದಿದ್ದಾರೆ.

ಅಮೆರಿಕಕ್ಕೆ ರಫ್ತು ಮಾಡುವ ಎಲ್ಲಾ ಸರಕುಗಳ ಮೇಲೆ ಶೇ 10ರಷ್ಟು ಮೂಲ ಸುಂಕ ಘೋಷಿಸಿದ್ದಾರೆ. ಪಾಲುದಾರ ರಾಷ್ಟ್ರಗಳಿಗೆ ಪ್ರತಿಸುಂಕದ ಬಿಸಿ ಮುಟ್ಟಿಸಿದ್ದಾರೆ. ಭಾರತದ ಮೇಲೆ ಶೇ 27ರಷ್ಟು ಪ್ರತಿಸುಂಕ ಹೇರಿದ್ದಾರೆ. ಆ ಮೂಲಕ ಒಂದು ದಶಕದ ಅಮೆರಿಕದ ವ್ಯಾಪಾರ ನೀತಿಯು ಅಂತ್ಯಗೊಂಡಿದ್ದು, ಹೊಸ ಸುಂಕ ಪರ್ವವು ಶುರುವಾಗಿದೆ.

ಪ್ರತಿಸ್ಪರ್ಧಿ ರಾಷ್ಟ್ರಗಳಾದ ಚೀನಾ, ವಿಯೆಟ್ನಾಂ ಹಾಗೂ ನೆರೆಯ ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶಕ್ಕೆ ಹೋಲಿಸಿದರೆ ಭಾರತಕ್ಕೆ ವಿಧಿಸಿರುವ ಪ್ರತಿ ಸುಂಕದ ಪ್ರಮಾಣ ಕಡಿಮೆಯಿದೆ.

8ನೇ ಪುಟ ನೋಡಿ

ಜಿಡಿಪಿ ಪ್ರಗತಿಗೆ ಪೆಟ್ಟು

ಟ್ರಂಪ್ ನೀತಿಯು ದೇಶದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಪ್ರಗತಿಯ ಮೇಲೆ ಪರಿಣಾಮ ಬೀರಲಿದೆ. 2025–26ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 0.50ರಷ್ಟು ಇಳಿಕೆಯಾಗಲಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಜಿಡಿಪಿಯು ಶೇ 6.5ರಷ್ಟು ಪ್ರಗತಿ ಕಾಣಲಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಅಂದಾಜಿಸಿದೆ. ಇದು ಶೇ 6ಕ್ಕೆ ತಗ್ಗುವ ಸಾಧ್ಯತೆಯಿದೆ ಎಂದು ಆರ್ಥಿಕ ಸಲಹಾ ಸಂಸ್ಥೆಯಾದ ಇವೈ ಮುಖ್ಯ ಸಲಹೆಗಾರ ಡಿ.ಕೆ. ಶ್ರೀವಾಸ್ತವ ಹೇಳಿದ್ದಾರೆ. ಅಲ್ಲದೆ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತದ ರಫ್ತು ವಹಿವಾಟಿನಲ್ಲಿ ಶೇ 2ರಿಂದ ಶೇ 3ರಷ್ಟು ಕುಸಿತ ವಾಗುವ ಸಾಧ್ಯತೆಯಿದೆ ಎಂದರು.

ಸಿಗಡಿ ರವಾನೆಗೆ ತೊಡಕು: ಭಾರತದ ಸಿಗಡಿಗಳಿಗೆ ಅಮೆರಿಕವು ಬಹುದೊಡ್ಡ ಮಾರುಕಟ್ಟೆಯಾಗಿದೆ. ದೇಶದ ಒಟ್ಟು ಸಿಗಡಿ ರಫ್ತು ಪೈಕಿ ಶೇ 40ರಷ್ಟು ಅಮೆರಿಕಕ್ಕೆ ಪೂರೈಕೆಯಾಗಲಿದೆ. ಟ್ರಂಪ್ ನೀತಿಯು ಇದಕ್ಕೆ ಪೆಟ್ಟು ನೀಡಲಿದೆ.

2023–24ರಲ್ಲಿ ಭಾರತವು 7.16 ಲಕ್ಷ ಟನ್‌ನಷ್ಟು ಸಿಗಡಿ ರಫ್ತು ಮಾಡಿದೆ. ದೇಶದ ಸಮುದ್ರ ಉತ್ಪನ್ನಗಳ ರಫ್ತು ಮೌಲ್ಯ **₹21,700** ಕೋಟಿ ಆಗಿದೆ

ಅಮೆರಿಕಕ್ಕೆ ಜಮಖಾನೆಗಳನ್ನು ರಫ್ತು ಮಾಡಲಾಗುತ್ತದೆ. 2023–24ರಲ್ಲಿ **₹17** ಸಾವಿರ ಕೋಟಿ ಮೌಲ್ಯದ ಜಮಖಾನೆಗಳನ್ನು ರಫ್ತು ಮಾಡಲಾಗಿದೆ

ವಲಯವಾರು ಹಾಲಿ ಸುಂಕ



1. ಕೃಷಿ, ಮಾಂಸ, ಸಂಸ್ಕರಿತ ಆಹಾರ
2. ವಾಹನಗಳು
3. ಎಲೆಕ್ಟ್ರಿಕಲ್, ಟೆಲಿಕಾಂ, ಎಲೆಕ್ಟ್ರಾನಿಕ್ಸ್ ಉತ್ಪನ್ನಗಳು
4. ವೈದ್ಯಕೀಯ, ಚರ್ಮ, ಕಾಗದ, ಗಾಜು, ಹಡಗು, ವಿಮಾನ ಹಾಗೂ ಇತರೆ ವರ್ಗಗಳ ಉತ್ಪನ್ನಗಳು
5. ಪ್ಲಾಸ್ಟಿಕ್, ವಸ್ತುಗಳು
6. ಯಂತ್ರೋಪಕರಣಗಳು, ಕಂಪ್ಯೂಟರ್‌ಗಳು
7. ಜವಳಿ ಮತ್ತು ಉಡುಪು

ವೈದ್ಯಕೀಯ ಪರಿಕರ

ಅಮೆರಿಕಕ್ಕೆ ಗುಣಮಟ್ಟದ ವೈದ್ಯಕೀಯ ಪರಿಕರಗಳನ್ನು ರಫ್ತು ಮಾಡುವ ದೇಶಗಳ ಪೈಕಿ ಭಾರತವೂ ಒಂದಾಗಿದೆ. 2023–24ರಲ್ಲಿ ₹6,100 ಕೋಟಿ ಮೌಲ್ಯದ ವೈದ್ಯಕೀಯ ಪರಿಕರಗಳನ್ನು ರಫ್ತು ಮಾಡಿದೆ. ಆದರೆ, ಇದೇ ಅವಧಿಯಲ್ಲಿ ಅಲ್ಲಿಂದ ಭಾರತಕ್ಕೆ ₹12,800 ಕೋಟಿ ಮೌಲ್ಯದ ಪರಿಕರಗಳು ಆಮದಾಗಿವೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಮಸೂದೆ ಪರವಾಗಿ 128, ವಿರುದ್ಧ 95 ಮತಗಳ ಚಲಾವಣೆ

ವಕ್ಫ್ ಮಸೂದೆ ರಾಜ್ಯಸಭೆಯಲ್ಲಿ ಅಂಗೀಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಯ ಅಂಗೀಕಾರ ಪಡೆದಿರುವ ವಕ್ಫ್ (ತಿದ್ದುಪಡಿ) ಮಸೂದೆಗೆ ರಾಜ್ಯಸಭೆಯು ಶುಕ್ರವಾರ ನಸುಕಿನ 2.30ಕ್ಕೆ ಅಂಗೀಕಾರ ನೀಡಿತು. ಮಸೂದೆಯ ಪರವಾಗಿ 128 ಮಂದಿ, ವಿರುದ್ಧವಾಗಿ 95 ಮಂದಿ ಮತ ಚಲಾಯಿಸಿದರು.

ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಿದ ಕೇಂದ್ರ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಮುಸ್ಲಿಮರ ಹಕ್ಕುಗಳನ್ನು ಈ



ಮಸೂದೆಯು ಕಿತ್ತುಕೊಳ್ಳುತ್ತದೆ ಎಂಬ ಆರೋಪಗಳನ್ನು ಅಲ್ಲಗಳೆದರು.

‘ಈ ಮಸೂದೆಯು ಮುಸ್ಲಿಂ ಮಹಿಳೆಯರಿಗೆ ಬಲ ತುಂಬುವ, ಮುಸ್ಲಿಮರಲ್ಲಿ ಎಲ್ಲರ ಹಕ್ಕುಗಳನ್ನು ರಕ್ಷಿಸುವ ಉದ್ದೇಶ ಹೊಂದಿದೆ’ ಎಂದರು.

ಮಸೂದೆಯನ್ನು ವಿರೋಧಿಸಿ ವಿರೋಧ ಪಕ್ಷಗಳ ಕೆಲವು ಸದಸ್ಯರು ಸದನದಲ್ಲಿ ಗುರುವಾರ ಕಪ್ಪು ವಸ್ತ್ರ ಧರಿಸಿದ್ದರು. ಈ ಮಸೂದೆಗೂ ಧರ್ಮಕ್ಕೂ ಸಂಬಂಧ ಇಲ್ಲ. ಇದು ಆಸ್ತಿಗೆ ಮಾತ್ರ ಸಂಬಂಧಿಸಿದೆ ಎಂದು ರಿಜಿಜು ವಿವರಣೆ ನೀಡಿದರು.

ಲೋಕಸಭೆಯಲ್ಲಿ ವ್ಯಕ್ತವಾದಂತೆಯೇ, ರಾಜ್ಯಸಭೆಯಲ್ಲಿಯೂ ಈ ಮಸೂದೆಗೆ ವಿರೋಧ ಪಕ್ಷಗಳ ಸದಸ್ಯರಿಂದ ವಿರೋಧ ವ್ಯಕ್ತವಾಯಿತು. ಮಸೂದೆಯು ಮುಸ್ಲಿಮರನ್ನು ಹತ್ತಿಕ್ಕಲು ಯತ್ನಿಸುತ್ತದೆ, ಇದು ದೇಶದಲ್ಲಿ ತಾರತಮ್ಯದ ಬೀಜವನ್ನು ಬಿತ್ತುತ್ತದೆ ಎಂದು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಕಳವಳ ವ್ಯಕ್ತಪಡಿಸಿದರು.

ಮಸೂದೆಯಲ್ಲಿರುವ ಅಂಶಗಳು ಹಾಗೂ ಮಸೂದೆಯ ಉದ್ದೇಶವು ಸರ್ಕಾರದ ನಡೆಯ ಬಗ್ಗೆ ಪ್ರಶ್ನೆಗಳು ಏಳುವಂತೆ ಮಾಡಿದೆ ಎಂದು ಆರ್‌ಜೆಡಿ ಸದಸ್ಯ ಮನೋಜ್ ಝಾ ಹೇಳಿದರು. ಮಸೂದೆಗೆ ರಾಜ್ಯಸಭೆಯ ಅಂಗೀಕಾರ ಪಡೆಯಲು ಅವಸರ ಮಾಡುವುದು ಬೇಡ, ಮಸೂದೆಯನ್ನು ಸಂಸತ್ತಿನ ಪರಿಶೀಲನಾ ಸಮಿತಿಗೆ ಮತ್ತೊಮ್ಮೆ ಒಪ್ಪಿಸಬೇಕು ಎಂದು ಅವರು ಒತ್ತಾಯಿಸಿದರು.

ವಿವಿಧೆಡೆ ತಂಪೆರೆದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಸೇರಿದಂತೆ ರಾಜ್ಯದ ವಿವಿಧೆಡೆ ಗುರುವಾರ ಮಳೆ ಸುರಿದಿದೆ. ಬೀದರ್ ಜಿಲ್ಲೆಯ ಹಲವೆಡೆ ಗುಡುಗು, ಬಿರುಗಾಳಿ ಸಹಿತ ಮಳೆಯಾಗಿದ್ದರೆ, ವಿಜಯನಗರ, ಬಾಗಲಕೋಟೆ, ಬೆಳಗಾವಿ, ಗದಗ, ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಕಡೆಗಳಲ್ಲೂ ಗುಡುಗಿನೊಂದಿಗೆ ಮಳೆ ಆಗಿದೆ.

ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಸುರಿದ ಮಳೆಗೆ ಭೂಮಿ ತಂಪಾಗಿದೆ. ವಿಜಯನಗರ ಜಿಲ್ಲೆಯಾದ್ಯಂತ ಬುಧವಾರ ಮಧ್ಯರಾತ್ರಿ ಮತ್ತು ಗುರುವಾರ ನಸುಕಿನಲ್ಲಿ ಉತ್ತಮ ಮಳೆಯಾಗಿದೆ. ‘ಹೊಸಪೇಟೆ ಸಮೀಪದ ಹೊಸೂರು ಮಾಗಣೆಯಲ್ಲಿ 25 ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಬಾಳೆ ನಾಶವಾಗಿದೆ. ಒಟ್ಟಾರೆ ನಷ್ಟದ ಬಗ್ಗೆ ಮಾಹಿತಿ ಪಡೆಯಲಾಗುತ್ತಿದೆ’ ಎಂದು ತೋಟಗಾರಿಕಾ ಇಲಾಖೆ ಉಪನಿರ್ದೇಶಕ ಚಿದಾನಂದಪ್ಪ ತಿಳಿಸಿದ್ದಾರೆ.

ಚಿಕ್ಕಮಗಳೂರು, ಚಿತ್ರದುರ್ಗ, ಶಿಕಾರಿಪುರ, ಆಲ್ದೂರು ಹೋಬಳಿ ಮತ್ತು ತರೀಕೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಬಿರುಸಿನ ಮಳೆ, ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಹ್ಮಣ್ಯದಲ್ಲಿ ಸಾಧಾರಣ ಮಳೆ ಆಗಿದೆ. ಕಲ್ಯಾಣ ಕರ್ನಾಟಕದ ಕಲಬುರಗಿ ಹಾಗೂ ಕೊಪ್ಪಳ ಜಿಲ್ಲೆಯ ಹಲವೆಡೆ ಮಳೆಯಾಗಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಜಂಗಮರ ಕಲ್ಗುಡಿ ಗ್ರಾಮದ ಖಾಸಗಿ ಶಾಲೆಯ ಶಿಕ್ಷಕಿ ಹರಿತಾ ಶ್ರೀನಿವಾಸ (26) ಬೆಳಿಗ್ಗೆ ಶಾಲೆಗೆ ತೆರಳುವಾಗ ವಿದ್ಯುತ್ ತಂತಿ ಮೈ ಮೇಲೆ ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಅವರು ತಮ್ಮ ಮಾವನ ಬೈಕ್‌ನಲ್ಲಿ ಮನೆಯಿಂದ ಕಲ್ಗುಡಿ ಗ್ರಾಮದ ಮುಖ್ಯರಸ್ತೆಗೆ ಬರುತ್ತಿದ್ದರು.

ಸಕಲೇಶಪುರದಲ್ಲಿ ಗುರುವಾರ ರಾತ್ರಿ ಧಾರಾಕಾರವಾಗಿ ಸುರಿದ ಮಳೆಯಿಂದ ರಾಜಬೀದಿಯಲ್ಲಿ ಮಳೆ ನೀರು ಹೊಳೆಯಂತೆ ಹರಿಯಿತು
ಚಿತ್ರ/ ಜಾನೇಕೆರೆ ಆರ್. ಪರಮೇಶ್

ಮಳೆ ಪ್ರಮಾಣ

- ಹೊಸಪೇಟೆಯ ಅಮರಾವತಿ ಪ್ರದೇಶದಲ್ಲಿ 12.8 ಸೆಂ.ಮೀ.
- ಟಿ.ಬಿ. ಡ್ಯಾಂನಲ್ಲಿ 7.20 ಸೆಂ.ಮೀ.
- ಮರಿಯಮ್ಮನಹಳ್ಳಿಯಲ್ಲಿ 6.25 ಸೆಂ.ಮೀ.

ಆಸ್ತಿ ವಿವರ ಪ್ರಕಟಿಸಿದ ‘ಸುಪ್ರೀಂ’ ನ್ಯಾಯಮೂರ್ತಿಗಳು

ನವದೆಹಲಿ (ಪಿಟಿಐ): ಪಾರದರ್ಶಕತೆ ಉದ್ದೇಶದಿಂದ ತಮ್ಮ ಆಸ್ತಿ ವಿವರಗಳನ್ನು ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ನ್ಯಾಯಮೂರ್ತಿಗಳ ಸಭೆಯಲ್ಲಿ ನಿರ್ಧರಿಸಲಾಗಿದೆ.

‘ನ್ಯಾಯಮೂರ್ತಿಗಳು ತಮ್ಮ ಆಸ್ತಿ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಬಹಿರಂಗ ಪಡಿಸಬೇಕು. ಇದು ಕಡ್ಡಾಯವಲ್ಲ. ಇದು ಸಂಪೂರ್ಣವಾಗಿ ಸ್ವಯಂಪ್ರೇರಿತ ಪ್ರಕ್ರಿಯೆಯಾಗಿರಲಿದೆ. ಆದರೆ, ಆಸ್ತಿ ಕುರಿತು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿವರ ಕೇಳಿದಾಗ ನೀಡಲೇಬೇಕಾಗುತ್ತದೆ’ ಎಂದು ಸಭೆಯಲ್ಲಿ ನಿರ್ಧರಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಸೇರಿದಂತೆ 30 ನ್ಯಾಯಮೂರ್ತಿಗಳು ಈವರೆಗೆ ತಮ್ಮ ಆಸ್ತಿ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದಾರೆ. ಇನ್ನು ಮುಂದೆ ನ್ಯಾಯಮೂರ್ತಿಗಳು ಅಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ ಈ ಮಾಹಿತಿ ನೀಡಬೇಕಾಗುತ್ತದೆ. ದೆಹಲಿ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ಮನೆಯಲ್ಲಿ ಬೆಂಕಿ ನಂದಿಸುವ ವೇಳೆ ದೊಡ್ಡ ಮೊತ್ತದ ಹಣ ಇತ್ತೀಚೆಗೆ ಪತ್ತೆಯಾಗಿತ್ತು. ಇದು ದೊಡ್ಡ ವಿವಾದವನ್ನೇ ಸೃಷ್ಟಿಸಿತ್ತು.

ಕಾಲೇಜಿಗೆ ಪ್ರವೇಶ ಪಡೆಯದಿದ್ದರೂ ಮುಂದಿನ ಸುತ್ತಿಗೆ ಅವಕಾಶ

ಸಿಇಟಿ: ಸೀಟು ಹಂಚಿಕೆಗೆ ಹೊಸ ವಿಧಾನ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವಿದ್ಯಾರ್ಥಿಸ್ನೇಹಿ ವಿಧಾನ ರೂಪಿಸಿದೆ. ಕಾಲೇಜು ಆಯ್ಕೆ ಮಾಡಿಕೊಂಡರೂ ಪ್ರವೇಶ ಪಡೆಯದ ವಿದ್ಯಾರ್ಥಿಗಳು ಮತ್ತೊಮ್ಮೆ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶ ಸಿಗಲಿದೆ.

ಇದೇ ಮೊದಲ ಬಾರಿ ರೂಪಿಸಲಾದ ಹೊಸ ವಿಧಾನವನ್ನು 2025–26ನೇ ಸಾಲಿನಿಂದಲೇ ಅನ್ವಯಿಸಲಾಗುವುದು. ಪ್ರಕ್ರಿಯೆಯಿಂದ ಹೊರಹೋದವರು ₹750 ದಂಡ ಶುಲ್ಕ ಪಾವತಿಸಿ, ಮತ್ತೆ ಸೀಟು ಹಂಚಿಕೆಯ ಉಳಿದ ಸುತ್ತುಗಳಿಗೆ ಮರುಪ್ರವೇಶ ಪಡೆಯಬಹುದು.

ಎಂಜಿನಿಯರಿಂಗ್, ಬಿ.ಎಸ್‌ಸಿ ಕೃಷಿ, ಬಿ.ಎಸ್‌ಸಿ ನರ್ಸಿಂಗ್, ಪಶುವೈದ್ಯಕೀಯ, ಯೋಗ ಮತ್ತು ನ್ಯಾಚುರೋಪತಿ, ಬಿ-ಫಾರ್ಮಾ ಮತ್ತು ಫಾರ್ಮಾ-ಡಿ, ಆರ್ಕಿಟೆಕ್ಚರ್, ಬಿಪಿಟಿ, ಬಿಪಿಒ, ಬಿಎಸ್‌ಸಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆದವಿದ್ಯಾರ್ಥಿಗಳು ತಾವು ಪಡೆದ ರ್‍ಯಾಂಕಿಂಗ್‌ಗೆ ಅನುಗುಣವಾಗಿ ಆಯ್ಕೆ ಮಾಡಿಕೊಂಡ (ಆಪ್ಷನ್) ಕಾಲೇಜುಗಳು ದೊರೆತ ನಂತರ ಚಾಯ್ಸ್ 1 ನಮೂದಿಸಿ, ಕೆಇಎ ಖಾತೆಗೆ ಶುಲ್ಕ ಪಾವತಿಸುತ್ತಿದ್ದರು. ಅಂಥವರು ಆ ಕಾಲೇಜುಗಳಿಗೆ ಕಡ್ಡಾಯವಾಗಿ ಪ್ರವೇಶ ಪಡೆಯಬೇಕಿತ್ತು. ಒಂದು ವೇಳೆ ಪ್ರವೇಶ ಪಡೆಯದಿದ್ದರೆ ಅವರು ಆಯ್ಕೆ ಪ್ರಕ್ರಿಯೆಯಿಂದ ಹೊರಗೆ ಹೋಗುತ್ತಿದ್ದರು. ಶುಲ್ಕವನ್ನೂ ಕಳೆದುಕೊಳ್ಳುತ್ತಿದ್ದರು. ‘ಸೀಟು ಹಂಚಿಕೆಯಲ್ಲಿ ತಾವು ನಮೂದಿಸಿದ್ದ ಕಾಲೇಜು ಸಿಕ್ಕವರು ಚಾಯ್ಸ್ 1 ನಮೂದಿಸಿದರೆ, ಸಿಗದೇ ಇದ್ದವರು ಚಾಯ್ಸ್ 2, ಚಾಯ್ಸ್ 3 ನಮೂದಿಸಿ, ಮುಂದಿನ ಸುತ್ತಿನಲ್ಲಿ ಭಾಗವಹಿಸುತ್ತಾರೆ.

4B ಪುಟ ನೋಡಿ

ಅಂಕಿ ಅಂಶ

3.71 ಲಕ್ಷ — ಕೆಇಎಗೆ ಸಲ್ಲಿಕೆಯಾದ ಅರ್ಜಿಗಳು

3.30 ಲಕ್ಷ — ಏ.16,17ಕ್ಕೆ ಸಿಇಟಿ ಬರೆಯಲಿರುವ ವಿದ್ಯಾರ್ಥಿಗಳು

1.29 ಲಕ್ಷ — ಲಭ್ಯವಿರುವ ಒಟ್ಟು ಸೀಟುಗಳು

ತಪ್ಪು ಚಾಯ್ಸ್ ನಮೂದಿಸಿದ ವಿದ್ಯಾರ್ಥಿಗಳು ಸಂಕಷ್ಟ ಅನುಭವಿಸುತ್ತಿದ್ದರು. ಹೊಸ ವಿಧಾನ ದಿಂದ ಪ್ರತಿಭಾವಂತರಿಗೆ ಅನ್ಯಾಯ ಆಗದು, ಸೀಟ್ ಬ್ಲಾಕಿಂಗ್‌ಗೆ ಅವಕಾಶ ಇರದು

ಎಚ್. ಪ್ರಸನ್ನ
ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

ಪ್ರವೇಶಕ್ಕೆ ‘ಸೀಟು ಖಚಿತತೆ ಪತ್ರ’

‘ಸೀಟ್ ಬ್ಲಾಕಿಂಗ್’ ದಂಧೆಯನ್ನು ಹತ್ತಿಕ್ಕಲು ಈ ಬಾರಿ ಹಲವು ಕ್ರಮಕೈಗೊಂಡಿರುವ ಕೆಇಎ, ಸೀಟು ಹಂಚಿಕೆಯಾದ ವಿದ್ಯಾರ್ಥಿಗಳಿಗೆ ಕಾಲೇಜು ಪ್ರವೇಶ ಪತ್ರದ ಬದಲು ಸೀಟು ಖಚಿತತೆ ಪತ್ರ ನೀಡಲು ಮುಂದಾಗಿದೆ.

ವಿವಿಧ ಕೋರ್ಸ್‌ಗಳಲ್ಲಿ ಕಾಲೇಜುಗಳು ಹಂಚಿಕೆಯಾದಾಗ ವಿದ್ಯಾರ್ಥಿಗಳು, ನಿಗದಿತ ಶುಲ್ಕ ಪಾವತಿಸಿದ ನಂತರ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು, ಕಾಲೇಜುಗಳಲ್ಲಿ ಪ್ರವೇಶ ಪಡೆಯಬಹುದಿತ್ತು. ಆದರೆ, ಅವರು ಪ್ರವೇಶ ಪಡೆದರೋ, ಇಲ್ಲವೋ ಎನ್ನುವ ಖಚಿತ ಮಾಹಿತಿ ಕೆಇಎಗೆ ಸಿಗುತ್ತಿರಲಿಲ್ಲ.

4B ಪುಟ ನೋಡಿ

ಸಿಟಿ ಕೋ ಆಪರೇಟಿವ್ ಬ್ಯಾಂಕ್‌ಗೆ ₹64.50 ಕೋಟಿ ಲಾಭ

ಬೆಂಗಳೂರು: ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ 2024-25ರ ಆರ್ಥಿಕ ಸಾಲಿನಲ್ಲಿ ₹64.50 ಕೋಟಿ ಲಾಭ ಗಳಿಸಿದೆ.

118 ವರ್ಷಗಳ ಇತಿಹಾಸ ಇರುವ ಬ್ಯಾಂಕ್ ಬೆಂಗಳೂರಿನಲ್ಲಿ 20, ಮೈಸೂರಿನಲ್ಲಿ 1, ರಾಮನಗರದಲ್ಲಿ 1 ಸೇರಿ ಒಟ್ಟು 22 ಶಾಖೆಗಳನ್ನು ಹೊಂದಿದೆ. ಬ್ಯಾಂಕಿನ ನಿವ್ವಳ ಅನುತ್ಪಾದಕ ಸಾಲ ಶೂನ್ಯವಾಗಿದೆ. ಬ್ಯಾಂಕ್‌ನ ವಹಿವಾಟು ₹3540.24 ಕೋಟಿ ಮೀರಿದೆ. ಪ್ರಸಕ್ತ 2024-25ರ ಸಾಲಿನಲ್ಲಿ ಆದಾಯ ತೆರಿಗೆ/ಅವಕಾಶ ಪೂರ್ವ ₹64.50 ಕೋಟಿ ಲಾಭ ಗಳಿಸಿದೆ. ತೆರಿಗೆ/ಅವಕಾಶಗಳ ನಂತರ 29.03 ಕೋಟಿ ನಿವ್ವಳ ಲಾಭ ಗಳಿಸಿದೆ.

ಬ್ಯಾಂಕಿನ ದುಡಿಯುವ ಬಂಡವಾಳ ₹2779.00 ಕೋಟಿಯಷ್ಟು ಇದ್ದು, ₹2158.77 ಕೋಟಿ ಠೇವಣಿ ಸಂಗ್ರಹಿಸಿದೆ. ಆಪದ್ಧನ ನಿಧಿ, ಇತರೆ ನಿಧಿಗಳು ₹524.30 ಕೋಟಿ ಇದೆ. ₹1381.47 ಕೋಟಿ ಸಾಲ ನೀಡಿದ್ದು, ಬಂಡವಾಳಗಳ ಮೊತ್ತ ₹95.93 ಕೋಟಿ ಇದೆ. ಜೊತೆಗೆ ₹1235.09 ಕೋಟಿಯನ್ನು ಸರ್ಕಾರಿ ಸಾಲ ಪತ್ರ ಮತ್ತು ಇತರ ಕಡೆಗಳಲ್ಲಿ ತೊಡಗಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷ ಆವಲಹಳ್ಳಿ ಚಂದ್ರಪ್ಪ ಆರ್. ತಿಳಿಸಿದ್ದಾರೆ.


ಆವಲಹಳ್ಳಿ ಚಂದ್ರಪ್ಪ ಆರ್.

ಜೊತೆಗೆ ಬ್ಯಾಂಕು ಷೇರು ಸಂಗ್ರಹದಲ್ಲಿ, ಸ್ವಂತ ನಿಧಿ ಕ್ರೋಡೀಕರಣದಲ್ಲಿ, ಠೇವಣಿ ಸಂಗ್ರಹಣೆ, ಸಾಲ ನೀಡಿಕೆಯಲ್ಲಿ ಮತ್ತು ಲಾಭ ಗಳಿಕೆಯಲ್ಲಿ ಕರ್ನಾಟಕ ರಾಜ್ಯದ ಎಲ್ಲ ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಅಗ್ರ ಸ್ಥಾನದಲ್ಲಿದೆ ಎಂದು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಪಿ.ಮಂಜುನಾಥ ಮಾಹಿತಿ ನೀಡಿದ್ದಾರೆ.

ಈಗ ನನ್ನ ನೆನಪಾಗಲಿಲ್ಲ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೆಹಲಿ ಕರ್ನಾಟಕ ಭವನ ಉದ್ಘಾಟನೆಗೆ ಆಹ್ವಾನ ಇರಲಿಲ್ಲ. ಹಾಗಾಗಿ, ಹೋಗಲಿಲ್ಲ. ನಾನು ಉಪ ಮುಖ್ಯಮಂತ್ರಿಯಾಗಿದ್ದಾಗ ಶಂಕುಸ್ಥಾಪನೆ ನೆರವೇರಿಸಿದ್ದೆ. ಈಗ ಅವರಿಗೆ ನೆನಪಾಗಲಿಲ್ಲ ಎನಿಸುತ್ತದೆ'ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ನಮ್ಮೆಲ್ಲರ ಪ್ರತಿನಿಧಿಯಾಗಿ ಮುಖ್ಯಮಂತ್ರಿ ಹೋಗಿದ್ದಾರೆ. ಉಪ ಮುಖ್ಯಮಂತ್ರಿ, ಇತರೆ ಸಚಿವರ ದೆಹಲಿ ಭೇಟಿ, ವರಿಷ್ಠರ ಜತೆಗಿನ ಚರ್ಚೆಗೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಅಥವಾ ಅವರೇ ಮುಂದುವರಿಯಬೇಕು ಎನ್ನುವುದು ಎಲ್ಲ ಕಾಲಕ್ಕೂ ಇರುವ ಸಹಜ ಬೇಡಿಕೆ. ಅದರಲ್ಲಿ ವಿಶೇಷ ಏನೂ ಇಲ್ಲ ಎಂದರು.

ಸದನದಲ್ಲಿ ಮಧುಬಲೆ ವಿಚಾರ ಎತ್ತಿದ್ದ ಸಹಕಾರ ಸಚಿವ ಕೆ.ಎನ್. ರಾಜಣ್ಣ ನಂತರ ತಣ್ಣಗಾಗಿದ್ದಾರಲ್ಲಾ ಎಂಬ ಪ್ರಶ್ನೆಗೆ, 'ಸಿಐಡಿ ವಿಚಾರಣೆ ನಡೆಸುತ್ತಿದೆ. ಆ ಕುರಿತು ಹೆಚ್ಚಿನ ಮಾಹಿತಿ ಇಲ್ಲ' ಎಂದರು.

'ಕಾವೇರಿ ಆನ್ ವ್ಹೀಲ್ಸ್' ಶೀಘ್ರ ಜಾರಿ

ಆನ್‌ಲೈನ್ ಬುಕ್ಕಿಂಗ್ ಯೋಜನೆ: ಟ್ಯಾಂಕರ್ ಮೂಲಕ ನೀರು ಸರಬರಾಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಮೂಲಕ ಬುಕ್ಕಿಂಗ್ ಮಾಡುವ ಜನರ ಮನೆ ಬಾಗಿಲಿಗೆ ಶುದ್ಧ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಪೂರೈಸುವ 'ಸಂಚಾರಿ ಕಾವೇರಿ- ಕಾವೇರಿ ಆನ್ ವ್ಹೀಲ್ಸ್' ಯೋಜನೆಯನ್ನು ಬೆಂಗಳೂರು ಜಲಮಂಡಳಿ ಶೀಘ್ರವೇ ಜಾರಿಗೆ ತರಲಿದೆ.

ಬೇಸಿಗೆಯಲ್ಲಿ ಅಂತರ್ಜಲ ಮಟ್ಟ ಕಡಿಮೆಯಾದಾಗ ನೀರಿನ ಕೊರತೆ ಹೆಚ್ಚಾಗುತ್ತದೆ. ಈ ಸಂದರ್ಭದಲ್ಲಿ ಖಾಸಗಿ ಟ್ಯಾಂಕರ್‌ಗಳು ದರವನ್ನು ಹೆಚ್ಚಿಸುವುದರಿಂದ ಜನಸಾಮಾನ್ಯರಿಗೆ ಇನ್ನಷ್ಟು ತೊಂದರೆಯಾಗುತ್ತದೆ. ಇದನ್ನು ತಪ್ಪಿಸಲು 'ಕಾವೇರಿ ಆನ್ ವ್ಹೀಲ್ಸ್' ಯೋಜನೆ ರೂಪಿಸಲಾಗಿದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಟ್ಯಾಂಕರ್‌ಗಳ ನೋಂದಣಿಗೆ ಅವಕಾಶ

ಖಾಸಗಿ ಟ್ಯಾಂಕರ್‌ನವರು ಜಲಮಂಡಳಿಗೆ ಬಾಡಿಗೆ ಆಧಾರದಲ್ಲಿ ಟ್ಯಾಂಕರ್ ನೀಡಬಹುದು. https://bwssb.karnataka.gov.in/ ನಲ್ಲಿ ಟ್ಯಾಂಕರ್ ಮಾಲೀಕರು ನೋಂದಣಿ ಮಾಡಿಕೊಳ್ಳಬಹುದು ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಹೇಳಿದರು.

'ನಗರದ ಹಲವು ಪ್ರದೇಶಗಳಲ್ಲಿ ಖಾಸಗಿ ಟ್ಯಾಂಕರ್‌ಗಳು ದರ ಏರಿಕೆ ಮಾಡಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಗಳಾಗಿವೆ. ಜಲಮಂಡಳಿಯ ಬಳಿ ಸಾಕಷ್ಟು ಪ್ರಮಾಣದಲ್ಲಿ ನೀರು ಲಭ್ಯವಿದೆ. 110 ಹಳ್ಳಿಗಳ ವ್ಯಾಪ್ತಿಯಲ್ಲಿ ಟ್ಯಾಂಕರ್ ನೀರನ್ನು ಅವಲಂಬಿಸಿರುವವರಿಗೆ ಗುಣಮಟ್ಟದ ನೀರನ್ನು ಒದಗಿಸುವುದು ನಮ್ಮ ಮುಖ್ಯ ಗುರಿಯಾಗಿದೆ. ಈ ನಿಟ್ಟಿನಲ್ಲಿ ಖಾಸಗಿ ಟ್ಯಾಂಕರ್‌ಗಳ ಮಾಲೀಕರು 'ಕಾವೇರಿ ಆನ್ ವ್ಹೀಲ್ಸ್'ನಲ್ಲಿ ಏಪ್ರಿಲ್ 10ರವರೆಗೆ ನೋಂದಣಿ ಮಾಡಿಕೊಳ್ಳಬಹುದು' ಎಂದರು.

ಯೋಜನೆ ಅನುಷ್ಠಾನಕ್ಕೆ ಆ್ಯಪ್ ಹಾಗೂ ವೆಬ್‌ಸೈಟ್ ರೂಪಿಸಲಾಗಿದೆ. ನಾಗರಿಕರ ಬೇಡಿಕೆಗೆ ಅನುಸಾರವಾಗಿ ಸಕಾಲದಲ್ಲಿ ನೀರು ಪೂರೈಸಲಾಗುತ್ತದೆ. ಜನರಿಗೆ ದರ ಏರಿಕೆಯ ಭಯವಿರುವುದಿಲ್ಲ. ಯಾವುದೇ ಹೆಚ್ಚುವರಿ ಶುಲ್ಕ ವಿಧಿಸುವುದಿಲ್ಲ. ಆನ್‌ಲೈನ್‌ನಲ್ಲೇ ಹಣ ಪಾವತಿಸುವ ಅವಕಾಶವಿದೆ ಎಂದು ಹೇಳಿದರು.

'ಇದೊಂದು ವಿಶೇಷ ಹಾಗೂ ವಿನೂತನ ಯೋಜನೆಯಾಗಿದೆ. ದೇಶದ ಯಾವುದೇ ಜಲಮಂಡಳಿಯೂ ಈ ಪ್ರಯತ್ನ ಮಾಡಿಲ್ಲ. ನಮ್ಮಲ್ಲಿ ಲಭ್ಯವಿರುವಂತಹ ನೀರನ್ನು ಅಗತ್ಯವಿರುವ ಜನರಿಗೆ ಸರಬರಾಜು ಮಾಡುವ ವ್ಯವಸ್ಥೆ ಇದಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶೀಘ್ರವೇ ಯೋಜನೆಗೆ ಚಾಲನೆ ನೀಡಲಿದ್ದಾರೆ' ಎಂದರು.

110 ಹಳ್ಳಿಗಳಲ್ಲಿ ಕಾವೇರಿ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಿರುವವರಿಗೆ ನೀರು ಪೂರೈಕೆಯಲ್ಲಿ ಆದ್ಯತೆ ನೀಡಲಾಗುವುದು ಎಂದು ರಾಮ್ ಪ್ರಸಾತ್ ಮನೋಹರ್ ಅವರು ತಿಳಿಸಿದರು.

ನಾಳೆ ಯಡೆಯೂರು ರಥೋತ್ಸವ

ಕುಣಿಗಲ್ (ತುಮಕೂರು): ಯಡೆಯೂರು ಸಿದ್ಧಲಿಂಗೇಶ್ವರ ರಥೋತ್ಸವ ಏ. 5ರಂದು ಅಪರಾಹ್ನ 12 ಗಂಟೆಗೆ ನಡೆಯಲಿದೆ.

ಶನಿವಾರ ಬೆಳಿಗ್ಗೆಯಿಂದಲೇ ಸಿದ್ಧಲಿಂಗೇಶ್ವರ ಗದ್ದುಗೆಗೆ ಅಲಂಕಾರ ಮತ್ತು ಪೂಜೆ ನಡೆಯಲಿದೆ. ಸಂಜೆ ಉತ್ತಮ ರಾಸುಗಳಿಗೆ ಬಹುಮಾನ ವಿತರಣೆ ಮಾಡಲಾಗುವುದು. ಏ. 6ರಂದು ರಾತ್ರಿ ಬಿಲ್ವವೃಕ್ಷ ವಾಹನೋತ್ಸವ, 7ರಂದು ರಾತ್ರಿ ಬೆಳ್ಳಿ ಪಲ್ಲಕ್ಕಿ ಉತ್ಸವ ನಡೆಯಲಿದೆ. ನಾಡಿನ ವಿವಿಧ ಭಾಗದಿಂದ ಭಕ್ತರು ಆಗಮಿಸಲಿದ್ದಾರೆ.

ವಿದ್ಯುತ್ ದೂರು: ವಾಟ್ಸ್‌ಆ್ಯಪ್ ಬಳಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಪೂರೈಕೆಯ ವ್ಯತ್ಯಯಿಕ್ಕೆ ಸಂಬಂಧಿಸಿದ ದೂರುಗಳ ಶೀಘ್ರ ಪರಿಹಾರ ಹಾಗೂ ವಿಲೇವಾರಿಗೆ ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳಿಗೆ 11 ವಾಟ್ಸ್‌ಆ್ಯಪ್ ಸಹಾಯವಾಣಿ ಸಂಖ್ಯೆಗಳು ಕಾರ್ಯನಿರ್ವಹಿಸುತ್ತಿದ್ದು, ಗ್ರಾಹಕರು ಸದುಪಯೋಗ ಪಡೆಯಬೇಕು ಎಂದು ಬೆಸ್ಕಾಂ ಕೋರಿದೆ.

ಬೆಸ್ಕಾಂನ 1912 ಸಹಾಯವಾಣಿ ಸಂಖ್ಯೆಯು ದಿನದ 24 ಗಂಟೆ ಕಾರ್ಯನಿರ್ವಹಿಸುತ್ತಿದೆ. ಮಳೆಗಾಲದ ಸಂದರ್ಭದಲ್ಲಿ ಸಹಾಯವಾಣಿಗೆ ಕರೆಗಳ ಮಹಾಪೂರವೇ ಹರಿದುಬರುತ್ತಿರುವುದರಿಂದ ಗ್ರಾಹಕರಿಗೆ ಸಹಾಯವಾಣಿ ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಗ್ರಾಹಕರು ಬೆಸ್ಕಾಂನ 11 ವಾಟ್ಸ್‌ಆ್ಯಪ್ ಸಹಾಯವಾಣಿ ಸಂಖ್ಯೆಗೆ ಸಂದೇಶ ಕಳುಹಿಸುವ ಮೂಲಕ ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ದೂರುಗಳಿಗೆ ಪರಿಹಾರ ಪಡೆದುಕೊಳ್ಳಬಹುದು.

ರಾಜ್ಯದಲ್ಲಿ ಪೂರ್ವ ಮುಂಗಾರು ಮಳೆ ಆರಂಭಗೊಳ್ಳುತ್ತಿರುವ ಕಾರಣ ಬೆಸ್ಕಾಂ ಸಹಾಯವಾಣಿ ಸಂಖ್ಯೆ 1912ಕ್ಕೆ ಬರುವ ವಿದ್ಯುತ್ ಸಂಬಂಧಿತ ದೂರುಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಲಿದ್ದು, ಕರೆಗಳ ಒತ್ತಡದಿಂದಾಗಿ 1912 ಸಂಪರ್ಕ ಸಾಧ್ಯವಾಗುವುದಿಲ್ಲ. ಹಾಗಾಗಿ ಗ್ರಾಹಕರು ವಾಟ್ಸ್‌ಆ್ಯಪ್ ಸಹಾಯವಾಣಿ ಸಂಖ್ಯೆಗಳಿಗೆ ಸಂದೇಶದ ಜೊತೆಗೆ ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ದೂರಗಳ ಫೋಟೊ ಹಾಗೂ ವಿಡಿಯೊಗಳನ್ನು ಕಳುಹಿಸಬಹುದು ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಸಹಾಯವಾಣಿ ವಿವರ

ಬೆಂಗಳೂರು ನಗರ ಜಿಲ್ಲೆ	ದಕ್ಷಿಣ ವೃತ್ತ: 8277884011 ಪಶ್ಚಿಮ ವೃತ್ತ: 8277884012 ಪೂರ್ವ ವೃತ್ತ: 8277884013 ಉತ್ತರ ವೃತ್ತ: 8277884014,
ಕೋಲಾರ ಜಿಲ್ಲೆ	8277884015,
ಚಿಕ್ಕಬಳ್ಳಾಪುರ ಜಿಲ್ಲೆ	8277884016,
ಬೆಂಗಳೂರು ಗ್ರಾಮಾಂತರ ಜಿಲ್ಲೆ	8277884017
ರಾಮನಗರ ಜಿಲ್ಲೆ	8277884018
ತುಮಕೂರು ಜಿಲ್ಲೆ	8277884019
ಚಿತ್ರದುರ್ಗ ಜಿಲ್ಲೆ	8277884020
ದಾವಣಗೆರೆ ಜಿಲ್ಲೆ	8277884021

ಗೋಮಾಂಸ: ವಾಹನ ತಡೆದ ಗ್ರಾಮಸ್ಥರು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ತಾಲ್ಲೂಕಿನ ತಿಪ್ಪಗಾನಹಳ್ಳಿ ಮತ್ತು ಗುಂಜೂರು ನಡುವೆ ಗುರುವಾರ ಗೂಡ್ಸ್ ವಾಹನ ತಡೆದ ಗ್ರಾಮಸ್ಥರು ಅಕ್ರಮವಾಗಿ ಸಾಗಿಸುತ್ತಿದ್ದ ಒಂದು ಟನ್‌ಗೂ ಹೆಚ್ಚು ಗೋಮಾಂಸ ಪೊಲೀಸರಿಗೆ ಒಪ್ಪಿಸಿದ್ದಾರೆ.

ಹಿಂದೂಪುರದಿಂದ ಬೆಂಗಳೂರಿಗೆ ತೆರೆದ ಗೂಡ್ಸ್ ವಾಹನದಲ್ಲಿ ಮಾಂಸ ಸಾಗಿಸುತ್ತಿದ್ದುದನ್ನು ಕಂಡ ಗ್ರಾಮಸ್ಥರು ವಾಹನ ತಡೆದು ಗ್ರಾಮಾಂತರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ವಾಹನ ಚಾಲಕ ಪರಾರಿಯಾಗಿದ್ದಾನೆ. ಆತ ಪರಾರಿಯಾಗಲು ಸಹಕರಿಸಿದ ಆರೋಪದಲ್ಲಿ ಮೂವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ.

ಗೋಮಾಂಸ ಸಾಗಿಸುತ್ತಿದ್ದ ಗೂಡ್ಸ್ ವಾಹನ

ಕಾಲೇಜು ಹಸ್ತಾಂತರ ಪ್ರಸ್ತಾವ ತಿರಸ್ಕಾರ

ಬೆಂಗಳೂರು: ತನ್ನ ಅಧೀನದಲ್ಲಿರುವ ಯೂನಿವರ್ಸಿಟಿ ಕಾನೂನು ಕಾಲೇಜನ್ನು ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸುವಂತೆ ರಾಜ್ಯ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವ ತಿರಸ್ಕರಿಸಲು ಬೆಂಗಳೂರು ವಿಶ್ವವಿದ್ಯಾಲಯ ನಿರ್ಧರಿಸಿದೆ.

1976ರಿಂದಲೂ ಬೆಂಗಳೂರು ವಿ.ವಿ.ಯ ಘಟಕ ಕಾಲೇಜು ಸ್ಥಾನ ಪಡೆದಿರುವ ಯೂನಿವರ್ಸಿಟಿ ಕಾನೂನು ಕಾಲೇಜನ್ನು ಬಿಟ್ಟುಕೊಡದಿರಲು ಸಿಂಡಿಕೇಟ್ ಸಭೆಯಲ್ಲಿ ನಿರ್ಣಯ ಅಂಗೀಕರಿಸಿದ್ದು, ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಕುಲಪತಿ ಎಸ್.ಎಂ. ಜಯಕರ ಹೇಳಿದರು.

'ತಾಂತ್ರಿಕ ಶಿಕ್ಷಣ: ಕನ್ನಡದಲ್ಲಿ ಬೋಧಿಸಲಿ'

ಬೆಂಗಳೂರು: 'ಕನ್ನಡದಲ್ಲಿ ತಾಂತ್ರಿಕ ಶಿಕ್ಷಣ ಪಠ್ಯದ ಆಶಯ ಸಾಕಾರಗೊಳ್ಳಬೇಕಾದರೆ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ನೀಡಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅವರಿಗೆ ಪತ್ರ ಬರೆದಿರುವ ಅವರು, 'ತಾಂತ್ರಿಕ ಶಿಕ್ಷಣ ಪಠ್ಯವನ್ನು ಕನ್ನಡದಲ್ಲಿ ಮುದ್ರಿಸಿ, ವಿದ್ಯಾರ್ಥಿಗಳಿಗೆ ನೀಡಲು ಮುಂದಾಗಿರುವುದು ಕನ್ನಡದ ಉಳಿವಿನ ದೃಷ್ಟಿಯಿಂದ ಸ್ವಾಗತಾರ್ಹ. ಸರ್ಕಾರದ ಕ್ರಮ ವಿದ್ಯಾರ್ಥಿಗಳ ಗ್ರಹಿಕಾ ಸಾಮರ್ಥ್ಯ ಹೆಚ್ಚಿಸಲು ಸಹಕಾರಿ. ಈ ಸದಾಶಯ ಸಾಕಾರಗೊಳ್ಳಲು ವಿಶ್ವವಿದ್ಯಾಲಯ ಉಪನ್ಯಾಸಕರಿಗೆ ಗುಣಮಟ್ಟದ ತರಬೇತಿ ನೀಡಿ, ಕನ್ನಡದಲ್ಲಿ ಬೋಧಿಸುವಂತೆ ಪ್ರೋತ್ಸಾಹ ನೀಡಬೇಕು' ಎಂದಿದ್ದಾರೆ.

ಪುರುಷೋತ್ತಮ ಬಿಳಿಮಲೆ

'ಕನ್ನಡದಲ್ಲಿ ಪದವಿ ಪಡೆಯಲು ಮುಂದೆ ಬರುವ ತಾಂತ್ರಿಕ ಶಿಕ್ಷಣ ವಿದ್ಯಾರ್ಥಿಗಳಿಗೆ ವಿಶೇಷ ವಿದ್ಯಾರ್ಥಿ ವೇತನ ನೀಡಬೇಕಿದೆ. ಗುಣಮಟ್ಟದ ತಾಂತ್ರಿಕ ಶಿಕ್ಷಣ ಕನ್ನಡದ ಮೂಲಕ ಲಭ್ಯ ಎನ್ನುವ ಮನಃಸ್ಥಿತಿ ವಿದ್ಯಾರ್ಥಿಗಳಲ್ಲಿ ಮೂಡಿಸುವುದು ಸರ್ಕಾರದ ಜವಾಬ್ದಾರಿ. ಕನ್ನಡದಲ್ಲಿ ಕಲಿಯುವ ಬಗೆಗಿನ ಕೀಳರಿಮೆ ತೊಡೆದು ಹಾಕಬೇಕು ಎಂದು ಪುರುಷೋತ್ತಮ ಬಿಳಿಮಲೆ ಹೇಳಿದ್ದಾರೆ.

ಉಚ್ಚಾಟನೆಗೆ ಬಿಎಸ್‌ವೈ ಕಾರಣ: ಯತ್ನಾಳ

ಬೆಂಗಳೂರು: 'ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡದಿದ್ದರೆ ನೇಣು ಹಾಕಿಕೊಳ್ಳುತ್ತೇನೆ ಎಂದು ಯಡಿಯೂರಪ್ಪ ಬ್ಲ್ಯಾಕ್‌ಮೇಲ್ ಮಾಡಿದ್ದರಿಂದಲೇ ನನ್ನನ್ನು ಉಚ್ಚಾಟನೆ ಮಾಡಿದ್ದಾರೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ತಮ್ಮ ಮಗನ ರಕ್ಷಣೆಗಾಗಿ ಯಡಿಯೂರಪ್ಪ ಅಹೋರಾತ್ರಿ ಧರಣಿಯಲ್ಲಿ ಭಾಗವಹಿಸಿದ್ದಾರೆ. ತಾವು ಸಾಯುವ ಮುನ್ನ ವಿಜಯೇಂದ್ರ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎನ್ನುವುದು ಅವರ ಆಸೆ ಎಂದರು.

'ಬಿ.ವೈ.ವಿಜಯೇಂದ್ರ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯದ ಹೊರತು ನಾನು ಪುನಃ ಬಿಜೆಪಿಗೆ ಹೋಗುವುದಿಲ್ಲ. ಅವರ ಕುಟುಂಬದ ಸದಸ್ಯರು ಬಿಜೆಪಿಯಿಂದ ಹೊರ ಹೋಗಬೇಕು' ಎಂದು ಯತ್ನಾಳ ತಿಳಿಸಿದರು.

'ಕರ್ನಾಟಕವನ್ನು ಇನ್ನಷ್ಟು ಲೂಟಿ ಮಾಡಬೇಕು. ಈಗ ಮಾರಿಷಿಯಸ್, ದುಬೈನಲ್ಲಿ ಮಾತ್ರ ಆಸ್ತಿ ಇದೆ. ಇಡಿ ಜಗತ್ತಿನಲ್ಲಿ ಆಸ್ತಿ ಮಾಡಬೇಕು ಅಂತ ಹೊರಟಿದ್ದಾರೆ. ಚೇಲಾಗಳ ಕೈಯಲ್ಲಿ ಮಾತನಾಡಿಸುವ ಬದಲು ವಿಜಯೇಂದ್ರ ನೇರವಾಗಿ ನನ್ನ ಬಗ್ಗೆ ಮಾತನಾಡಲಿ' ಎಂದು ಬಸನಗೌಡ ಯತ್ನಾಳ ಸವಾಲು ಹಾಕಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-459/35/2024–25 ದಿನಾಂಕ: 02–04–2025

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3) ರಡಿಯಲ್ಲಿ)

M/s. Essem 18 Developers Pvt. Ltd., Rep. by its Managing Director S.M. Venkatesh ರವರು **ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೈಕೊಂಡ್ರಹಳ್ಳಿ ಗ್ರಾಮದ ಸರ್ವೆ ನಂ. 11/1 ರಲ್ಲಿ 0ಎ – 25ಗುಂ** ವಿಸ್ತೀರ್ಣದ ಪ್ರದೇಶವನ್ನು ಪರಿಷ್ಕೃತ ಮಹಾಯೋಜನೆ – 2015 ರಲ್ಲಿ ಸಾರ್ವಜನಿಕ / ಅರೆಸಾರ್ವಜನಿಕ ವಲಯದಲ್ಲಿ ನಿಗಧಿಪಡಿಸಲಾಗಿದೆ. ಪರಿಷ್ಕೃತ ಮಹಾಯೋಜನೆ – 2015 ರಲ್ಲಿ ನಿಗಧಿಪಡಿಸಲಾದ ಭೂಉಪಯೋಗವು ಕೆಟಿಸಿಪಿ ಕಾಯ್ದೆ 1961 ರ ಕಲಂ 69(2) ರ ಅಡಿಯಲ್ಲಿ ಅನೂರ್ಜಿತವಾಗಿರುವುದರಿಂದ ವಸತಿ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4) ರಡಿಯಲ್ಲಿ ಹೊಸ ಭೂಉಪಯೋಗ ನಿಗದಿಪಡಿಸಲು ಕೋರಿರುತ್ತಾರೆ. ಹೊಸದಾಗಿ ಭೂಉಪಯೋಗ ನಿಗದಿಪಡಿಸುವ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಹೊಸದಾಗಿ ಭೂಉಪಯೋಗ ನಿಗದಿಪಡಿಸುವ ಪ್ರಸ್ತಾವನೆ ಬಗ್ಗೆ ಯಾವುದೇ ಸಲಹೆ ಮತ್ತು ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಸಲಹೆ ಮತ್ತು ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015 ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಹೊಸ ಭೂಉಪಯೋಗ
1	M/s. Essem 18 Developers Pvt. Ltd., Rep. by its Managing Director S.M. Venkatesh	ಬೆಂಗಳೂರು ಪೂರ್ವ	ವರ್ತೂರು	ಕೈಕೊಂಡ್ರಹಳ್ಳಿ	11/1	0–25	ಸಾರ್ವಜನಿಕ/ ಅರೆಸಾರ್ವಜನಿಕ	ವಸತಿ

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

This is only an advertisement for information purposes and not for publication, distribution, or release, directly or indirectly in the United States of America or otherwise outside India. This is not an announcement for the offer document. All capitalized terms used and not defined herein shall have the meaning assigned to them in the letter of offer dated June 12, 2024 read with corrigendum dated June 18, 2024 filed with the Stock Exchanges, namely BSE Limited ("BSE") and National Stock Exchange of India Limited ("NSE" and together with BSE, the "Stock Exchanges") and the Securities and Exchange Board of India ('SEBI').

SOBHA™

SOBHA LIMITED

CIN : L45201KA1995PLC018475
Regd. Office: 'SOBHA' Sarjapur – Marathahalli
Outer Ring Road (ORR), Devarabisanahalli,
Bellandur Post, Bangalore - 560 103
Ph: +91-80-49320000, Email: investors@sobha.com
www.sobha.com

SECOND REMINDER CUM FORFEITURE NOTICE
TO THE HOLDERS OF PARTLY PAID-UP EQUITY SHARES
ON WHICH CALL MONEY IS TO BE PAID

In terms of provisions of the Companies Act, 2013 ('Act'), read with the relevant rules made thereunder, the First and Final Call Notice has been issued to such persons who were holders of the partly paid shares as on December 06, 2024, being the Record Date. The call payment period has since expired on January 10, 2025.

In this connection, the Rights Issue Committee of the Board of Directors of the Company (the "Committee"), duly authorised by the Board of Directors of the Company, at its meeting held on January 21, 2025, approved sending Reminder-cum-Forfeiture Notice from time to time for payment of the First and Final Call amount of Rs. 825.50 per partly-up equity share (comprising Rs. 5.00 towards face value and Rs. 820.50 towards securities premium) ("Reminder-cum-Forfeiture Notice") to the holders of such partly paid-up equity shares on which the First and Final Call Money remains unpaid for payment of such unpaid First and Final Call Money.

Accordingly, sending of Second Reminder-cum-Forfeiture Notice to all the members who have not paid the call money has been initiated on April 03, 2025.

The payment period is from Friday, April 18, 2025, to Friday, May 02, 2025 (both days inclusive). Payment is to be made through Cheque/ Demand Draft with collection center of Axis Bank Limited (made payable to Sobha Limited Partly Paid First and Final Call Money-R (For Resident shareholders), Sobha Limited Partly Paid First and Final Call Money-NR (For Non - Resident shareholders).

Please note that, failure to pay the Second Reminder cum Forfeiture Money, as aforesaid, shall render the partly paid-up equity shares of the Company, including the amount already paid thereon, liable to be forfeited in accordance with the provisions of the Act, the Articles of Association of the Company and the Letter of Offer. The Company shall be entitled to deduct from any dividend payable to such members, if any, all sums of money outstanding on account of calls and interest due thereon in relation to the partly paid-up equity shares of the Company.

All correspondence in this regard may be addressed to Registrar to the Issue at below mentioned address:

MUFG

MUFG Intime India Private Limited
(Unit: Sobha Limited)
C-101, 1st Floor, 247 Park
Lal Bahadur Shastri Marg, Vikhroli (West)
Mumbai – 400 083, Maharashtra, India
Tel No: +91 8108114949, Fax No.: 022-49186060
E-mail ID: sobha.callmoney@linkintime.co.in
Website: www.linkintime.co.in
SEBI Registration No: INR000004058
Contact Person: Shanti Gopalkrishnan

For Sobha Limited

Sd/-
Bijan Kumar Dash
Company Secretary & Compliance Officer
Membership No: ACS 17222

Date: April 03, 2025
Place: Bangalore

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: CAO/CN/BNC/104/2025
ದಿನಾಂಕ: 28.03.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ತುಮಕೂರು – ಅರಸೀಕೆರೆ (ಟಿಕೆ–ಎಎಸ್‌ಕೆ) ವಿಭಾಗಗಳಲ್ಲಿ ನಿಟ್ಟೂರು – ಗುಬ್ಬಿ ನಿಲ್ದಾಣಗಳ ನಡುವೆ ಕಿಮೀ. 92/600–700 ರಲ್ಲಿ ಎಲ್‌ಸಿ ನಂ. 56ಕ್ಕೆ ಬದಲಾಗಿ 1x30ಮೀ. ಕಾಂಪೋಸಿಟ್ ಗಿರ್ಡರ್ ಮತ್ತು 3x20 ಮೀ. ಪಿಎಸ್‌ಸಿ ಗಿರ್ಡರ್‌ಗಳಿಂದ (ಬೆಂಗಳೂರು – ಹೊನ್ನಾವರ ಹೆದ್ದಾರಿ) +4x20 ಮೀ ಪಿಎಸ್‌ಸಿ ಗಿರ್ಡರ್ (ಬೆಂಚಗೆರೆ ಗ್ರಾಮ) ನಿಂದ ಆರ್‌ಓಬಿ ಹಾಗೂ ಆರ್‌ಸಿಸಿ ರೀಟೇನಿಂಗ್ ಗೋಡೆಯ (ಅಪ್ರೋಚ್ ಸ್ಪಾನ್) ನಿರ್ಮಾಣ (ಸಂಯುಕ್ತ ಕಾಮಗಾರಿ). (ಟೆಂಡರು ಉಲ್ಲೇಖ ಸಂ. ROB-LC-56-TK-ASK)	ರೂ. 35,88,16,287/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.04.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾರ್ಯ/ ಬೆಂಗಳೂರು ದಂಡು

PUB/01/AAMO/PRB/SWR/2025-26

South Western Railway - SWR | SWRRLY | SWRRLY

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: rwf.indianrailways.gov.in.

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಡಬ್ಲ್ಯೂ/25–26/01
ದಿನಾಂಕ: 02.04.2025

ಇ–ಟೆಂಡರ್‌ಗಳು: ಭಾರತದ ರಾಷ್ಟ್ರಪತಿಯವರ ಪರವಾಗಿ ಉಪ ಮುಖ್ಯ ಇಂಜಿನಿಯರ್‌ರವರು ವೆಬ್‌ಸೈಟ್ http://www.ireps.gov.in (Works) ಆನ್‌ಲೈನ್ ಮೂಲಕ ಕೆಳಗೆ ತಿಳಿಸಿರುವ ಕೆಲಸಗಳಿಗೆ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

1) **ಟೆಂಡರ್ ಸಂಖ್ಯೆ:** ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ ವೈಎನ್‌ಕೆ/ 1045. **ವಿವರ:** ಸಿಬ್ಬಂದಿ ಕ್ಯಾಂಟೀನ್ ಸಮೀಪ ಹಾಳಾಗಿರುವ / ಬಿದ್ದು ಹೋದ ಮಳೆ ನೀರು ಕಾಲುವೆಯ ಮರು ನಿರ್ಮಾಣ ಮತ್ತು ಎಸ್‌ಡಬ್ಲ್ಯೂಆರ್ ವಿದ್ಯುತ್ ಉಪಕೇಂದ್ರದ ಸಮೀಪ ಹಾಳಾಗಿರುವ ಆರ್‌ಡಬ್ಲ್ಯೂಎಫ್ ಬಾಹ್ಯ ಬೌಂಡರಿ ಗೋಡೆಯ ಪುನರ್ ನಿರ್ಮಾಣ. ಅಂದಾಜು ಮೌಲ್ಯ: ರೂ.9202230.50.

2) **ಟೆಂಡರ್ ಸಂಖ್ಯೆ:** ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ ವೈಎನ್‌ಕೆ/ 1046. **ವಿವರ:** ಆರ್‌ಡಬ್ಲ್ಯೂಎಫ್‌ನ ಹಾಲಿಯಿರುವ ಬಿಜಿ ಟ್ರ್ಯಾಕ್‌ಗಳ ಸುಧಾರಣೆ ಹಾಗೂ ಆರ್‌ಡಬ್ಲ್ಯೂಎಫ್‌ನ ಕಾರ್ಖಾನೆ ಆವರಣದೊಳಗೆ ಹಾಲಿಯಿರುವ ಇಟಿಟಿ ಟ್ರ್ಯಾಕ್‌ಗಳ ಸುಧಾರಣೆ ಮತ್ತು ಫಸ್ಟ್ ಏಡ್ ರೂಮ್ ಬಳಿಯಲ್ಲಿ ವೀಲ್ಸ್ ಅನ್ನು ಸ್ಟ್ಯಾಕ್ ಮಾಡಲು ಬಿಡುಗಡೆಯಾದ ಪಿಎಸ್‌ಸಿ ಸ್ಲೀಪರ್ ಫ್ಲೋರಿಂಗ್ ಒದಗಿಸುವುದು. ಅಂದಾಜು ಮೌಲ್ಯ: ರೂ.18782091.97

ಕೊನೆಯ ದಿನಾಂಕ ಹಾಗೂ ಸಮಯ: 23.04.2025 ರಂದು ಬೆಳಿಗ್ಗೆ 11.00 ಗಂಟೆ.

ಉಪ ಮುಖ್ಯ ಇಂಜಿನಿಯರ್

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ. 43 UBL 2024-25
ದಿನಾಂಕ: 27.03.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಉಪ ಕಾಮಗಾರಿ–1: ಎಸ್&ಟಿ ಎಸ್ಟಿಮೇಟ್ – ನವಲೂರು (ಎನ್‌ವಿಯು) ಯಾರ್ಡ್‌ನಲ್ಲಿ 80 ಮೀ. ಶಾರ್ಟ್ ಶಂಟಿಂಗ್ ನೆಕ್‌ನ ವ್ಯವಸ್ಥೆ. ಉಪ ಕಾಮಗಾರಿ–2: ಯಲವಿಗಿಯಲ್ಲಿ ಹುಬ್ಬಳ್ಳಿ – ಚಿಕ್ಕಜಾಜೂರು ಯಾರ್ಡ್ ವ್ಯವಸ್ಥೆಯ ಪ್ರಸ್ತಾವನೆಯಂತೆ ಯಾರ್ಡ್ ನಡುವೆ ಯಲವಿಗಿ ಹಳೆಯ ಯಾರ್ಡ್‌ನ್ನು ಹೊಸದಾಗಿ ನಿರ್ಮಿಸಿರುವ ಯಲವಿಗಿ ಯಾರ್ಡ್‌ನೊಂದಿಗೆ ಸಂಪರ್ಕಿಸುವ ಕಾಮಗಾರಿಗೆ ಸಂಬಂಧಿಸಿದಂತೆ ಸಿಗ್ನಲಿಂಗ್ ಕೆಲಸಗಳು.	ರೂ. 76,58,333.31
2	ಹುಬ್ಬಳ್ಳಿ ವಿಭಾಗದಲ್ಲಿ ಈ ಕೆಳಗಿನ ಎಸ್&ಟಿ ಕೆಲಸಗಳು ಹಾಗೂ ಅದಕ್ಕೆ ಸಂಬಂಧಿಸಿದ ಇಂಜಿನಿಯರಿಂಗ್ ಮತ್ತು ಎಲೆಕ್ಟ್ರಿಕಲ್ ಕಾಮಗಾರಿ: 1) ಹುಬ್ಬಳ್ಳಿ ವಿಭಾಗದ ಗದಗ–ಹೊಟಗಿ (ಜಿಡಿಜಿ–ಹೆಚ್‌ಜಿ) ವಿಭಾಗದಲ್ಲಿ ಲಚ್ಯಾಣ – ತಡವಾಲ (ಎಲ್‌ಹೆಚ್‌ಎನ್–ಟಿವಿಎಲ್) ನಡುವೆ ಇಂಟರ್‌ಮೀಡಿಯೇಟ್ ಬ್ಲಾಕ್ ಸಿಗ್ನಲಿಂಗ್ (ಐಬಿಎಸ್) ವ್ಯವಸ್ಥೆ. 2) ಹುಬ್ಬಳ್ಳಿ ವಿಭಾಗದ ಗದಗ–ಹೊಟಗಿ (ಜಿಡಿಜಿ–ಹೆಚ್‌ಜಿ) ವಿಭಾಗದಲ್ಲಿ ನಿಂಬಾಳ – ಇಂಡಿ ರೋಡ್ (ಎನ್‌ಬಿಎಲ್–ಐಡಿಆರ್) ನಡುವೆ ಇಂಟರ್‌ಮೀಡಿಯೇಟ್ ಬ್ಲಾಕ್ ಸಿಗ್ನಲಿಂಗ್ (ಐಬಿಎಸ್) ವ್ಯವಸ್ಥೆ.	ರೂ. 8,18,44,714.62

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28.04.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ಹುಬ್ಬಳ್ಳಿ

PUB/03/AAMO/PRB/SWR/2025-26

South Western Railway - SWR | @SWRRLY | SWRRLY

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ

ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

ಎನ್‌ಐಎಎನ್‌ಪಿ/ಎಡಿವಿ–05–ಸಿಡಿಎನ್/2024–25

ಎಐಸಿಆರ್‌ಪಿ (ಎನ್‌ಪಿಐಇಆರ್‌ಪಿಎ) ಯೋಜನೆ ಅಡಿಯಲ್ಲಿ ತಾತ್ಕಾಲಿಕ ಆಧಾರದ ಮೇರೆಗೆ ಒಂದು ಯಂಗ್ ಪ್ರೊಫೆಷನಲ್ 1 ಹುದ್ದೆಗೆ ತೊಡಗಿಸಿಕೊಳ್ಳಲು 21.04.2025 ರಂದು ಬೆಳಗ್ಗೆ 10.30 ಗಂಟೆಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ. ಮಾಸಿಕ ಕ್ರೋಢೀಕೃತ ಸಂಭಾವನೆ ರೂ. 30,000/– ಆಗಿರುತ್ತದೆ. ವಿವರವಾದ ಜಾಹೀರಾತಿಗಾಗಿ ಸಂಸ್ಥೆಯ **www.nianp.res.in** ವೆಬ್‌ಸೈಟ್‌ಗೆ ಭೇಟಿ ಕೊಡಿ.

ಸಹಿ/– ಹಿರಿಯ ಆಡಳಿತಾಧಿಕಾರಿ

ಕರ್ನಾಟಕ ಸರ್ಕಾರ

ಉಪ ಅರಣ್ಯ ಸಂರಕ್ಷಣಾಧಿಕಾರಿ ರವರ ಕಚೇರಿ

ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ–ದೊಡ್ಡಬಳ್ಳಾಪುರ ಹೆದ್ದಾರಿ, ಸಾವಕನಹಳ್ಳಿ ಗೇಟ್, ದೇವನಹಳ್ಳಿ–562110.

ಸಂಖ್ಯೆ:ಎ5/ಉಅಸಂ/ಬೆಂಗ್ರಾವಿ/ಮ.ತೆ/ಜಿಲ್–4096/2024–25 ದಿನಾಂಕ:28.03.2025

ಪತ್ರಿಕಾ ಪ್ರಕಟಣೆ

ಈ ಮೂಲಕ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕು, ಸಮೇತನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಮೇತನಹಳ್ಳಿ ಗ್ರಾಮದ ಅಂದಕ್ಕನ ಕೆರೆಯಲ್ಲಿ ಸ್ವಾಭಾವಿಕವಾಗಿ ಹಾಗೂ ಪ್ರಕೃತಿದತ್ತವಾಗಿ ಬೆಳೆದಿರುವ ಸುಮಾರು 40 ನೀಲಗಿರಿ ಒಣಗಿದ ಮರಗಳು ಹಾಗೂ ಇತರೆ ಜಾತಿಯ ಸುಮಾರು 49 ಮರಗಳನ್ನು ಸಿಎಸ್‌ಆರ್ ಯೋಜನೆಯಡಿ ಯುನೈಟೆಡ್ ವೇ ಬೆಂಗಳೂರು ಸಂಸ್ಥೆಯವರು ಕೆರೆ ಅಭಿವೃದ್ಧಿ ಮಾಡಲು ಉದ್ದೇಶಿಸಿದ್ದು, ಅಭಿವೃದ್ಧಿ ಕಾಮಗಾರಿಗೆ ಅಡ್ಡಿಬರುತ್ತಿರುವ ವಿವಿಧ ಜಾತಿಯ 89 ಮರಗಳ ತೆರವಿಗಾಗಿ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತಿರುತ್ತವೆ.

ಯೋಜನೆ ಹೆಸರು	ಸಿಎಸ್‌ಆರ್ ಯೋಜನೆಯಡಿ ಯುನೈಟೆಡ್ ವೇ ಬೆಂಗಳೂರು ಸಂಸ್ಥೆಯವರು ಹೊಸಕೋಟೆ ತಾಲ್ಲೂಕು, ಸಮೇತನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಮೇತನಹಳ್ಳಿ ಗ್ರಾಮದ ಅಂದಕ್ಕನ ಕೆರೆಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕೆರೆ ಅಭಿವೃದ್ಧಿ ಕಾಮಗಾರಿ
ಏಜೆನ್ಸಿಯ ಹೆಸರು	ಯುನೈಟೆಡ್ ವೇ ಬೆಂಗಳೂರು
ಮರ ತೆರವುಗೊಳಿಸುವ ಉದ್ದೇಶ	ಕೆರೆಯನ್ನು ಅಭಿವೃದ್ಧಿಪಡಿಸುವ ಕಾಮಗಾರಿ
ಯೋಜನಾ ಪ್ರದೇಶದಲ್ಲಿ ಅಡ್ಡ ಬರುತ್ತಿರುವ/ ತೆರವುಗೊಳಿಸ ಬೇಕಾಗಿರುವ ಮರಗಳು	89
ಆಕ್ಷೇಪಣೆ ಸಲ್ಲಿಸಲು / ಹೆಚ್ಚಿನ ಮಾಹಿತಿ ಪಡೆಯಲು (ಸಾರ್ವಜನಿಕರು ನೇರವಾಗಿ/ ಇ–ಮೇಲ್/ಅಂಚೆ ಮುಖಾಂತರ ಈ ಕೆಳ ಸಹಿದಾರರ ಕಚೇರಿಗೆ ಸಲ್ಲಿಸಬಹುದು / ಮಾಹಿತಿ ಪಡೆಯಬಹುದು.	ವಿಳಾಸ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ– ದೊಡ್ಡಬಳ್ಳಾಪುರ ಹೆದ್ದಾರಿ, ಸಾವಕನಹಳ್ಳಿ ಗೇಟ್, ದೇವನಹಳ್ಳಿ–562110. ಇ–ಮೇಲ್ ಐಡಿ: **dcfrural@gmail.com** ದೂರವಾಣಿ ಸಂಖ್ಯೆ: 080–29907088 ವಿಳಾಸ: ಯುನೈಟೆಡ್ ವೇ ಬೆಂಗಳೂರು, ನಂ.5, 3ನೇ ಮಹಡಿ, ಕ್ಲಿಮ್ಸನ್ ಕೋರ್ಟ್, ಜೀವನ್ ಭೀಮಾ ನಗರ ಮುಖ್ಯರಸ್ತೆ, ಎಚ್‌ಎಎಲ್ 3ನೇ ಹಂತ, ಬೆಂಗಳೂರು–560075. ಇ–ಮೇಲ್ ಐಡಿ: **info@uwbengaluru.org** ದೂರವಾಣಿ ಸಂಖ್ಯೆ: 080–40906345
ಆಕ್ಷೇಪಣೆಗಳನ್ನು ಸಲ್ಲಿಸಬೇಕಾದ ಅವಧಿ	ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 10 ದಿನಗಳೊಳಗಾಗಿ. ಸೂಚನೆ: ಆಕ್ಷೇಪಣೆಗಳು ಪ್ರಸ್ತಾವಿಕ ಯೋಜನೆಗೆ ಮಾತ್ರ ಸಂಬಂಧಿಸಿರಬೇಕು.

ಮೇಲ್ಕಂಡ ಪ್ರದೇಶದಲ್ಲಿನ ಮರಗಳನ್ನು ತೆರವುಗೊಳಿಸುವ ಸಂಬಂಧ ಸಾರ್ವಜನಿಕರ ಆಕ್ಷೇಪಣೆ/ ಸಲಹೆಗಳಿದ್ದಲ್ಲಿ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ 1976 ಸೆಕ್ಷನ್ 8(3) (vii) ಪ್ರಕಾರ ಸಲಹೆ–ಸೂಚನೆಗಳನ್ನು ನೀಡಲು ಆಹ್ವಾನಿಸಲಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ.

ವಾಸಸಂಇ/ಸಿಪಿ/ಎಎಎ/41/2024–25

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 009.
ದೂ: 080–22341230/35 ಇ–ಮೇಲ್: bmicapa@gmail.com

ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–01/96/2024–25/13 ದಿನಾಂಕ: 02.04.2025

ಸಾರ್ವಜನಿಕ ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ ಸಿ.ಕೆಂಪರಾಜು ಬಿನ್ ಚಿಕ್ಕರಂಗಯ್ಯ ಮತ್ತು ಶ್ರೀಮತಿ ಭಾರತಿ ಕೆಂಪರಾಜು ಕೋಂ ಕೆಂಪರಾಜು ಇವರು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಚಿನ್ನಕುರ್ಚಿ ಗ್ರಾಮದ ಸರ್ವೆ ಸಂಖ್ಯೆ: 53/1ರ 0ಎ–32ಗು (0ಎ–01ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ: 53/4ರ 01ಎ–11ಗು, ಸರ್ವೆ ಸಂಖ್ಯೆ: 53/9ರ 0ಎ–36ಗು, ಸರ್ವೆ ಸಂಖ್ಯೆ: 53/10ರ 0ಎ–35ಗು, ಸರ್ವೆ ಸಂಖ್ಯೆ:53/11ರ 01ಎ–12ಗು ಒಟ್ಟು 05ಎ–06ಗು ವಿಸ್ತೀರ್ಣದ ಜಮೀನುಗಳನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನುಗಳನ್ನು ಅನುಮೋದಿತ ಮಹಾಯೋಜನೆಯಲ್ಲಿ **ವ್ಯವಸಾಯ** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

1) ಈ ಜಮೀನನ್ನು ಭೂ ಉಪಯೋಗ ಬದಲಾವಣೆ ಮಾಡುವುದರಿಂದ, ವಸತಿ ಹಾಗೂ ಅಭಿವೃದ್ಧಿಗೆ ಅವಕಾಶ ಒದಗಿಸಲಾಗುವುದು.
2) ವಿನ್ಯಾಸ ಅಭಿವೃದ್ಧಿ ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ.
3) ಸುತ್ತಮುತ್ತಲಿನ ಪ್ರದೇಶಗಳು ಉತ್ತಮ ಮೂಲ ಸೌಕರ್ಯ ಹಾಗೂ ಆರ್ಥಿಕ ವೃದ್ಧಿಯನ್ನು ಕಾಣಲಿದೆ.
4) ಅಭಿವೃದ್ಧಿ ಮೂಲಕ ಉತ್ತಮ ರಸ್ತೆಗಳು, ಉದ್ಯಾನವನ ಹಾಗೂ ಮತ್ತಿತರ ಅಗತ್ಯ ಸೌಕರ್ಯಗಳು ಸಾರ್ವಜನಿಕರಿಗೆ ಲಭ್ಯವಾಗುತ್ತವೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಸದಸ್ಯ–ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ವಾಸಾಸಂಇ/ವಾಪ್ರ/047/ಎಎಎ /25–26

ಮತ್ತಷ್ಟು ಹಿಗ್ಗಿದ ಬಿಬಿಎಂಪಿ ಬಜೆಟ್

ನಿಯಮದ ಮಿತಿಗಿಂತ ಹೆಚ್ಚುವರಿಯಾಗಿ ತಯಾರಿಸಿರುವ ಬಜೆಟ್‌ಗೆ ಸರ್ಕಾರದ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 2025–26ನೇ ಸಾಲಿನ ಬೃಹತ್ ಗಾತ್ರದ ಬಜೆಟ್ ಅನ್ನು ₹509.69 ಕೋಟಿಯಷ್ಟು ಹೆಚ್ಚಿಸಿ, ಸರ್ಕಾರ ಅನುಮೋದನೆ ನೀಡಿದೆ.

ಬೆಂಗಳೂರು ನಗರಾಭಿವೃದ್ಧಿ ಸಚಿವರ ವಿವೇಚನಾ ಕೋಟಾ ಅನುದಾನದ ಮೊತ್ತವನ್ನು ₹224.69 ಕೋಟಿಯಷ್ಟು ಹೆಚ್ಚಿಸಲಾಗಿದೆ.

ಬೆಂಗಳೂರು ಮಹಾನಗರ ಪಾಲಿಕೆ ನಿಯಮ (ಆರ್ಥಿಕ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ) 2021 4(2)ರ ಮಿತಿಗಿಂತ ₹1,806.66 ಕೋಟಿಯಷ್ಟು ಹೆಚ್ಚುವರಿ ಗಾತ್ರದ ಬಜೆಟ್ ತಯಾರಿಸಲಾಗಿದೆ ಎಂದು ಹೇಳಿ, ನಿಯಮ 4(3)ರನ್ವಯ ಮತ್ತಷ್ಟು ಮಾರ್ಪಾಟು, ಹೆಚ್ಚಳ ಮಾಡಿ 2025–26ನೇ ಸಾಲಿನ ಬಜೆಟ್ ಅಂದಾಜುಗಳಿಗೆ ಸರ್ಕಾರ ಅನುಮೋದನೆ ನೀಡಿದೆ.

2024–25ನೇ ಸಾಲಿನ ಸ್ವೀಕೃತಿಯ ಪ್ರಗತಿಯ ಆಧಾರದಲ್ಲಿ, ಆದಾಯ ಸೋರಿಕೆ ತಡೆಗಟ್ಟುವಿಕೆ, ಕರ ಸಂಗ್ರಹದಲ್ಲಿ ದಕ್ಷತೆ, ತೆರಿಗೆ ವ್ಯಾಪ್ತಿಯ ಹಿಗ್ಗಿಸುವಿಕೆ, ನೂತನ ಜಾಹೀರಾತು ನೀತಿ, ಪ್ರೀಮಿಯಂ ಎಫ್‌ಎಆರ್ ನೀತಿ, ಸರ್ಕಾರದ ಹೆಚ್ಚುವರಿ ಅನುದಾನ ಮತ್ತು ವಿಶ್ವ ಬ್ಯಾಂಕ್ ನೆರವನ್ನು ಗಣನೆಗೆ ತೆಗೆದುಕೊಂಡು, 2025–26ನೇ ಸಾಲಿನ ಬಜೆಟ್ ಅನ್ನು ಪಾಲಿಕೆಯ ಅಗತ್ಯಕ್ಕನುಸಾರವಾಗಿ ತಯಾರಿಸಲಾಗಿದೆ. ಆದರೆ, ಇದು ಬಿಬಿಎಂಪಿ ನಿಯಮದ ಮಿತಿಗಿಂತ ಹೆಚ್ಚಾಗಿದೆ ಎಂದು ಅನುಮೋದನೆ ಪತ್ರದಲ್ಲಿ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ತಿಳಿಸಿದ್ದಾರೆ.

'ಮಿತಿ ಮೀರಲಾಗಿದೆ' ಎಂದು ಹೇಳಿರುವ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರೇ ಏಳು ವಿಷಯಗಳಿಗೆ ಹೆಚ್ಚು ಅನುದಾನವನ್ನು ನಿಗದಿಪಡಿಸಿ, ಬಜೆಟ್ ಗಾತ್ರವನ್ನು ಹೆಚ್ಚಿಸಿ ಅನುಮೋದನೆ ನೀಡಿದ್ದಾರೆ.

ಬಿಬಿಎಂಪಿಯು ಹೆಚ್ಚುವರಿಯಾಗಿ ಸಂಗ್ರಹಿಸಬಹುದಾದ ಆದಾಯವನ್ನು ಖಾತರಿಪಡಿಸಿಕೊಂಡು, ಹೆಚ್ಚುವರಿ ಅನುದಾನವನ್ನು ಕಾಮಗಾರಿಗಳಲ್ಲಿ ಬಳಸಿಕೊಳ್ಳಲು 2025–26ನೇ ಸಲಿನ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಲಾಗಿದೆ.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಅವರೇ ಬಿಬಿಎಂಪಿಯ ಆಡಳಿತಾಧಿಕಾರಿಯಾಗಿದ್ದು, ಮಾರ್ಚ್ 29ರಂದು ಅವರ ಅನುಮೋದನೆಯೊಂದಿಗೆ ಬಜೆಟ್ ಮಂಡಿಸಲಾಗಿತ್ತು. ನಗರರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ಅವರೇ ಬಿಬಿಎಂಪಿ ಬಜೆಟ್ ಅನ್ನು ಪರಿಷ್ಕರಿಸಿ, ಮಾರ್ಚ್ 31ರಂದು ಅನುಮೋದಿಸಿದ್ದಾರೆ.

ಬಿಬಿಎಂಪಿ ಬಜೆಟ್ 2025–26 (ಮಾರ್ಚ್ 29ರಂದು ಮಂಡನೆ)	ಬಿಬಿಎಂಪಿ ಬಜೆಟ್ 2025–26 (ಸರ್ಕಾರದಿಂದ ಪರಿಷ್ಕೃತ)
₹19,930.64 ಕೋಟಿ ಒಟ್ಟಾರೆ ಸ್ವೀಕೃತಿ	₹20,440.33 ಕೋಟಿ ಒಟ್ಟಾರೆ ಸ್ವೀಕೃತಿ
₹19,927.08 ಕೋಟಿ ಒಟ್ಟಾರೆ ವೆಚ್ಚ	₹20,436.77 ಕೋಟಿ ಒಟ್ಟಾರೆ ವೆಚ್ಚ

ಯಾವುದಕ್ಕೆ ಹೆಚ್ಚು ಅನುದಾನ?

₹100 ಕೋಟಿ	ಕಲುಷಿತ ಕೆರೆ, ರಾಜಕಾಲುವೆ, ಚರಂಡಿ ನೀರು ಸಂಸ್ಕರಣೆಯ ಕಾಮಗಾರಿಗೆ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತಕ್ಕೆ (ಬಿಎಸ್‌ಡಬ್ಲ್ಯುಎಂಎಲ್) ನಿಗದಿಪಡಿಸಲಾಗಿರುವ ₹486 ಕೋಟಿಯನ್ನು ₹586 ಕೋಟಿಗೆ ಹೆಚ್ಚಿಸಲಾಗಿದೆ.
₹224.69 ಕೋಟಿ	ಬೆಂಗಳೂರು ನಗರಾಭಿವೃದ್ಧಿ ಸಚಿವರ ವಿವೇಚನಾ ಕೋಟಾದಡಿ ನಿಗದಿಪಡಿಸಿರುವ ಅನುದಾನದ ಮೊತ್ತವನ್ನು ₹135.31 ಕೋಟಿಯಿಂದ ₹360 ಕೋಟಿಗೆ ಮರು ನಿಗದಿಪಡಿಸಲಾಗಿದೆ.
₹50 ಕೋಟಿ	ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಕಟ್ಟಡ ನಿರ್ಮಾಣ
₹50 ಕೋಟಿ	ಸರ್ಕಾರದ ಕಾರ್ಯಕ್ರಮಗಳ ಪ್ರಚಾರ, ಜನಸ್ಪಂದನ ಕಾರ್ಯಕ್ರಮ, ಇತರೆ ಕಾರ್ಯಕ್ರಮಗಳನ್ನು ಆಯೋಜಿಸಲು ಅನುದಾನ
₹50 ಕೋಟಿ	ಜಾಹೀರಾತು ವೆಚ್ಚಗಳು, ದಿನಪತ್ರಿಕೆ, ಟಿ.ವಿ, ಸಾಮಾಜಿಕ ಜಾಲತಾಣ, ಪ್ರಕಟಣೆಗೆ
₹25 ಕೋಟಿ	ಕೇಂದ್ರ ಕಚೇರಿಯಲ್ಲಿ ಸಭೆ ಮತ್ತು ಸಮಾರಂಭ ಆಯೋಜನೆ
₹10 ಕೋಟಿ	ವೈದ್ಯಕೀಯ ಪರಿಹಾರ ನಿಧಿ

ಬಿಬಿಎಂಪಿ: ಡೆಂಗಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲು ಸೂಚನೆ

3 ತಿಂಗಳಲ್ಲಿ 329 ಡೆಂಗಿ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ವರ್ಷದ ಮೂರು ತಿಂಗಳಲ್ಲಿ ನಗರದಲ್ಲಿ 329 ಡೆಂಗಿ ಪ್ರಕರಣಗಳು ದಾಖಲಾಗಿವೆ.

2024ರಲ್ಲಿ 15,282 ಡೆಂಗಿ ಪ್ರಕರಣಗಳು ಕಂಡುಬಂದಿದ್ದು, ವಲಯವಾರು ಸಮಗ್ರ ಯೋಜನೆ ರೂಪಿಸಿಕೊಂಡು ಡೆಂಗಿ ಹರಡುವಿಕೆಯನ್ನು ನಿಯಂತ್ರಿಸಲಾಗುತ್ತಿದೆ. ಕಳೆದ ವರ್ಷ ಸೊಳ್ಳೆ ಉತ್ಪತ್ತಿ ತಾಣಗಳನ್ನು ಗುರುತಿಸಿ ₹24 ಲಕ್ಷ ದಂಡ ವಿಧಿಸಲಾಗಿದೆ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅವರು ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಡೆಂಗಿ ನಿಯಂತ್ರಣಕ್ಕಾಗಿ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ನಡೆಸಿದ ವರ್ಚ್ಯುವಲ್ ಸಭೆಯಲ್ಲಿ ಅವರು ಮಾಹಿತಿ ನೀಡಿದರು.

ವರ್ಷವಾರು ಡೆಂಗಿ ಪ್ರಕರಣಗಳ ವಿವರ

2022	2,335
2023	11,136
2024	15,282
2025	329 (ಜನವರಿಯಿಂದ ಮಾರ್ಚ್ 31ರವರೆಗೆ)

'ನಗರದಲ್ಲಿ ಮಳೆ ಪ್ರಾರಂಭವಾಗಿದ್ದು, ಡೆಂಗಿ ನಿಯಂತ್ರಣಕ್ಕೆ ಈಗಿನಿಂದಲೇ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ನಾಗರಿಕರಲ್ಲಿ ಜಾಗೃತಿ ಮೂಡಿಸಬೇಕು. ಜೊತೆಗೆ ಸ್ವಚ್ಛತೆ ಕಾಪಾಡದವರಿಗೆ ದಂಡ ವಿಧಿಸಬೇಕು' ಎಂದು ತುಷಾರ್ ಗಿರಿನಾಥ್ ಅವರು ಸೂಚಿಸಿದರು.

ಆರೋಗ್ಯ ವಿಭಾಗವು ತೋಟಗಾರಿಕೆ, ಅರಣ್ಯ, ಘನತ್ಯಾಜ್ಯ, ಬೃಹತ್ ನೀರುಗಾಲುವೆ, ರಸ್ತೆ ಮೂಲಸೌಕರ್ಯ ವಿಭಾಗ ಸೇರಿದಂತೆ ವಿವಿಧ ವಿಭಾಗಗಳ ಜೊತೆ ವಲಯವಾರು ಸಮನ್ವಯ ಸಾಧಿಸಿ ನೀರು ನಿಲ್ಲುವ ಪ್ರದೇಶಗಳನ್ನು ಗುರುತಿಸಿ, ಸ್ವಚ್ಛತೆಗೆ ಕ್ರಮವಹಿಸಬೇಕು ಎಂದರು.

ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಮಾತನಾಡಿ, 'ನಗರದಲ್ಲಿ ಡೆಂಗಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬೇಕು. ಲಾರ್ವಾ ಉತ್ಪತ್ತಿ ಪ್ರದೇಶಗಳನ್ನು ಗುರುತಿಸಿ ಫಾಗಿಂಗ್ ಮಾಡಬೇಕು. 'ಫೀವರ್ ಕ್ಲಿನಿಕ್'ಗಳನ್ನು ಸ್ಥಾಪಿಸಬೇಕು. ಪ್ರತಿ ವಲಯಕ್ಕೆ ನೋಡಲ್ ಅಧಿಕಾರಿ, ಕೀಟವಿಜ್ಞಾನ ತಜ್ಞರನ್ನು ನಿಯೋಜನೆ ಮಾಡಿಕೊಳ್ಳಬೇಕು. ಡೆಂಗಿ ಪರೀಕ್ಷೆಗೆ 'ಟೆಸ್ಟ್ ಕಿಟ್'ಗಳನ್ನು ದಾಸ್ತಾನು ಇರಿಸಿಕೊಳ್ಳಬೇಕು' ಎಂದರು.

ಚಿತ್ರಾವಳಿ

ಪೀಣ್ಯ ದಾಸರಹಳ್ಳಿ ಸಮೀಪದ ಹಾವನೂರು ಬಡಾವಣೆಯ ಭೂಮಿಕಾ ಸೇವಾ ಫೌಂಡೇಶನ್ ಸಭಾಂಗಣದಲ್ಲಿ ಶಿವಕುಮಾರ ಸ್ವಾಮೀಜಿ ಅವರ 118ನೇ ಜಯಂತ್ಯುತ್ಸವ ಆಚರಿಸಿ ಸಿಹಿ ಹಂಚಲಾಯಿತು. ಫೌಂಡೇಶನ್ ಅಧ್ಯಕ್ಷೆ ಲತಾ ಕುಂದರಗಿ, ಗೌರವಾಧ್ಯಕ್ಷ ಗುರುನಾಥ್, ದಾಸರಹಳ್ಳಿ ಕ್ಷೇತ್ರ ಘಟಕ ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ವೈ.ಬಿ.ಎಚ್ ಜಯದೇವ್, ವೀರಶೈವ ಮುಖಂಡ ಎಂ.ಎಚ್. ಪಾಟೀಲ್, ಕನ್ನಡ ಸೇನೆ ಖಜಾಂಚಿ ರಾಜೇಂದ್ರ ಕೊಣ್ಣೂರ, ಪದಾಧಿಕಾರಿಗಳಾದ ಶರಣ ಭಗವತಿ, ಗಿರಿಜಮ್ಮ, ಸವಿತಾ, ಲಲಿತಾ ನೀಲಕಂಠ, ಚೈತ್ರಾ, ಭೂಮಿಕಾ ಮುಂತಾದವರಿದ್ದರು



ಬ್ಯಾಟರಾಯನಪುರ ಕ್ಷೇತ್ರದ ತರಹುಣಿಸೆ ಗ್ರಾಮದಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಫಲಾನುಭವಿಗಳಿಗೆ 94ಸಿಸಿ ಅಡಿಯಲ್ಲಿ ಹಕ್ಕುಪತ್ರ ವಿತರಿಸಿದರು. ಬೆಟ್ಟಹಲಸೂರು ಗ್ರಾ.ಪಂ ಅಧ್ಯಕ್ಷೆ ಹೇಮಾವತಿ ನಾಗರಾಜಬಾಬು, ಉಪಾಧ್ಯಕ್ಷ ಬಿ.ಆರ್‌.ಪ್ರವೀಣ್, ಮುಖಂಡರಾದ ಬಿ.ಎಂ.ನಾಗೇಶ್, ಎನ್‌.ಕೆ.ಮಹೇಶ್‌ಕುಮಾರ್, ಟಿ.ಎಸ್‌.ನವೀನ್‌ಕುಮಾರ್ ಉಪಸ್ಥಿತರಿದ್ದರು

ಬಾಹ್ಯಾಕಾಶ ಸ್ಪರ್ಧೆ ಚೈತನ್ಯ ಶಾಲೆ ಚಾಂಪಿಯನ್

ಬೆಂಗಳೂರು: ಅಮೆರಿಕದ ನಾಸಾ ಎನ್‌ಎಸ್‌ಎಸ್ ಬಾಹ್ಯಾಕಾಶ ಸ್ಪರ್ಧೆ 2025ರಲ್ಲಿ ನಗರದ ಚೈತನ್ಯ ಶಾಲೆ ಸತತ 13ನೇ ವರ್ಷವೂ ವಿಶ್ವ ಚಾಂಪಿಯನ್ ಆಗಿ ಹೊರ ಹೊಮ್ಮಿದೆ.

ಈ ಸ್ಪರ್ಧೆಯಲ್ಲಿ ಒಟ್ಟು 25 ದೇಶಗಳು ಭಾಗವಹಿಸಿದ್ದವು. ಚೈತನ್ಯ ವಿದ್ಯಾರ್ಥಿಗಳ 30 ಪ್ರಶಸ್ತಿಗಳ ಕೊಡುಗೆಯೊಂದಿಗೆ, ಭಾರತವು 60 ಪ್ರಶಸ್ತಿಗಳೊಂದಿಗೆ ವಿಶ್ವದ ಅಗ್ರ ಸ್ಥಾನವನ್ನು ಗಳಿಸಿತು.

ಚೈತನ್ಯ ಶಾಲೆಯ ನಿರ್ದೇಶಕಿ ಸೀಮಾ ಮಾತನಾಡಿ, 'ಸತತ ಮೂರು ವರ್ಷ ಈ ಸ್ಪರ್ಧೆಯಲ್ಲಿ ನಗದು ಬಹುಮಾನ ಗೆದ್ದಿರುವ ವಿಶ್ವದ ಏಕೈಕ ಶಾಲೆ ಶ್ರೀ ಚೈತನ್ಯ ಆಗಿದೆ. ಈವರೆಗೆ ಯಾರೂ ಈ ಸಾಧನೆ ಮಾಡಿಲ್ಲ' ಎಂದು ಅವರು ಹೇಳಿದರು.

ಭಾರತದಿಂದ ಪ್ರಶಸ್ತಿಗಳಿಗೆ ಆಯ್ಕೆಯಾದ 60 (ಶೇ 50) ಪ್ರಾಜೆಕ್ಟ್‌ಗಳಲ್ಲಿ 30 ಪ್ರಾಜೆಕ್ಟ್‌ಗಳನ್ನು ಚೈತನ್ಯ ವಿದ್ಯಾರ್ಥಿಗಳು ಮಾತ್ರ ಪಡೆದುಕೊಂಡಿದ್ದಾರೆ. 369ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿ ಯಶಸ್ಸನ್ನು ಸಾಧಿಸಿದ್ದಾರೆ ಎಂದು ಅವರು ಹೇಳಿದರು.

ಕೆಆರ್‌ಎಸ್ ಉಪಾಧ್ಯಕ್ಷ ರಘು ಜಾಣಗೆರೆ ಆರೋಪ

'ಇನ್‌ಸ್ಪೆಕ್ಟರ್ ಕುಮಾರ್‌ಗೆ ಹಲವರ ರಕ್ಷಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಚಿನ್ನದ ಪದಕಕ್ಕೆ ಪಾತ್ರರಾಗಿದ್ದ ಇನ್‌ಸ್ಪೆಕ್ಟರ್ ಎ.ವಿ.ಕುಮಾರ್ ಅವರು ಭ್ರಷ್ಟಾಚಾರ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರ ಕೈಗೆ ಸಿಗದೆ ಪರಾರಿಯಾಗಿದ್ದಾರೆ ಎಂದು ವರದಿಯಾಗಿದೆ. ಆದರೆ, ಅವರು ಅನ್ನಪೂರ್ಣೇಶ್ವರಿ ನಗರ ಠಾಣೆಯಲ್ಲೇ ಇದ್ದು, ಅವರನ್ನು ರಕ್ಷಿಸುವ ಕೆಲಸ ಆಗುತ್ತಿದೆ' ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಉಪಾಧ್ಯಕ್ಷ ರಘು ಜಾಣಗೆರೆ ಆರೋಪಿಸಿದರು.

ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯ ಎದುರು ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕುಮಾರ್ ಅವರ ವಿರುದ್ಧದ ಪ್ರಕರಣ ಮಾಹಿತಿ ತಿಳಿದ ನಂತರ, ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಲು ಯೋಜಿಸಿದ್ದೆವು. ಪ್ರತಿಭಟನೆ ಸಂಬಂಧ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಾಕಿದ್ದೆವು. ಅದನ್ನು ಗಮನಿಸಿದ್ದ ಕೆಂಗೇರಿ ವಿಭಾಗದ ಎಸಿಪಿ ಬಸವರಾಜು ಥೇಲಿ ಅವರು ನನಗೆ ಕರೆ ಮಾಡಿ, ಪ್ರತಿಭಟನೆ ನಡೆಸಲು ಅವಕಾಶ ಇಲ್ಲ ಎಂದು ಹೇಳಿದರು' ಎಂದು ತಿಳಿಸಿದರು.

'ಏಕೆ ಪ್ರತಿಭಟನೆ ನಡೆಸಬಾರದು' ಎಂದು ಪ್ರಶ್ನಿಸಿದಾಗ, 'ಲೋಕಾಯುಕ್ತ ದಾಳಿ ನಡೆದಿರುವುದು ನಿಜ. ಆದರೆ ಇನ್‌ಸ್ಪೆಕ್ಟರ್ ಕುಮಾರ್ ಅವರು ಓಡಿಹೋಗಿಲ್ಲ. ನಿನ್ನೆಯೂ ಕರ್ತವ್ಯಕ್ಕೆ ಬಂದಿದ್ದಾರೆ. ಈಗಲೂ ಕರ್ತವ್ಯದಲ್ಲೇ ಇದ್ದಾರೆ ಎಂದು ತಿಳಿಸಿದರು. ಕುಮಾರ್ ಅವರನ್ನು ಭೇಟಿ ಮಾಡಿಸಬಹುದೇ ಎಂದು ಕೇಳಿದಾಗ, ಠಾಣೆಗೆ ಬನ್ನಿ ಎಂದು ಎಸಿಪಿ ತಿಳಿಸಿದರು' ಎಂದು ವಿವರಿಸಿದರು.

'ಠಾಣೆಗೆ ಹೋದಾಗ ಕುಮಾರ್ ಮತ್ತು ಎಸಿಪಿ ಬಸವರಾಜು ಇದ್ದರು. ಲೋಕಾಯುಕ್ತ ದಾಳಿಯ ಬಗ್ಗೆ ವಿಚಾರಿಸಿದಾಗ, 'ಆ ಬಗ್ಗೆ ಮಾಹಿತಿ ನೀಡಲು ಸಾಧ್ಯವಿಲ್ಲ. ಡಿಸಿಪಿ ಅವರ ಅನುಮತಿ ಪಡೆದು ಆ ಬಗ್ಗೆ ಮಾತನಾಡಬೇಕಾಗುತ್ತದೆ. ಇಲ್ಲವೇ ಅವರೇ ಮಾಹಿತಿ ನೀಡಬೇಕಾಗುತ್ತದೆ' ಎಂದು ಅವರಿಬ್ಬರು ಹೇಳಿದರು' ಎಂದು ರಘು ಜಾಣಗೆರೆ ತಿಳಿಸಿದರು.

'ಇನ್‌ಸ್ಪೆಕ್ಟರ್ ಕುಮಾರ್ ವಿರುದ್ಧ ದೂರು ನೀಡಿದ್ದ ಚನ್ನೇಗೌಡ ಸಹ ಭೇಟಿಗೆ ನಿರಾಕರಿಸುತ್ತಿದ್ದಾರೆ. ಈ ಪ್ರಕರಣದಲ್ಲಿ ಎಲ್ಲರೂ ಸೇರಿ ಆರೋಪಿಯನ್ನು ರಕ್ಷಿಸುತ್ತಿರುವ ಅನುಮಾನವಿದೆ. ಈ ಪ್ರಕರಣದಲ್ಲಿ ಏನಾಗುತ್ತಿದೆ ಎಂಬುದನ್ನು ಸಂಬಂಧಿತರು ಸ್ಪಷ್ಟಪಡಿಸಬೇಕು' ಎಂದು ಒತ್ತಾಯಿಸಿದರು.

'ಪದಕ ಸ್ವೀಕರಿಸಿಲ್ಲವೇಕೆ?'

'ಅನ್ನಪೂರ್ಣೇಶ್ವರಿ ನಗರದ ಇಬ್ಬರು ಕಾನ್‌ಸ್ಟೆಬಲ್‌ಗಳು ಲೋಕಾಯುಕ್ತ ಪೊಲೀಸರ ದಾಳಿಯಲ್ಲಿ ಸಿಲುಕಿದ್ದು ನಿಜ. ಅವರನ್ನು ಸುಮಾರು ತಾಸು ವಿಚಾರಣೆಯ ನಂತರ ಬಿಟ್ಟುಕಳುಹಿಸಿದ್ದಾರೆ. ಆದರೆ, ನನ್ನ ಮೇಲೆ ಯಾವುದೇ ಕಾರ್ಯಾಚರಣೆ ನಡೆದಿಲ್ಲ. ನನಗೆ ಲೋಕಾಯುಕ್ತ ಪೊಲೀಸರಿಂದ ಯಾವುದೇ ನೋಟಿಸ್ ಸಹ ಬಂದಿಲ್ಲ ಎಂದು ಇನ್‌ಸ್ಪೆಕ್ಟರ್ ಕುಮಾರ್ ಹೇಳಿದರು' ಎಂದು ರಘು ಜಾಣಗೆರೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'ಠಾಣೆಯಲ್ಲಿದ್ದ ಎಸಿಪಿ ಬಸವರಾಜು ಸಹ ಇದೇ ಮಾತು ಹೇಳಿದರು. ಆಗ ನಾವು ಕುಮಾರ್ ಅವರನ್ನು, 'ಮುಖ್ಯಮಂತ್ರಿಯ ಚಿನ್ನದ ಪದಕ ಪಟ್ಟಿಯಲ್ಲಿ ನಿಮ್ಮ ಹೆಸರು ಮತ್ತು ಚಿತ್ರ ಎರಡೂ ಇದೆ. ನಿಮ್ಮ ಮೇಲೆ ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿಲ್ಲ ಮತ್ತು ನೀವು ತಲೆಮರೆಸಿಕೊಂಡಿರಲಿಲ್ಲ ಎಂದಾದರೆ ಪದಕ ಪ್ರದಾನ ಕಾರ್ಯಕ್ರಮಕ್ಕೆ ಏಕೆ ಬರಲಿಲ್ಲ' ಎಂದು ಪ್ರಶ್ನಿಸಿದೆವು. ಆ ಪ್ರಶ್ನೆಗೆ ಉತ್ತರಿಸಲು ಇಬ್ಬರು ಅಧಿಕಾರಿಗಳೂ ನಿರಾಕರಿಸಿದರು' ಎಂದು ರಘು ತಿಳಿಸಿದರು.

ಮೆಟ್ರೊದಲ್ಲಿ ನಿಯಮ ಮೀರಿದ ವರ್ತನೆ: 27 ಸಾವಿರ ಪ್ರಕರಣ ಪತ್ತೆ

ಬೆಂಗಳೂರು: 'ನಮ್ಮ ಮೆಟ್ರೊ'ದಲ್ಲಿ ಸಂಚರಿಸುವಾಗ ಮೊಬೈಲ್‌ನಲ್ಲಿ ಸಂಗೀತ ಹಾಕುವುದು, ಮೀಸಲಾದ ಸೀಟುಗಳನ್ನು ಬಿಟ್ಟುಕೊಡದಿರುವುದು ಸೇರಿದಂತೆ ಸಹ ಪ್ರಯಾಣಿಕರಿಗೆ ಅನನುಕೂಲ ಮಾಡಿರುವ 27 ಸಾವಿರ ಪ್ರಕರಣಗಳು ಕಳೆದ ಆರು ತಿಂಗಳಲ್ಲಿ ನಡೆದಿವೆ.

'ನಮ್ಮ ಮೆಟ್ರೊ' ವಿಚಕ್ಷಣಾ ದಳ ನಡೆಸಿದ ಭದ್ರತಾ ಪರೀಕ್ಷೆಗಳಲ್ಲಿ ಈ ಪ್ರಕರಣಗಳು ಪತ್ತೆಯಾಗಿವೆ. ಅಂಥ ಪ್ರಯಾಣಿಕರಿಗೆ ದಂಡ ವಿಧಿಸದೇ ಎಚ್ಚರಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ದೊಡ್ಡ ಧ್ವನಿಯಲ್ಲಿ ಸಂಗೀತ ಹಾಕಿದ 11,922 ಪ್ರಕರಣಗಳು ಕಂಡುಬಂದಿವೆ. ಅಂಗವಿಕಲರಿಗೆ, ಹಿರಿಯರಿಗೆ, ಗರ್ಭಿಣಿಯರಿಗೆ ಮೀಸಲಾದ ಆಸನಗಳನ್ನು ಬಿಟ್ಟುಕೊಡದ 14,162 ಪ್ರಕರಣಗಳು ಕಂಡುಬಂದಿವೆ. ಮೆಟ್ರೊ ಪ್ರಯಾಣದ ವೇಳೆ ನಿಯಮ ಉಲ್ಲಂಘಿಸಿ ಆಹಾರ ಸೇವಿಸಿದ 554 ಪ್ರಕರಣಗಳು ಪತ್ತೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಲೋಕಸಭಾ ಕ್ಷೇತ್ರ ಮರುವಿಂಗಡಣೆ ಕೈಬಿಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಸಂಖ್ಯೆ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಮಾಡುವ ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಬಿಡಬೇಕು. ಮುಂದೆಂದೂ ಮರುವಿಂಗಡಣೆ ಮಾಡದಂತೆ ನಿಯಮ ರೂಪಿಸಬೇಕು.

ಜಾಗೃತ ಕರ್ನಾಟಕ ಹಮ್ಮಿಕೊಂಡಿದ್ದ ದುಂಡುಮೇಜಿನ ಸಭೆಯಲ್ಲಿ ಮೂಡಿದ ಒಕ್ಕೊರಲ ಆಗ್ರಹ ಇದು.

543 ಲೋಕಸಭಾ ಸದಸ್ಯರಿದ್ದಾರೆ. ಸಂವಿಧಾನಕ್ಕೆ ಬದ್ಧವಾಗಿ ನೀತಿ ನಿರೂಪಣೆ ಮಾಡುವ ಕೆಲಸ ಅವರದ್ದು. ಈಗಿರುವ ಸಂಖ್ಯೆಯನ್ನು ಹೆಚ್ಚಳ ಮಾಡಿದರೂ ಅವರ ಕೆಲಸ ಅಷ್ಟೇ ಇರುತ್ತದೆ. ದೇಶಕ್ಕೆ ಯಾವುದೇ ಪ್ರಯೋಜನವಿಲ್ಲದೇ 300ಕ್ಕೂ ಅಧಿಕ ಸಂಸದರಿಗೆ ಅನಗತ್ಯವಾಗಿ ವೇತನ, ಸಾರಿಗೆ ವೆಚ್ಚಗಳನ್ನು ನೀಡಬೇಕಾಗುತ್ತದೆ ಎಂದು ಸಭೆಯಲ್ಲಿ ಅಭಿಪ್ರಾಯ ಮೂಡಿತು.

ಇದು ಚುನಾವಣಾ ಗೆಲುವಿಗಾಗಿ ಬಿಜೆಪಿ ರೂಪಿಸಿದ್ದ ಗುಪ್ತ ಕಾರ್ಯಸೂಚಿ. ಕೋಮು ಧ್ರುವೀಕರಣಗೊಳಿಸುವ ಮೂಲಕ ಚುನಾವಣೆಯನ್ನು ಗೆಲ್ಲುವ ಗುಪ್ತ ಕಾರ್ಯಸೂಚಿಯನ್ನು ಈಗ ಕ್ಷೇತ್ರ ಮರುವಿಂಗಡಣೆಯ ಮೂಲಕ ದೇಶದಲ್ಲಿ ಅನುಷ್ಠಾನಗೊಳಿಸಲು ಹೊರಟಿದೆ. ಕ್ಷೇತ್ರ ಮರುವಿಂಗಡಣೆ ನಡೆದರೆ ದಕ್ಷಿಣ ಭಾರತದ ರಾಜ್ಯಗಳ ಲೋಕಸಭಾ ಕ್ಷೇತ್ರಗಳ ಪ್ರಮಾಣ ಶೇಕಡ 24 ರಿಂದ ಶೇ 19ಕ್ಕೆ ಇಳಿಯಲಿದೆ. ಎಂದು ಸಭೆಯಲ್ಲಿ ಆತಂಕ ವ್ಯಕ್ತವಾಯಿತು.

ಸಭೆಯಲ್ಲಿ ಜಾಗೃತ ಕರ್ನಾಟಕದ ರಾಜಶೇಖರ್ ಅಕ್ಕಿ, ಎಚ್.ವಿ. ವಾಸು, ಮುತ್ತುರಾಜ್, ಅರವಿಂದ, ಬಸವರಾಜ್, ನಾಗೇಶ್ ಅರಳಕುಪ್ಪೆ, ಡಾ. ಸುನೀಲ್, ನಗರಗೆರೆ ರಮೇಶ್, ಆಸ್ಮಾ, ನೀನಾ, ಬಸವರಾಜ್ ಕೌತಾಳ್, ಆದರ್ಶ, ಶರತ್. ಮುರಳಿ, ಮುರಳೀಧರ್, ಡಿ. ಉಮಾಪತಿ ಸಹಿತ ಹಲವರು ಅಭಿಪ್ರಾಯ ವ್ಯಕ್ತಪಡಿಸಿದರು.

ಸಿಡಿಮದ್ದು ಸಿಡಿದು ಕರಡಿ ಸಾವು

ಹನೂರು (ಚಾಮರಾಜನಗರ ಜಿಲ್ಲೆ): ಕಾವೇರಿ ವನ್ಯಧಾಮದಲ್ಲಿ ಸಿಡಿಮದ್ದು ಸಿಡಿದು ಕರಡಿಯೊಂದು ಮೃತಪಟ್ಟಿದೆ.

ಕೊತ್ತನೂರು ವನ್ಯಜೀವಿ ವಲಯದ ತೆಳ್ಳನೂರು ಹಾಗೂ ಬಂಡಳ್ಳಿ ರಸ್ತೆಯಲ್ಲಿರುವ ಜಮೀನಿನಲ್ಲಿ ಯಾರೋ ಕಿಡಿಗೇಡಿಗಳು ಇಟ್ಟಿದ್ದ ಸಿಡಿಮದ್ದನ್ನು ಕರಡಿ ಕಚ್ಚಿದಾಗ ಈ ಘಟನೆ ನಡೆದಿದೆ. ಕರಡಿ ಸತ್ತಿದ್ದನ್ನು ನೋಡಿದ ಗಸ್ತಿನಲ್ಲಿದ್ದವರು ಅರಣ್ಯ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಸ್ಥಳಕ್ಕೆ ಕಾವೇರಿ ವನ್ಯಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸುರೇಂದ್ರ ಭೇಟಿ ನೀಡಿ ಪರಿಶೀಲಿಸಿದರು.

ರಾಮೋಹಳ್ಳಿಯಲ್ಲಿ ರಾಮಚಂದ್ರಸ್ವಾಮಿ ಬ್ರಹ್ಮರಥೋತ್ಸವ ನಡೆಯಿತು

ಶ್ರೀರಾಮಚಂದ್ರಸ್ವಾಮಿ ಬ್ರಹ್ಮರಥೋತ್ಸವ

ರಾಜರಾಜೇಶ್ವರಿನಗರ: ರಾಮೋಹಳ್ಳಿ ಗ್ರಾಮದಲ್ಲಿ ಶ್ರೀರಾಮಚಂದ್ರಸ್ವಾಮಿ ದೇವರ ಬ್ರಹ್ಮರಥೋತ್ಸವ ನಡೆಯಿತು.

ರಥೋತ್ಸವಕ್ಕೆ ಮುನ್ನ ವಿವಿಧ ಹೋಮ, ಅಭಿಷೇಕ, ವಿಶೇಷ ಪೂಜೆ ಪುರಸ್ಕಾರಗಳು ನಡೆದವು. ಬ್ರಹ್ಮ ರಥೋತ್ಸವದಲ್ಲಿ ಕೇರಳದ ವಿವಿಧ ಜನಪದ ಕಲಾಪ್ರದರ್ಶನಗಳು ಮೆರಗು ನೀಡಿದವು. ರತ್ನಮ್ಮ ವೆಂಕಟೇಶಪ್ಪ, ಸುವರ್ಣ ಚಂದ್ರಶೇಖರ್, ಶಾಂತ ಚಂದ್ರಶೇಖರ್ ನೇತೃತ್ವದಲ್ಲಿ ಕೈಂಕರ್ಯಗಳು ನಡೆದವು.

ಶಾಸಕ ಎಸ್.ಟಿ.ಸೋಮಶೇಖರ್, ರಾಜ್ಯ ಒಕ್ಕಲಿಗರ ಸಂಘದ ಗೌರವ ಅಧ್ಯಕ್ಷ ಡಿ.ಹನುಮಂತಯ್ಯ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ವಿ.ವೇಣುಗೋಪಾಲ್, ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಎಚ್.ಪ್ರಭು, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಪ್ರಧಾನ ಕಾರ್ಯದರ್ಶಿ ಆರ್.ಪಿ.ಪ್ರಕಾಶ್, ಹೇಮಂತರಾಜ್ ಮತ್ತು ಗ್ರಾಮದ ಮುಖಂಡರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

ನಗರದಲ್ಲಿ ಇಂದು

'ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು: ಸಾಧ್ಯತೆ ಮತ್ತು ಸವಾಲುಗಳು' ವಿಚಾರಸಂಕಿರಣ: ಉದ್ಘಾಟನೆ: ಕೆ.ಆರ್. ಸಂಧ್ಯಾ ರೆಡ್ಡಿ, ಮುಖ್ಯ ಅತಿಥಿ: ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಉಪಸ್ಥಿತಿ: ಎಚ್.ಎಲ್. ಪುಷ್ಪ, ಆಯೋಜನೆ: ಶೇಷಾದ್ರಿಪುರಂ ಕಾಲೇಜಿನ ಕನ್ನಡ ಸಂಘ–ಕನ್ನಡ ವಿಭಾಗ, ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 9

ರಾಜ್ಯಮಟ್ಟದ ಕಾರ್ಯಾಗಾರ ಹಾಗೂ ಬೃಹತ್ ಸಮಾವೇಶ: ಉದ್ಘಾಟನೆ: ಸಿದ್ದರಾಮಯ್ಯ, ಸ್ಮರಣ ಸಂಚಿಕೆ ಬಿಡುಗಡೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಎಲ್. ಭೈರಪ್ಪ, ಮುಖ್ಯ ಅತಿಥಿಗಳು: ರಾಮಲಿಂಗಾರೆಡ್ಡಿ, ಎಚ್. ಸಿ. ಮಹದೇವಪ್ಪ, ಶಾಲಿನಿ ರಜನೀಶ್, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಸ್ಥಳ: ಪ್ರಿನ್ಸಸ್ ಶ್ರೈನ್ (ಗೇಟ್ ಸಂಖ್ಯೆ 9), ಅರಮನೆ ಆವರಣ, ಬಳ್ಳಾರಿ ರಸ್ತೆ, ಬೆಳಿಗ್ಗೆ 10

ಜಾನಪದ ಉತ್ಸವ: ಉದ್ಘಾಟನೆ: ಎಂ. ಸತೀಶ್ ರೆಡ್ಡಿ, ಮುಖ್ಯ ಅತಿಥಿಗಳು: ಎಚ್.ಎಸ್. ಗೋಪಿನಾಥ ರೆಡ್ಡಿ, ಲಕ್ಷ್ಮಣ ನೆಲಸೊಗಡು, ಸದಾಶಿವ ರೆಡ್ಡಿ, ಅಧ್ಯಕ್ಷತೆ: ರಾಗಿಣಿ, ಆಯೋಜನೆ ಹಾಗೂ ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಎಚ್.ಎಸ್.ಆರ್. ಬಡಾವಣೆ, ಬೆಳಿಗ್ಗೆ 10.30

'ಆತ್ಮತೃಷಾ' ತಾಂತ್ರಿಕ-ಸಾಂಸ್ಕೃತಿಕ ಹಬ್ಬ: ಮುಖ್ಯ ಅತಿಥಿಗಳು: ಬಿ. ಅಜನೀಶ್ ಲೋಕನಾಥ್, ಪ್ರೊ.ಡಿ. ಜವಾಹರ್, ಗೌರವ ಅತಿಥಿಗಳು: ಜೆ. ಸೂರ್ಯಪ್ರಸಾದ್, ಸಿ.ಆರ್. ಬಾಬಿ, ಆಯೋಜನೆ ಹಾಗೂ ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಬನಶಂಕರಿ 3ನೇ ಹಂತ, ಸಂಜೆ 4

ಅಜನೀಶ್ ಲೋಕನಾಥ್

ಕಲಾವಿದ ಎಂ.ಟಿ.ವಿ. ಆಚಾರ್ಯ ಅವರ ಕಲಾಕೃತಿಗಳ ಪ್ರದರ್ಶನದ ಉದ್ಘಾಟನಾ ಸಮಾರಂಭ: ಮುಖ್ಯ ಅತಿಥಿಗಳು: ಚಿರಂಜೀವಿ ಸಿಂಘ್, ಚಂದ್ರನಾಥ್ ಆಚಾರ್ಯ, ಚಿ.ಸು. ಕೃಷ್ಣ ಸೆಟ್ಟಿ, ಮೇದಿನಿ ಗರುಡಾಚಾರ್, ಎಲ್. ಶಿವಲಿಂಗಪ್ಪ, ಪಿ. ಶೇಷಾದ್ರಿ, ಆರ್. ಜಿ. ಸಿಂಗ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5 (ಕಲಾಕೃತಿಗಳ ಪ್ರದರ್ಶನದ ಅವಧಿ ಬೆಳಿಗ್ಗೆ 10.30ರಿಂದ ಸಂಜೆ 7)

32ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಅನ್ವಿತಾ ಸಾವಿತ್ರಿ ಭಟ್, ಪಿಟೀಲು: ಎಸ್. ಶಶಿಧರ್, ಮೃದಂಗ: ಲೋಕಪ್ರಿಯ ಗುರುಮೂರ್ತಿ, ಸಂಗೀತ ಕಛೇರಿ: ಮೈಸೂರು ಎಂ. ನಾಗರಾಜ್, ಮೈಸೂರು ಎಂ. ಮಂಜುನಾಥ್, ಶ್ರೀಮುಷ್ಣಮ್ ರಾಜಾ ರಾವ್, ವಳಪಲ್ಲಿ ಆರ್. ಕೃಷ್ಣಕುಮಾರ್, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 5.15

27ನೇ ವಾರ್ಷಿಕೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ: ಮುಖ್ಯ ಅತಿಥಿಗಳು: ಗಿರಿಜಾ ಲೋಕೇಶ್, ರವಿ ಸುಬ್ರಹ್ಮಣ್ಯ, ಆಯೋಜನೆ: ಶ್ರೀಮಾತಾ ಮಹಿಳಾ ಸಂಘ, ಸ್ಥಳ: ಕೆ.ಎಸ್. ನರಸಿಂಹಸ್ವಾಮಿ ಉದ್ಯಾನವನ, ಕತ್ರಿಗುಪ್ಪೆ ವಾಟರ್ ಟ್ಯಾಂಕ್ ಬಳಿ, ಬನಶಂಕರಿ 3ನೇ ಹಂತ, ಸಂಜೆ 5.30

ಗಿರಿಜಾ ಲೋಕೇಶ್

'ಮಧುರ ಗಾನ' ಭಾವಗೀತೆಗಳ ಗಾಯನ: ಉದ್ಘಾಟನೆ: ಎಚ್.ಟಿ. ನರೇಂದ್ರ ಪ್ರಸಾದ್, ಮುಖ್ಯ ಅತಿಥಿ: ರವಿ ಬಿ. ನಾಯಕ್, ಅಧ್ಯಕ್ಷತೆ: ಪಂಪಾವತಿ ಗದ್ದಿ, ಕಲಾವಿದರು: ನಾಗಚಂದ್ರಿಕಾ ಭಟ್, ಸಾಧ್ವಿನಿ ಕೊಪ್ಪ, ಕವಿತಾ ಸುಬ್ರಮಣ್ಯ, ಆಕಾಶ್ ಮೊಳ್ಕೇರಿ, ಆಯೋಜನೆ: ಗಾನಗಂಗಾ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ವಸಂತ ನವರಾತ್ರಿ ಶ್ರೀರಾಮೋತ್ಸವ: ಗಾಯನ: ಮಧುರ, ಪಿಟೀಲು: ಎಂ.ಎಸ್. ಗೋವಿಂದಸ್ವಾಮಿ, ಮೃದಂಗ: ಎಸ್. ಅನಂತಪದ್ಮನಾಭ, ಘಟ: ಎಂ. ಶಿವಶಂಕರ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

25ನೇ ವರ್ಷದ ಪ್ರವಚನ ವಾಹಿನಿ: 'ಶ್ರೀರಾಮಚಂದ್ರ ರಾಮಾನುಜ 1,2,3' ಉಪನ್ಯಾಸ: ಗೋಪಾಲ್ ಅಯ್ಯಂಗಾರ್, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

'ಸಿಯಾ ರಾಮ್' ಒಡಿಸ್ಸಿ ನೃತ್ಯ: ಮಧುಲಿತಾ ಮಹೋಪಾತ್ರ ಮತ್ತು ತಂಡ, ಆಯೋಜನೆ ಹಾಗೂ ಸ್ಥಳ: ಜಾಗೃತಿ ಥಿಯೇಟರ್, ವೈಟ್‌ಫೀಲ್ಡ್, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಹೆಚ್ಚಿನ ಬಾಡಿಗೆ, ಸುಲಿಗೆ ಆಟೊ ಚಾಲಕರ ವಿರುದ್ಧ ಪ್ರಕರಣ

ಚಾಲಕರ ಕಿರಿಕಿರಿ: ಪ್ರಯಾಣಿಕರು ಹೈರಾಣ

• ಕೆ.ಎಸ್.ಸುನಿಲ್

ಬೆಂಗಳೂರು: ಪ್ರಯಾಣಿಕರು ಕರೆದ ಸ್ಥಳಕ್ಕೆ ಹೋಗದಿರುವುದು ಹಾಗೂ ನಿಗದಿಗಿಂತ ಹೆಚ್ಚಿನ ಬಾಡಿಗೆ ಕೇಳುತ್ತಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಆಟೊ ಚಾಲಕರ ವಿರುದ್ಧ ಆರು ಸಾವಿರಕ್ಕೂ ಅಧಿಕ ಪ್ರಕರಣಗಳು ದಾಖಲಾಗಿವೆ.

2024ರಲ್ಲಿ ಆಟೊ ಚಾಲಕರ ವಿರುದ್ಧ ವಿವಿಧ ಸಂಚಾರ ಠಾಣೆಗಳಲ್ಲಿ 6,274 ಪ್ರಕರಣಗಳು ದಾಖಲಾಗಿದ್ದು, ₹32.94 ಲಕ್ಷ ದಂಡ ವಸೂಲು ಮಾಡಲಾಗಿದೆ.

2022ರಲ್ಲಿ4,362 ಪ್ರಕರಣ ದಾಖಲಾಗಿದ್ದು, ₹20.96 ಲಕ್ಷ ದಂಡ ವಸೂಲು ಮಾಡಲಾಗಿತ್ತು. 2023ರಲ್ಲಿ 3,136 ಪ್ರಕರಣ ದಾಖಲಾಗಿ, ₹14.65 ಲಕ್ಷ ದಂಡ ವಸೂಲು ಮಾಡಲಾಗಿದೆ. ಪ್ರಕರಣಗಳ ಸಂಖ್ಯೆ ದುಪ್ಪಟ್ಟಾಗಿದೆ.

ಪ್ರಯಾಣಿಕರ ಮೇಲೆ ಆಟೊ ಚಾಲಕರ ದೌರ್ಜನ್ಯ ಹಾಗೂ ಕಿರಿಕಿರಿ ಆರೋಪದ ಮೇರೆಗೆ ನಗರದ ಸಂಚಾರ ಪೊಲೀಸರು, ಚಾಲಕರ ವಿರುದ್ಧ ಕಾರ್ಯಾಚರಣೆ ನಡೆಸಿ, ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

'ಮೀಟರ್ ಮೇಲೆ ₹50–100 ಕೊಡಿ', 'ಮೀಟರ್ ದರಕ್ಕಿಂತ ಒಂದೂವರೆ ಪಟ್ಟು ಹೆಚ್ಚು ಕೊಡಿ', 'ಚಿಕ್ಕಜಾಲ, ಜಾಲಹಳ್ಳಿ ಕ್ರಾಸ್‌ಗೆ ಬರೋಲ್ಲಾರೀ..' ಈ ರೀತಿ ಹೇಳಿ ನಿಯಮ ಉಲ್ಲಂಘನೆ ಮಾಡುತ್ತಿದ್ದ ಆಟೊ ಚಾಲಕರ ವಿರುದ್ಧ ಪೊಲೀಸರು ಕ್ರಮ ಕೈಗೊಂಡಿದ್ದಾರೆ

'ನಿಗದಿಗಿಂತ ಹೆಚ್ಚಿನ ಬಾಡಿಗೆ ಕೇಳುವುದು, ಪ್ರಯಾಣಿಕರು ಕರೆದ ಸ್ಥಳಕ್ಕೆ ಹೋಗದಿರುವುದು, ಪ್ರಯಾಣಿಕರಿಂದ ಮೊಬೈಲ್, ನಗದು ಸುಲಿಗೆ ನಡೆಸುತ್ತಿರುವಂತಹ ಪ್ರಕರಣಗಳು ದಾಖಲಾಗುತ್ತಿವೆ. ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ತಮಗಾದ ಕಹಿ ಅನುಭವಗಳನ್ನು ಹಂಚಿಕೊಂಡು, ಪೊಲೀಸರ ಗಮನಕ್ಕೆ ತಂದಿದ್ದಾರೆ' ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಹೆಚ್ಚಿನ ದರ ನೀಡಲು ನಿರಾಕರಿಸಿದ ಕಾಲೇಜು ವಿದ್ಯಾರ್ಥಿನಿಯೊಬ್ಬಳಿಗೆ ಆಟೊ ಚಾಲಕ ಬೆದರಿಕೆ ಹಾಕಿರುವ ಘಟನೆಯನ್ನು ಜಾಲತಾಣದಲ್ಲಿ ಉಲ್ಲೇಖಿಸಿದ್ದರು.

'ಮೆಟ್ರೊ ರೈಲಿನ ಸೌಲಭ್ಯವಿಲ್ಲದ ಕಡೆಗಳಲ್ಲಿ ಬಸ್ ಹಾಗೂ ಆಟೊದಲ್ಲಿ ತೆರಳುವುದು ಪ್ರಯಾಣಿಕರಿಗೆ ಅನಿವಾರ್ಯ. ಇದನ್ನೇ ಬಂಡವಾಳ ಮಾಡಿಕೊಂಡಿದ್ದ ಚಾಲಕರು ದುಬಾರಿ ದರ ವಸೂಲಿ ಮಾಡಿದ್ದಾರೆ. ದೂರದ ಊರುಗಳಿಂದ ಬರುವ ಪ್ರಯಾಣಿಕರಿಗೆ ನೆಪ ಹೇಳಿ ಹೆಚ್ಚಿನ ಹಣ ವಸೂಲಿ ಮಾಡುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ತಾವು ಕೇಳಿದಷ್ಟು ಹಣ ನೀಡಿಲ್ಲ ಎಂಬ ಕಾರಣಕ್ಕೆ ಕೆಲವು ಸ್ಥಳಗಳಲ್ಲಿ ಬಾಡಿಗೆಗೆ ಬರಲು ಆಟೊ ಚಾಲಕರು ಹಿಂದೇಟು ಹಾಕುತ್ತಿದ್ದರು. ಅಂತಹ ಆಟೊಗಳನ್ನು ಪತ್ತೆ ಮಾಡಿ ಚಾಲಕರಿಗೆ ಎಚ್ಚರಿಕೆ ನೀಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಹೊರ ರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ಮೆಜೆಸ್ಟಿಕ್‌ಗೆ ಮಧ್ಯರಾತ್ರಿ ಬರುವ ಪ್ರಯಾಣಿಕರಿಂದ ನಿಗದಿತ ದರಕ್ಕಿಂತ ನಾಲ್ಕು ಪಟ್ಟು ಹೆಚ್ಚು ದರ ಪಡೆಯುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು' ಎಂದು ಪ್ರಯಾಣಿಕರು ಆಗ್ರಹಿಸಿದ್ದಾರೆ.

ಪ್ರಕರಣಗಳ ವಿವರ

ವರ್ಷ	ಹೆಚ್ಚುವರಿ ದರಕ್ಕೆ ಬೇಡಿಕೆ	ಬಾಡಿಗೆಗೆ ಹೋಗಲು ನಿರಾಕರಣೆ	ಒಟ್ಟು ದಂಡ ವಸೂಲು
2024	3,136	3,138	₹32,94,300
2023	1,599	1,537	₹14,65,300
2022	2,179	2,183	₹20,96,200

ಪ್ರಯಾಣಿಕರು ಕರೆದ ಸ್ಥಳಕ್ಕೆ ಬಾರದಿರುವ, ನಿಗದಿಗಿಂತ ಹೆಚ್ಚಿನ ಬಾಡಿಗೆ ಕೇಳುವ ಆಟೊ ಚಾಲಕರ ವಿರುದ್ಧ ಪೊಲೀಸರಿಗೆ ದೂರು ನೀಡಬಹುದು

ಎಂ.ಎನ್.ಅನುಚೇತ್
ಸಂಚಾರಿ ವಿಭಾಗದ ಜಂಟಿ ಪೊಲೀಸ್ ಕಮಿಷನರ್

'ಮೀಟರ್ ದರ ಮಾತ್ರ ನೀಡಬೇಕು'

'ಆಟೊ ಚಾಲಕರು ಹೆಚ್ಚಿನ ದರಕ್ಕೆ ಬೇಡಿಕೆ ಇರಿಸಿದರೆ ಪ್ರಯಾಣಿಕರು ನೀಡಬಾರದು. ಚಾಲಕರು ಸಹ ಮೀಟರ್ ದರ ಮಾತ್ರ ಪಡೆಯಬೇಕು. ಕೆಲವೊಬ್ಬರು ₹50ರಿಂದ ₹500ರವರೆಗೂ ಕೇಳುತ್ತಾರೆ. ಆದರೆ, ಯಾವುದೇ ಕಾರಣಕ್ಕೂ ಪ್ರಯಾಣಿಕರು ನೀಡಬಾರದು. ನಗರದ ಹೊರ ವಲಯಕ್ಕೆ ತೆರಳಿದ ಸಂದರ್ಭದಲ್ಲಿ ಹೆಚ್ಚುವರಿ ₹20 ಹಣ ಕೇಳುವುದು ತಪ್ಪಲ್ಲ. ವಾಪಸ್ ಬರುವಾಗ ಬಾಡಿಗೆ ಇರುವುದಿಲ್ಲ' ಎಂದು ಬೆಂಗಳೂರು ಸಾರಥಿ ಸೇನೆ (ಆಟೊ ಚಾಲಕರ ಸಂಘಟನೆ) ಅಧ್ಯಕ್ಷ ಬಿ.ರಾಮೇಗೌಡ ತಿಳಿಸಿದರು.

'ಪ್ರಯಾಣಿಕರನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗುವುದು ಚಾಲಕರ ಕರ್ತವ್ಯ. ಪ್ರಯಾಣಿಕರನ್ನು ಸುಲಿಗೆ ಮಾಡುವುದು ಸರಿಯಲ್ಲ. ಸಂಚಾರ ಪೊಲೀಸರು ಪ್ರಯಾಣಿಕರ ಜತೆ ಹೇಗೆ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ತರಬೇತಿ ನೀಡಿದ್ದಾರೆ' ಎಂದು ಹೇಳಿದರು.

'ಮಿನ್ನಿ' ಸಾವು

ಮೈಸೂರು: ಚಾಮರಾಜೇಂದ್ರ ಮೃಗಾಲಯದಲ್ಲಿದ್ದ ಹೆಣ್ಣು ಒರಾಂಗೂಟಾನ್ 'ಮಿನ್ನಿ' (10 ವರ್ಷ 8 ತಿಂಗಳು) ಬುಧವಾರ ಅನಾರೋಗ್ಯದಿಂದ ಮೃತಪಟ್ಟಿತು.

'ದೊಡ್ಡವಾನರ' ಜಾತಿಗೆ ಸೇರಿದ ಈ ಪ್ರಾಣಿಯನ್ನು 2021ರ ಏ.2ರಂದು 'ಪ್ರಾಣಿ ವಿನಿಮಯ ಕಾರ್ಯಕ್ರಮ'ದಡಿ ಮಲೇಷ್ಯಾದಿಂದ ಕರೆದುತರಲಾಗಿತ್ತು. ಶ್ವಾಸಕೋಶ ಸಮಸ್ಯೆಯಿಂದ ಉಸಿರಾಟದ ತೊಂದರೆ ಇದ್ದು, ಇತ್ತೀಚೆಗೆ ಆರೋಗ್ಯ ತೀವ್ರವಾಗಿ ಕ್ಷೀಣಿಸಿತ್ತು.

ತಜ್ಞ ಪಶುವೈದ್ಯರು ಗುರುವಾರ ಬೆಳಿಗ್ಗೆ 10ರಿಂದ ಮರಣೋತ್ತರ ಪರೀಕ್ಷೆ ನಡೆಸಿದರು. 'ಮಿನ್ನಿ' ನ್ಯುಮೋನಿಯಾದಿಂದ ಮೃತಪಟ್ಟಿದ್ದನ್ನು ದೃಢಪಡಿಸಿದ್ದಾರೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಕೆ.ಎನ್. ರಂಗಸ್ವಾಮಿ ತಿಳಿಸಿದ್ದಾರೆ.

ಅನಾರೋಗ್ಯದ ಮೂಲ ಕಾರಣ ಅರಿಯಲು ಹೆಚ್ಚಿನ ತನಿಖೆಗಾಗಿ ಜೈವಿಕ ಮಾದರಿಗಳನ್ನು ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಲಾಗಿದೆ. ವರದಿಯ ನಿರೀಕ್ಷೆಯಲ್ಲಿದ್ದೇವೆ' ಎಂದು ಮಾಹಿತಿ ನೀಡಿದ್ದಾರೆ.

ಬೆಂಗಳೂರು ಸಿಟಿ ಎಫ್‌ಸಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿನ್ ಆರ್. ಮತ್ತು ನಿರಂಜಯ್ ಬಾಬು ಅವರ ಆಟದ ನೆರವಿನಿಂದ ಬೆಂಗಳೂರು ಸಿಟಿ ಎಫ್‌ಸಿ ತಂಡವು ಗುರುವಾರ ಬಿಡಿಎಫ್‌ಎ ಎ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 2–0 ಗೋಲುಗಳಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ಸಿಟಿ ಪರ ಸಚಿನ್ (3ನೇ ನಿಮಿಷ) ಮತ್ತು ನಿರಂಜಯ್ (11ನೇ) ತಲಾ ಒಂದು ಗೋಲು ಗಳಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡವು 3–3 ಗೋಲುಗಳಿಂದ ಆರ್‌ಡಬ್ಲ್ಯುಎಫ್ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು.

ಹೂಡಿಕೆ ಅವಕಾಶ: ಶಿವಮೊಗ್ಗ ಜಿಲ್ಲೆಯ ನಿದಿಗೆ ಕೈಗಾರಿಕಾ ಪ್ರದೇಶದಲ್ಲಿ 6 ಎಕರೆ ಪ್ರಮುಖ ಭೂಮಿ ಮತ್ತು ಕಚೇರಿ ಕಟ್ಟಡವನ್ನು ಹೊಂದಿರುತ್ತದೆ,

- ಈ ಭೂಮಿ ಕಾರ್ಪೊರೇಟ್ ಮಾಲೀಕತ್ವದ, ರಾಜ್ಯ ಸರ್ಕಾರದ ಮಂಜೂರಾತಿಯನ್ನು ಹೊಂದಿದೆ.
- ಈ ಭೂಮಿಯೂ 200 ಎಕರೆ KEONICS IT ಪಾರ್ಕ್ ವ್ಯಾಪ್ತಿಯಲ್ಲಿರುತ್ತದೆ
- ಬೆಂಗಳೂರು-ಹೊನ್ನಾವರ ಹೆದ್ದಾರಿಯಿಂದ 850 mtrs ಅಂತರದಲ್ಲಿದ್ದು, 40 ಅಡಿಯುಳ್ಳ ರಸ್ತೆಯನ್ನು ಈ ಸೈಟ್ ಒಳಗೊಂಡಿದೆ
- 85,000 ಚ.ಅ. (ನೆಲ ಮಹಡಿ + 3 ಮೇಲು ಮಹಡಿ) ಬಿಲ್ಟ್-ಅಪ್ ಪ್ರದೇಶವನ್ನು ಒಳಗೊಂಡಿದೆ
- ಈ ಜಾಗವೂ ಕಾರ್ಪೊರೇಟ್ ಕಂಪನಿಗಳು ಮತ್ತು ಹೆಸರಾಂತ ಕೈಗಾರಿಕೆಗಳಿಂದ ಸುತ್ತುವರಿದಿದೆ

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿ ;

ಶ್ಯಾಮ್ ಭಾರದ್ವಾಜ್ | 98804 72428
Bharadwaj.shyam@cbre.co.in
ಶೋಭಿತ ರೋಡ್ರಿಗಸ್ | 96865 95968
Shobit.Rodrigues@cbre.co.in

Exclusively Marketed by CBRE
CIN: U74140DL1999PTC100244

ಸಿನಿಮಾ ಪುರವಣಿ

ಸಣ್ಣ ಮತ್ತು ಮಧ್ಯಮ ಬಜೆಟ್‌ನ ಸಿನಿಮಾಗಳ ಗೆಲುವಿನಲ್ಲಿಯೇ ಚಿತ್ರರಂಗದ ಯಶಸ್ಸು ಇದೆ ಎಂದು ಹೇಳುತ್ತಾರೆ ನಟ ನಾಗಭೂಷಣ್. 'ಇಕ್ಕಟ್' ನಿರ್ದೇಶಕರ ಜೊತೆ ಮತ್ತೆ ಕೈಜೋಡಿಸಿರುವ ಅವರು ನಟಿಸಿದ 'ವಿದ್ಯಾಪತಿ' ಏಪ್ರಿಲ್ 10ರಂದು ಬಿಡುಗಡೆಯಾಗುತ್ತಿದೆ. ಕನ್ನಡ ಚಿತ್ರರಂಗದ ಸದ್ಯದ ಸ್ಥಿತಿ ಬಗ್ಗೆ 'ಸಿನಿಮಾ ಪುರವಣಿ' ಜೊತೆ ತಮ್ಮ ಮಾತುಗಳನ್ನು ಹಂಚಿಕೊಂಡಿದ್ದಾರೆ...

ಸಣ್ಣ ಸಿನಿಮಾಗಳ ಗೆಲುವಿನಲ್ಲಿ ಚಿತ್ರರಂಗದ ಯಶಸ್ಸು

ವಿದ್ಯಾಪತಿ
ನಾಗಭೂಷಣ್

ಅಭಿಲಾಷ್ ಪಿ.ಎಸ್.

- **ಹೊಸ ಅವಕಾಶಗಳು ಬರಲಿಲ್ಲವೇ ಅಥವಾ ಸ್ವೀಕರಿಸಲಿಲ್ಲವೇ?**

ನನ್ನನ್ನು ನಂಬಿ ಯಾರು ದುಡ್ಡು ಹಾಕುತ್ತಿದ್ದಾರೆ. ಅದು ₹5–6 ಕೋಟಿಯಾಗಲಿ ಅಥವಾ ₹1–2 ಕೋಟಿಯೇ ಆಗಲಿ. ಈತನಲ್ಲಿ ಪ್ರತಿಭೆ ಇದೆ, ಇವನನ್ನು ಹಾಕಿಕೊಂಡು ಸಿನಿಮಾ ಮಾಡಬಹುದು ಎಂದು ಯಾರಿಗೂ ಅನಿಸಿಯೇ ಇಲ್ಲವಲ್ಲ. ನನ್ನ ಮೇಲೆ ನಂಬಿಕೆ ಇಟ್ಟು ಸಿನಿಮಾ ಮಾಡಿಸುತ್ತಿರುವಾತ ಗೆಳೆಯ ಧನಂಜಯ ಒಬ್ಬನೇ. ಚಿತ್ರರಂಗದಲ್ಲಿ ಬಹಳ ವರ್ಷಗಳಿಂದ ಇದ್ದೇನೆ. 'ಟಗರುಪಲ್ಯ' ಗೆದ್ದ ಮೇಲಾದರೂ ಒಂದಿಷ್ಟು ಅವಕಾಶಗಳು ಅರಸಿ ಬರಬೇಕಿತ್ತಲ್ಲವೇ? ಇಲ್ಲವಾದಲ್ಲಿ ಹೊಸ ಪ್ರತಿಭೆಗಳು ಬೆಳೆಯುವುದಾದರೂ ಹೇಗೆ? ಇದು ನನ್ನೊಬ್ಬನ ವಿಷಯವಷ್ಟೇ ಅಲ್ಲ. ಹೊಸ ನಿರ್ದೇಶಕ, ಹೊಸ ನಟ, ಹೊಸ ತಂತ್ರಜ್ಞನೊಬ್ಬ ಸಣ್ಣ ಸಿನಿಮಾವೊಂದರಲ್ಲೇ ತನ್ನನ್ನು ತಾನು ಸಾಬೀತುಪಡಿಸಿದಾಗ ದೊಡ್ಡ ಜವಾಬ್ದಾರಿ ಕೊಡುವ ನಿರ್ಮಾಪಕರು ಬೇಕು. ಅಥವಾ ಇನ್ನೊಂದು ಮಧ್ಯಮ ಬಜೆಟ್‌ನ ಸಿನಿಮಾದಲ್ಲಿ ಅವರಿಗೆ ಅವಕಾಶ ನೀಡಬೇಕು. 'ಇಕ್ಕಟ್' ಸಿನಿಮಾದ ನಿರ್ದೇಶಕರು 20–30 ಜಾಗದ ಮನೆಯಲ್ಲೇ ಕಡಿಮೆ ಬಜೆಟ್‌ನಲ್ಲಿ ಒಂದು ಒಳ್ಳೆಯ ಸಿನಿಮಾ ಮಾಡಿದರು. ಅವರಿಗೆ ಚಿತ್ರರಂಗದಿಂದ ಎಷ್ಟು ಅವಕಾಶಗಳು ಬಂದಿವೆ? ಎಲ್ಲರೂ ಈ ಸ್ಟಾರ್ ವಾಲ್ಯೂ, ಗಿಮಿಕ್, ಬಿಗ್ ಬಜೆಟ್ ಹಿಂದೆ ಬಿದ್ದಿರುವುದು ದುರದೃಷ್ಟಕರ. ನಾನು ಬೇರೆ ಬ್ಯಾನರ್‌ನಡಿ ಸಿನಿಮಾ ಮಾಡಲು ಸಿದ್ಧ. ಆದರೆ ಬೇರೆ ಯಾರೂ ನನ್ನ ಕರೆದಿಲ್ಲ. ನೀವೇ ಬೇಕು ಎಂದು ಕರೆದ ನಿರ್ಮಾಪಕರಿಲ್ಲ.

ಚಿತ್ರರಂಗಕ್ಕೆ ದೊಡ್ಡ ಸಿನಿಮಾಗಳ ಗೆಲುವೂ ಮುಖ್ಯ. ಆದರೆ ಹೆಚ್ಚಿನ ಸಂಖ್ಯೆಯ ಸಣ್ಣ ಬಜೆಟ್ ಮತ್ತು ಮಧ್ಯಮ ಬಜೆಟ್‌ನ ಸಿನಿಮಾಗಳ ಗೆಲುವಿನಲ್ಲಿಯೇ ಒಂದು ಚಿತ್ರರಂಗದ ಯಶಸ್ಸು ಅಡಗಿದೆ. ಮಲಯಾಳ ಚಿತ್ರರಂಗ ಹೀಗಾಗಿ ಯಶಸ್ಸು ಪಡೆದುಕೊಂಡಿದೆ. ನಿರ್ಮಾಪಕರು ಈ ನಿಟ್ಟಿನಲ್ಲಿ ಕಾರ್ಯಗತವಾಗಬೇಕು. ಒಳ್ಳೆಯ ಕಥೆ, ಒಳ್ಳೆಯ ತಂಡವನ್ನು ಗುರುತಿಸಬೇಕು.

- **ಪೂರ್ಣ ಪ್ರಮಾಣದ ಕಾಮಿಡಿ ಜಾನರ್‌ನ ಸಿನಿಮಾಗಳನ್ನು ಕನ್ನಡ ಚಿತ್ರರಂಗ ಕಳೆದುಕೊಳ್ಳುತ್ತಿದೆಯೇ?**

ಖಂಡಿತಾ. ಕಾಮಿಡಿ ಜಾನರ್ ಸಿನಿಮಾಗಳ ಕೊರತೆಯನ್ನು ನಮ್ಮ ಚಿತ್ರರಂಗ ಎದುರಿಸುತ್ತಿದೆ. ಹೀಗಾಗಿ ನಾನು ಅದೇ ಜಾನರ್‌ನ ಸಿನಿಮಾಗಳನ್ನು ಮಾಡಲು ಇಚ್ಛಿಸುವವ. 'ಗೌರಿ ಗಣೇಶ', 'ರಾಮ ಶಾಮ ಭಾಮ' ಮುಂತಾದ ಹಲವು ಸಿನಿಮಾಗಳು ಚಿರಾಯು. ನಾವು ಹುಟ್ಟುವುದಕ್ಕಿಂತಲೂ ಮೊದಲು ಬಂದ ಇಂತಹ ಸಿನಿಮಾಗಳನ್ನು ನೋಡಿ ನಾವು ಇಂದಿಗೂ ನಗುತ್ತಿದ್ದೇವೆ. ಆಗ ಸ್ಟಾರ್‌ಗಳು ಎನಿಸಿಕೊಂಡವರೇ ಕಾಮಿಡಿ ಜಾನರ್ ಸಿನಿಮಾ ಮಾಡುತ್ತಿದ್ದರು. ಈಗ ಯಾರು ಈ ಜಾನರ್ ಮುಟ್ಟುತ್ತಿಲ್ಲ. ಕಾಮಿಡಿ ಜಾನರ್‌ನ ಸಿನಿಮಾಗಳು ಕಡಿಮೆಯಾದ ಕಾರಣದಿಂದಲೇ ಕನ್ನಡ ಸಿನಿಮಾಗಳಿಗೆ ಫ್ಯಾಮಿಲಿ ಆಡಿಯನ್ಸ್ ಕಡಿಮೆ ಆಗಿದ್ದಾರೆ. ಇಡೀ ಕುಟುಂಬ ಕುಳಿತು ನೋಡುವ ಸಿನಿಮಾ ಮಾಡಿದರೆ ಖಂಡಿತವಾಗಿಯೂ ಅವರು ಚಿತ್ರಮಂದಿರಗಳಿಗೆ ಬರುತ್ತಾರೆ. 'ಟಗರುಪಲ್ಯ'ವೇ ಇದಕ್ಕೆ ನಿದರ್ಶನ.

- **ಎಂತಹ ಕಥೆಗಳು ನಿಮ್ಮನ್ನು ಆಕರ್ಷಿಸುತ್ತವೆ?**

ನನಗೆ ಬರುವ ಕಥೆಗಳಲ್ಲಿ ಹಾಸ್ಯ ಹಾಗೂ ಕೌಟುಂಬಿಕ ಮನರಂಜನೆಯ ವಿಷಯ ಇದ್ದರಷ್ಟೇ ನಾನು ಒಪ್ಪಿಕೊಳ್ಳುತ್ತಿದ್ದೇನೆ. ಆ್ಯಕ್ಷನ್ ಮೂಲಕವೂ ಮನರಂಜನೆ ಕೊಡಬಹುದು. ಅದಕ್ಕೆ ದೊಡ್ಡ ಸಾಕ್ಷಿ ಜಾಕಿ ಚಾನ್. 'ವಿದ್ಯಾಪತಿ'ಯಲ್ಲಿ ಕಾಮಿಡಿ ಜೊತೆಗೆ ಆ್ಯಕ್ಷನ್ ಬೆರೆತಿದೆ. ನಾನು ಗರುಡರಾಮ್ ಎದುರು ಬದುರು ನಿಂತರೆ ಅದೊಂದು ಹಾಸ್ಯ ಸನ್ನಿವೇಷವಲ್ಲವೇ? 'ರಾಮ ಶಾಮ ಭಾಮ' ಅಥವಾ ಫಣಿ ರಾಮಚಂದ್ರ ಅವರು ನಿರ್ದೇಶಿಸಿದಂತಹ ಸಿನಿಮಾಗಳ ರೀತಿಯ ಚಿತ್ರಗಳನ್ನು ಮಾಡಲು ನನಗೆ ಇಷ್ಟ. ಈ ರೀತಿಯ ಸ್ಕ್ರಿಪ್ಟ್‌ಗಳನ್ನು ಎದುರು ನೋಡುತ್ತಿದ್ದೇನೆ. ಇಂತಹ ಸಿನಿಮಾಗಳಿಗೆ ಹೆಚ್ಚಿನ ಬಜೆಟ್ ಬೇಕಿಲ್ಲ. ನನ್ನ ಮೇಲೆ ಹೆಚ್ಚು ಬಜೆಟ್ ಹಾಕಿ ಸಿನಿಮಾ ಮಾಡಲು ಸಾಧ್ಯವಿಲ್ಲ ಎನ್ನುವ ಅರಿವೂ ನನಗೆ ಇದೆ. ಇಂತಹ ಸಿನಿಮಾ ಮಾಡಿದಾಗ ಇನ್ನೂ ಸುರಕ್ಷಿತವಾಗಿರುತ್ತೇವೆ ಅಲ್ಲವೇ?

- **'ವಿದ್ಯಾಪತಿ'ಯ ಮೇಲೆ ನಿರೀಕ್ಷೆ ಎಷ್ಟಿದೆ?**

ನಾವು ಸಣ್ಣ ಬಜೆಟ್‌ನಲ್ಲೇ 'ವಿದ್ಯಾಪತಿ' ಮಾಡಲು ಸಿದ್ಧತೆ ಮಾಡಿಕೊಂಡಿದ್ದೆವು. ಆದರೆ ಆ್ಯಕ್ಷನ್, ಅದ್ಧೂರಿತನದಿಂದಾಗಿ ಬಜೆಟ್ ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಾಯಿತು. ನಿರ್ಮಾಪಕ ಧನಂಜಯ ಬೆಂಬಲದಿಂದ ಊಹಿಸಿದಂತೆ ಸಿನಿಮಾ ನಿರ್ಮಾಣ ಸಾಧ್ಯವಾಯಿತು. 'ಇಕ್ಕಟ್' ಸಿನಿಮಾದ 30–40 ಪಟ್ಟು ದೊಡ್ಡ ಸಿನಿಮಾವಿದು. ನನ್ನ ಮೇಲೆ ಇಷ್ಟು ಬಂಡವಾಳ ಹೂಡಿದ್ದಾರೆ, ಮುಂದೆ ಏನಾಗುತ್ತೋ ಎಂಬ ಭಯದಲ್ಲೇ ನಿದ್ದೆ ಬರುತ್ತಿಲ್ಲ. ಈ ಭಯ 'ಟಗರುಪಲ್ಯ' ನಿರ್ಮಾಣ ಸಂದರ್ಭದಲ್ಲೂ ಇತ್ತು. ಆದರೆ ಆ ಸಿನಿಮಾ ಕೈಹಿಡಿಯಿತು. 'ವಿದ್ಯಾಪತಿ'ಯೂ ಗೆಲ್ಲಲಿದೆ ಎನ್ನುವ ವಿಶ್ವಾಸ ನನಗಿದೆ.

- **ನಾಗಭೂಷಣ್ ಹಾಸ್ಯ ಪಾತ್ರಗಳಿಗಷ್ಟೇ ಸೀಮಿತವಾಗುತ್ತಿದ್ದಾರೆಯೇ?**

ನಾನು ಕಾಮಿಡಿ ನಟನಲ್ಲ. ನಾನೊಬ್ಬ ನಟ, ನನಗೆ ಕಾಮಿಡಿಯೂ ಮಾಡಲು ಬರುತ್ತದೆ. ಕನ್ನಡದಲ್ಲಿ ನಟ ರವಿಶಂಕರ್ ವಿಲನ್ ಪಾತ್ರಕ್ಕೆ ಸೀಮಿತವಾಗಿದ್ದರು. 'ಅಧ್ಯಕ್ಷ' ಸಿನಿಮಾದಲ್ಲಿ ಅವರು ತಮ್ಮೊಳಗಿರುವ ಹಾಸ್ಯ ನಟನನ್ನು ಹೊರತರಲಿಲ್ಲವೇ. ಅದೇ ರೀತಿ ತಮಿಳಿನಲ್ಲಿ ಹಾಸ್ಯ ನಟ ವಡಿವೇಲು 'ಮಾಮಣ್ಣನ್' ಮೂಲಕ ತನ್ನೊಳಗಿನ ಗಂಭೀರ ವ್ಯಕ್ತಿತ್ವವನ್ನು ಹೊರಹಾಕಿದರು. ನಾನು ಸದ್ಯಕ್ಕೆ ಹಾಸ್ಯ ಬೆರೆತಿರುವ ಕಥೆಯುಳ್ಳ ಸಿನಿಮಾಗಳನ್ನಷ್ಟೇ ಮಾಡುವ ನಿರ್ಧಾರ ಮಾಡಿದ್ದೇನೆ. ಅದು ರೊಮ್ಯಾಂಟಿಕ್ ಕಾಮಿಡಿ, ಎಮೋಷನಲ್ ಕಾಮಿಡಿಯಾಗಿರಬಹುದು ಅಥವಾ ಆ್ಯಕ್ಷನ್ ಕಾಮಿಡಿ ಇರಬಹುದು. ಹಾಸ್ಯದ ಜೊತೆಗೆ ಯಾವ ಕಥೆಯನ್ನಾದರೂ ಹೇಳಬಹುದು.

- **ಬಂಡವಾಳ ಹೂಡುತ್ತಿರುವ ನಟ ಧನಂಜಯ ಕುರಿತು...**

ಇವತ್ತಿನ ಸ್ಥಿತಿಯಲ್ಲಿ ಧನಂಜಯ ಸಿನಿಮಾ ನಿರ್ಮಾಣ ಎಂಬ ರಿಸ್ಕ್ ಎಳೆದುಕೊಳ್ಳುತ್ತಿದ್ದಾನೆ. ಡಾಲಿ ಪಿಕ್ಚರ್ಸ್‌ನಿಂದ ಇನ್ನೂ ಮೂರು ಸಿನಿಮಾಗಳು ಸಿದ್ಧಗೊಳ್ಳುತ್ತಿವೆ. ಕನ್ನಡ ಚಿತ್ರರಂಗ ಬಹಳ ಕೆಟ್ಟ ಸ್ಥಿತಿಯಲ್ಲಿದೆ, ವಹಿವಾಟು ಆಗುತ್ತಿಲ್ಲ ಎಂದು ಹಲವರು ಹೇಳುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ಸುಮ್ಮನೆ ಕುಳಿತುಕೊಳ್ಳದೆ 'ನಾನಲ್ಲದೆ ಈ ಅಪಾಯವನ್ನು ಇನ್ಯಾರು ಎಳೆದುಕೊಳ್ಳುತ್ತಾರೆ' ಎಂದು ಧನಂಜಯ ಹೆಜ್ಜೆ ಇಡುತ್ತಿದ್ದಾನೆ. ಜನರನ್ನು ತಲುಪುವ ಕಥೆಗಳನ್ನು ಆತ ಆಯ್ದುಕೊಳ್ಳುತ್ತಿರುವುದು ಆತನಲ್ಲಿರುವ ಛಲ ತೋರಿಸುತ್ತದೆ.

'ಟಗರುಪಲ್ಯ' ಟಿವಿಯಲ್ಲಿ ಬ್ಲಾಕ್‌ಬಸ್ಟರ್ ಆಯಿತು. ಆದರೂ ನಮ್ಮ ಸಿನಿಮಾಗೆ ವಹಿವಾಟು ಆಗಲಿಲ್ಲ. ಹಿಂದಿನ ಟ್ರ್ಯಾಕ್ ರೆಕಾರ್ಡ್ ಇದ್ದರೂ ವಹಿವಾಟು ಆಗುತ್ತಿಲ್ಲ. ಹೀಗಿದ್ದರೂ, 'ನಾವು ಸಿನಿಮಾವನ್ನು ಚಿತ್ರಮಂದಿರಕ್ಕೆ ಮಾಡಿರುವುದು. ಜನ ನೋಡಿ ಗೆಲ್ಲಿಸಿದರೆ ಅವರೇ ಬಂದು ತೆಗೆದುಕೊಳ್ಳುತ್ತಾರೆ' ಎಂದು ವಿಶ್ವಾಸದಿಂದ ಧನಂಜಯ ಹೇಳುತ್ತಾನೆ. ಅವನ ಈ ಧೈರ್ಯ ನೋಡಿದರೆ ನಮಗೂ ಭಯವಾಗುತ್ತದೆ. ಇಂತಹ ನಿರ್ಮಾಪಕರ ಅವಶ್ಯಕತೆ ಕನ್ನಡ ಚಿತ್ರರಂಗಕ್ಕೆ ಬಹಳಷ್ಟಿದೆ.

ಡ್ರೀಮ್ ರೋಲ್ ಸಿಕ್ಕಿದೆ

ನನಗೆ 'ವಿದ್ಯಾಪತಿ'ಯಲ್ಲಿ ಡ್ರೀಮ್ ರೋಲ್ ದೊರಕಿದೆ. ಸಿನಿಮಾದೊಳಗೆ 'ಸೂಪರ್‌ಸ್ಟಾರ್ ವಿದ್ಯಾ' ಎಂಬ ಹೀರೊಯಿನ್ ಆಗಿ ಕಾಣಿಸಿಕೊಂಡಿದ್ದೇನೆ. ಸಿನಿಮಾ ತಾಂತ್ರಿಕವಾಗಿ ಅದ್ಭುತವಾಗಿ ಮೂಡಿಬಂದಿದೆ. ಕನ್ನಡ ಸಿನಿಮಾಗಳು ಚಿತ್ರಮಂದಿರಗಳಲ್ಲಿ ಓಡಲ್ಲ ಎನ್ನುವ ಸಂದರ್ಭದಲ್ಲಿ 'ಟಗರುಪಲ್ಯ', 'ಉಪಾಧ್ಯಕ್ಷ' ಸಿನಿಮಾಗಳು ಹಿಟ್ ಆದವು. ಚಿಕ್ಕಣ್ಣ ಅವರು ಇತರೆ ಹೀರೊಗಳ ಜೊತೆ 250 ಸಿನಿಮಾಗಳನ್ನು ಮಾಡಿದ್ದರೂ 'ಉಪಾಧ್ಯಕ್ಷ'ದಲ್ಲಿ ನಾಯಕನಾಗಿ ಗೆದ್ದರು. 'ವಿದ್ಯಾಪತಿ'ಯಲ್ಲಿ ನಾಗಭೂಷಣ್ ಅವರೂ ಗೆಲ್ಲುತ್ತಾರೆ' ಎನ್ನುತ್ತಾರೆ ನಟಿ ಮಲೈಕಾ ಟಿ.ವಸುಪಾಲ್.

ವಂಶಿ, ರಚನಾ

'ಇನ್ ದಿ ನೈಟ್'ನಲ್ಲಿ ವಂಶಿ–ರಚನಾ ಹೆಜ್ಜೆ

ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣದ ಚೊಚ್ಚಲ ಸಿನಿಮಾ 'ಫೈರ್‌ಫ್ಲೈ' ಏ.24ರಂದು ತೆರೆಕಾಣಲಿದೆ. ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದ್ದು, 'ಇನ್ ದಿ ನೈಟ್...'ನಲ್ಲಿ ವಂಶಿ–ರಚನಾ ಇಂದರ್ ಹೆಜ್ಜೆ ಹಾಕಿದ್ದಾರೆ.

ಶ್ರೀ ಮುತ್ತು ಸಿನಿ ಸರ್ವೀಸ್ ಆ್ಯಂಡ್ ಪ್ರೊಡಕ್ಷನ್ಸ್‌ನಡಿ ಈ ಸಿನಿಮಾ ನಿರ್ಮಾಣವಾಗಿದ್ದು, ವಂಶಿ ಈ ಸಿನಿಮಾವನ್ನು ನಿರ್ದೇಶಿಸುವುದರ ಜೊತೆಗೆ ನಾಯಕನಾಗಿಯೂ ನಟಿಸಿದ್ದಾರೆ. 'ಇನ್ ದಿ ನೈಟ್..' ಹಾಡಿಗೆ ಧನಂಜಯ್ ರಂಜನ್ ಸಾಹಿತ್ಯ ಬರೆದಿದ್ದು, ಕಪಿಲ್ ಕಪಿಲನ್ ದನಿಯಾಗಿದ್ದಾರೆ. ಚರಣ್‌ರಾಜ್ ಸಂಗೀತ ನಿರ್ದೇಶನ ಮಾಡಿದ್ದಾರೆ. ಈ ಸಿನಿಮಾದಲ್ಲಿ ಅಚ್ಯುತ್ ಕುಮಾರ್, ಸುಧಾರಾಣಿ, ಶೀತಲ್ ಶೆಟ್ಟಿ, ಆನಂದ್ ನೀನಾಸಂ, ಚಿತ್ಕಲಾ ಬಿರಾದರ್, ಮೂಗು ಸುರೇಶ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ರಘು ನಿಡುವಳ್ಳಿ ಸಂಭಾಷಣೆ, ಅಭಿಲಾಷ್ ಕಳತ್ತಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ ಸಿನಿಮಾಗಳಿಗೆ ಆಹ್ವಾನ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆ. ಇಂತಹ 'ಸಿನಿ ಸಮ್ಮಾನ'ದ ಮೂರನೇ ಆವೃತ್ತಿಗೆ ವೇದಿಕೆ ಸಜ್ಜಾಗುತ್ತಿದೆ.

2023ರಲ್ಲಿ ತನ್ನ ಅಮೃತ ಸಂಭ್ರಮದ ಸಂದರ್ಭದಲ್ಲಿ 'ಪ್ರಜಾವಾಣಿ' ಪ್ರಾರಂಭಿಸಿದ ಈ ಕಾರ್ಯಕ್ರಮ ಕನ್ನಡ ಚಿತ್ರರಂಗದವರ ಮನಸ್ಸಿನಲ್ಲಿ ಅಚ್ಚೊತ್ತಿದೆ. ಎರಡು ಆವೃತ್ತಿಗಳನ್ನು ಯಶಸ್ವಿಯಾಗಿ, ಅದ್ದೂರಿಯಾಗಿ ನಡೆಸಲಾಗಿದೆ.

ಇದೀಗ 2024ರಲ್ಲಿ ತೆರೆಕಂಡ ಸಿನಿಮಾಗಳನ್ನು ಮೂರನೇ ಆವೃತ್ತಿಗೆ ಪರಿಗಣಿಸಲಾಗುತ್ತಿದೆ. ಮೇಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ನೋಂದಣಿ ಮಾಡಿಕೊಂಡು ಸಿನಿಮಾಗಳನ್ನು ಸಲ್ಲಿಸಬಹುದಾಗಿದೆ. ಸಿನಿಮಾ ಸಲ್ಲಿಸಲು ಏಪ್ರಿಲ್ 10 ಕೊನೆಯ ದಿನ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.

ಎರಡು ಚಿತ್ರಗಳು ತೆರೆಗೆ

ತನುಶ್ರೀ, ಷಣ್ಮುಖ

ವರನಟ ರಾಜ್‌ಕುಮಾರ್ ಅವರ ಮೊಮ್ಮಗ (ಮಗಳು ಲಕ್ಷ್ಮಿ ಅವರ ಮಗ) ಷಣ್ಮುಖ ಗೋವಿಂದರಾಜ್ ನಾಯಕನಾಗಿ ನಟಿಸಿರುವ 'ನಿಂಬಿಯಾ ಬನಾದ ಮ್ಯಾಗ' ಹಾಗೂ 'ನಿಮ್ದೆ ಕಥೆ' ಚಿತ್ರಗಳು (ಏ.4) ತೆರೆಕಾಣುತ್ತಿದೆ.

ವಿ.ಮಾದೇಶ್ ಅವರು 'ನಿಂಬಿಯಾ ಬನಾದ ಮ್ಯಾಗ' ಸಿನಿಮಾ ನಿರ್ಮಾಣ ಮಾಡಿದ್ದು, ಅಶೋಕ್ ಕಡಬ ನಿರ್ದೇಶಿಸಿದ್ದಾರೆ. ಇದು ಷಣ್ಮುಖ ಅವರ ಚೊಚ್ಚಲ ಸಿನಿಮಾವಾಗಿದ್ದು, ನಾಯಕಿಯಾಗಿ ತನುಶ್ರೀ ಬಣ್ಣಹಚ್ಚಿದ್ದಾರೆ.

'ಮಲೆನಾಡ ಭಾಗದ ಬೆಂಗಾಡಿ ಎಂಬ ಊರಲ್ಲಿ ನಾಲ್ಕು ವರ್ಷದ ಮಗು ಅಚ್ಚು(ಅಚ್ಚಣ್ಣ) ಕಾಣೆಯಾಗುತ್ತದೆ. ಆ ಮಗುವಿನ ತಾಯಿ ಇಂದಲ್ಲ ನಾಳೆ ಮಗು ಹಿಂದಿರುಗುತ್ತದೆ ಎನ್ನುವ ನಂಬಿಕೆಯಲ್ಲೇ ಕಾಯುತ್ತಿದ್ದಾಳೆ. 25 ವರ್ಷದ ನಂತರ ಕಳೆದು ಹೋದ ಮಗ ಅಚ್ಚಣ್ಣ ಬರುತ್ತಾನೆ. ಮುಂದೆ ಏನಾಗುತ್ತದೆ ಎನ್ನುವುದು ಚಿತ್ರದ ಮೊದಲ ಭಾಗದ ಕಥೆ. ಎರಡನೇ ಭಾಗವೂ ಬರಲಿದೆ. ಮದನ್ ಹರಿಣಿ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ' ಎಂದು ಮಾಹಿತಿ ನೀಡಿದರು ಅಶೋಕ್ ಕಡಬ.

ಅಭಿಲಾಷ್, ರಾಷಿಕಾ ಶೆಟ್ಟಿ

ನಿಮ್ದೆ ಕಥೆ

'ಲವ್ ಮಾಕ್ಟೇಲ್' ಖ್ಯಾತಿಯ ಅಭಿಲಾಷ್ ದಳಪತಿ ಮತ್ತು 'ಮನದ ಕಡಲು' ಖ್ಯಾತಿಯ ರಾಷಿಕಾ ಶೆಟ್ಟಿ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಸಿನಿಮಾ ಇದಾಗಿದೆ. ಸಿಹಿ ಕಹಿ ಚಂದ್ರು, ಮನೋಹರ್ ಗೌಡ, ಕೆ.ವಿ.ಮಂಜಯ್ಯ, ಜ್ಯೋತಿ ಮರೂರ್ ಚಿತ್ರದ ತಾರಾಬಳಗದಲ್ಲಿದ್ದಾರೆ. ಶ್ರೀನಿವಾಸ ರೆಡ್ಡಿ ಮತ್ತು ಅರವಿಂದ್ ಯು.ಎಸ್. ಜಂಟಿಯಾಗಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ರಾಘವೇಂದ್ರ ನಿರ್ದೇಶನದ ಈ ಚಿತ್ರ ಕಾಮಿಡಿ–ಸಸ್ಪೆನ್ಸ್ ಜಾನರ್‌ನಲ್ಲಿದೆ. ಪ್ರಶಾಂತ್ ಸಾಗರ್ ಛಾಯಾಚಿತ್ರಗ್ರಹಣ, ಸುನಿಲ್ ಎಸ್. ಸಂಕಲನ ಚಿತ್ರಕ್ಕಿದೆ.

'ಪೆದ್ದಿ'ಯಲ್ಲಿ ರಾಮ್‌ಚರಣ್–ಶಿವರಾಜ್‌ಕುಮಾರ್

ರಾಮ್‌ಚರಣ್

ತೆಲುಗಿನ ನಟ ರಾಮ್‌ಚರಣ್ ನಟನೆಯ 16ನೇ ಸಿನಿಮಾದ ಶೀರ್ಷಿಕೆ ಘೋಷಣೆಯಾಗಿದೆ. 'ಪೆದ್ದಿ' ಎಂಬ ಟೈಟಲ್‌ನ ಈ ಸಿನಿಮಾದಲ್ಲಿ ನಟ ಶಿವರಾಜ್‌ಕುಮಾರ್ ಪ್ರಮುಖ ಪಾತ್ರವೊಂದನ್ನು ನಿರ್ವಹಿಸಲಿದ್ದಾರೆ.

ರಾಮ್‌ಚರಣ್ ಹಾಗೂ ಶಿವರಾಜ್‌ಕುಮಾರ್ ಜೊತೆಯಾಗಿ ನಟಿಸುತ್ತಿರುವ ಮೊದಲ ಸಿನಿಮಾ ಇದಾಗಿದ್ದು, ಚಿತ್ರವನ್ನು ಬುಚ್ಚಿ ಬಾಬು ಸನಾ ನಿರ್ದೇಶಿಸುತ್ತಿದ್ದಾರೆ. ಜಾಹ್ನವಿ ಕಪೂರ್ ನಾಯಕಿಯಾಗಿ ನಟಿಸುತ್ತಿದ್ದಾರೆ. ಅಮೆರಿಕದಲ್ಲಿ ಮೂತ್ರಕೋಶ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗೆ ಒಳಗಾಗಿ ಮರಳಿರುವ ಶಿವರಾಜ್‌ಕುಮಾರ್ ಸುಮಾರು ಎರಡೂವರೆ ತಿಂಗಳ ಬಳಿಕ ಚಿತ್ರೀಕರಣಕ್ಕೆ ಇಳಿದಿದ್ದಾರೆ. ಸದ್ಯಕ್ಕೆ ಕಾರ್ತಿಕ್ ಅದ್ವೈತ್ ಆ್ಯಕ್ಷನ್ ಕಟ್ ಹೇಳುತ್ತಿರುವ '#131' ಸಿನಿಮಾ ಹಾಗೂ 'ಪೆದ್ದಿ'ಯಲ್ಲಿ ಅವರು ತೊಡಗಿಸಿಕೊಂಡಿದ್ದಾರೆ. 'ಪೆದ್ದಿ' ಚಿತ್ರದಲ್ಲಿ ಜಗಪತಿ ಬಾಬು, ದಿವ್ಯೆಂದು ಶರ್ಮಾ ತಾರಾಬಳಗದಲ್ಲಿದ್ದಾರೆ. ಮೈತ್ರಿ ಮೂವೀ ಮೇಕರ್ಸ್, ಸುಕುಮಾರ್ ರೈಟಿಂಗ್ ಹಾಗೂ ವೃದ್ಧಿ ಸಿನಿಮಾಸ್ ಈ ಸಿನಿಮಾ ನಿರ್ಮಾಣ ಮಾಡುತ್ತಿದೆ. ಎ.ಆರ್. ರೆಹಮಾನ್ ಸಂಗೀತ, ನವೀನ್ ನೂಲಿ ಸಂಕಲನ, ಆರ್. ರತ್ನವೇಲು ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಪೆನ್‌ಡ್ರೈವ್‌ಗೆ ಯುಎ ಪ್ರಮಾಣಪತ್ರ

ಮಾಲಾಶ್ರೀ

ನಟಿ ಮಾಲಾಶ್ರೀ ಹಾಗೂ 'ಬಿಗ್‌ಬಾಸ್' ಖ್ಯಾತಿಯ ತನಿಷಾ ಕುಪ್ಪಂಡ, ಕಿಶನ್ ನಟಿಸಿರುವ 'ಪೆನ್‌ಡ್ರೈವ್' ಚಿತ್ರಕ್ಕೆ ಸೆನ್ಸಾರ್ ಮಂಡಳಿಯು 'ಯುಎ' ಪ್ರಮಾಣಪತ್ರ ನೀಡಿದೆ. ಈ ಸಿನಿಮಾವನ್ನು ಎನ್. ಹನುಮಂತರಾಜು ಹಾಗೂ ಲಯನ್ ಎಸ್. ವೆಂಕಟೇಶ್ ನಿರ್ಮಾಣ ಮಾಡಿದ್ದಾರೆ. ಸೆಬಾಸ್ಟಿನ್ ಡೇವಿಡ್ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾ ಸದ್ಯದಲ್ಲೇ ಬಿಡುಗಡೆಯಾಗಲಿದೆ. ಚಿತ್ರಕ್ಕೆ ವಿ.ನಾಗೇಂದ್ರ ಪ್ರಸಾದ್ ಅವರು ಗೀತರಚನೆ ಮಾಡಿ ಸಂಗೀತವನ್ನೂ ನೀಡಿದ್ದಾರೆ.

ಚಿತ್ರಕ್ಕೆ ಸೆಬಾಸ್ಟಿನ್ ಡೇವಿಡ್ ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ. ಮಾಲಾಶ್ರೀ ಖಡಕ್ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಅಭಿನಯಿಸಿದ್ದಾರೆ. ರಾಧಿಕಾ ರಾಮ್, ಸಂಜನಾ ನಾಯ್ಡು, ಅರ್ಚನ, ರೇಣುಕಾ, ಗೀತಾ, ಭಾಗ್ಯ, ಗೀತಪ್ರಿಯ, ಕರಿಸುಬ್ಬು, ಎನ್. ಹನುಮಂತರಾಜು ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

'ವಿಭಿನ್ನವಾಗಿದೆ '45' ಕಥೆ'

'ನಮ್ಮೊಳಗಿನ ನಿರ್ದೇಶಕನನ್ನು ಗುರುತಿಸಿದವರು ಶಿವರಾಜ್‌ಕುಮಾರ್. ಶಿವಣ್ಣ ಓರ್ವ ಅಪರಂಜಿ. ಅವರಿಂದ ಸಿಗುವ ಪ್ರೋತ್ಸಾಹ ಬಹಳ ಅದ್ಭುತ'
–ಉಪೇಂದ್ರ, ನಟ

'ಅರ್ಜುನ್ ಜನ್ಯ ಅವರಲ್ಲಿ ಒಬ್ಬ ಶ್ರೇಷ್ಠ ನಿರ್ದೇಶಕನನ್ನು ನಾನು ಕಂಡಿದ್ದೇನೆ. ಅವರಿಗೆ ಸಿನಿಮಾ ಮೇಲೆ ಹುಚ್ಚು ಬಹಳಷ್ಟಿದೆ'
–ರಾಜ್ ಬಿ.ಶೆಟ್ಟಿ, ನಟ

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳಿರುವ, ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ. ಶೆಟ್ಟಿ ಜೊತೆಯಾಗಿ ಕಾಣಿಸಿಕೊಳ್ಳಲಿರುವ '45' ಸಿನಿಮಾ ಆಗಸ್ಟ್ 15ರಂದು ಬಿಡುಗಡೆಯಾಗಲಿದೆ. ಇತ್ತೀಚೆಗೆ ಚಿತ್ರದ ಟೀಸರ್ ಬಿಡುಗಡೆಯಾಗಿದ್ದು, ಚಿತ್ರದ ಕಥೆಯೇ ಸಿನಿಮಾವನ್ನು ಗೆಲ್ಲಿಸಲಿದೆ ಎಂದಿದ್ದಾರೆ ಶಿವರಾಜ್‌ಕುಮಾರ್.

'ಮಾಡುವ ಉದ್ಯೋಗದಲ್ಲೂ ಬದ್ಧತೆ ಎನ್ನುವುದು ಮುಖ್ಯ. ಕುಟುಂಬಕ್ಕೆ ನೀಡುವ ಆದ್ಯತೆಯನ್ನು ನಾವು ಇರುವ ಉದ್ಯೋಗಕ್ಕೂ ನೀಡಬೇಕು. ನನಗೆ ಭಯ ಇದ್ದೇ ಇತ್ತು. ಏನೇ ಆಗಲಿ ಈ ಸಿನಿಮಾ ಮುಗಿಸಿಕೊಂಡೇ ಶಸ್ತ್ರಚಿಕಿತ್ಸೆಗೆ ಹೋಗಬೇಕು ಎಂದು ನಿರ್ಧರಿಸಿದ್ದೆ. ಹೀಗಾಗಿ ಡಬ್ಬಿಂಗ್ ಕೂಡಾ ಪೂರ್ಣಗೊಳಿಸಿದ್ದೆ. ಅರ್ಜುನ್ ಜನ್ಯ ನಾಲ್ಕೈದು ನಿಮಿಷಗಳಲ್ಲಿ ಈ ಚಿತ್ರದ ಕಥೆ ಹೇಳಿದ್ದರು. ಕಥೆ ಕೇಳಿ ಥ್ರಿಲ್ ಆಗಿದ್ದೆ. ಕಥೆ ಬೇರೆಯವರಿಗೆ ಕೊಟ್ಟು ಬಿಡುತ್ತೇನೆ ಯಾರಾದರೂ ನಿರ್ದೇಶನ ಮಾಡಲಿ ಎಂದು ಅರ್ಜುನ್ ಜನ್ಯ ಹೇಳಿದರು. ನೀವು ಕಥೆ ಚೆನ್ನಾಗಿ ಹೇಳಿದ್ದೀರಿ. ನೀವೇ ನಿರ್ದೇಶನ ಮಾಡಿ ಎಂದಿದ್ದೆ. ನಂತರ ನಿರ್ಮಾಣಕ್ಕೆ ರಮೇಶ್ ರೆಡ್ಡಿ ಜೊತೆಯಾದರು. ಈ ಚಿತ್ರವನ್ನು ಬೇರೆಯವರು ನಿರ್ದೇಶನ ಮಾಡಿದ್ದರೆ ಕನ್ನಡಕ್ಕೆ ಸಿಗುತ್ತಿದ್ದ ಒಳ್ಳೆಯ ನಿರ್ದೇಶಕನೊಬ್ಬನನ್ನು ಕಳೆದುಕೊಳ್ಳುತ್ತಿದ್ದೆವು. 'ಪ್ರೀತ್ಸೆ', 'ಲವ ಕುಶ' ಚಿತ್ರಗಳಲ್ಲಿ ಉಪೇಂದ್ರ ಜೊತೆ ನಟಿಸಿದ್ದೆ. ಈಗ ಮತ್ತೆ ಅವರೊಂದಿಗೆ ಅಭಿನಯಿಸಿದ್ದೇನೆ. ರಾಜ್ ಬಿ. ಶೆಟ್ಟಿ ಜೊತೆಗೆ ಇದು ಮೊದಲ ಚಿತ್ರ. ಟೀಸರ್‌ನಲ್ಲೇ ಅರ್ಜುನ್ ಜನ್ಯ ಕುತೂಹಲ ಮೂಡಿಸಿದ್ದಾರೆ. ಈ ಚಿತ್ರದ ಕಥೆ ಬಹಳ ವಿಭಿನ್ನವಾಗಿದೆ' ಎಂದರು ಶಿವರಾಜ್‌ಕುಮಾರ್.

'45' ಎನ್ನುವ ಶೀರ್ಷಿಕೆಗೆ ಅರ್ಥವಿದೆ. ಟೀಸರ್‌ನಲ್ಲೇ ಕಥೆ ಹೇಳುವ ಪ್ರಯತ್ನ ಮಾಡಿದ್ದೇವೆ. ಅದನ್ನು ಪ್ರೇಕ್ಷಕರು ಸೂಕ್ಷ್ಮವಾಗಿ ಗಮನಿಸಬೇಕು. ಚಿತ್ರದಲ್ಲಿ ಗ್ರಾಫಿಕ್ಸ್ ಹೆಚ್ಚಿಗೆ ಇದ್ದು ಕೆನಡಾದಲ್ಲಿ ಪರಿಣಿತ ತಂತ್ರಜ್ಞರ ತಂಡ ಈ ಕೆಲಸ ಮಾಡುತ್ತಿದೆ. ಚಿತ್ರ ಬಿಡುಗಡೆಗೂ ಮುನ್ನ ಮತ್ತೊಂದು ಟೀಸರ್, ಹಾಡುಗಳು ಹಾಗೂ ಟ್ರೇಲರ್ ಅನ್ನು ಬಿಡುಗಡೆ ಮಾಡಲಿದ್ದೇವೆ' ಎನ್ನುತ್ತಾರೆ ಅರ್ಜುನ್ ಜನ್ಯ.

ಬಿಜೆಪಿ ಮುಖಂಡರಿಂದ ಮುಖ್ಯಮಂತ್ರಿ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನ

ಅಹೋರಾತ್ರಿ ಧರಣಿ ಅಂತ್ಯ

ಪ್ರಜಾವಾಣಿ ವಾರ್ತೆ

ಬ್ಯಾರಿಕೇಡ್ ದಾಟಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಿವಾಸಕ್ಕೆ ಮುತ್ತಿಗೆ ಹಾಕಲು ಹೊರಟಿದ್ದ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಹಾಗೂ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ತಡೆದರು ಚಿತ್ರ: ಪ್ರಶಾಂತ್ ಎಚ್.ಜಿ.

ಬೆಂಗಳೂರು: ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಬಿಜೆಪಿ ನಡೆಸಿದ ಒಂದು ದಿನದ ಅಹೋರಾತ್ರಿ ಧರಣಿ ಗುರುವಾರ ಕೊನೆಗೊಂಡಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ನಿವಾಸ ಕಾವೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಶಾಸಕರು ಮತ್ತು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ನಡೆಸಿದ ಅಹೋರಾತ್ರಿ ಧರಣಿಯಲ್ಲಿ ಶಾಸಕರು, ಮುಖಂಡರು, ಕಾರ್ಯಕರ್ತರು ಹಾಗೂ ನೂರಾರು ಮಹಿಳೆಯರು ಪಾಲ್ಗೊಂಡಿದ್ದರು.

ಸಿದ್ದರಾಮಯ್ಯ ಹಾಗೂ ಸಚಿವರ ಮುಖವಾಡವಿರುವ ಪ್ರತಿಕೃತಿ ದಹಿಸಿ, ಧಿಕ್ಕಾರ ಕೂಗಿದರು. ಧರಣಿ ನಿರತರು ಮೂರು ತಂಡಗಳಾಗಿ ಸಿದ್ದರಾಮಯ್ಯ ನಿವಾಸಕ್ಕೆ ತೆರಳಲು ಮುಂದಾಗುತ್ತಿದ್ದಂತೆಯೇ ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿ ತಡೆದರು. ಬ್ಯಾರಿಕೇಡ್ ಮೇಲೆ ಹತ್ತಿದ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ವಿಜಯೇಂದ್ರ, ಎಸ್.ಆರ್. ವಿಶ್ವನಾಥ್, ಸಿ.ಕೆ. ರಾಮಮೂರ್ತಿ, ಮುನಿರತ್ನ, ಬೈರತಿ ಬಸವರಾಜ್, ವಿಧಾನ ಪರಿಷತ್ ಸದಸ್ಯರಾದ ಸಿ.ಟಿ. ರವಿ, ಭಾರತಿ ಶೆಟ್ಟಿ ಸೇರಿದಂತೆ ಹಲವು ಮುಖಂಡರನ್ನು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

ವಿಜಯೇಂದ್ರ ಮಾತನಾಡಿ, 'ಸಿದ್ದರಾಮಯ್ಯ ಅವರ ಕಪಟ ಸಮಾಜವಾದಿಯ ಮುಖವಾಡ ಕಳಚಿ ಬಿದ್ದಿದೆ. ಹೈಕಮಾಂಡ್ ಅಥವಾ ಗಾಂಧಿ ಕುಟುಂಬಕ್ಕೆ ಕರ್ನಾಟಕ ರಾಜ್ಯವನ್ನು ಅಡವಿಡಲು ಮತ್ತು ಚುನಾವಣೆ ವೇಳೆ ಎಟಿಎಂ ಆಗಿ ಪರಿವರ್ತಿಸಲು ಕಾಂಗ್ರೆಸ್‌ಗೆ ಇಲ್ಲಿ ಸರ್ಕಾರ ಬೇಕಿದೆ' ಎಂದು ಹೇಳಿದರು..

'ಹಿಂದಿನ ಬಿಜೆಪಿ ಸರ್ಕಾರದ ಮೇಲಿನ ಅಪಪ್ರಚಾರವನ್ನು ನಾವು ಸರಿಯಾಗಿ ನಿಭಾಯಿಸಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಅದರ ಪರಿಣಾಮವಾಗಿ ವಿಪಕ್ಷದಲ್ಲಿದ್ದೇವೆ. ಅದರ ಬಗ್ಗೆ ನೋವಿಲ್ಲ' ಎಂದರು.

> **ಕೇಂದ್ರ ಸರ್ಕಾರ ತೆರಿಗೆ ಕಡಿತಗೊಳಿಸಿ, ಇಂಧನ ದರ ಐದು ರೂಪಾಯಿ ತಗ್ಗಿಸಿದ್ದರೆ , ಸಿದ್ದರಾಮಯ್ಯ ಸರ್ಕಾರ ಡೀಸೆಲ್ ದರ ಹೆಚ್ಚಿಸಿ ಜನರ ತಲೆಯ ಮೇಲೆ ಚಪ್ಪಡಿ ಎಳೆದಿದೆ**
> **ಆರ್. ಅಶೋಕ**
> ವಿಧಾನಸಭೆಯ ವಿರೋಧ ಪಕ್ಷದ ನಾಯಕ

> **ಡೀಸೆಲ್, ನೀರು, ವಿದ್ಯುತ್, ಹಾಲಿನ ದರ ಕೂಡಲೇ ಇಳಿಸಬೇಕು ಇಲ್ಲವಾದರೆ ಜನಾಕ್ರೋಶ ಯಾತ್ರೆ ಸೇರಿ ವಿವಿಧ ಹಂತದ ಹೋರಾಟಗಳನ್ನು ತೀವ್ರಗೊಳಿಸಲಾಗುವುದು**
> **ಸುಧಾಕರ ರೆಡ್ಡಿ**
> ಬಿಜೆಪಿ ರಾಜ್ಯ ಸಹ ಉಸ್ತುವಾರಿ

'ಏಪ್ರಿಲ್ 5 ರಂದು ಎಲ್ಲಾ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಹೋರಾಟ ನಡೆಯಲಿದೆ. ಏಪ್ರಿಲ್ 7ರಂದು ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿ ಮೈಸೂರಿನಿಂದ ಪ್ರಾರಂಭವಾಗುವ ಜನಾಕ್ರೋಶ ಯಾತ್ರೆ ರಾಜ್ಯದ ಪ್ರತಿ ಜಿಲ್ಲೆಗೆ ತಲುಪಲಿದೆ' ಎಂದರು. ಬಿ.ಎಸ್.ಯಡಿಯೂರಪ್ಪ ಮಾತನಾಡಿ, 'ಜನವಿರೋಧಿ ಕಾರ್ಯಕ್ರಮಗಳನ್ನು ಹಿಂದಕ್ಕೆ ಪಡೆಯುವವರೆಗೆ ಹೋರಾಟ ನಿರಂತರವಾಗಿ ಮುಂದುವರೆಯುತ್ತದೆ' ಎಂದರು.

'ವಕ್ಫ್ ಬೋರ್ಡ್: ಜಮೀನು ಲೂಟಿ'

ಕರ್ನಾಟಕದಲ್ಲಿ ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಜಮೀನುಗಳನ್ನು ವಕ್ಫ್ ಬೋರ್ಡ್ ಹೆಸರಿನಲ್ಲಿ ಕಾಂಗ್ರೆಸ್ ಮುಖಂಡರು, ರಾಜಕಾರಣಿಗಳು ಲೂಟಿ ಮಾಡಿದ್ದಾರೆ ಎಂದು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಲೋಕಸಭೆಯಲ್ಲಿ ಐತಿಹಾಸಿಕ ಮಸೂದೆಗೆ ಅಂಗೀಕಾರ ದೊರೆತಿರುವುದನ್ನು ಹಿಂದೂಗಳಷ್ಟೇ ಅಲ್ಲ, ಮುಸ್ಲಿಮರು ಸಹ ಸ್ವಾಗತಿಸಿದ್ದಾರೆ. ವಕ್ಫ್ ಕಾಯ್ದೆಗೆ ತಿದ್ದುಪಡಿಯನ್ನು ಕಾಂಗ್ರೆಸ್ ಪಕ್ಷ ವಿರೋಧಿಸುವುದು ಒಂದು ದುರಂತ' ಎಂದರು.
ದಶಕಗಳಿಂದ ವಕ್ಫ್ ಕಾಯ್ದೆ ಬಗ್ಗೆ ಚರ್ಚೆ ನಡೆಯುತ್ತಿತ್ತು. ರಾಜ್ಯದಲ್ಲಿ ಸಾವಿರ ವರ್ಷಗಳ ಇತಿಹಾಸ ಹೊಂದಿರುವ ದೇವಾಲಯಗಳು, ಧಾರ್ಮಿಕ ಸಂಸ್ಥೆಗಳ ಜಮೀನು ಹಾಗೂ ರಾಜ್ಯದ ಲಕ್ಷಾಂತರ ರೈತರ ಜಮೀನನ್ನು ಕೂಡ ವಕ್ಫ್ ಬೋರ್ಡ್ ಹೆಸರು ಹೇಳಿಕೊಂಡು ಕಿತ್ತುಕೊಳ್ಳುವ ಕೆಲಸ ನಡೆದಿತ್ತು ಎಂದು ಆಕ್ಷೇಪಿಸಿದರು.

ಇದೇ ವೇಳೆ ಧರಣಿ ನಿರತರಿಗೆ ಸಿಹಿ ಹಂಚಿ ಸಂಭ್ರಮಿಸಲಾಯಿತು.

ಬಸನಗೌಡ ಪಾಟೀಲ ಯತ್ನಾಳ ಅವರ ಹೇಳಿಕೆಗೆ ಪ್ರತಿಕ್ರಿಯಿಸಲು ನಿರಾಕರಿಸಿದ ವಿಜಯೇಂದ್ರ, 'ಅವರು ಹಿರಿಯರಿದ್ದಾರೆ. ಅವರ ಮಾತಿಗೆ ಪ್ರತಿಕ್ರಿಯೆ ನೀಡುವುದಿಲ್ಲ. ಅವರು ಸ್ವತಂತ್ರರಿದ್ದಾರೆ' ಎಂದರು.

'ಕೇಂದ್ರದ ನೀತಿಗಳಿಂದ ಬೆಲೆ ಏರಿಕೆ'

'ಬೆಲೆ ಏರಿಕೆ ಕೇಂದ್ರ ಸರ್ಕಾರದ ನೀತಿಗಳಿಂದ ಆಗುತ್ತದೆ. ತೆರಿಗೆ ವಿಚಾರದಲ್ಲಿ ಕೇಂದ್ರವೇ ಹೆಚ್ಚು ನಿಯಂತ್ರಣ ಹೊಂದಿದೆ. ನಮ್ಮ ತೆರಿಗೆಯ ಪಾಲು ಸಿಗದೇ ಇರುವಾಗ ಆದಾಯ ಹೆಚ್ಚಿಸಿಕೊಳ್ಳಲು ಬೇರೆ ಮಾರ್ಗವಿಲ್ಲದೇ ತೆರಿಗೆ ಹೆಚ್ಚಿಸಬೇಕಾಗುತ್ತದೆ' ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಆದ್ದರಿಂದ, ಡೀಸೆಲ್ ದರ ಪ್ರತಿ ಲೀಟರ್‌ಗೆ ₹2 ಏರಿಕೆ ಸ್ವಾಭಾವಿಕ. ಕೇಂದ್ರ ಸರ್ಕಾರ ತೆರಿಗೆ ನಿಯಂತ್ರಿಸಿದರೆ ರಾಜ್ಯಗಳಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಜಡ್ಜ್ ಮನೆಯಲ್ಲಿ ₹ 8 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಬೀದರ್: ನಗರದ ನ್ಯಾಯಾಂಗ ವಸತಿ ಗೃಹದಲ್ಲಿರುವ, 2ನೇ ಹೆಚ್ಚುವರಿ ಸಿವಿಲ್ ಹಾಗೂ 2ನೇ ಜೆಎಂಎಫ್‌ಸಿ ಜಿಲ್ಲಾ ನ್ಯಾಯಾಧೀಶ ಎಂ.ಡಿ. ಶಾಯಿಜ್ ಅವರ ಮನೆಯಿಂದ , ₹ 8 ಲಕ್ಷ ಮೌಲ್ಯದ ಚಿನ್ನಾಭರಣಗಳನ್ನು ಕಳವು ಮಾಡಲಾಗಿತ್ತು.

ಈದ್ ಉಲ್ ಫಿತ್ರ್ ನಿಮಿತ್ತ ನ್ಯಾಯಾಧೀಶರು ಮಾರ್ಚ್ 29ರಂದು ಸ್ವಂತ ಊರು ಕೊಪ್ಪಳಕ್ಕೆ ತೆರಳಿದ್ದರು. ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಾತ್ರಿಪಡಿಸಿಕೊಂಡ ಕಳ್ಳರು ಬಾಗಿಲು ಮುರಿದು, ಬೀರುವಿನಲ್ಲಿದ್ದ ಚಿನ್ನಾಭರಣ ಕಳ್ಳತನ ಮಾಡಿದ್ದಾರೆ. ಏ. 1ರಂದು ಕೆಲಸದಾಕೆ ಸಸಿಗಳಿಗೆ ನೀರು ಬಿಡಲು ಬಂದಾಗ ಕೃತ್ಯ ನಡೆದದ್ದು ಗೊತ್ತಾಗಿದೆ. ಎಂದು ಪೊಲೀಸರು ತಿಳಿಸಿದ್ದಾರೆ.

ನಾಲ್ವರು ಕಳ್ಳರು ಮನೆ ಹಿಂಭಾಗದಿಂದ ಬಂದಿರುವುದು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ನ್ಯೂ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೂಕ್ಷ್ಮ ನೀರಾವರಿ ಪರಿಕರ: ನಿರ್ಬಂಧ ಸಡಿಲಿಸಿದ ಸರ್ಕಾರ

ಎಲ್ಲ ವರ್ಗಕ್ಕೂ ಸಹಾಯಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂಕ್ಷ್ಮ ನೀರಾವರಿ ಪರಿಕರಗಳನ್ನು ಪಡೆಯಲು ಇದ್ದ ನಿರ್ಬಂಧವನ್ನು ಸರ್ಕಾರ ಸಡಿಲಿಸಿದ್ದು, ಎಲ್ಲ ವರ್ಗದ ರೈತ ಫಲಾನುಭವಿಗಳು 7 ವರ್ಷಗಳ ನಂತರ ಅದೇ ಜಮೀನಿಗೆ ಸಹಾಯಧನ ಪಡೆಯಲು ಹೊಸದಾಗಿ ಅವಕಾಶ ಕಲ್ಪಿಸಲಾಗಿದೆ.

ಈ ಸಂಬಂಧ ಕೃಷಿ ಇಲಾಖೆ ಹೊಸ ಆದೇಶ ಹೊರಡಿಸಿದೆ. ಈ ಹಿಂದೆ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ರೈತ ಫಲಾನುಭವಿಗಳನ್ನು ಹೊರತುಪಡಿಸಿ ಇತರೆ ವರ್ಗದವರಿಗೆ ಒಮ್ಮೆ ಮಾತ್ರ ಒಂದು ನಿರ್ದಿಷ್ಟ ಜಮೀನಿಗೆ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಘಟಕಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿತ್ತು.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರೈತ ಫಲಾನುಭವಿಗಳು 7 ವರ್ಷಗಳ ನಂತರ ಅದೇ ಜಮೀನಿಗೆ ಸಹಾಯಧನ ಪಡೆಯುವ ಅವಕಾಶ ಇತ್ತು. ಇನ್ನು ಮುಂದೆ ಇತರ ಸಮುದಾಯಗಳ ರೈತರಿಗೂ ಈ ಸೌಲಭ್ಯ ಸಿಗಲಿದೆ ಎಂದು ಕೃಷಿ ಇಲಾಖೆ ಪ್ರಕಟಣೆ ತಿಳಿಸಿದೆ.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ರಾಜ್ಯ ಪ್ರವಾಸ ಕೈಗೊಂಡ ಸಂದರ್ಭಗಳಲ್ಲಿ ಎಲ್ಲ ಜಿಲ್ಲೆಗಳ ರೈತರು, ಇತರೆ ವರ್ಗಗಳಿಗೆ ಇರುವ ನಿರ್ಬಂಧ ಸಡಿಲಿಸುವಂತೆ ಮನವಿ ಮಾಡಿದ್ದರು. ಗಂಭೀರವಾಗಿ ಪರಿಗಣಿಸಿದ ಸಚಿವರು ನಿಯಮ ಸಡಿಲಿಕೆ ಮಾಡಿಸಿದ್ದಾರೆ ಎಂದೂ ಪ್ರಕಟಣೆ ಹೇಳಿದೆ.

ಕೇಂದ್ರ ಸರ್ಕಾರವು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಇದ್ದ ಒಂಬತ್ತು ಘಟಕಗಳನ್ನು ಸೇರ್ಪಡೆಗೊಳಿಸಿ ಪ್ರಧಾನಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಪಿಎಂಆರ್‌ಕೆವಿವೈ) ಎಂದು ಮರು ನಾಮಕರಣಗೊಳಿಸಿ ಅನುಷ್ಠಾನ ಮಾರ್ಗಸೂಚಿಗಳನ್ನು ಹೊರಡಿಸಿದೆ. ಇದರ ವ್ಯಾಪ್ತಿಗೆ ಒಳಪಡುವಂತೆ ರೈತರಿಗೆ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಿ ಆದೇಶ ಹೊರಡಿಸಲಾಗಿದೆ ಎಂದೂ ಪ್ರಕಟಣೆ ವಿವರಿಸಿದೆ.

2024–25ನೇ ಸಾಲಿನಲ್ಲಿ ಪಿಎಂಕೆಎಸ್‌ವೈ ಮತ್ತು ಪಿಎಂಎಂಎಸ್ ಯೋಜನೆಯಡಿ ಸೂಕ್ಷ್ಮ ನೀರಾವರಿ ಯೋಜನೆಗೆ ₹247 ಕೋಟಿ ಮೀಸಲಿರಿಸಲಾಗಿತ್ತು. 2.60 ಲಕ್ಷ ರೈತರಿಗೆ ಇದರಿಂದ ಅನುಕೂಲವಾಗಿದೆ. ಅದೇ ರೀತಿ ಟಾಪ್‌ಅಪ್ ಯೋಜನೆಯಡಿ ₹252 ಕೋಟಿಗಳ ಅನುದಾನವನ್ನು ಸೂಕ್ಷ್ಮ ನೀರಾವರಿ ಸಾಧನ–ಸಲಕರಣೆಗಳ ನೆರವಿಗೆ ಬಳಸಲಾಗುತ್ತಿದೆ ಎಂದು ಹೇಳಿದೆ.

4 ತಿಂಗಳಲ್ಲಿ 49.6 ಕೆ.ಜಿ. ಚಿನ್ನ ಕಳ್ಳಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ ರನ್ಯಾ ರಾವ್ ದುಬೈನಿಂದ ಕಳ್ಳಸಾಗಣೆ ಮಾಡಿದ್ದ 49.6 ಕೆ.ಜಿ.ಯಷ್ಟು ಚಿನ್ನವನ್ನು ಚಿನ್ನಾಭರಣ ವ್ಯಾಪಾರಿ ಸಾಹಿಲ್ ಸಖಾರಿಯಾ ಜೈನ್ ಮಾರಾಟ ಮಾಡಿದ್ದರು ಎಂದು ರೆವೆನ್ಯೂ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಹೇಳಿದೆ.

ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಡಿಆರ್‌ಐ ರಿಮ್ಯಾಂಡ್ ಅರ್ಜಿ ಸಲ್ಲಿಸಿದೆ. ಕಳ್ಳಸಾಗಣೆಯ ಚಿನ್ನದ ಮಾರಾಟ ಮಾಡಿ, ಅದರಲ್ಲಿ ರನ್ಯಾ ಒಂದು ಪಾಲು ಉಳಿಸಿಕೊಂಡು ಉಳಿದ ಹಣವನ್ನು ದುಬೈಗೆ ಕಳುಹಿಸಿದ್ದಾರೆ ಎಂದು ವಿವರಿಸಿದೆ.

'2024ರ ನವೆಂಬರ್‌ನಿಂದ 2025ರ ಫೆಬ್ರುವರಿ ನಡುವೆ ರನ್ಯಾ ನಾಲ್ಕು ಬಾರಿ ಕಳ್ಳಸಾಗಣೆ ಮಾಡಿದ್ದು, ಒಟ್ಟು 49.6 ಕೆ.ಜಿ.ಯಷ್ಟು ಚಿನ್ನವನ್ನು ದುಬೈನಿಂದ ಬೆಂಗಳೂರಿಗೆ ತಂದಿದ್ದಾರೆ. ಅಷ್ಟೂ ಚಿನ್ನವನ್ನು ಸಾಹಿಲ್ ₹40.07 ಕೋಟಿಗೆ ಮಾರಾಟ ಮಾಡಿ, ಅದರಲ್ಲಿ ₹38.35 ಕೋಟಿಯನ್ನು ಹವಾಲಾ ಮೂಲಕ ದುಬೈಗೆ ಕಳುಹಿಸಿದ್ದಾರೆ. ₹1.72 ಕೋಟಿಯನ್ನು ರನ್ಯಾಗೆ ನೀಡಲಾಗಿದೆ ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ' ಎಂದು ಡಿಆರ್‌ಐ ತಿಳಿಸಿದೆ.

ರನ್ಯಾ ರಾವ್

'2024ರ ನವೆಂಬರ್‌ನಲ್ಲಿ ರನ್ಯಾ ಕಳ್ಳಸಾಗಣೆ ಮೂಲಕ 8.9 ಕೆ.ಜಿ. ಚಿನ್ನ ತಂದಿದ್ದು, ಸಾಹಿಲ್ ಅದನ್ನು ₹6.82 ಕೋಟಿಗೆ ಮಾರಾಟ ಮಾಡಿದ್ದಾರೆ. ಅದರಲ್ಲಿ ₹6.50 ಕೋಟಿಯನ್ನು ಹವಾಲಾ ಮೂಲಕ ದುಬೈಗೆ ಕಳುಹಿಸಿ, ಉಳಿದ ₹32 ಲಕ್ಷವನ್ನು ರನ್ಯಾಗೆ ನೀಡಿದ್ದಾರೆ. ಡಿಸೆಂಬರ್ ನಲ್ಲಿ12.6 ಕೆ.ಜಿ. ಚಿನ್ನ ತಂದು, ಅದನ್ನು ₹9.90 ಕೋಟಿಗೆ ಮಾರಲಾಗಿದೆ. ಅದರಲ್ಲಿ ₹9.60 ಕೋಟಿ ದುಬೈಗೆ ಹೋಗಿದ್ದರೆ, ₹30 ಲಕ್ಷ ರನ್ಯಾಗೆ ಪಾವತಿಯಾಗಿದೆ' ಎಂದಿದೆ.

'2025ರ ಜನವರಿಯಲ್ಲಿ ರನ್ಯಾ ಕಳ್ಳಸಾಗಣೆ ಮೂಲಕ ತಂದಿದ್ದ 14.5 ಕೆ.ಜಿ. ಬಂಗಾರವನ್ನು, ₹11.55 ಕೋಟಿಗೆ ಮಾರಾಟ ಮಾಡಲಾಗಿದೆ. ಅದರಲ್ಲಿ ₹55 ಲಕ್ಷವನ್ನು ರನ್ಯಾಗೆ ನೀಡಿ, ₹11 ಕೋಟಿಯನ್ನು ದುಬೈಗೆ ಕಳುಹಿಸಲಾಗಿದೆ. ಫೆಬ್ರುವರಿಯಲ್ಲೂ ಹೀಗೆಯೇ 13.4 ಕೆ.ಜಿ. ಚಿನ್ನವನ್ನು ₹11.80 ಕೋಟಿಗೆ ಮಾರಾಟ ಮಾಡಿದ್ದಾರೆ. ಅದರಲ್ಲಿ ₹11.25 ಕೋಟಿಯನ್ನು ದುಬೈಗೆ ಕಳುಹಿಸಿದ್ದು, ₹55 ಲಕ್ಷ ರನ್ಯಾಗೆ ಹೋಗಿದೆ' ಎಂದು ಡಿಆರ್‌ಐ ವಿವರಿಸಿದೆ.

ಮುಡಾ ಪ್ರಕರಣ: ಇ.ಡಿಗೆ ಜನಪ್ರತಿನಿಧಿಗಳ ಕೋರ್ಟ್ ಪ್ರಶ್ನೆ

'ಬಿ' ವರದಿ ಒಪ್ಪಿದರೆ ಏನು ಮಾಡುತ್ತೀರಿ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಪ್ರಕರಣದ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿದ್ದ ಲೋಕಾಯುಕ್ತ ಸಂಸ್ಥೆಯು ಸಕ್ಷಮ ನ್ಯಾಯಾಲಯಕ್ಕೆ ಬಿ ಅಂತಿಮ ವರದಿ ಸಲ್ಲಿಸಿರುವುದನ್ನು ವಿರೋಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದೆ.

ಈ ಕುರಿತ ಅರ್ಜಿಯನ್ನು ಇ.ಡಿ ಪರ ವಕೀಲ ಮಧುಕರ ಎಂ.ದೇಶಪಾಂಡೆ ಅವರು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಮುಂದೆ ಸಲ್ಲಿಸಿದರು.

ಅರ್ಜಿಯನ್ನು ಪರಿಶೀಲಿಸಿದ ನ್ಯಾಯಾಧೀಶರು, 'ಪ್ರಕರಣದಲ್ಲಿ ಆರೋಪವು ಅನುಸೂಚಿತ ಅಪರಾಧ ಅಲ್ಲ ಎಂದು ಲೋಕಾಯುಕ್ತ ಬಿ ಅಂತಿಮ ವರದಿ ಸಲ್ಲಿಸಿದೆ. ದೂರುದಾರರು ಈಗಾಗಲೇ ಈ ವರದಿ ವಿರೋಧಿಸಿ ಅರ್ಜಿ ಸಲ್ಲಿಸಿದ್ದು, ಇ.ಡಿ ಕೂಡಾ ಇಂತಹುದೇ ವಿರೋಧದ ಅರ್ಜಿಯನ್ನು ಸಲ್ಲಿಸುವುದಕ್ಕೆ ಹೊಂದಿರುವ ನ್ಯಾಯಯುತ ಅಧಿಕಾರ ಏನು ಮತ್ತು ಇದನ್ನು ವಿಚಾರಣೆಗೆ ಸ್ವೀಕಾರಾರ್ಹ ಎಂದು ಪರಿಗಣಿಸುವುದು ಎಷ್ಟು ಸೂಕ್ತ ?, ಒಂದು ವೇಳೆ ಈ ನ್ಯಾಯಾಲಯ ಬಿ ಅಂತಿಮ ವರದಿಯನ್ನು ಒಪ್ಪಿಕೊಂಡರೆ ಏನು ಮಾಡುತ್ತೀರಿ' ಎಂದು ದೇಶಪಾಂಡೆ ಅವರನ್ನು ಪ್ರಶ್ನಿಸಿತು.

ಇದಕ್ಕೆ ದೇಶಪಾಂಡೆ, 'ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ–2002ರ (ಪಿಎಂಎಲ್‌ಎ) ಕಲಂ 66 (2)ರ ಪ್ರಕಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ ಅಧಿಕಾರಿಗಳು ಲೋಕಾಯುಕ್ತ ತನಿಖಾಧಿಕಾರಿಗಳ ಜೊತೆ ಮಾಹಿತಿ ಹಂಚಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ಇ.ಡಿ ತನ್ನ ತನಿಖೆ ಮುಂದುವರಿಸಬಹುದು ಎಂದು ಹೈಕೋರ್ಟ್ ಹೇಳಿದೆ. ಹೀಗಾಗಿ, ನ್ಯಾಯಾಲಯ ಅರ್ಜಿಯನ್ನು ಪರಿಗಣಿಸಬಹುದು ಅಥವಾ ಪರಿಗಣಿಸದೆಯೇ ವಜಾಗೊಳಿಸಬಹುದು. ಒಂದು ವೇಳೆ ನಮ್ಮ ವಿರೋಧದ ಅರ್ಜಿಯನ್ನು ವಜಾ ಮಾಡಿದರೆ ಆ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನೆ ಮಾಡುತ್ತೇವೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, 'ಇ.ಡಿ ಅಧಿಕಾರಿಗಳು ಲೋಕಾಯುಕ್ತ ಪೊಲೀಸರ ಜೊತೆ ತನಿಖೆಯ ಮಾಹಿತಿಯನ್ನು ಹಂಚಿಕೊಂಡಿದ್ದಾರೆಯೇ ಹೇಗೆ ಎಂಬುದನ್ನು ಸ್ಪಷ್ಟಪಡಿಸಿ' ಎಂದು ಲೋಕಾಯುಕ್ತ ಪರ ವಕೀಲ ವೆಂಕಟೇಶ ಅರಬಟ್ಟಿ ಅವರಿಗೆ ಸೂಚಿಸಿ ವಿಚಾರಣೆಯನ್ನು ಇದೇ 8ಕ್ಕೆ ಮುಂದೂಡಿದರು. ದೂರುದಾರ ಸ್ನೇಹಮಯಿ ಕೃಷ್ಣ ಹಾಜರಿದ್ದರು.

ಪ್ರಜ್ವಲ್ ರೇವಣ್ಣ ಅರ್ಜಿ ತಿರಸ್ಕೃತ

'ಮನೆಗೆಲಸದ ಮಹಿಳೆಯ ಮೇಲಿನ ಅತ್ಯಾಚಾರ ಆರೋಪದಿಂದ ನನ್ನನ್ನು ಕೈಬಿಡಬೇಕು' ಎಂದು ಕೋರಿದ್ದ ಆರೋಪಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ಕೋರ್ಟ್ ತಿರಸ್ಕರಿಸಿದೆ.

ಈ ಕುರಿತಂತೆ ಕಾಯ್ದಿರಿಸಿದ್ದ ಆದೇಶವನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಗುರುವಾರ ಪ್ರಕಟಿಸಿದರು.

ಭಾರಿ ಗಾಳಿ; ಮೊಳಕಾಲ್ಮುರು ತಾಲ್ಲೂಕಿನ ಕೆಲವೆಡೆ ನೆಲಕ್ಕುರುಳಿದ ಬೆಳೆ

ನಾಡಿಗೆ ಹರ್ಷ ತಂದ ವರ್ಷಧಾರೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ ತಾಲ್ಲೂಕಿನ ಹಂಪಿ ಸುತ್ತಮುತ್ತ ಬುಧವಾರ ರಾತ್ರಿ ಸುರಿದ ಮಳೆಯಿಂದಾಗಿ ಗುರುವಾರ ಬೆಳಿಗ್ಗೆ ವಿಜಯವಿಠ್ಠಲ ದೇವಸ್ಥಾನದ ಆವರಣದಲ್ಲಿ ಮಳೆ ನೀರು ಸಂಗ್ರಹವಾಗಿತ್ತು. ಆ ನೀರಲ್ಲಿ ಕಲ್ಲಿನ ರಥ, ಇತರ ಮಂಟಪಗಳು ಮತ್ತು ಪ್ರವಾಸಿಗರ ಪ್ರತಿಬಿಂಬ ವಿಶಿಷ್ಟ ರೀತಿಯಲ್ಲಿ ಕಾಣಿಸಿತು – ಚಿತ್ರ: ತಾಜುದ್ದೀನ್ ಆಜಾದ್

ಕಲಬುರಗಿ/ ಮೈಸೂರು: ಕಲಬುರಗಿ ಜಿಲ್ಲೆ, ಮೈಸೂರು ಜಿಲ್ಲೆಯ ಕೆಲವೆಡೆ ಮತ್ತು ರಾಜ್ಯದ ವಿವಿಧ ಭಾಗಗಳಲ್ಲಿ ಬುಧವಾರ ರಾತ್ರಿ ಮತ್ತು ಗುರುವಾರ ಮಳೆಯಾಗಿದೆ. ಬಿಸಿಲ ಧಗೆಯಿಂದ ಬತ್ತಿದ್ದ ನೆಲದಲ್ಲಿ ಹಸಿರು ಚಿಗುರೊಡೆಯಲು ಮಳೆ ಹದಮಾಡಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ, ಕೊಪ್ಪಳ, ಕಾರಟಗಿ ಹಾಗೂ ಕುಷ್ಟಗಿ ತಾಲ್ಲೂಕಿನಲ್ಲಿ ರಾತ್ರಿ ಮಳೆಯಾಗಿದೆ. ಗಂಗಾವತಿ ಭಾಗದಲ್ಲಿ ಕಟಾವಿಗೆ ಬಂದಿದ್ದ ಭತ್ತದ ಫಸಲು ನೆಲಕ್ಕೆ ಒರಗಿದೆ. ಬೀದರ್ ಜಿಲ್ಲೆಯ ಔರಾದ್‌ನಲ್ಲಿ ಮಧ್ಯಾಹ್ನ ಬಿರುಗಾಳಿ ಸಹಿತ ಜೋರು ಮಳೆಯಾದರೆ, ಚಿಟಗುಪ್ಪ, ಹುಮನಾಬಾದ್ ತಾಲ್ಲೂಕಿನಲ್ಲಿ ಜಿಟಿಜಿಟಿ ಮಳೆ ಸಂಜೆಯೂ ಮುಂದುವರೆದಿತ್ತು. ಬೀದರ್, ಹುಲಸೂರ, ಭಾಲ್ಕಿಯಲ್ಲಿ ಸಾಧಾರಣ ಮಳೆಯಾಗಿದೆ.

ಕಲಬುರಗಿ ನಗರದಲ್ಲಿ ಮಧ್ಯಾಹ್ನ ಕೆಲಹೊತ್ತು ಮಳೆ ಸುರಿಯಿತು. ಜಿಲ್ಲೆಯ ಜೇವರ್ಗಿ, ಕಾಳಗಿ ಹಾಗೂ ಚಿಂಚೋಳಿ, ವಾಡಿ ಪಟ್ಟಣದ ಸುತ್ತಮುತ್ತ ಉತ್ತಮ ಮಳೆಯಾಗಿದೆ.

ಹಾಸನ ಜಿಲ್ಲೆಯ ಆಲೂರು, ಸಕಲೇಶಪುರದಲ್ಲಿ ವರ್ಷಧಾರೆಯಾಗಿದೆ. ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಕೌದಳ್ಳಿಯಲ್ಲಿ ಧಾರಾಕಾರ ಮಳೆಯಾಗಿದೆ. ಹಾಸನ ಜಿಲ್ಲಾ ಕೇಂದ್ರದಲ್ಲಿ ಸುಮಾರು 45 ನಿಮಿಷ ನಿರಂತರ ಮಳೆ ಸುರಿಯಿತು. ಅರಕಲಗೂಡು, ಕೊಣನೂರು, ಹೊಳೆನರಸೀಪುರ, ಹಳೇಬೀಡಿನಲ್ಲೂ ಮಳೆಯಾಗಿದೆ.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಹನಗೋಡು, ಧರ್ಮಾಪುರ, ಗಾವಡಗೆರೆ ಮತ್ತು ಬಿಳಿಕೆರೆ ಹೋಬಳಿಯಾದ್ಯಂತ, ನಾಗರಹೊಳೆ ಅರಣ್ಯದ ಕೆಲವೆಡೆ ಉತ್ತಮ ಮಳೆಯಾಗಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ಮಧ್ಯಾಹ್ನ ಬಿರುಗಾಳಿ ಸಹಿತ ಮಳೆಯಾಯಿತು. ಕೊಳ್ಳೇಗಾಲ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅಲ್ಪ ಪ್ರಮಾಣದ ಮಳೆಯಾಗಿದೆ.

ಬಿಸಿಲಿನ ಬೇಗೆಗೆ ಅರಣ್ಯ ಪ್ರದೇಶ ಒಣಗಿ ಪ್ರಾಣಿಗಳಿಗೆ ಮೇವಿನ ಕೊರತೆ ಎದುರಾಗುವ ಆತಂಕ ಇತ್ತು. ಮಳೆಯಿಂದಾಗಿ ಹುಲ್ಲು ಚಿಗುರಲು ಪೂರಕ ವಾತಾವರಣ ನಿರ್ಮಾಣವಾಗಿದೆ.

ಚಿಕ್ಕಮಗಳೂರು ವರದಿ: ಜಿಲ್ಲೆಯ ಹಲವೆಡೆ ಗುರುವಾರ ಮಳೆಯಾಗಿದೆ. 'ಈಗ ಮಳೆ ಬಂದಿರುವುದು ಕಾಫಿ ಕಾಯಿ ಕಟ್ಟಲು ಸಹಕಾರಿಯಾಗಿದೆ' ಎಂದು ಕಾಫಿ ಬೆಳೆಗಾರ ರವಿಕುಮಾರ್ ಎಚ್. ಎಲ್ ಅವರು ಹೇಳಿದರು.

ಚಿತ್ರದುರ್ಗ ವರದಿ: ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆಯಾಗಿದೆ. ಜೊತೆಗೆ ಭಾರಿ ಗಾಳಿ ಬೀಸಿದ ಪರಿಣಾಮ ಮೊಳಕಾಲ್ಮುರು ತಾಲ್ಲೂಕಿನ ಹಲವೆಡೆ ಬಾಳೆ, ಮೆಕ್ಕೆಜೋಳ ನೆಲಕ್ಕುರುಳಿವೆ.

ನಗರದಲ್ಲಿ ಮಧ್ಯಾಹ್ನ 2ಕ್ಕೆ ಆರಂಭವಾದ ಮಳೆ ಗುಡುಗು ಸಹಿತ 20 ನಿಮಿಷ ಸುರಿಯಿತು. ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಬಳಿಯ ಭೀಮ ಗೊಂಡನಹಳ್ಳಿ, ಹಿರಿಕೆರೆ ಕಾವಲು, ಜೋಗಿಹಟ್ಟಿಗಳಲ್ಲಿ ಸತತ ಒಂದು ಗಂಟೆ ಮಳೆಯಾಯಿತು. ಹೊಳಲ್ಕೆರೆ, ಹಿರಿಯೂರು ತಾಲ್ಲೂಕಿನಲ್ಲೂ ಸಾಧಾರಣ ಮಳೆಯಾಗಿದೆ.

ಮೊಳಕಾಲ್ಮುರು ತಾಲ್ಲೂಕು ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದೆ. ದೇವಸಮುದ್ರ ಹೋಬಳಿಯ ಜೆ.ಬಿ. ಹಳ್ಳಿ ಸುತ್ತಮುತ್ತ ಗಾಳಿಯ ರಭಸಕ್ಕೆ ಮಕ್ಕೆಜೋಳ, ಬಾಳೆ ಬೆಳೆಗಳಿಗೆ ಹಾನಿಯಾಗಿದೆ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಮತ್ತು ಸಾಗರ ಮತ್ತು ಭದ್ರಾವತಿ ತಾಲ್ಲೂಕುಗಳ ಕೆಲವೆಡೆ ಮಳೆ ಸುರಿದಿದೆ. ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪ ಸುತ್ತಮುತ್ತ ಹಾಗೂ ಕಡೇನಂದಿಹಳ್ಳಿ ಗ್ರಾಮ ಹಾಗೂ ಸುತ್ತಮುತ್ತ 20 ನಿಮಿಷಗಳ ಕಾಲ ಬಿರುಸಿನ ಮಳೆ ಸುರಿಯಿತು.

ದಾವಣಗೆರೆ ಜಿಲ್ಲೆಯ ಜಗಳೂರು ಪಟ್ಟಣ ಸೇರಿದಂತೆ ತಾಲ್ಲೂಕಿನಲ್ಲೂ ಬುಧವಾರ ತಡರಾತ್ರಿ ಹಾಗೂ ಗುರುವಾರ ಮಧ್ಯಾಹ್ನ 20 ನಿಮಿಷಗಳವರೆಗೆ ಮಳೆ ಸುರಿಯಿತು.

ಗೌರಿಬಿದನೂರು: ನಗರ ಹಾಗೂ ತಾಲ್ಲೂಕಿನ ಹಲವು ಕಡೆ ಅರ್ಧ ಗಂಟೆಗೂ ಹೆಚ್ಚು ಸಮಯ ಬಿರುಗಾಳಿ ಸಮೇತ ಮಳೆ ಸುರಿಯಿತು. ಮಳೆಯಿಂದಾಗಿ ನಗರದ ಹಲವು ರಸ್ತೆಗಳಲ್ಲಿ ನೀರು ತುಂಬಿ ಹರಿಯಿತು.

ಧರೆಗುರುಳಿದ ಗಿಡ, ಮರಗಳು

ಹುಬ್ಬಳ್ಳಿ: ವಿಜಯನಗರ ಜಿಲ್ಲೆಯ ಹೊಸಪೇಟೆ ಡ್ಯಾಂ ರಸ್ತೆಯ ಮಾರ್ಕಂಡೇಶ್ವರ ದೇವಸ್ಥಾನದ ಗೋಪುರ ಕಳಶ ಗಾಳಿಗೆ ಉರುಳಿ ಬಿದ್ದಿದೆ. ಹಲವೆಡೆ ಗಿಡ, ಮರಗಳು ಧರೆಗುರುಳಿವೆ. ಜಂಬುನಾಥ ಹಳ್ಳಿಯಲ್ಲಿ ತಾತ್ಕಾಲಿಕ ಗುಡಿಸಲುಗಳು ಸಹ ಗಾಳಿ, ಮಳೆಗೆ ನಾಶವಾಗಿವೆ.

ಬಳ್ಳಾರಿ ಜಿಲ್ಲೆಯಲ್ಲೂ ಮಳೆಯಾಗಿದೆ. ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಗ್ರಾಮೀಣ ಭಾಗಗಳಲ್ಲಿ ಗುಡುಗು ಸಿಡಿಲು ಸಹಿತ ಎರಡೂವರೆ ತಾಸು ಮಳೆ ಸುರಿಯಿತು. ಭಾರೀ ಬಿರುಗಾಳಿಗೆ ಕೆಲವೆಡೆ ಚಾವಣಿಗಳು ಹಾರಿವೆ. ಹಲವು ಮನೆಗಳಿಗೆ,ದೇವಸ್ಥಾನಗಳಿಗೆ ನೀರು ನುಗ್ಗಿ ಜನ ಜೀವನ ಅಸ್ತವ್ಯಸ್ತಗೊಂಡಿತು.

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕಿನ ಕಾತೂರ, ಪಾಳಾ, ಟಿಬೇಟಿಯನ್ ಕ್ಯಾಂಪ್, ಯಲ್ಲಾಪುರ ಹಾಗೂ ಶಿರಸಿ ತಾಲ್ಲೂಕಿನ ಗ್ರಾಮೀಣ ಪ್ರದೇಶ, ಕುಮಟಾ ಸೇರಿ ಕೆಲ ಕಡೆ ಬಿರುಸಿನ ಮಳೆ ಸುರಿಯಿತು.

ಬಾಗಲಕೋಟೆ, ಬಾದಾಮಿ, ಬೀಳಗಿ, ಕೆರೂರಿನಲ್ಲಿ ಮಳೆಯಾಯಿತು. ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನಲ್ಲಿ ರಭಸದ ಮಳೆ ಸುರಿಯಿತು.

ಕಾಡಿನೊಳಗೆ ಸಿಕ್ಕಿದ್ದ ಹೆಣ್ಣು ಮಗುವಿನ ತಂದೆ, ತಾಯಿ ಪತ್ತೆ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಬೆಳ್ತಂಗಡಿ ತಾಲ್ಲೂಕಿನ ಬೆಳಾಲು ಗ್ರಾಮದ ಕೊಡೋಳುಕೆರೆ ಮುಂಡ್ರೊಟ್ಟು ಕಾಡಿನಲ್ಲಿ ಮಾರ್ಚ್ 22ರಂದು ಸಿಕ್ಕಿದ್ದ ಎರಡೂವರೆ ತಿಂಗಳ ಹೆಣ್ಣು ಮಗುವಿನ ತಂದೆ, ತಾಯಿಯನ್ನು ಧರ್ಮಸ್ಥಳ ಪೊಲೀಸರು ಪತ್ತೆ ಮಾಡಿದ್ದಾರೆ.

ಮಗುವಿನ ತಂದೆ ಬೆಳಾಲು ಗ್ರಾಮದ ಬಳಿಯ ಮಾಯ ನಿವಾಸಿ ರಂಜಿತ್ ಗೌಡ, ತಾಯಿ ಧರ್ಮಸ್ಥಳ ಬಳಿಯ ಪಾಂಗಾಳ ನಿವಾಸಿ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ರಂಜಿತ್ (27), ಮಂಗಳೂರಿನ ಬ್ಯೂಟಿಪಾರ್ಲರ್‌ನಲ್ಲಿ ಕೆಲಸ ಮಾಡುತ್ತಿದ್ದ 22 ವರ್ಷದ ಯುವತಿಯನ್ನು ಪ್ರೀತಿಸುತ್ತಿದ್ದರು. ಮದುವೆಯಾಗುವ ಭರವಸೆ ನೀಡಿದ್ದ ರಂಜಿತ್ ದೈಹಿಕ ಸಂಪರ್ಕ ಬೆಳೆಸಿದ್ದು, ಆಕೆ ಗರ್ಭಿಣಿಯಾಗಿದ್ದಳು. ಈಚೆಗೆ ಹೆಣ್ಣುಮಗುವಿಗೆ ಜನ್ಮನೀಡಿದ್ದಳು. ಬಳಿಕ ಅವರೊಳಗೆ ಮನಸ್ತಾಪ ಉಂಟಾಗಿದ್ದು, ಯುವತಿ ಮಗುವನ್ನು ರಂಜಿತ್ ಗೌಡನ ಮನೆಗೆ ತಂದು ಬಿಟ್ಟು ಹೋಗಿದ್ದಾಳೆ. ಮಗುವನ್ನು ಆತ ಕಾಡಿನಲ್ಲಿ ಬಿಟ್ಟು ಹೋಗಿದ್ದ' ಎಂಬುದು ಪೊಲೀಸ್ ಮೂಲಗಳ ಹೇಳಿಕೆ.

ರಂಜಿತ್ ಗೌಡ

ಅಪರಿಚಿತ ಹೆಣ್ಣು ಮಗು ಪತ್ತೆಯಾದ ಬಗ್ಗೆ ಬೆಳ್ತಂಗಡಿಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ಅನ್ನಪೂರ್ಣ ಅವರು ನೀಡಿದ್ದ ದೂರಿನಂತೆ ಧರ್ಮಸ್ಥಳ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ಪೊಲೀಸರು ತನಿಖೆ ನಡೆಸಿದ್ದರು.

ಧರ್ಮಸ್ಥಳ ಪಿಎಸ್ಐ ಸಮರ್ಥ ಆರ್.ಗಾಣಿಗೇರ ನೇತೃತ್ವದಲ್ಲಿ ಪೊಲೀಸರು ಬುಧವಾರ ರಂಜಿತ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ಸ್ವ-ಇಚ್ಛೆಯಿಂದ ಮದುವೆಯಾಗುವುದಾಗಿ ರಂಜಿತ್ ಗೌಡ ಒಪ್ಪಿಕೊಂಡಿದ್ದಾನೆ ಎಂದು ತಿಳಿದುಬಂದಿದೆ.

ಮಗು ಪುತ್ತೂರಿನ ರಾಮಕೃಷ್ಣ ಆಶ್ರಮದಲ್ಲಿದೆ. ಕಾನೂನು ಪ್ರಕ್ರಿಯೆ (ಡಿಎನ್‌ಎ ಪರೀಕ್ಷೆ) ಪೂರ್ಣಗೊಂಡ ಬಳಿಕ ಆಶ್ರಮದಲ್ಲಿರುವ ಮಗುವನ್ನು ತಂದೆ, ತಾಯಿಗೆ ಹಸ್ತಾಂತರಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಶೃಂಗೇರಿ ಶ್ರೀಗಳ 75ನೇ ವರ್ಧಂತಿ ಮಹೋತ್ಸವ

ಶೃಂಗೇರಿ (ಚಿಕ್ಕಮಗಳೂರು): ಇಲ್ಲಿನ ಶಾರದಾ ಪೀಠದ ಭಾರತಿ ತೀರ್ಥ ಶ್ರೀಗಳ 75ನೇ ವರ್ಧಂತಿ ಮಹೋತ್ಸವ ಅಂಗವಾಗಿ 'ವಜ್ರೋತ್ಸವ ಭಾರತಿ' ಕಾರ್ಯಕ್ರಮ ಗುರುವಾರ ಸಂಭ್ರಮದಿಂದ ನಡೆಯಿತು.

ರಾಜ್ಯ, ಹೊರರಾಜ್ಯಗಳಿಂದ ಬಂದಿದ್ದ ಅಪಾರ ಸಂಖ್ಯೆಯ ಭಕ್ತರು ನರಸಿಂಹ ವನದ ಗುರು ನಿವಾಸದಲ್ಲಿ ಗುರುಗಳ ದರ್ಶನ ಪಡೆದು, ಶ್ರದ್ಧಾ ಭಕ್ತಿಯಿಂದ ವಸ್ತ್ರಕಾಣಿಕೆ, ಭಿಕ್ಷಾವಂದನೆ, ಫಲಪುಷ್ಪ ಸಮರ್ಪಿಸಿದರು.



'ವಜ್ರೋತ್ಸವ ಭಾರತಿ' ಕಾರ್ಯಕ್ರಮದ ಅಂಗವಾಗಿ ಲಕ್ಷ ಮೋದಕ ಗಣಪತಿ ಹೋಮ, ಅತಿರುದ್ರ ಮಹಾಯಾಗ, 75 ಲಕ್ಷ ಪಂಚಾಕ್ಷರಿ ಮಂತ್ರ ಜಪ, ಅಂಬಿಕಾ ಆರಾಧನೆ, ಅಷ್ಟೋತ್ತರ ಶತ ಲಲಿತೋಪಾಖ್ಯಾನ ಪಾರಾಯಣ, ವೇದ ಹವನ, ಅಕ್ಷರ ಲಕ್ಷ ಗಾಯತ್ರಿ ಜಪ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಗಳು ನಡೆದವು.

'ಮಹಿಳೆಯರಿಗೆ ತ್ರಿಶೂಲ ವಿತರಣೆ'

ಹುಬ್ಬಳ್ಳಿ: 'ಮಹಿಳೆಯರ ಸ್ವಯಂ ರಕ್ಷಣೆಗೆ ಶೀಘ್ರವೇ ಒಂದು ಸಾವಿರ ಮಂದಿಗೆ ತ್ರಿಶೂಲ ನೀಡಲಾಗುವುದು. ಅದನ್ನು ವ್ಯಾನಿಟಿ ಬ್ಯಾಗ್‌ನಲ್ಲಿ ಇಟ್ಟುಕೊಂಡು ಓಡಾಡಬೇಕು. ಸಮಸ್ಯೆ ಮಾಡುವವರಿಗೆ ತ್ರಿಶೂಲದಿಂದ ಚುಚ್ಚಿ, ರಕ್ಷಣೆ ಮಾಡಿಕೊಳ್ಳಬೇಕು' ಎಂದು ಶ್ರೀರಾಮ ಸೇನೆ ಸಂಘಟನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ್ ಹೇಳಿದರು.

'ಹಿಂದೂ ಮಹಿಳೆಯರಿಗೆ ಸರ್ಕಾರದಿಂದ ಅಥವಾ ಪೊಲೀಸರಿಂದಾಗಲಿ ರಕ್ಷಣೆಯಿಲ್ಲ. ಅವರು ತಮ್ಮ ಸ್ವಯಂ ರಕ್ಷಣೆಗೆ ತ್ರಿಶೂಲ ಇಟ್ಟುಕೊಂಡಿರಬೇಕು' ಎಂದು ಅವರು ಸುದ್ದಿಗಾರರಿಗೆ ಗುರುವಾರ ತಿಳಿಸಿದರು.

ಸಿಇಟಿ: ಸೀಟು ಹಂಚಿಕೆಗೆ ಹೊಸ ವಿಧಾನ

ಒಂದನೇ ಪುಟದಿಂದ...

ಹೀಗೆ ಮೂರು ಚಾಯ್ಸ್‌ಗಳ ಮೂಲಕ ಸೀಟು ಪಡೆಯುತ್ತಿದ್ದವರು ಶುಲ್ಕ ಪಾವತಿಸಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡರೂ, ಕಾಲೇಜುಗಳಿಗೆ ದಾಖಲಾದ ಬಗ್ಗೆ ಕೆಇಎಗೆ ಖಚಿತ ಮಾಹಿತಿ ಸಿಗುತ್ತಿರಲ್ಲ. ಇದು 'ಸೀಟ್ ಬ್ಲಾಕಿಂಗ್' ದಂಧೆಗೆ ದಾರಿ ಮಾಡಿಕೊಡುತ್ತಿತ್ತು. ಅಲ್ಲದೇ, ಸಕಾರಣದಿಂದ ಕಾಲೇಜಿಗೆ ದಾಖಲಾಗದ ವಿದ್ಯಾರ್ಥಿಗಳಿಗೂ ಒಂದು ವರ್ಷ ಹಾಗೂ ಶುಲ್ಕ ವ್ಯರ್ಥವಾಗುತ್ತಿತ್ತು. ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪುನರ್ ಪ್ರವೇಶದ ಅವಕಾಶ ಕಲ್ಪಿಸುವ ವಿಧಾನ ಪರಿಚಯಿಸಲಾಗುತ್ತಿದೆ' ಎನ್ನುತ್ತಾರೆ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ.

ಪ್ರವೇಶಕ್ಕೆ 'ಸೀಟು ಖಚಿತತೆ ಪತ್ರ'

ಒಂದನೇ ಪುಟದಿಂದ...

ಹಾಗಾಗಿ, ಹಂಚಿಕೆಯಾದ ಸೀಟುಗಳನ್ನು ಬಿಟ್ಟು ಉಳಿದ ಸೀಟುಗಳನ್ನು ಮುಂದಿನ ಸುತ್ತಿಗೆ ಪರಿಗಣಿಸಲಾಗುತ್ತಿತ್ತು.

ಈಗ ಹೊಸದಾಗಿ ಸಿದ್ಧಪಡಿಸಿದ 'ಸೀಟು ಖಚಿತತೆ ಪತ್ರ' ನೀಡುವುದರಿಂದ ವಿದ್ಯಾರ್ಥಿಗಳು ಆ ಕಾಲೇಜಿಗೆ ಕಡ್ಡಾಯವಾಗಿ ಹೋಗಬೇಕಾಗುತ್ತದೆ. ಅಲ್ಲಿಗೆ ಹೋಗದಿದ್ದರೆ ಆ ಸೀಟನ್ನು ಉಳಿಕೆ ಸೀಟು ಎಂದು ಪರಿಗಣಿಸಿ, ಮುಂದಿನ ಸುತ್ತಿಗೆ ಪರಿಗಣಿಸಲಾಗುತ್ತದೆ.

ಪ್ರವೇಶ ಪತ್ರದಲ್ಲೇ ನಕಲಿ ಅಭ್ಯರ್ಥಿಯ ಭಾವಚಿತ್ರ ಲಗತ್ತಿಸಿ, ಪರೀಕ್ಷೆ ಬರೆಯುವ ಜಾಲವನ್ನು ನಿಯಂತ್ರಿಸಲು ಈ ವಿಧಾನ ಸಹಕಾರಿಯಾಗಲಿದೆ ಎನ್ನುತ್ತದೆ ಕೆಇಎ.

ಚಾಯ್ಸ್–4ಕ್ಕೆ ಮತ್ತೆ ಅವಕಾಶ

ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಕಾಲೇಜುಗಳನ್ನು ಆದ್ಯತೆಯ ಮೇಲೆ ನಮೂದಿಸಿದ್ದ ವಿದ್ಯಾರ್ಥಿಗಳಿಗೆ ತಾವು ಬಯಸಿದ ಕಾಲೇಜುಗಳು ಸಿಗದೇ ಇದ್ದಾಗ ಚಾಯ್ಸ್ 4 ನಮೂದಿಸಿ ಆಯ್ಕೆ ಪ್ರಕ್ರಿಯೆಯಿಂದ ಹೊರಗೆ ಹೋಗುತ್ತಾರೆ.

ಕೆಲವೊಮ್ಮೆ ಕಣ್ತಪ್ಪಿನಿಂದ ಚಾಯ್ಸ್ 4 ನಮೂದಿಸಿದರೂ, ಮುಂದಿನ ಸುತ್ತುಗಳಲ್ಲಿ ಅವರಿಗೆ ಅವಕಾಶ ಸಿಗುತ್ತಿರಲಿಲ್ಲ. ಪ್ರತಿ ವರ್ಷವೂ ಇಂತಹ ಸಾವಿರಾರು ವಿದ್ಯಾರ್ಥಿಗಳು ಕೆಇಎ ಕಚೇರಿಗೆ ಅಲೆಯುತ್ತಿದ್ದರು. ಈಗ ಪರಿಚಯಿಸಿರುವ ಹೊಸ ವಿಧಾನದಲ್ಲಿ ಚಾಯ್ಸ್ 4 ನಮೂದಿಸಿದವರೂ, ₹750 ದಂಡ ಪಾವತಿಸಿ ಮತ್ತೆ ಸೀಟು ಆಯ್ಕೆ ಮಾಡಿ ಕೊಳ್ಳಬಹುದು.

ನಾಲ್ಕು ವರ್ಷದ ಹಿಂದಿನ ಪ್ರಕರಣ ಮುನ್ನೆಲೆಗೆ

'ಕೊಲೆಯಾಗಿದ್ದ' ಮಹಿಳೆ ಪ್ರೇಮಿಯೊಂದಿಗೆ ಪತ್ತೆ

ಪ್ರಜಾವಾಣಿ ವಾರ್ತೆ

ಬೆಟ್ಟದಪುರ (ಮೈಸೂರು ಜಿಲ್ಲೆ): ಪತ್ನಿಯನ್ನು ಕೊಲೆ ಮಾಡಿದ ಆರೋಪದಲ್ಲಿ ಪತಿಯು ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸುತ್ತಿರುವಾಗಲೇ, ಆಕೆ ತನ್ನ ಪ್ರಿಯಕರನೊಂದಿಗೆ ಪತ್ತೆಯಾಗಿದ್ದಾರೆ. ಪ್ರಕರಣದಲ್ಲಿ ಎರಡು ವರ್ಷ ವಿಚಾರಣಾಧೀನ ಕೈದಿಯಾಗಿ ಜೈಲಿನಲ್ಲಿದ್ದ ಪತಿಯು ಈಚೆಗಷ್ಟೇ ಜಾಮೀನು ಪಡೆದು ಬಿಡುಗಡೆಗೊಂಡಿದ್ದರು.

ನಾಲ್ಕು ವರ್ಷಗಳ ಹಿಂದೆ ಕೊಲೆಯಾಗಿದ್ದಾರೆ ಎಂದು ಸುದ್ದಿಯಾಗಿದ್ದ ಮಹಿಳೆ ಮಲ್ಲಿಗೆ, ಪ್ರಿಯಕರ ಗಣೇಶ್‌ನೊಂದಿಗೆ ಪತ್ತೆಯಾಗಿದ್ದು, ಜಿಲ್ಲಾ ಸೆಷನ್ಸ್ ನ್ಯಾಯಾಲವು ಪ್ರಕರಣದ ಕುರಿತು 15 ದಿನಗಳೊಳಗೆ ವಿವರಣೆ ನೀಡುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಿದೆ.

'ಅವಸರದ ವರದಿ'

'ಮೃತದೇಹ ಹಾಗೂ ಮಲ್ಲಿಗೆ ಅವರ ತಾಯಿಯ ರಕ್ತದ ಡಿಎನ್‌ಎ ಪರೀಕ್ಷೆಯ ವರದಿ ಬರುವ ಮುನ್ನವೇ ಪೊಲೀಸರು ನ್ಯಾಯಾಲಯಕ್ಕೆ ಅಂತಿಮ ವರದಿ ನೀಡಿದ್ದರು. ಹೈಕೋರ್ಟ್‌ಗೆ ಈ ಬಗ್ಗೆ ಅರ್ಜಿ ಸಲ್ಲಿಸಿದಾಗ ಡಿಎನ್‌ಎ ಹೊಂದಾಣಿಕೆಯಿಲ್ಲ ಎಂಬುದು ತಿಳಿಯಿತು. ಮಡಿಕೇರಿಯಲ್ಲಿ ಮಲ್ಲಿಗೆ ಹಾಗೂ ಗಣೇಶ್‌ನನ್ನು ವಶಕ್ಕೆ ಪಡೆದಿದ್ದರು. ಅವರನ್ನು ನಮಗೆ ತೋರಿಸುವಂತೆ ಕೇಳಿದಾಗ ಪೊಲೀಸರು ಆಕೆಯನ್ನು ನಮಗೆ ತೋರಿಸಲಿಲ್ಲ' ಎಂದು ಸುರೇಶ್ ಪರ ವಕೀಲ ಪಾಂಡು ತಿಳಿಸಿದರು.

'ಪ್ರಕರಣ ಮುಚ್ಚಿ ಹಾಕುತ್ತಾರೆಂಬ ಭಯದಿಂದ ನ್ಯಾಯಾಧೀಶರ ಮೂಲಕ ಆಕೆ ಯಾರು ಎಂಬ ಮಾಹಿತಿ ಪಡೆದೆ. ನ್ಯಾಯಾಲಯವು ಘಟನೆಯನ್ನು ಗಂಭೀರವಾಗಿ ಪರಿಗಣಿಸಿದೆ. ಮಹಿಳೆಯು ಮಡಿಕೇರಿಯಿಂದ ಸುಮಾರು 24 ಕಿ.ಮೀ ದೂರದಲ್ಲಿರುವ ಶೆಟ್ಟಿಹಳ್ಳಿಯಲ್ಲಿ ವಾಸವಿದ್ದಾರೆ. ಆದರೂ ಆಕೆಯ ಪತ್ತೆಗೆ ಪೊಲೀಸರು ಕ್ರಮ ವಹಿಸದಿರುವುದು ವಿಷಾದನೀಯ' ಎಂದು ಹೇಳಿದರು.

ವಿವರ: '2021ರ ಜುಲೈನಲ್ಲಿ ಕುಶಾಲನಗರದ ಬಸವನಹಳ್ಳಿ ಹೊಸ ಬಡಾವಣೆಯ ನಿವಾಸಿ ಮಲ್ಲಿಗೆ ಕಾಣೆಯಾಗಿದ್ದಾರೆಂದು ಪ್ರಕರಣ ದಾಖಲಾಗಿತ್ತು. ಅದೇ ತಿಂಗಳ 18ರಂದು ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಠಾಣಾ ವ್ಯಾಪ್ತಿಯ ಶಾನುಭೋಗನಹಳ್ಳಿಯ ಕಾಲುವೆಯಲ್ಲಿ ಕೊಳೆತ ಸ್ಥಿತಿಯಲ್ಲಿ ಮಹಿಳೆಯೊಬ್ಬರ ಶವ ಪತ್ತೆಯಾಗಿತ್ತು. ಅದು ಮಗಳದ್ದೇ ಎಂದು ಮಲ್ಲಿಗೆಯ ತಾಯಿ ಗುರುತಿಸಿದ್ದರು. ಪತಿ ಸುರೇಶ್ ಅವರನ್ನು ವಿಚಾರಣೆ ನಡೆಸಿದ ಪೊಲೀಸರು, ಆತ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿರುವುದಾಗಿ ತಿಳಿಸಿ, ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಮಹಿಳೆಯು ಏಪ್ರಿಲ್ 1ರಂದು ಕುಶಾಲನಗರದ ಹೋಟೆಲ್ ಒಂದರಲ್ಲಿ ಇರುವುದರ ಬಗ್ಗೆ ಸ್ನೇಹಿತರು ನೀಡಿದ ಮಾಹಿತಿಯನ್ನು ಸುರೇಶ್ ಪೊಲೀಸರ ಗಮನಕ್ಕೆ ತಂದಿದ್ದರು. ಪ್ರಿಯಕರ ಗಣೇಶ್ ಜೊತೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ದೇವಾಲಯಕ್ಕೆ ತೆರಳುತ್ತಿರುವಾಗ ಮಡಿಕೇರಿ ಪೊಲೀಸರು ಆಕೆಯನ್ನು ವಶಕ್ಕೆ ಪಡೆದು, ಕುಶಾಲನಗರ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ.

ಕನ್ನಡ ವಿದ್ವತ್ ಲೋಕದ 'ಪ್ರಧಾನ'

• ಬೈರಮಂಗಲ ರಾಮೇಗೌಡ


ಪಿ.ವಿ. ನಾರಾಯಣ

ಪಿ.ವಿ.ನಾರಾಯಣ ಅವರ ಹೆಸರಿನ ಪ್ರಾರಂಭದಲ್ಲಿರುವ 'ಪಿ' ಎನ್ನುವುದು ಹೈದರಾಲಿಯ ಆಸ್ಥಾನದಲ್ಲಿ 'ಅಮಾತ್ಯ'ನಾಗಿದ್ದ, ಪಾಂಡಿತ್ಯಕ್ಕೆ ಹೆಸರಾಗಿ ಹಲವು ಕನ್ನಡ ಸಂಸ್ಕೃತ ಕೃತಿಗಳನ್ನು ರಚಿಸಿದ್ದ ಕವಿ ವೆಂಕಪ್ಪಯ್ಯನ ಮನೆತನ 'ಪ್ರಧಾನ್' ಅನ್ನು ಸಂಕೇತಿಸುತ್ತದೆ. ಅಮಾತ್ಯನಾಗಿಯೂ 'ಶ್ರೀರಾಮ ಕಥಾಮೃತ'ದಂಥ ಬೃಹತ್ ಕಾವ್ಯವನ್ನು ರಚಿಸಿದ ಪ್ರಧಾನ್ ವೆಂಕಪ್ಪಯ್ಯನವರ ವಂಶಕ್ಕೆ ಸೇರಿದವರು ನಾವು ಎಂದು ನಾರಾಯಣ ಸಂದರ್ಭ ಬಂದಾಗಲೆಲ್ಲ ಹೆಮ್ಮೆಯಿಂದ ಚಟಾಕಿ ಹಾರಿಸುತ್ತಿದ್ದುದುಂಟು. ವೆಂಕಪ್ಪಯ್ಯನ ಆ ಕೃತಿಯನ್ನು ನಾರಾಯಣ ಅವರೇ ಇತ್ತೀಚೆಗೆ 'ಯುದ್ಧಕಾಂಡ' ಹೆಸರಿನಲ್ಲಿ ಸಂಪಾದಿಸಿದರು. 82 ವರ್ಷಗಳನ್ನು ಪೂರೈಸಿ ಮುನ್ನಡೆದಿದ್ದ ನಾರಾಯಣ ಕನ್ನಡದ ಬಹುದೊಡ್ಡ ವಿದ್ವತ್ ಪ್ರತಿಭೆಯಾಗಿದ್ದರು. ವಿಮರ್ಶೆ, ಸಂಶೋಧನೆ, ಪ್ರವಾಸ ಸಾಹಿತ್ಯ, ಕಾದಂಬರಿ, ನಿಘಂಟು, ಅನುವಾದ, ಸಂಪಾದನೆ ಪ್ರಕಾರಗಳಲ್ಲಿ 80ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದವರು. ವಿಜಯ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ನಾರಾಯಣ ಕನ್ನಡದ ಅತ್ಯುತ್ತಮ ಮೇಷ್ಟ್ರುಗಳಲ್ಲಿ ಒಬ್ಬರೆಂದು ಹೆಸರಾದವರು. ನಿವೃತ್ತರಾಗಿ ಮೂರು ದಶಕಗಳಾದರೂ ರಾಜ್ಯದಾದ್ಯಂತ ಮತ್ತು ದೇಶ ವಿದೇಶಗಳಲ್ಲಿರುವ ವಿದ್ಯಾರ್ಥಿಗಳು ಅವರೊಂದಿಗೆ ಇತ್ತೀಚಿನವರೆಗೂ ಸಂಪರ್ಕವಿಟ್ಟುಕೊಂಡಿದ್ದುದೇ ಅವರ ಜನಪ್ರಿಯತೆಗೆ ಸಾಕ್ಷ್ಯ.

ವಚನ ಸಾಹಿತ್ಯ ಪಿ.ವಿ. ನಾರಾಯಣ ಅವರಿಗೆ ಅತ್ಯಂತ ಪ್ರಿಯವಾದದ್ದು. 'ಮನುಷ್ಯನ ಬದುಕನ್ನು ತಿದ್ದುವ, ಒಡೆದುಹೋಗಿರುವ ಮನಸ್ಸುಗಳನ್ನು ಬೆಸುಗೆ ಹಾಕುವ ಶಕ್ತಿ ವಚನ ಸಾಹಿತ್ಯಕ್ಕಿದೆ. ಆದರೆ, ಅದನ್ನು ಒಳಹೊಕ್ಕು ನೋಡುವ, ಅರ್ಥೈಸುವ, ಸರಳವಾಗಿ ಜನಸಾಮಾನ್ಯರಿಗೆ ಮುಟ್ಟಿಸುವ ಕೆಲಸ ಆಗಿಲ್ಲ. ಈ ಕೆಲಸವನ್ನು ಮಾಡಬೇಕಾದ ಮಠಾಧಿಪತಿಗಳು ಮತ್ತು ಸಂಶೋಧಕ-ವಿದ್ವಾಂಸರು ಹೆಸರಿನ ಹಿಂದೆಯೂ ಸಂಪಾದನೆಯ ಹಿಂದೆಯೂ ಬಿದ್ದಿದ್ದಾರೆ' ಎಂದು ಭಾಷಣಗಳಲ್ಲಿ ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳುತ್ತಿದ್ದುದುಂಟು. ಈ ಅಸಮಾಧಾನ ಪ್ರಕಟಣೆಯ ಒಂದು ಭಾಗವಾಗಿಯೇ 12ನೇ ಶತಮಾನದಲ್ಲಿ ರಾಜಕಾರಣದ ಮೇಲೆ ಧರ್ಮ ಸವಾರಿ ಮಾಡಲು ಹೊರಟಿದ್ದರ ಪರಿಣಾಮ ಏನಾಗಿತ್ತು ಎನ್ನುವುದನ್ನು ವರ್ತಮಾನದ ಸಂದರ್ಭಕ್ಕೆ ಅನ್ವಯಿಸುವಂತೆ 'ಧರ್ಮಕಾರಣ'ವನ್ನು ಒಂದು ರೂಪಕ ಶಕ್ತಿಯ ಕಾದಂಬರಿಯಾಗಿ ರೂಪಿಸಿದ್ದರು. ದುರದೃಷ್ಟವಶಾತ್ ಅದು ಕೆಲವರ ಕೆಂಗಣ್ಣಿಗೆ ಗುರಿಯಾಗಿ ನಿಷೇಧಕ್ಕೊಳಗಾಯಿತು.

ಕಾದಂಬರಿ ನಿಷೇಧದ ಶಿಕ್ಷೆಗೆ ಒಳಗಾಗಿದ್ದು ಅವರೊಳಗಿದ್ದ ಸಾತ್ವಿಕ ಸಿಟ್ಟನ್ನು ತಣ್ಣಗಾಗಿಸಲು ಸಾಧ್ಯವಿರಲಿಲ್ಲ. ಆದ್ದರಿಂದ ವಚನ ಸಾಹಿತ್ಯವನ್ನು ಕುರಿತು ವೈಚಾರಿಕ ಒಳನೋಟವಿರುವ ಬಹು ಆಯಾಮಗಳ ಲೇಖನಗಳನ್ನು ಬರೆದು ಪುಸ್ತಕಗಳನ್ನು ಹೊರತಂದರು. ಬಳ್ಳಿಗಾವೆ, ಕಾಯಕತತ್ವ, ವಚನ ಚಳವಳಿ, ಉರಿಲಿಂಗ ಪೆದ್ದಿ, ವಚನ ಸಾಹಿತ್ಯ, ವಚನ ವ್ಯಾಸಂಗ, ವಚನ ನಿರ್ವಚನ, ವಚನ ಪರಿಸರ, ವಚನ ಸಮಗ್ರ, ವಚನ ಸಮಸ್ತ-ಇವೆಲ್ಲ ವಚನ ಸಾಹಿತ್ಯಕ್ಕೆ ಮಾತ್ರವಲ್ಲ, ನಾಡಿನ ಸಾಂಸ್ಕೃತಿಕ ಮತ್ತು ವೈಚಾರಿಕ ಶ್ರೀಮಂತಿಕೆಗೆ ಅತ್ಯುತ್ತಮ ಕೊಡುಗೆಯಾಗಬಲ್ಲ ಕೃತಿಗಳು. ವಿದ್ಯಾರ್ಥಿಗಳಿಂದ ಹಿಡಿದು ಕಾವ್ಯಾಸಕ್ತ ಸಹೃದಯರ ವರೆಗೆ ಹಳಗನ್ನಡದ ಓದು ಸುಲಲಿತವಾಗಿಯೂ ಪ್ರಿಯವಾಗುವಂತೆಯೂ ಇರಬೇಕೆಂದು ಬಯಸಿ ಅದಕ್ಕೆ ಅನುಕೂಲವಾಗುವಂತೆ ಐದು ವಿಭಿನ್ನ ಬಗೆಯ ನಿಘಂಟುಗಳನ್ನು ನಾರಾಯಣ ಕನ್ನಡಕ್ಕೆ ಕೊಟ್ಟಿದ್ದಾರೆ. ಇವು, ಅವರ ಹಳಗನ್ನಡದ ತಲಸ್ಪರ್ಶಿ ಅಧ್ಯಯನದ ಸಾಕ್ಷಿಗಲ್ಲುಗಳು. ಅಪರೂಪದ ಹಳಗನ್ನಡ ಕೃತಿಗಳನ್ನು ಮತ್ತು ಮಹತ್ವದ ಇಂಗ್ಲಿಷ್ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ.

ಸಂಪಾದನೆ ಮತ್ತು ಸಂಶೋಧನೆಯ ವಿಚಾರದಲ್ಲಿ ಪರಾವಲಂಬನೆಯನ್ನು ಬಯಸದೆ ಒಂಟಿ ಸಲಗದಂತೆ ನುಗ್ಗಿ ಸಾಹಿತ್ಯಲೋಕ ಬೆರಗಾಗುವಂಥ ಕೆಲಸವನ್ನು ನಾರಾಯಣ ಮಾಡಿದ್ದಾರೆ. ಕೈ ಬೆರಳುಗಳಿಂದ ಬರೆಯುವುದು ಕಷ್ಟವಾಗುತ್ತಿದೆ ಎನಿಸಿದಾಗ ಕಂಪ್ಯೂಟರಿನ ಕೀಲಿಮಣೆಯ ಮೇಲೆ ಗುಂಡಿಯೊತ್ತುವುದನ್ನು ಕಲಿತು ಬೃಹತ್ ಕೃತಿಗಳನ್ನು ಹೊರತಂದು ಇಳಿವಯಸ್ಸಿನ ಸಮಕಾಲೀನರನೇಕರ ಹುಬ್ಬು ಮೇಲೇರುವಂತೆ ಮಾಡಿದ್ದಾರೆ. ಪಿ.ವಿ. ನಾರಾಯಣ ಭೌತಿಕವಾಗಿ ಈಗ ನಮ್ಮೆದುರಿಗಿಲ್ಲದಿದ್ದರೂ ಅಧ್ಯಾಪಕರು, ಸಂಶೋಧಕರು, ವಿಮರ್ಶಕರು, ವಿದ್ವಾಂಸರು ಮತ್ತೆ ಮತ್ತೆ ತಮ್ಮ ಕೊರತೆಗಳನ್ನು ತುಂಬಿಕೊಳ್ಳಲು, ಹೊಸ ಹೊಳಹುಗಳನ್ನು ಪಡೆಯಲು ಆಶ್ರಯಿಸಲೇಬೇಕಾದ ಮಹತ್ವದ ಕೃತಿಗಳ ಮೂಲಕ, ಕನ್ನಡ ಚಳವಳಿಗಾರರಾಗಿ ನಡೆಸಿದ ಧೀಮಂತ ಹೋರಾಟಗಳ ಮೂಲಕ, ಬಿ.ಎಂ.ಶ್ರೀ. ಪ್ರತಿಷ್ಠಾನವನ್ನು ನಾಡಿನ ಸಾಂಸ್ಕೃತಿಕ ಆಸ್ತಿಯಾಗುವಂತೆ ಕಟ್ಟುವ ಮೂಲಕ ಜೀವಂತವಾಗಿದ್ದಾರೆ. ಕನ್ನಡದ ಹಿರಿಯ ವಿದ್ವಾಂಸರಾದ ಪ್ರೊ. ಅ.ರಾ. ಮಿತ್ರ ಒಂದು ಕಡೆ ಹೇಳಿರುವ ಮಾತು: 'ಕನ್ನಡ ಚಿಂತಕರ ಚಾವಡಿಯ ಟಂಕಸಾಲೆ ತೆಗೆದರೆ ಅದರಲ್ಲಿ ಪ್ರಧಾನವಾಗಿ ಹೆಕ್ಕಬೇಕಾದ ನಾಣ್ಯವೆಂದರೆ ಡಾ. ಪಿ.ವಿ. ನಾರಾಯಣ. ವಿದ್ವಾಂಸರಿಗೆ ಸದಾ ಸಹಾಯಕವಾಗಿಯೇ ಇರುವ ಆಪ್ತರು ಮತ್ತು ಸ್ನೇಹಜೀವಿ'. ಅವರ ಪ್ರೀತಿ ಸ್ನೇಹಗಳ ಮಾಧುರ್ಯವನ್ನು ಹಿರಿಯ ಕಿರಿಯ ವಿದ್ವಾಂಸರನೇಕರು ಸವಿದಿದ್ದಾರೆ. ❖

ನುಡಿ ನಮನ

ಸಾಹಿತಿ ಪಿ.ವಿ. ನಾರಾಯಣ ಇನ್ನಿಲ್ಲ

ಬೆಂಗಳೂರು: ಸಾಹಿತಿ ಪಿ.ವಿ. ನಾರಾಯಣ (82) ಅವರು ಗುರುವಾರ ಬೆಳಿಗ್ಗೆ ನಿಧನರಾದರು.

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಮೃತರಿಗೆ ಪತ್ನಿ ಸುಧಾಮಣಿ, ಪುತ್ರ ಉಲ್ಲಾಸ್ ಇದ್ದಾರೆ. ಜಯನಗರದ 8ನೇ ಬ್ಲಾಕ್‌ನಲ್ಲಿರುವ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಬನಶಂಕರಿ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಪಿ.ವಿ. ನಾರಾಯಣ ಅವರು ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ 32 ವರ್ಷ ಕನ್ನಡ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ, ನಿವೃತ್ತರಾಗಿದ್ದರು. ಗೋಕಾಕ್ ಚಳವಳಿ ಸೇರಿ ಕನ್ನಡ ಪರ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

1942ರ ಡಿಸೆಂಬರ್ 18ರಂದು ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನಲ್ಲಿ ಜನಿಸಿದ ಅವರು, ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡದಲ್ಲಿ ಸ್ನಾತಕೋತ್ತರ ಪದವಿ, ಕರ್ನಾಟಕ ವಿಶ್ವವಿದ್ಯಾಲಯ ದಿಂದ ಇಂಗ್ಲಿಷ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಹಾಗೂ 'ವಚನ ಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ' ಮಹಾಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದಿದ್ದರು.

ಅವರ ಸಂಶೋಧನೆ ಮತ್ತು ವಿಮರ್ಶೆಯ ಬಹುಭಾಗ ವಚನ ಸಾಹಿತ್ಯಕ್ಕೆ ಸಂಬಂಧಿಸಿದ್ದಾಗಿದೆ. 'ಕಾಯಕತತ್ವ', 'ಚಂಪೂ ಕವಿಗಳು', 'ವಚನ ಚಳವಳಿ', 'ವಚನ ವ್ಯಾಸಂಗ', 'ಪದ್ಮಿನೀ ಪರಿಣಯ', 'ಅನುವಾದ- ಮದುವೆ ಮತ್ತು ನೀತಿ', 'ಹನ್ನೆರಡನೇ ರಾತ್ರಿ', 'ಅಶ್ವತ್ಥಾಮನ್', 'ಬುವಿಯ ಬಸಿರಿಗೆ ಪಯಣ', 'ಪಂಪ ರಾಮಾಯಣ', 'ಅಂತರ', 'ವಿಕಾಸ', 'ಶೋಧನೆ', 'ನಿರ್ಧಾರ', 'ಧರ್ಮಕಾರಣ' ಮೊದಲಾದ ಕೃತಿಗಳನ್ನು ಪ್ರಕಟಿಸಿದ್ದರು.

ಸಾಹಿತ್ಯ ಮತ್ತು ಸಂಶೋಧನಾ ಸಂಸ್ಥೆಯಾದ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾಗಿ, ಉದಯಭಾನು ಕಲಾ ಸಂಘದಲ್ಲಿ ಶಾಸ್ತ್ರೀಯ ಕನ್ನಡ ಅಧ್ಯಯನಾಂಗದ ಡೀನ್ ಆಗಿಯೂ ಕಾರ್ಯನಿರ್ವಹಿಸಿದ್ದರು. ಅವರು ತಮ್ಮ ಕೊನೆಯ ದಿನಗಳವರೆಗೂ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು. ಪ್ರಶಸ್ತಿ ಪುರಸ್ಕಾರಗಳ ಬಗೆಗೆ ತಿರಸ್ಕಾರ ಭಾವವನ್ನು ಹೊಂದಿದ್ದ ಅವರು, ಅರಸಿ ಬಂದಿದ್ದ ಹಲವು ಪ್ರಶಸ್ತಿಗಳನ್ನು ನಿರಾಕರಿಸಿದ್ದರು.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_KOMATSU_HYDRAULIC_EXCAVATOR_MODEL_PC_130_7
YOM – 2021
Engine No 522469
2) CB_KOMATSU_HYDRAULIC_EXCAVATOR_MODEL_PC_130_7
YOM – 2021
Engine No 522450
3) CB_ASHOK_LEYLAND_HE_1915_5200_FBV
YOM –
Reg No – KA17AB0807
4) CB_Ashok Leyland Dost GOODS
YOM – 2023
Reg No – KA09AA4938
5) CB_MAHINDRA_BOLERO_MAXXCITY_PICKUP
YOM –
Reg No – KA21C6342
6) CB_MAHINDRA_BOLERO_MAXXCITY_PICKUP
YOM – 2024
Reg No – KA09AA8718
7) CB_AL_GM4220_CHASSIS
YOM – 2023
Reg No – KA28AA8987
8) CB_ASHOK LEYLAND 3718IL
YOM – 2017
Reg No – KA29B4584
9) CB_ASHOK LEYLAND 3718IL
YOM – 2018
Reg No – KA16D0658
10) CB_Ashok Leyland Dost GOODS
YOM – 2022
Reg No – KA09AA3449
11) CB_SUPRO_MINI_TRUCK
YOM – 2023
Reg No – KA17AA8126
12) CB_TIPPER_SIGNA_4225_OF_TATA
YOM – 2019
Reg No – KA52A9339
13) CB_BACKHOE_LOADER_2WD_BSIV_3DX_PLUS_JCB
YOM – -
Chassis No.HAR3DXS4K03388512
Engine No. H00425843
14) CB_FULLY_BUILD_GOODS_BODY_PRO_2110_VOLVO_EICHER
YOM – -
Reg No – KA13D8919
15) CB_ASHOK LEYLAND 3718IL
YOM – 2019
Reg No – KA568538
16) Excavator - KOBELCO – CB_SK380_EXC
YOM – 2019
CHASSIS - J08ETM32521
Engine No J08ETM32521
(As is where is condition)

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 04.04.2025

(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact: Arunlaxman Kokare
Kotak Mahindra Bank Ltd.
Contact / 080 - 61564249

ಗಿಗ್ ಕಾರ್ಮಿಕರ ಮಂಡಳಿ: ಶೇ 5 ಸೆಸ್ ಸಂಗ್ರಹ

ನವದೆಹಲಿ: ಕರ್ನಾಟಕದಲ್ಲಿ ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ ರಚಿಸಲು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಗುರುವಾರ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಈ ಕಲ್ಯಾಣ ಮಂಡಳಿಗೆ ಸಂಬಂಧಿತ ಸಂಸ್ಥೆಗಳಿಂದ ಶೇ 5ರಷ್ಟು ಸೆಸ್ ಸಂಗ್ರಹಿಸಲಾಗುತ್ತದೆ. ಉಳಿದ ಅಗತ್ಯ ಮೊತ್ತವನ್ನು ರಾಜ್ಯ ಸರ್ಕಾರ ಭರಿಸಲಿದೆ. ಈ ಮೊತ್ತದಲ್ಲಿ ಕಾರ್ಮಿಕರ ಕಲ್ಯಾಣಕ್ಕೆ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ. ಈ ಎಲ್ಲ ಅಂಶಗಳನ್ನು ಒಳಗೊಂಡ ಮಸೂದೆ ಸಿದ್ಧಪಡಿಸಿ ಸಚಿವ ಸಂಪುಟದ ಅನುಮೋದನೆ ಪಡೆಯಲು ನಿರ್ಧರಿಸಲಾಗಿದೆ.

ಅಮೆಜಾನ್, ಫ್ಲಿಪ್ ಕಾರ್ಟ್ ಸೇರಿ ಹತ್ತಾರು ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರ ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರ ಅಗತ್ಯ ಕ್ರಮಗಳಿಗಾಗಿ ಮುಂದಾಗಿತ್ತು. ಭಾರತ್ ಜೋಡೋ ಯಾತ್ರೆ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರೂ ಗಿಗ್ ಕಾರ್ಮಿಕರ ಕಲ್ಯಾಣಕ್ಕಾಗಿ ಧ್ವನಿ ಎತ್ತಿದ್ದರು.

ನದಿಗಳ ಜೋಡಣೆ: ರಾಜ್ಯ ಷರತ್ತು

ನೀರಿನ ಪಾಲು ಹೆಚ್ಚಿಸದಿದ್ದರೆ ಕರಡುವಿಗೆ ಸಹಿ ಹಾಕುವುದಿಲ್ಲ: ರಾಜ್ಯ ಸ್ಪಷ್ಟೋಕ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಗೋದಾವರಿ–ಕೃಷ್ಣಾ–ಕಾವೇರಿ ನದಿಗಳ ಜೋಡಣೆಯಿಂದ ರಾಜ್ಯಕ್ಕೆ ಕೇವಲ 2 ಟಿಎಂಸಿ ಅಡಿ ನೀರು ಲಭ್ಯವಾಗಲಿದ್ದು, ಇದು ಘೋರ ಅನ್ಯಾಯ. ನದಿ ಜೋಡಣೆಯ ಪ್ರಸ್ತಾವವನ್ನು ಪರಿಷ್ಕರಿಸಿ ರಾಜ್ಯಕ್ಕೆ ನ್ಯಾಯಯುತ ನೀರಿನ ಹಂಚಿಕೆ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದರು.

ರಾಜ್ಯದ ವಿವಿಧ ನೀರಾವರಿ ಯೋಜನೆಗಳಿಗೆ ಅನುಮೋದನೆ ನೀಡುವಂತೆ ಆಗ್ರಹಿಸಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅವರಿಗೆ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಗುರುವಾರ ಮನವಿ ಸಲ್ಲಿಸಿದರು. 'ರಾಜ್ಯಕ್ಕೆ ನ್ಯಾಯಯುತ ಪಾಲು ಹಂಚಿಕೆಯಾಗುವ ತನಕ ನದಿ ಜೋಡಣೆಯ ಕರಡುವಿಗೆ ರಾಜ್ಯ ಸಹಿ ಹಾಕುವುದಿಲ್ಲ' ಎಂದೂ ಸ್ಪಷ್ಟಪಡಿಸಿದರು.

ನದಿ ಜೋಡಣೆಯಿಂದ ಐದು ರಾಜ್ಯಗಳಿಗೆ 147 ಟಿಎಂಸಿ ಅಡಿ ನೀರು ಹಂಚಿಕೆ ಮಾಡಲಾಗಿದೆ. ರಾಜ್ಯಕ್ಕೆ 15 ಟಿಎಂಸಿ ಅಡಿ ನೀರು ನೀಡಲು ಪ್ರಸ್ತಾಪಿಸಲಾಗಿದೆ. ಆದರೆ, ಕುಡಿಯುವ ನೀರಿನ ಉದ್ದೇಶಕ್ಕೆ ಸಿಗುವುದು 2 ಟಿಎಂಸಿ ಅಡಿ ಮಾತ್ರ. ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಅವರು ಪುನರುಚ್ಚರಿಸಿದರು.

ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಜತೆಗೆ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಚರ್ಚಿಸಿದರು. ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಇದ್ದರು

'ದೇಶದಲ್ಲಿ ರಾಜಸ್ಥಾನವನ್ನು ಹೊರತುಪಡಿಸಿದರೆ ಕರ್ನಾಟಕ ಅತಿ ಹೆಚ್ಚು ಒಣ ಭೂಮಿ ಹೊಂದಿರುವ ರಾಜ್ಯವಾಗಿದೆ. ಕರ್ನಾಟಕದಲ್ಲಿ ಕೈಗೆತ್ತಿಕೊಳ್ಳಲಾಗಿರುವ ಹಾಗೂ ಅನುಷ್ಠಾನಗೊಳಿಸಲಾಗಿರುವ ನೀರಾವರಿ ಯೋಜನೆಗಳು ರಾಜ್ಯದ ಕೃಷಿ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳಿಗೆ ಕಾರಣವಾಗಿವೆ. ಉತ್ಪಾದನೆಯಲ್ಲಿನ ಹೆಚ್ಚಳ, ಆಧುನಿಕ ತಂತ್ರಜ್ಞಾನದ ಸಮರ್ಪಕ ಬಳಕೆಯಿಂದ ನೀರಿನ ನಿರ್ವಹಣೆಯಲ್ಲಿ ಸುಧಾರಣೆ, ಹವಾಮಾನ ವೈಪರೀತ್ಯದ ನಿರ್ವಹಣೆ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಸಾಧಿಸಲು ಸಾಧ್ಯವಾಗಿದೆ. ರಾಜ್ಯ ಸರ್ಕಾರ ಕೃಷಿ ಉತ್ಪಾದನೆ ಹೆಚ್ಚಳ, ರೈತರ ಆದಾಯ ಹೆಚ್ಚಳ ಮಾಡಲು ಪೂರಕವಾಗಿ ನಿರಂತರ ಮತ್ತು ಸಮರ್ಪಕ ನೀರಾವರಿ ಪೂರೈಕೆಗೆ ಬದ್ಧವಾಗಿದೆ' ಎಂದು ಅವರು ಹೇಳಿದರು.

ಕೇಂದ್ರ ಸರ್ಕಾರದ ಅನುಮತಿಗಾಗಿ ಬಾಕಿಯಿರುವ ಮೇಕೆದಾಟು ಯೋಜನೆ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳ ಅನುಷ್ಠಾನದ ಕುರಿತು ತುರ್ತು ಗಮನ ಹರಿಸಬೇಕು. ಬಾಕಿಯಿರುವ ಎಲ್ಲ ನೀರಾವರಿ ಯೋಜನೆಗಳಿಗೆ/ಪ್ರಸ್ತಾವನೆಗಳಿಗೆ ಅನುಮತಿ ನೀಡಲು ಜಲಶಕ್ತಿ ಸಚಿವಾಲಯಕ್ಕೆ ನಿರ್ದೇಶನ ನೀಡಬೇಕು. ಈ ಯೋಜನೆಗಳು ರಾಜ್ಯದ ನೀರಾವರಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹಾಗೂ ರೈತರ ಕಲ್ಯಾಣಕ್ಕೆ ನೆರವಾಗಲಿವೆ' ಎಂದು ಅವರು ಹೇಳಿದರು.

ಪರಿಷತ್ ನಾಮನಿರ್ದೇಶನ ಮುಖ್ಯಮಂತ್ರಿಗೆ 'ಸ್ವಾತಂತ್ರ್ಯ'

ನವದೆಹಲಿ: ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ನಾಮನಿರ್ದೇಶನ ಮಾಡುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಗುರುವಾರ ಸಮಾಲೋಚಿಸಿದರು.

ಇದೇ ವೇಳೆ, ಕಾಂಗ್ರೆಸ್ ವಲಯದಲ್ಲಿ ತಲ್ಲಣ ಸೃಷ್ಟಿಸಿರುವ 'ಮಧುಬಲೆ ಪ್ರಕರಣ'ದ ಕುರಿತು ರಾಹುಲ್ ಅವರಿಗೆ ಮುಖ್ಯಮಂತ್ರಿ ವಿವರಣೆ ನೀಡಿದರು. ಈ ಪ್ರಕರಣದಿಂದಾಗಿ ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗಿದೆ ಎಂದು ರಾಹುಲ್ ಅಸಮಾಧಾನ ವ್ಯಕ್ತಪಡಿಸಿದರು.

'ಪರಿಷತ್‌ನ ನಾಲ್ಕು ಸ್ಥಾನಗಳಿಗೆ ನೂರಕ್ಕೂ ಅಧಿಕ ಆಕಾಂಕ್ಷಿಗಳಿದ್ದಾರೆ. ಸದಸ್ಯರ ಆಯ್ಕೆ ಸಂದರ್ಭದಲ್ಲಿ ಜಾತಿ ಸಮೀಕರಣಕ್ಕೆ ಒತ್ತು ನೀಡಬೇಕಿದೆ. ಈ ಹಿಂದೆ ಅವಕಾಶ ಸಿಗದ ಸಮುದಾಯಗಳಿಗೆ ಪ್ರಾತಿನಿಧ್ಯ ನೀಡಬೇಕಿದೆ. ಸಣ್ಣ ಸಣ್ಣ ಸಮುದಾಯಗಳಿಗೆ ಅವಕಾಶ ನೀಡಬೇಕೆಂಬ ಬೇಡಿಕೆ ಬಲವಾಗಿದೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಪಟ್ಟಿ ಸಿದ್ಧಪಡಿಸಲಾಗುವುದು. ಈ ವಿಷಯದಲ್ಲಿ ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು' ಎಂದು ಸಿದ್ದರಾಮಯ್ಯ ಮನವಿ ಮಾಡಿದರು. ಪರಿಷತ್ ಸದಸ್ಯರ ನಾಮನಿರ್ದೇಶನ ವಿಷಯದಲ್ಲಿ ಹೈಕಮಾಂಡ್ ಹಸ್ತಕ್ಷೇಪ ಮಾಡುವುದಿಲ್ಲ. ಈ ಬಗ್ಗೆ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಜತೆಗೆ ಚರ್ಚಿಸಿ ಪಟ್ಟಿ ಅಂತಿಮಗೊಳಿಸಿ. ಆ ಪಟ್ಟಿಗೆ ಶೀಘ್ರ ಅನುಮೋದನೆ ನೀಡಲಾಗುವುದು' ಎಂದು ರಾಹುಲ್ ಭರವಸೆ ನೀಡಿದರು ಎಂದು ಮೂಲಗಳು ತಿಳಿಸಿವೆ.

ಬಳಿಕ ಸಿದ್ದರಾಮಯ್ಯ ಅವರು ವೇಣುಗೋಪಾಲ್ ಅವರನ್ನು ಭೇಟಿ ಮಾಡಿದರು. ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಸಿದ್ದರಾಮಯ್ಯ ಚರ್ಚಿಸಿ ಪಟ್ಟಿ ಅಖೈರುಗೊಳಿಸುವರು. ನವದೆಹಲಿಯಲ್ಲಿ ಉಭಯ ನಾಯಕರು ಶುಕ್ರವಾರ ಈ ಬಗ್ಗೆ ಚರ್ಚೆ ನಡೆಸುವ ಸಾಧ್ಯತೆ ಇದೆ.

ಆಕಾಂಕ್ಷಿಗಳ ಲಾಬಿ: ಪರಿಷತ್ ಸದಸ್ಯರಾಗಲು ಕಾಂಗ್ರೆಸ್‌ನಲ್ಲಿ ಸುಮಾರು 200 ಮಂದಿ ಆಕಾಂಕ್ಷಿಗಳಿದ್ದಾರೆ. ರಾಷ್ಟ್ರ ರಾಜಧಾನಿಯಲ್ಲಿ ಕಳೆದ ಎರಡು ದಿನಗಳಿಂದ ಠಿಕಾಣಿ ಹೂಡಿರುವ 50ಕ್ಕೂ ಅಧಿಕ ಆಕಾಂಕ್ಷಿಗಳು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರನ್ನು ಭೇಟಿ ಮಾಡಿ ಲಾಬಿ ನಡೆಸಿದರು.

DH DECCAN HERALD | ಪ್ರಜಾವಾಣಿ

*ಪ್ರವೇಶ ಉಚಿತ

ಎಡ್ಯುವರ್ಸ್™

ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಪ್ರಾಯೋಜಕರು: AD6 advertising — ಮೊಬಿಲಿಟಿ ಪಾಲುದಾರರು: SUZUKI

ಬೆಂಗಳೂರು: 12-13 ಏಪ್ರಿಲ್ 2025 — ತ್ರಿಪುರವಾಸಿನಿ, ಅರಮನೆ ಮೈದಾನ

ಹುಬ್ಬಳ್ಳಿ: 19-20 ಏಪ್ರಿಲ್, 2025 — ನೆಹರು ಕ್ರೀಡಾಂಗಣ, ಜೆ.ಸಿ. ನಗರ



ಕೋಡ್ ಸ್ಕ್ಯಾನ್ ಮಾಡಿ

CET ಮತ್ತು NEET ಮಾಕ್ ಪರೀಕ್ಷೆಗಾಗಿ ಈಗಲೇ ನೋಂದಾಯಿಸಿ.

VISION NEET ACADEMY BENGALURU

ವಿವಿಧ ಸಾಧ್ಯತೆಗಳನ್ನು ಅನ್ವೇಷಿಸಿ, ಸರಿಯಾದ ಆಯ್ಕೆ ಮಾಡಿ!

ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಕರೆ! ಇದೀಗ ನಿಮ್ಮ ಗುರಿ ರೂಪಿಸಿಕೊಳ್ಳುವ ಮತ್ತು ಉಜ್ವಲ ಭವಿಷ್ಯದ ಮಾರ್ಗ ನಿರ್ಮಿಸಿಕೊಳ್ಳುವ ಸಮಯ ಬಂದಿದೆ!

ಕರ್ನಾಟಕದ ಅತ್ಯಂತ ಪ್ರತಿಷ್ಠಿತ ಎಜುಕೇಶನ್ ಎಕ್ಸ್ಪೋ – ಎಡ್ಯುವರ್ಸ್'ನಲ್ಲಿ ಪಾಲ್ಗೊಳ್ಳಿರಿ ಮತ್ತು ಅಸೀಮಿತ ಸಾಧ್ಯತೆಗಳ ಬಾಗಿಲುಗಳು ತೆರೆದಿರುವ ಅನುಭವ ನಿಮ್ಮದಾಗಿಸಿಕೊಳ್ಳಿ. ಅಸಂಖ್ಯಾತ ವಿಭಿನ್ನ ಕೋರ್ಸ್ಗಳ ಶ್ರೇಣಿಗಳ ಬಗ್ಗೆ ತಿಳಿಯಿರಿ ಮತ್ತು ಉನ್ನತ ದರ್ಜೆಯ ಸಂಸ್ಥೆಗಳು ನೀಡುತ್ತಿರುವ ವೈವಿಧ್ಯಮಯ ಆಯ್ಕೆಗಳಲ್ಲಿನ ನಿಮ್ಮ ನೆಚ್ಚಿನ ಕೋರ್ಸ್ ಆಯ್ಕೆ ಮಾಡಿಕೊಳ್ಳಿ. ನೀವು ಇಂಜಿನಿಯರ್, ಡಾಕ್ಟರ್, ಡಿಸೈನರ್ ಅಥವಾ ನೀವು ಪರ್ಯಾಯ ವೃತ್ತಿ ಆಯ್ಕೆಯನ್ನು ಆರಿಸಿಕೊಂಡು ಉದ್ಯಮಿಯಾಗಲು ಬಯಸುತ್ತೀದ್ದರೂ ಸರಿ, ಈ ನಮ್ಮ ಎಕ್ಸ್ಪೋ'ದಲ್ಲಿ ಅತ್ಯುತ್ತ ಶೈಕ್ಷಣಿಕ ಸಂಸ್ಥೆಗಳು ನಿಮಗೆ ಒಟ್ಟಾಗಿ ಲಭಿಸುತ್ತವೆ ಮತ್ತು ನಿಮ್ಮನ್ನು ಯಶಸ್ಸಿನೆಡೆಗೆ ಮುನ್ನಡೆಸಲು ಮಾರ್ಗದರ್ಶನ ನೀಡಲು ಸಿದ್ಧವಾಗಿರುತ್ತವೆ. ಸಿಇಟಿ ಮತ್ತು ಕಾಮೆಡ್ – ಕೆ ಸಿಬ್ಬಂದಿಗಳಿಂದ ಉಚಿತ ಸಮಾಲೋಚನಾ ಉಪನ್ಯಾಸಗಳನ್ನು ಪಡೆಯಿರಿ

ಸ್ಮಾರ್ಟ್ ವಾಚ್‌ಗಳು, ಇಯರ್‌ಪಾಡ್‌ಗಳು ಮತ್ತು ಇನ್ನೂ ಹೆಚ್ಚಿನ ವಿಶೇಷ ಬಹುಮಾನಗಳನ್ನು ಗೆಲ್ಲಿರಿ...

University Pavilion Sponsors

CHANAKYA UNIVERSITY · CMR UNIVERSITY · DAYANANDA SAGAR UNIVERSITY · GARDEN CITY UNIVERSITY · GITAM · ICFAI UNIVERSITY · MANIPAL ACADEMY of HIGHER EDUCATION BENGALURU CAMPUS · Parul University · PRESIDENCY UNIVERSITY · RAMAIAH UNIVERSITY OF APPLIED SCIENCES · REVA UNIVERSITY · SAPTHAGIRI NPS UNIVERSITY · SRM UNIVERSITY AP

Gold Sponsors

AMC · CAMBRIDGE INSTITUTE OF TECHNOLOGY · EAST POINT GROUP OF INSTITUTIONS · Karnataka Bank · KLE ACADEMY OF HIGHER EDUCATION AND RESEARCH, BELAGAVI · NAGARJUNA · The Oxford Educational Institutions

Silver Sponsors

EAST WEST GROUP OF INSTITUTIONS · MS ENGINEERING COLLEGE · RAJARAJESWARI COLLEGE OF ENGINEERING · SAMBHRAM INSTITUTIONS

Exhibitors

ACS COLLEGE OF ENGINEERING · AKASH · AMITY UNIVERSITY · AIMS INSTITUTES · AMRITA VISHWA VIDYAPEETHAM · ATRIA INSTITUTE OF TECHNOLOGY · ATRIA UNIVERSITY · DON BOSCO INSTITUTE OF TECHNOLOGY · Dr. S.R. Chandrasekhar Institute of Speech and Hearing · GULF MEDICAL UNIVERSITY · Global Minds INDIA · HARSHA · MIT-WPU · MIT WORLD PEACE UNIVERSITY · PES UNIVERSITY · RV UNIVERSITY · SAI VIDYA INSTITUTE OF TECHNOLOGY · S.E.A GROUP OF INSTITUTIONS · SHRI DHARMASTHALA MANJUNATHESHWARA EDUCATIONAL SOCIETY (TRUST) (R) · SOUNDARYA GROUP OF INSTITUTIONS · UNIVERSAL GROUP OF INSTITUTIONS · VVCE · VISION IAS

ಸ್ಪಾನ್ಸರ್‌ಶಿಪ್ ಮತ್ತು ಸ್ಟಾಲ್ ಬುಕ್ಕಿಂಗ್‌ಗಾಗಿ ಸಂಪರ್ಕಿಸಿ: ದಿನೇಶ್ - 9986006598 | ಬೆಂಗಳೂರು

ನಿರ್ಜನ ಪ್ರದೇಶಕ್ಕೆ ಎಳೆದೊಯ್ದು ಕೃತ್ಯ • ಘಟನೆ ನಡೆದ ಒಂದು ತಾಸಿನಲ್ಲಿ ಆರೋಪಿಗಳ ಸೆರೆ

ಅಣ್ಣನಿಗೆ ಥಳಿಸಿ ಯುವತಿ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಕೆಆರ್ ಪುರ: ರೈಲು ಇಳಿದು ಸಹೋದರನ ಜತೆ ಊರಿಗೆ ತೆರಳುತ್ತಿದ್ದ ಬಿಹಾರದ ಯುವತಿಯನ್ನು ಎಳೆದೊಯ್ದು ಅತ್ಯಾಚಾರ ಎಸಗಲಾಗಿದ್ದು, ಕೃತ್ಯ ಎಸಗಿದ ಇಬ್ಬರು ಆಟೊ ಚಾಲಕರನ್ನು ಮಹದೇವಪುರ ಠಾಣೆಯ ಪೊಲೀಸರು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ.

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಸೈಯದ್ ಮುಷರ್ ಹಾಗೂ ಆಸಿಫ್ ಬಂಧಿತರು. ಇಬ್ಬರೂ ನಗರದಲ್ಲಿ ಆಟೊ ಚಾಲಕರಾಗಿ ಕೆಲಸ ಮಾಡುತ್ತಿದ್ದರು.

ಬುಧವಾರ ರಾತ್ರಿ 1.30ರ ಸುಮಾರಿಗೆ ಠಾಣಾ ವ್ಯಾಪ್ತಿಯ ಹೊರ ವರ್ತುಲ ರಸ್ತೆಯ ಲೌರಿ ಮೆಮೋರಿಯಲ್ ಶಾಲೆ ಬಳಿಯ ನಿರ್ಜನ ಪ್ರದೇಶಕ್ಕೆ ಯುವತಿಯನ್ನು ಎಳೆದೊಯ್ದು ಆರೋಪಿಗಳು ಕೃತ್ಯ ಎಸಗಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಸಿಫ್

ಸೈಯದ್

ಊರಿಗೆ ಹೊರಟಿದ್ದ ಯುವತಿ: 'ತಿಂಗಳ ಹಿಂದೆ ಬಿಹಾರದಿಂದ ಕೇರಳಕ್ಕೆ ತೆರಳಿದ್ದ ಯುವತಿ, ಅಲ್ಲಿ ಎಲ್ಲಿಯೂ ಬಿಡುವಿನ ಕೆಲಸಕ್ಕೆ ಸೇರಿಕೊಂಡಿದ್ದರು. ಆದರೆ, ಯುವತಿಗೆ ಕೆಲಸ ಇಷ್ಟವಾಗದ ಕಾರಣ ಊರಿಗೆ ತೆರಳಲು ನಿರ್ಧರಿಸಿದ್ದರು. ಬಿಹಾರಕ್ಕೆ ವಾಪಸ್ ಹೋಗುವುದಾಗಿ ಸಂಬಂಧಿಕರ ಬಳಿ ಹೇಳಿದ್ದರು. ಎರ್ನಾಕುಲಂನಿಂದ ಬಿಹಾರದ ಬಾಕಾಕ್ಕೆ ಯಾವುದೇ ರೈಲುಗಳು ಇಲ್ಲ. ಹೀಗಾಗಿ ಬೆಂಗಳೂರಿಗೆ ತೆರಳಿ, ಅಲ್ಲಿಂದ ಬಿಹಾರಕ್ಕೆ ಹೋಗುವಂತೆ ಸಂಬಂಧಿಕರು ಸಲಹೆ ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಬೆಂಗಳೂರಿನಲ್ಲಿ ನೆಲಸಿದ್ದ ದೊಡ್ಡಮ್ಮನ ಮಗನಿಗೆ ಕರೆ ಮಾಡಿ, ಊರಿಗೆ ತೆರಳುವುದಕ್ಕೆ ಸಹಾಯ ಮಾಡುವಂತೆ ಯುವತಿ ಕೇಳಿದ್ದರು. ಕೆ.ಆರ್. ಪುರ ರೈಲು ನಿಲ್ದಾಣಕ್ಕೆ ಬಂದು ಇಳಿದರೆ, ಬಿಹಾರದ ರೈಲಿಗೆ ಹತ್ತಿಸುವುದಾಗಿ ಸಹೋದರ ಹೇಳಿದ್ದರು. ಬುಧವಾರ ರಾತ್ರಿ 7 ಗಂಟೆ ಸುಮಾರಿಗೆ ಸಹೋದರ ರೈಲು ನಿಲ್ದಾಣಕ್ಕೆ ಬಂದು ತಂಗಿಗಾಗಿ ಕಾಯುತ್ತಿದ್ದರು. ರಾತ್ರಿ 1.30ರ ಸುಮಾರಿಗೆ ರೈಲು ಬಂದಿತ್ತು. ಸಹೋದರ ಹಸಿವು ಆಗುತ್ತಿದೆ ಎಂದಾಗ, ಇಬ್ಬರೂ ನಡೆದುಕೊಂಡು ಊಟಕ್ಕೆಂದು ತೆರಳುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.

'ರೈಲು ನಿಲ್ದಾಣದ ಬಳಿಯ ರಸ್ತೆಯಲ್ಲಿ ಯಾವುದೇ ತಟ್ಟು ಗಾಡಿಗಳು ಸಿಗದ ಕಾರಣ ಇನ್ನೂ ಸ್ವಲ್ಪ ದೂರಕ್ಕೆ ತೆರಳುತ್ತಿದ್ದರು. ಇಬ್ಬರೂ ನಡೆದು ಹೋಗುತ್ತಿರುವುದನ್ನು ಗಮನಿಸಿದ ಆರೋಪಿಗಳು, ಹಿಂಬಾಲಿಸಿಕೊಂಡು ಹೋಗಿ ಅಡ್ಡಗಟ್ಟಿದ್ದಾರೆ. ಯುವತಿಯ ಸಹೋದರನಿಗೆ ಸೈಯದ್ ಥಳಿಸಿದ್ದಾನೆ. ಮತ್ತೊಬ್ಬ ಆರೋಪಿ ಆಸಿಫ್ ಯುವತಿಯನ್ನು ಎಳೆದೊಯ್ದು ಮೆಟ್ರೊ ಪಿಲ್ಲರ್ ಪಕ್ಕದಲ್ಲಿ ಅತ್ಯಾಚಾರ ಎಸಗಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ಆಟೊದಲ್ಲೇ ಮಲಗುತ್ತಿದ್ದ ಆರೋಪಿಗಳು

ಆಟೊ ಓಡಿಸುತ್ತಿದ್ದ ಆರೋಪಿಗಳು, ರಾತ್ರಿ ಹೊತ್ತಿನಲ್ಲಿ ಆಟೊದಲ್ಲೇ ಮಲಗುತ್ತಿದ್ದರು. ವಾರಕ್ಕೆ ಒಮ್ಮೆ ಊರಿಗೆ ಹೋಗಿ ಬರುತ್ತಿದ್ದರು ಎಂದು ಪೊಲೀಸರು ಹೇಳಿದರು.

ಪೊಲೀಸರಿಗೆ ಕರೆ ಮಾಡಿದ್ದ ಹುಡುಗ

'ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದ ಯುವಕ, ರಾತ್ರಿ ಅದೇ ಮಾರ್ಗವಾಗಿ ತೆರಳುತ್ತಿದ್ದರು. ಯುವತಿಯ ಕಿರುಚಾಟ ಕೇಳಿ ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಗಲಾಟೆ ಆಗುತ್ತಿರುವ ಮಾಹಿತಿ ನೀಡಿದ್ದರು. ಸ್ವಲ್ಪ ದೂರಕ್ಕೆ ತೆರಳಿದ ಬಳಿಕ ಹೊಯ್ಸಳ ಗಸ್ತು ವಾಹನ ಕಂಡು ಪೊಲೀಸರಿಗೆ ಮಾಹಿತಿ ನೀಡಿದ್ದರು. ಕಾರ್ಯ ಪ್ರವೃತ್ತರಾದ ಪೊಲೀಸರು ಸ್ಥಳಕ್ಕೆ ಬಂದಾಗ ಆರೋಪಿಗಳು ಪರಾರಿ ಆಗಿದ್ದರು. ಯುವತಿಯನ್ನು ಪೊಲೀಸರು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದರು. ನಂತರ ಕಾರ್ಯಾಚರಣೆ ನಡೆಸಿದ ಪೊಲೀಸರು, ಒಂದು ತಾಸಿನ ಒಳಗಾಗಿ ಆರೋಪಿಗಳನ್ನು ಬಂಧಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಸ್ಕೂಟರ್ ಚಾಲನೆ ವೇಳೆ ಐಪಿಎಲ್ ವೀಕ್ಷಣೆ: ಸವಾರನಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇ-ಸ್ಕೂಟರ್ ಚಾಲನೆ ವೇಳೆ ಮೊಬೈಲ್‌ನಲ್ಲಿ ಐಪಿಎಲ್ ಪಂದ್ಯ ವೀಕ್ಷಣೆ ಮಾಡುತ್ತಿದ್ದ ಸವಾರನಿಗೆ ಸಂಚಾರ ಪೊಲೀಸರು ದಂಡ ವಿಧಿಸಿದ್ದಾರೆ.

ಪ್ರಶಾಂತ್ ಎಂಬುವವರಿಗೆ ₹1,500 ದಂಡ ವಿಧಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು. ಏ.2ರಂದು ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುಜರಾತ್ ಟೈಟಾನ್ಸ್ ಮತ್ತು ಆರ್‌ಸಿಬಿ ತಂಡಗಳ ಮಧ್ಯೆ ಐಪಿಎಲ್ ಪಂದ್ಯವಿತ್ತು.

ಶಿವಾಜಿನಗರದ ಬ್ರಾಡ್ ವೇ ರಸ್ತೆಯಲ್ಲಿ ಪ್ರಶಾಂತ್ ತನ್ನ ಎಲೆಕ್ಟ್ರಿಕ್ ಸ್ಕೂಟರ್ ಚಾಲನೆ ಮಾಡುತ್ತಾ ಕ್ರಿಕೆಟ್ ಪಂದ್ಯ ವೀಕ್ಷಣೆ ಮಾಡುತ್ತಿದ್ದರು. ಅದನ್ನು ಸಾರ್ವಜನಿಕರೊಬ್ಬರು ಮೊಬೈಲ್‌ನಲ್ಲಿ ವಿಡಿಯೊ ಮಾಡಿ, 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು. ಅದನ್ನು ಸಂಚಾರ ಪೊಲೀಸರ ಖಾತೆಗೆ ಟ್ಯಾಗ್ ಮಾಡಿ ಸವಾರನ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು.

ಘಟನಾ ಸ್ಥಳದ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿರುವ ದೃಶ್ಯಗಳನ್ನು ಆಧರಿಸಿ ಪ್ರಶಾಂತ್ ಅವರನ್ನು ಪತ್ತೆಹಚ್ಚಿ, ಠಾಣೆಗೆ ಕರೆಸಿ ದಂಡ ವಿಧಿಸಿ ಎಚ್ಚರಿಕೆ ನೀಡಿ ಕಳುಹಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is to notify the General Public that our client Smt.B.K.SHOBHA, Wife of Sri.Cheluva Raju, residing at No.707, 1st 'B' Main, 2nd Phase, 7th Block, Banashankari III Stage, Bangalore-560 085, has either lost or mislaid the original documents namely (1) Allotment Letter dated 06/12/1976 issued by Bangalore City Improvement Board, (2) Possession Certificate bearing No.PCR No.Page No.54/88-89, dated 21/09/1988 issued by Bangalore Development Authority and (3) Sanction Plan issued by Statutory Authorities pertaining to Property bearing Municipal No.707, PID No.162-W0246-33, (Old PID No.54-172-707, Old BDA Site No.707), situated at 1st 'B' Main Road, 2nd Phase, 7th Block, Banashankari III Stage, Bangalore, site measuring 217.16 Square Meters equivalent to 2337.5 Square Feet and in this regard a Police Complaint is lodged before jurisdictional Police Station, Bangalore on 10/09/2024. Public are hereby notified that if any one finds the original of the said documents, they may deliver the same to the undersigned or to our aforesaid client immediately. If anyone deals with the original of the aforesaid documents or makes any claim on the said property other than Smt.B.K.Shobha, he/she/they will not derive any right and such transaction will not bind our client.

YASEEN BABU,
K.M. LEGAL ADVOCATES,
No.1C, 'WILOCRISA', # 14, Rest House Crescent Road, BANGALORE-560001.
Ph : +91 9845855933
email: kmlegaladvocates@gmail.com
Place: Bangalore Date: 04/04/2025

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore - 34

TENDER NOTICE

Quotations are invited from experienced contractors for carrying out CIVIL WORKS in College campus, Marasuru and Kasavanahalli Projects of KRJS Group of Institutions.
Sealed quotations are to be submit within 10 days of this publication.
For more details, Visit our website www.reddyjanasangha.org
Contact: 080-25534194
9945450345 / 8880228966
Sd/- President   Sd/- General Secretary

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Janatha Education Society®
Dr. Rajkumar Road, Next to Orion Mall, Rajajinagar, Bengaluru - 560055.
TENDER NOTIFICATION

Sealed tenders are invited from reputed Manufacturers for the supply of School Uniforms for Vivekananda Schools at Kumbalagodu & Rajajinagar.

Sl No.	Name of Work	Estimated cost Rs.	E.M.D Rs.	Cost of Tender Document Rs. (Non Refundable)
1	Supply of School Uniforms as per Specified Material, Design, Colour & Size	18 Lakhs	75,000/-	1000/-

E.M.D by way of DD payable in favour of Secretary, Janatha Education Society, Bengaluru.

Tender documents will be issued from **04/04/2025 to 15/04/2025** during office hours on all working days **(9:30am to 4:00pm)** at JES office, Rajajinagar. The completed tenders will be received up to **12:00 Noon on 23/04/2025** and will be opened on the same day at **1:00pm or on 24/04/2025 at 11am.**

The Management reserves the right to accept or reject any or all tenders without assigning any reason.

Sd/- Sri H. C. Balakrishna, Hon. President
Sd/- Sri H. G. Balagopal, Hon. Secretary

JOB OPPORTUNITIES

General

PRAKASH POWER PLANNING Pvt Ltd.
SUPERGRADE ELECTRICAL CONTRACTORS
BANGALORE-560 076
www.prakashpower.net
WANTED
HARDWORKING, ENTHUSIASTIC ENGINEERS, TECHNICIANS, SAFETY OFFICERS, HELPERS
QUALIFICATION
Diploma/degree In Electrical Engineering, ITI Qualified Electricians, Welders, Nebosh Certified Safety Officers, SSSLC Pass/Fail Helpers, Experience Minimum 2 years
SALARY
negotiable comparable with peers
SEND YOUR CV TO:
satya.m@prakashpower.net
balaji.m@prakashpower.net
on whatsapp number
63638 87845

Marketing & Sales

WANTED
MARKETING EXECTIVE for Builders & Developers office at Vijayanagar, Bangalore.
Good Salary & Commission
Qualification: Any Degree
Languages: English, Kannada & Hindi
Contact: 9008005029 / 7829000837

HRD & Admin

WANTED FEMALE Office Assistant Any Degree Fluent in English, Kannada, Hindi, Location: Rajajinagar. Contact: 9108458798/ 9845579620

Teachers/ Professors

D'SOUZA EDUCATIONAL TRUST, Banashankari, Bengaluru. Requires experienced High-School TEACHERS for Maths, Science, Kannada and Social Science. Contact: 9880888022

Engg/ Production Technical

WANTED AC Operator/Mechanic. Qualification: ITI in Refrigeration & Air Conditioning Trade With First Class Pass With Minimum Of 60% And Two Years Of Experience in U R Rao Satellite Centre (ISRO) near Vimanapura, Bangalore. Contact: 9743700588/ 9886177333.

RENTAL PROPERTIES

Accommodation Available

Industrial And Factory

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura, Hoskote Contact: 9341234288/ 9663224353/ 9845417487.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Sites

Nagarabhavi

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

Vishweshwariah Layout

BDA VISHWESHWARAIAH LAYOUT 4TH BLOCK 50X80 EAST FACE 80FT ROAD PARALLEL 7750 NEGOTIABLE CONTACT: 8892901567

PERSONAL

Change of Name

I NEETA DATTANI Residing at Flat #103, Sabri_Piramid Apartment, 11th cross, L.B.Shastrinagar, Vimanapura Post, Bangalore-17 have changed my name to NEETA JAIN, Vide affidavit dated 02-04-2025 Before notary A.R. Muneer Ahmed Bangalore

I, EVANGLINE KIRUBA. S residing at Bengaluru-58, have changed my name as EVANGLINE KIRUBA vide affidavit dated 3/4/2025 before Notary K.S. Bammappanavar, Bengaluru

I, JYOSTNA MANJUNATH, residing at Bengaluru-85 have changed my name as JYOTSNA GONALU, vide affidavit dated 3/4/2025 before Notary K.S. Bammappanavar, Bengaluru

I, MARY BASLIKA, residing at Bengaluru-58, have changed my name as MARY BASLICA. C, vide affidavit dated 3/4/2025 before Notary K.S. Bammappanavar, Bengaluru

Thanksgiving

MAY THE sacred heart of Jesus be praised, adored, glorified & loved today & everyday throughout the world, now & forever. Amen - Amanda & Fly

DH Classifieds More value, more impact — ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560 | +91 9901641752 | 080-45557163/164
*Conditions apply

PROPERTY CORNER

SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 12.50 CRORES
Call: 89713-79031 / 96111-99900

ಚೆಕ್ ಬೌನ್ಸ್: ಚಿತ್ರ ನಿರ್ಮಾಪಕ ಕುಮಾರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೆಕ್ ಬೌನ್ಸ್ ಪ್ರಕರಣವೊಂದರಲ್ಲಿ ಕೋರ್ಟ್ ಸೂಚನೆ ಮೇರೆಗೆ ಚಲನಚಿತ್ರ ನಿರ್ಮಾಪಕ ಎನ್.ಎಂ.ಕುಮಾರ್ ಅವರನ್ನು ಉಪ್ಪಾರಪೇಟೆ ಠಾಣೆಯ ಪೊಲೀಸರು ಬಂಧಿಸಿ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಿದ್ದಾರೆ.


ಕುಮಾರ್

ಕೋರ್ಟ್ ಆದೇಶದಂತೆ ಕಾರ್ಯಾಚರಣೆ ನಡೆಸಿ ಬುಧವಾರ ರಾತ್ರಿ ಹಾಸನದಲ್ಲಿ ಕುಮಾರ್ ಅವರನ್ನು ವಶಕ್ಕೆ ಪಡೆದುಕೊಂಡು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ನಟರೊಬ್ಬರಿಂದ ಸಾಲ ಪಡೆದುಕೊಂಡಿದ್ದ ಕುಮಾರ್ ಅವರು ಹಣವನ್ನು ವಾಪಸ್ ನೀಡಿರಲಿಲ್ಲ. ಕುಮಾರ್ ಅವರು ನೀಡಿದ್ದ ಚೆಕ್ ಸಹ ಬೌನ್ಸ್ ಆಗಿತ್ತು. ಕುಮಾರ್ ಅವರ ವಿರುದ್ಧ 4ನೇ ಎಸಿಎಂಎಂ ಕೋರ್ಟ್‌ನಲ್ಲಿ ದೂರು ದಾಖಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯವು ಕುಮಾರ್‌ಗೆ ಶಿಕ್ಷೆ ವಿಧಿಸಿ ಬಂಧನದ ವಾರಂಟ್ ಹೊರಡಿಸಿತ್ತು. ಕುಮಾರ್ ಅವರನ್ನು ಬಂಧಿಸುವಂತೆಯೂ ಉಪ್ಪಾರಪೇಟೆ ಠಾಣೆಯ ಪೊಲೀಸರಿಗೆ ನ್ಯಾಯಾಲಯ ಸೂಚನೆ ನೀಡಿತ್ತು. ಕೋರ್ಟ್ ಸೂಚನೆ ಬೆನ್ನಲ್ಲೇ ಕುಮಾರ್ ಅವರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಗೊತ್ತಾಗಿದೆ.

'ರನ್ನ', 'ಮಾಣಿಕ್ಯ', 'ಮುಕುಂದ ಮುರಾರಿ', 'ಅಂಜನಿಪುತ್ರ' ಸೇರಿದಂತೆ ಹಲವು ಸಿನಿಮಾಗಳನ್ನು ಎಂ.ಎನ್. ಕುಮಾರ್ ಅವರು ನಿರ್ಮಾಣ ಮಾಡಿದ್ದರು.

ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಲೆ ಏರಿಕೆ ಕೈ ಬಿಡುವಂತೆ ಆಗ್ರಹಿಸಿ ಸಿಪಿಎಂ ಮುಖಂಡರು ಹಾಗೂ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಹಾಲು, ಮೊಸರು, ವಿದ್ಯುತ್, ಮೆಟ್ರೊ ಪ್ರಯಾಣ, ಸಾರ್ವಜನಿಕ ಸಾರಿಗೆ, ಡೀಸೆಲ್, ಟೋಲ್ ದರ ಏರಿಕೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರವೇ ನೇರ ಕಾರಣ ಎಂದು ಕಾರ್ಯಕರ್ತರು ಆಕ್ರೋಶ ಹೊರಹಾಕಿದರು.

ಯುಗಾದಿ ಹಬ್ಬದ ಮುನ್ನವೇ ರಾಜ್ಯದ ಜನರು ಹಾಲು, ಮೊಸರಿನ ಬೆಲೆ ಹಾಗೂ ವಿದ್ಯುತ್, ಕಸ ಸಂಗ್ರಹಣೆ ದರ ಏರಿಕೆಯ ಕಹಿಯನ್ನು ಅನುಭವಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ರಾಜ್ಯ ಸರ್ಕಾರವು ಡೀಸೆಲ್ ದರ ಹಾಗೂ ಕೇಂದ್ರ ಸರ್ಕಾರವು ಟೋಲ್ ದರ ಏರಿಕೆ ಮಾಡಿರುವುದು ಖಂಡನೀಯ ಎಂದು ಪ್ರತಿಭಟನಕಾರರು ಹೇಳಿದರು.

ಆಸ್ತಿ ನೋಂದಣಿ ಶುಲ್ಕ, ಸಾರ್ವಜನಿಕ ಸಾರಿಗೆಯ ಪ್ರಯಾಣದ ದರ, ವಾಹನ ನೋಂದಣಿ ಶುಲ್ಕ, ಬಿತ್ತನೆ ಬೀಜ ಹಾಗೂ ರಸಗೊಬ್ಬರ ದರ, ಆಸ್ತಿ ತೆರಿಗೆ, ಸರ್ಕಾರಿ ಕಾಲೇಜುಗಳ ಪ್ರವೇಶ ಶುಲ್ಕವನ್ನೂ ಹೆಚ್ಚಿಸಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ರಾಜ್ಯದಲ್ಲಿ ಆಡಳಿತದಲ್ಲಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರ ಜನಸಾಮಾನ್ಯರ ಬದುಕಿನ ಮೇಲೆ ಬರೆ ಎಳೆದಿವೆ ಎಂದು ಹೇಳಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆಯು ಜನಸಾಮಾನ್ಯರ ಬದುಕಿನ ಮೇಲೆ ನೇರ ಪರಿಣಾಮ ಬೀರಲಿದೆ. ತಕ್ಷಣವೇ ಬೆಲೆ ಏರಿಕೆಯನ್ನು ಕೈಬಿಡಬೇಕು ಎಂದು ಆಗ್ರಹಿಸಿದರು.

'ಗ್ಯಾರಂಟಿ ಯೋಜನೆಗಳಿಗೆ ಹಣ ನೀಡುವ ನೆಪದಲ್ಲಿ ರಾಜ್ಯ ಸರ್ಕಾರವು ಸಾಮಾನ್ಯರ ಬದುಕಿನ ಮೇಲೆ ಬೆಲೆ ಏರಿಕೆಯ ಪ್ರಹಾರವನ್ನೇ ಮಾಡಿದೆ. ಶಾಸಕರ ಸಂಬಳ ಹಾಗೂ ಭತ್ಯೆಗಳನ್ನು ಯಾವುದೇ ನಾಚಿಕೆಯಿಲ್ಲದೇ ಹೆಚ್ಚಿಸಿಕೊಳ್ಳಲಾಗಿದೆ. ಸಾಮಾನ್ಯ ಜನರ ಬದುಕಿಗೆ ಮಾತ್ರ ಯಾವುದೇ ರಿಯಾಯಿತಿ ನೀಡದೇ ಇರುವುದು ಖಂಡನೀಯ' ಎಂದು ಸಿಪಿಐಎಂನ ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಎನ್.ಪ್ರತಾಪ್ ಸಿಂಹ ಹೇಳಿದರು.

'ಬೆಲೆ ಏರಿಕೆ ಹಾಗೂ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ನೀತಿಯಿಂದ ಸಾಮಾನ್ಯರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಜನರ ಬದುಕಿನ ಪ್ರಶ್ನೆ ಬಂದಾಗ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ಒಂದೇ ನಾಣ್ಯದ ಎರಡು ಮುಖಗಳು ಎಂಬುದು ಡೀಸೆಲ್ ಹಾಗೂ ಟೋಲ್ ದರ ಏರಿಕೆಯಿಂದ ಸಾಬೀತಾಗಿದೆ. ಇಂತಹ ಬೆಲೆ ಏರಿಕೆ ನೀತಿಯನ್ನು ತಕ್ಷಣವೇ ಕೈಬಿಡಬೇಕು' ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಬಿ.ಎನ್. ಮಂಜುನಾಥ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಬೆಲೆ ಏರಿಕೆ ಖಂಡಿಸಿ ಸಿಪಿಂ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ಸೋದರಮಾವನ ಅಂತ್ಯಕ್ರಿಯೆಗೆ ತೆರಳುವ ವೇಳೆ ದುರ್ಘಟನೆ

ಬಸ್–ಕಾರು ಡಿಕ್ಕಿ: ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಮಂಡ್ಯ: ತಾಲ್ಲೂಕಿನ ತೂಬಿನಕೆರೆ ಗ್ರಾಮದ ಸಮೀಪ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಗುರುವಾರ ಕೆಎಸ್‌ಆರ್‌ಟಿಸಿ 'ಐರಾವತ' ಬಸ್ ಮತ್ತು ಕಾರಿನ ನಡುವೆ ಡಿಕ್ಕಿಯಾಗಿ ಕಾರಿನಲ್ಲಿದ್ದ ನಾಲ್ವರು ಮೃತಪಟ್ಟರು. ಇವರೆಲ್ಲ ಸಂಬಂಧಿಕರೊಬ್ಬರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ತೆರಳುತ್ತಿದ್ದರು.

ಬೆಂಗಳೂರಿನ ಜೆ.ಪಿ. ನಗರದ ವಿದ್ಯುತ್ ಗುತ್ತಿಗೆದಾರ ಸತ್ಯಾನಂದ ರಾಜೇ ಅರಸ್ (59), ಅವರ ಪತ್ನಿ ನಿಶ್ಚಿತಾ ಅರಸ್ (51), ಸಹೋದರ ಹಾಗೂ ಬೆಸ್ಕಾಂ ನಿವೃತ್ತ ನೌಕರ ಚಂದ್ರಶೇಖರ ರಾಜೇ ಅರಸ್ (62), ಅವರ ಪತ್ನಿ ಸುವೇದಿನಿ ರಾಣಿ (56) ಮೃತಪಟ್ಟವರು.

ಹೆದ್ದಾರಿಯಿಂದ ಸರ್ವಿಸ್ ರಸ್ತೆಗೆ ತೆರಳುವ ಸಂದರ್ಭ, ಕಾರು ಚಾಲಕನಿಗೆ ಗೊಂದಲವಾಗಿ, ಮತ್ತೆ ಹೆದ್ದಾರಿ ಕಡೆ ಕಾರು ತಿರುಗಿಸಿದಾಗ ಹಿಂದಿನಿಂದ ವೇಗವಾಗಿ ಬರುತ್ತಿದ್ದ ಬಸ್ ಡಿಕ್ಕಿ ಹೊಡೆಯಿತು. ಸ್ಥಳದಲ್ಲೇ ಇಬ್ಬರು ಮೃತಪಟ್ಟು, ಆಸ್ಪತ್ರೆಗೆ ಸಾಗಿಸುವಾಗ ಇನ್ನಿಬ್ಬರು ಮೃತಪಟ್ಟರು. ಡಿಕ್ಕಿಯ ರಭಸಕ್ಕೆ ಕಾರು ನಜ್ಜುಗುಜ್ಜಾಗಿದೆ.

ಚಂದ್ರಶೇಖರ ರಾಜೇ ಅರಸ್

ನಿಶ್ಚಿತಾ ಅರಸ್

ಸುವೇದಿನಿ ರಾಣಿ


ಸತ್ಯಾನಂದ ರಾಜೇ ಅರಸ್

ಸತ್ಯಾನಂದರಾಜೇ ಅರಸ್ ಅವರ ಸೋದರಮಾವ ಎನ್.ರಾಜೇ ಅರಸ್ ಅವರ ಅಂತ್ಯಕ್ರಿಯೆಗೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಸಿಗೂರು ಗ್ರಾಮಕ್ಕೆ ಹೋಗುವಾಗ ಅಪಘಾತವಾಗಿದೆ.

ಮೃತದೇಹಗಳನ್ನು ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ಸ್ಥಳಕ್ಕೆ ದಕ್ಷಿಣ ವಲಯ ಡಿಐಜಿ ಬೋರಲಿಂಗಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಭೇಟಿ ನೀಡಿದ್ದರು. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

ಐಪಿಎಲ್ ವೇಳೆ ಮೊಬೈಲ್ ಕಳವು: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದಲ್ಲಿ ಮಂಗಳವಾರ ಮೊಬೈಲ್ ಕಳವು ಮಾಡಿದ ಆರೋಪದಲ್ಲಿ ಇಬ್ಬರನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್) ಬಂಧಿಸಿದೆ. ಅವರಿಂದ ಏಳು ಮೊಬೈಲ್ ವಶಪಡಿಸಿಕೊಳ್ಳಲಾಗಿದೆ.

ಜಾರ್ಖಂಡ್‌ನ ಸಂಜಿತ್ (23) ಮತ್ತು 12 ವರ್ಷದ ಬಾಲಕ ಬಂಧಿತರು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ಐಪಿಎಲ್ ಕ್ರಿಕೆಟ್ ಪಂದ್ಯ ಇದ್ದಿದ್ದರಿಂದ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದಲ್ಲಿ ಜನದಟ್ಟಣೆ ಇತ್ತು. ಈ ಸಮಯದಲ್ಲಿ ಆರೋಪಿಗಳು ಮೊಬೈಲ್ ಕಳವು ಮಾಡುತ್ತಿದ್ದುದನ್ನು ಗಮನಿಸಿದ ಕೆಎಸ್‌ಐಎಸ್‌ಎಫ್ ಸಿಬ್ಬಂದಿ, ಅವರನ್ನು ವಶಕ್ಕೆ ಪಡೆದಾಗ ಏಳು ಮೊಬೈಲ್ ಫೋನ್‌ಗಳು ಇರುವುದು ಪತ್ತೆಯಾಗಿತ್ತು. ಆರೋಪಿಗಳನ್ನು ಕಬ್ಬನ್ ಪಾರ್ಕ್ ಪೊಲೀಸರಿಗೆ ಹಸ್ತಾಂತರಿಸಲಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಕೋಲ್ಕತ್ತ ರೇಸ್

ರೋಮನ್ ಸ್ಪಿರಿಟ್ ಗೆಲ್ಲುವ ನಿರೀಕ್ಷೆ

ಪೊಲೀಸ್ ಕಪ್ ಶುಕ್ರವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರೋಮನ್ ಸ್ಪಿರಿಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3:00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ವಿಫ್ಟ್ ಲೇಡಿ 2, ಮೊನಾರ್ಕಿ 3, ವಿನ್ಸ್ಎಂಜೆಲ್ 4
2ನೇ ರೇಸ್: ಗಿಮ್ಲರ್ 2, ಕ್ವೆವರ್ ಹ್ಯಾನ್ಸ್ 4, ಹೈ ಒಪಿನಿಯನ್ 5
3ನೇ ರೇಸ್: ಲಹಿನಾ 2, ಕಿಂಗ್ ರೋಜರ್ 1, ಯುವಿ 3
4ನೇ ರೇಸ್: ದಿ ಜನರಲ್ 6, ಗೋ ಫಾರ್ ದಿ ಮೂನ್ 2, ಒಹ್ ಮೈ ಡಾರ್ಲಿಂಗ್ 8
5ನೇ ರೇಸ್: ಎಕ್ಸ್‌ಟ್ರಾವೆಗೆಂಟ್ ಸ್ಟಾರ್ 3, ಹನಿ ಕೇಕ್ 6, ಮೆಂಫಿಸ್ 8
6ನೇ ರೇಸ್: ರೋಮನ್ ಸ್ಪಿರಿಟ್ 3, ಸರ್ ಬಫೆರ್ಟ್ 4, ಕ್ಯಾಶ್5
7ನೇ ರೇಸ್: ಡೋಂಟ್‌ಸ್ಟಾಪ್‌ದಿಮ್ಯೂಸಿಕ್ 5, ಸ್ಪೋರ್ಟಿಂಗ್ ಟ್ರೈನರ್ 8, ದಿ ಪ್ರೆಸೆನ್ಸ್ 9

ಉತ್ತಮ ಬೆಟ್: ದಿ ಜನರಲ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಯಲಹಂಕ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ವೆಂಕಟಾಲ ಮೇಲ್ಸೇತುವೆಯಲ್ಲಿ ಗುರುವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಕಾರೊಂದು ನಜ್ಜುಗುಜ್ಜಾಗಿದ್ದು, ಕಾರಿನಲ್ಲಿದ್ದ ಪ್ರಯಾಣಿಕರೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ

ಪಿಕಪ್ ಚಾಲಕನ ಕೊಲೆ: ಆರು ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇರೊಬ್ಬ ವ್ಯಕ್ತಿಯ ಮೇಲೆ ಸೇಡು ತೀರಿಸಿಕೊಳ್ಳಲು ಹೋಗಿ ಪಿಕಪ್ ಚಾಲಕನನ್ನು ಕೊಲೆ ಮಾಡಿದ್ದ ಪ್ರಕರಣದ ಸಂಬಂಧ ಬನಶಂಕರಿ ಠಾಣೆಯ ಪೊಲೀಸರು ಆರು ಮಂದಿಯನ್ನು ಬಂಧಿಸಿದ್ದಾರೆ.

ರೌಡಿಶೀಟರ್ ಶಿವಪ್ರಸಾದ್ ಹಾಗೂ ಆತನ ಸಹಚರರಾದ ಭರತ್, ಪ್ರಜ್ವಲ್, ಅಭಿಷೇಕ್, ಗಣೇಶ್ ಮತ್ತು ಜಯಂತ್ ಗೌಡ ಬಂಧಿತರು.

ಮಾರ್ಚ್ 31ರಂದು ಮೈಸೂರಿನ ನಿಖಿಲ್ ಎಂಬಾತನನ್ನು ಕೊಲೆ ಮಾಡಿ ಆರೋಪಿಗಳು ಪರಾರಿ ಆಗಿದ್ದರು.

ಕೊಲೆಯಾದ ನಿಖಿಲ್‌ಗೂ ಆರೋಪಿಗಳಿಗೂ ಯಾವುದೇ ಸಂಬಂಧವಿಲ್ಲ. ಬೇರೊಬ್ಬ ವ್ಯಕ್ತಿಯನ್ನು ಕೊಲೆ ಮಾಡಲು ಆರೋಪಿಗಳು ಸಂಚು ರೂಪಿಸಿದ್ದರು. ಮಾರ್ಚ್ 31ರಂದು ಆತನನ್ನು ಹುಡುಕಿಕೊಂಡು ಬನಶಂಕರಿ ಸುತ್ತಮುತ್ತ ಓಡಾಟ ನಡೆಸುತ್ತಿದ್ದರು.

ಹುಡುಕಾಟ ನಡೆಸುತ್ತಿದ್ದ ವೇಳೆ ಈತನೇ ಆ ವ್ಯಕ್ತಿ ಎಂದು ಭಾವಿಸಿ ಕೊಲೆ ಮಾಡಿದ್ದರು ಎಂದು ಪೊಲೀಸರು ಹೇಳಿದರು.

'ಹನುಮಂತನಗರ ಠಾಣೆ ರೌಡಿಶೀಟರ್ ಆಗಿರುವ ಶಿವಪ್ರಸಾದ್ ಹಾಗೂ ಕಾಂತರಾಜು ಅವರ ಮಧ್ಯೆ ಬೈಕ್ ಓಡಿಸುವ ವಿಚಾರಕ್ಕೆ ಗಲಾಟೆ ನಡೆದಿತ್ತು. ಆಗ ಕಾಂತರಾಜು, ಶಿವಪ್ರಸಾದ್‌ಗೆ ಥಳಿಸಿದ್ದರು.

ಕೋಪಗೊಂಡಿದ್ದ ಶಿವಪ್ರಸಾದ್, ಮಾರ್ಚ್ 31ರಂದು ರಾತ್ರಿ ಕಾಂತರಾಜುಗಾಗಿ ಬನಶಂಕರಿ ಸುತ್ತಮುತ್ತ ಹುಡುಕಾಟ ನಡೆಸಿದ್ದ. ಅದೇ ವೇಳೆ ನಿಖಿಲ್ ಅವರು ಪಿಕಪ್ ವಾಹನವನ್ನು ರಸ್ತೆಬದಿಯಲ್ಲಿ ನಿಲ್ಲಿಸಿಕೊಂಡು ನಿದ್ರಿಸುತ್ತಿದ್ದರು.

ಸ್ಥಳಕ್ಕೆ ಬಂದಿದ್ದ ಆರೋಪಿಗಳು ಕಾಂತರಾಜ್ ಎಂದು ಭಾವಿಸಿ ಮಾರಕ ಅಸ್ತ್ರಗಳಿಂದ ದಾಳಿ ನಡೆಸಿ ಹಲ್ಲೆ ಮಾಡಿ ಕೊಲೆ ಮಾಡಿದ್ದರು. ಬಳಿಕ ಆತನ ಮುಖ ನೋಡಿ, ಕಾಂತರಾಜು ಅಲ್ಲ ಎಂದು ಖಚಿತವಾದ ನಂತರ ಸ್ಥಳದಿಂದ ಪರಾರಿ ಆಗಿದ್ದರು' ಎಂದು ಪೊಲೀಸರು ಹೇಳಿದರು.

ಹಣಕ್ಕೆ ಬೇಡಿಕೆ: ಇಬ್ಬರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ನಾಡಪ್ರಭು ಕೆಂಪೇಗೌಡ ಬಡಾವಣೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಒಬ್ಬರಿಂದ ಹಣ ಸುಲಿಗೆಗೆ ಯತ್ನಿಸಿದ ಆರೋಪದ ಅಡಿ ಇಬ್ಬರ ವಿರುದ್ಧ ಕೆಂಗೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರ್ಯಪಾಲಕ ಎಂಜಿನಿಯರ್ ಸಿ.ಎನ್. ಅಶೋಕ್ ಅವರ ದೂರಿನ ಮೇರೆಗೆ ಶರತ್ ಬಾಬು ಮತ್ತು ಗುರುಮೂರ್ತಿ ಎಂಬುವವರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ನವೆಂಬರ್ 11ರಂದು ಕಾಮಗಾರಿಗೆ ಸಂಬಂಧಿಸಿದಂತೆ 'ಸತ್ಯಧಾರಿ' ಕನ್ನಡ ಮಾಸ ಪತ್ರಿಕೆ ಹೆಸರಿನಲ್ಲಿ ಆರೋಪಿಗಳಿಬ್ಬರು, ನನಗೆ ಹಾಗೂ ನನ್ನ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅಶೋಕ್ ಭಾಗಿ, ವರುಣ್, ಬಿ.ಎಚ್. ಪರಶುರಾಮ್, ಎಚ್.ಪಿ.ಜಯದೀಪ್ ಅವರು ಸರಿಯಾದ ರೀತಿಯಲ್ಲಿ ಕಾಮಗಾರಿ ನಿರ್ವಹಿಸುತ್ತಿಲ್ಲ. ಹಣ ಪಡೆದು ಗುತ್ತಿಗೆದಾರರಿಂದ ಕಳಪೆ ಕಾಮಗಾರಿ ಮಾಡಿದ್ದೀರಾ ಎಂದು ಧಮ್ಕಿ ಹಾಕಿ ಹಣ ನೀಡುವಂತೆ ಪೀಡಿಸಿದರು' ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

'ಹಣ ನೀಡದಿದ್ದರೆ ಲೋಕಾಯುಕ್ತಕ್ಕೆ ದೂರು ನೀಡುವುದಾಗಿ ಇಬ್ಬರೂ ನನ್ನ ಕಚೇರಿಗೆ ಬಂದು ಬೆದರಿಕೆ ಹಾಕಿದ್ದಾರೆ. ಅವರ ಬೇಡಿಕೆಗೆ ಒಪ್ಪದೇ ಇದ್ದಾಗ ತಮಗೆ ಸಂಬಂಧ ಇಲ್ಲದ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಮಾಹಿತಿ ಪಡೆದುಕೊಂಡಿದ್ದಾರೆ. ₹27 ಲಕ್ಷ ನೀಡಿದರೆ ಯಾವುದೇ ತೊಂದರೆ ಕೊಡುವುದಿಲ್ಲ ಅಥವಾ ರಾಮನಗರದಲ್ಲಿ ಒಂದು ಕೊಠಡಿ ನಿರ್ಮಾಣ ಮಾಡಿಸಿ ಕೊಡಬೇಕು ಎಂದು ಬೇಡಿಕೆ ಇರಿಸಿದ್ದಾರೆ' ಎಂದು ತಿಳಿಸಿದ್ದಾರೆ.

'ಮಾರ್ಚ್ 28ರಂದು ಶರತ್ ಬಾಬು ನನ್ನ ಕಚೇರಿಗೆ ಬಂದು ಟೇಬಲ್ ಅನ್ನು ಕೈಯಿಂದ ಗುದ್ದಿ, ಹಣ ನೀಡುವಂತೆ ಜೀವ ಬೆದರಿಕೆ ಹಾಕಿದ್ದಾರೆ. ಏಪ್ರಿಲ್ 2ರಂದು ಅಶೋಕ್ ಭಾಗಿ, ಜಯದೀಪ್ ಅವರ ವಿರುದ್ಧ ಲೋಕಾಯುಕ್ತದಲ್ಲಿ ದೂರು ದಾಖಲಿಸಿರುವುದಾಗಿ ಶರತ್ ಬಾಬು ವಾಟ್ಸ್‌ಆ್ಯಪ್ ಮೂಲಕ ನನಗೆ ಸಂದೇಶ ಕಳುಹಿಸಿದರು. ಮುಂದೆ ಗುರುಮೂರ್ತಿ ಅವರ ವಿರುದ್ಧ ದೂರು ದಾಖಲಿಸಲಾಗುವುದು ಎಂದು ಬೆದರಿಕೆ ಹಾಕಿದರು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕರ್ತವ್ಯಕ್ಕೆ ಅಡ್ಡಿಪಡಿಸಿ, ಜೀವ ಬೆದರಿಕೆ ಹಾಕಿರುವ ಆರೋಪಿಗಳ ವಿರುದ್ಧ ಕಾನೂನಿನ ಅಡಿಯಲ್ಲಿ ಸೂಕ್ತ ಕ್ರಮ ಜರುಗಿಸಬೇಕು ಎಂದು ಮನವಿ ಮಾಡಿದ್ದಾರೆ.

ಗೊರಗುಂಟೆಪಾಳ್ಯ ರಸ್ತೆಯಲ್ಲಿ ಮಳೆ ನೀರು ನಿಂತು, ವಾಹನ ಸಂಚಾರಕ್ಕೆ ಅಡ್ಡಿಯಾಯಿತು

ರಾಜಾಜಿನಗರದಲ್ಲಿ ಮರ ಬಿದ್ದು ಕಾರುಗಳು ಜಖಂ; ಹಲವೆಡೆ ವಾಹನ ದಟ್ಟಣೆ

ಅಲ್ಲಲ್ಲಿ ಮಳೆ ಜೋರು ರಸ್ತೆಗಳಲ್ಲಿ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲವು ಪ್ರದೇಶಗಳಲ್ಲಿ ಗುರುವಾರ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಭಾರಿ ಮಳೆಯಾಗಿದ್ದು, ರಸ್ತೆಗಳಲ್ಲೇ ನೀರು ನಿಂತು ವಾಹನ ದಟ್ಟಣೆ ಉಂಟಾಯಿತು.

ದಾಸರಹಳ್ಳಿಯ ಶೆಟ್ಟಿಹಳ್ಳಿ ಹಾಗೂ ಯಶವಂತಪುರದ ಜೆ.ಪಿ. ಉದ್ಯಾನದ ಪ್ರದೇಶಗಳಲ್ಲಿ ಬುಧವಾರ ತಡರಾತ್ರಿ ಮಳೆಯಾಗಿತ್ತು. ಗುರುವಾರ ಮುಂಜಾನೆಯಿಂದಲೇ ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಕೆಲವು ಪ್ರದೇಶಗಳಲ್ಲಿ ಬಿರುಗಾಳಿಯೊಂದಿಗೆ ಹೆಚ್ಚು ಮಳೆಯಾಯಿತು. ಹಲವು ಮರಗಳು ಧರೆಗುರುಳಿದವು.

ಗುರುವಾರ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಮಳೆ ಸುರಿದಿದ್ದರಿಂದ ಕಚೇರಿಗೆ ತೆರಳುವವರು ತೀವ್ರ ಪ್ರಯಾಸಪಟ್ಟರು. ಮಳೆ ನೀರು ಚರಂಡಿಗಳಲ್ಲಿ ಹರಿಯದೆ, ರಸ್ತೆಗಳಲ್ಲಿ ಹೆಚ್ಚು ನೀರು ನಿಂತಿದ್ದರಿಂದ ವಾಹನ ದಟ್ಟಣೆ ಉಂಟಾಗಿತ್ತು. ಮಳೆ ನೀರಿನ ಜೊತೆಗೆ ಎಲ್ಲ ರೀತಿಯ ಕಲ್ಮಶವೂ ರಸ್ತೆ ಮೇಲೆಯೇ ಇದ್ದುದ್ದರಿಂದ ಸಮಸ್ಯೆಯಾಯಿತು.

ವೀರಸಂದ್ರ ಜಂಕ್ಷನ್‌ನಿಂದ ಹೊಸೂರು ರಸ್ತೆ, ಇಕೊ ಸ್ಪೇಸ್‌ನಿಂದ ಮಾರತ್ತಹಳ್ಳಿ ರಸ್ತೆ, ಸಾಗರ್ ಅಪೊಲೊ ಆಸ್ಪತ್ರೆಯಿಂದ ಡೇರಿ ವೃತ್ತ, ಸೆಂಟ್ರಲ್ ಜೈಲ್ ರಸ್ತೆಯಿಂದ ರಾಯಸಂದ್ರ, ಹೊರಮಾವುನಿಂದ ರಾಮಮೂರ್ತಿನಗರ, ಕಾವೇರಿ ಕೆಳಸೇತುವೆ-ಪ್ಯಾಲೆಸ್ ಗುಟ್ಟಹಳ್ಳಿ, ಪಣತ್ತೂರು ಸೇತುವೆಯಿಂದ ಕಾಡುಬೀಸನಹಳ್ಳಿ, ಕಸ್ತೂರಿನಗರದಿಂದ ರಾಮಮೂರ್ತಿನಗರ, ಎಚ್‌ಎಎಲ್ ವಿಮಾನ ನಿಲ್ದಾಣ ರಸ್ತೆಯಿಂದ ದೊಮ್ಮಲೂರು ಮೇಲ್ಸೇತುವೆ, ಸ್ವಾಮಿ ವಿವೇಕಾನಂದ ರಸ್ತೆಯಿಂದ 80 ಅಡಿ ರಸ್ತೆ, ವಸಂತ ನಗರ ಕೆಳಸೇತುವೆಗಳಲ್ಲಿ ಹೆಚ್ಚು ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಯಿತು.

ಇಂದಿರಾನಗರ ಕೆಳಸೇತುವೆ, ದೊಡ್ಡಕುಂದಲಹಳ್ಳಿ, ಕೈಕೊಂಡನಹಳ್ಳಿ, ಕಾಡುಗೋಡಿಗಳಲ್ಲೂ ರಸ್ತೆಗಳಲ್ಲಿ ನೀರು ನಿಂತಿದ್ದರಿಂದ ವಾಹನ ಸಂಚಾರ ನಿಧಾನಗತಿಯಲ್ಲಿತ್ತು.

12 ಮರ ಧರೆಗೆ: ಬಿರುಗಾಳಿ ಮಳೆಗೆ ನಗರದಲ್ಲಿ ಗುರುವಾರ 12 ಮರಗಳು ಧರೆಗುರುಳಿದ್ದು, 41 ಸ್ಥಳಗಳಲ್ಲಿ ರೆಂಬೆಗಳು ಬಿದ್ದಿವೆ. ಪೂರ್ವ ವಲಯದಲ್ಲಿ ಮತ್ತು ಪಶ್ಚಿಮದಲ್ಲಿ ತಲಾ ಮೂರು ಮರಗಳು, ಮಹದೇವಪುರ ಮತ್ತು ಪೂರ್ವ ವಲಯದಲ್ಲಿ ತಲಾ ಎರಡು, ಯಲಹಂಕ ಹಾಗೂ ಬೊಮ್ಮನಹಳ್ಳಿಯಲ್ಲಿ ತಲಾ ಒಂದು ಮರ ಧರೆಗುರುಳಿದ್ದು, ತೆರವು ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಕೆಟ್ಟು ನಿಂತ ವಾಹನಗಳು

ಕೆ.ಆರ್.ಪುರ: ಗುರುವಾರ ಮಧ್ಯಾಹ್ನ ಸುರಿದ ಮಳೆಗೆ ರಸ್ತೆಯ ಮೇಲೆ ಮಳೆ ನೀರು ಹರಿದು ಸಂಚಾರ ದಟ್ಟಣೆ ಉಂಟಾಗಿತ್ತು. ಅಲ್ಲಲ್ಲಿ ವಾಹನಗಳು ಕೆಟ್ಟು ನಿಂತಿದ್ದರಿಂದ ಕೆಲವು ಸಮಯ ಸಂಚಾರ ಸ್ಥಗಿತಗೊಂಡಿತ್ತು.

ಮಹದೇವಪುರದ ಪಣತ್ತೂರು ರೈಲ್ವೆ ಕೆಳಸೇತುವೆಯಲ್ಲಿ ಮಳೆ ನೀರು ನಿಂತು ಸುಮಾರು ಒಂದು ಗಂಟೆ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಕೆಲವು ವಾಹನಗಳ ಒಳಗೆ ನೀರು ಹೋಗಿ, ನಿಂತುಹೋಗಿದ್ದವು. ಪೊಲೀಸರು, ನಾಗರಿಕರು ವಾಹನಗಳನ್ನು ರಸ್ತೆಯ ಪಕ್ಕಕ್ಕೆ ತಳ್ಳಿ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಕೆ.ಆರ್.ಪುರದಿಂದ ಸಿಲ್ಕ್ ಬೋರ್ಡ್‌ಗೆ ಸಂಪರ್ಕ ಕಲ್ಪಿಸುವ ಹೊರವರ್ತುಲ ರಸ್ತೆಯಾದ ಪೈ ಗೂಗಲ್ ಕಚೇರಿ, ಬಾಗ್ಮನೆ ಟೆಕ್ ಪಾರ್ಕ್ ಬಳಿ ಎರಡು ಅಡಿಗೂ ಹೆಚ್ಚು ಮಳೆ ನೀರು ರಸ್ತೆ ಮೇಲೆ ಹರಿಯಿತು.

ಎಚ್‌ಎಎಲ್ ಮೂರನೇ ಘಟ್ಟದ 9ನೇ ಮುಖ್ಯರಸ್ತೆಯಲ್ಲಿ ಮರ ಬಿದ್ದು, ವಿದ್ಯುತ್ ಕಂಬಕ್ಕೂ ಹಾನಿಯಾಗಿದೆ.

ಎಲ್ಲಿ ಹೆಚ್ಚು ಮಳೆ? (ಸೆಂ.ಮೀ)	
ಕೋರಮಂಗಲ	3.9
ಎಚ್‌ಎಎಲ್ ವಿಮಾನ ನಿಲ್ದಾಣ	3.1
ಮಾರತ್‌ಹಳ್ಳಿ	2.85
ವಿದ್ಯಾಪೀಠ	2.8
ವನ್ನಾರಪೇಟೆ	2.6
ರಾಮಮೂರ್ತಿ ನಗರ	2.25
ವಿಜ್ಞಾನ ನಗರ	2.2
ಪುಲಕೇಶಿನಗರ	1.95
ಹೊಯ್ಸಳ ನಗರ	1.9
ಗರುಡಾಚಾರ್‌ಪಾಳ್ಯ	1.85
ಎಚ್‌ಎಸ್‌ಆರ್ ಲೇಔಟ್	1.65
ಬೆಳ್ಳಂದೂರು	1.6
ಬಿಟಿಎಂ ಲೇಔಟ್	1.6
ಪಟ್ಟಾಭಿರಾಮನಗರ	1.6
ಕೆ.ಆರ್. ಪುರ	1.6
ಬಾಣಸವಾಡಿ	1.35
ಹೆಮ್ಮಿಗೆಪುರ	1.15
ಹೊರಮಾವು	1.15
ದೊಡ್ಡನೆಕ್ಕುಂದಿ	1.15
ನಂದಿನಿ ಲೇಔಟ್	1.1
ದಯಾನಂದನಗರ	1.05
ಸಂಪಂಗಿರಾಮನಗರ	1.05

ರಾಜಾಜಿನಗರದಲ್ಲಿ ಮರವೊಂದು ಕಾರಿನ ಮೇಲೆ ಬಿದ್ದಿತ್ತು

ಮುಂಜಾಗ್ರತಾ ಕ್ರಮಕ್ಕೆ ಸೂಚನೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆ ಸಂದರ್ಭದಲ್ಲಿ ಯಾವುದೇ ರೀತಿಯ ಸಮಸ್ಯೆಯಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್‌ಅ ವರು ಅಧಿಕಾರಿಗಳಿಗೆ ಸೂಚಿಸಿದರು.

ಮುಂಗಾರು ಮಳೆಯಿಂದ ಉಂಟಾಗುವ ಸಮಸ್ಯೆಗಳನ್ನು ತಪ್ಪಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಗುರುವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಅವರು ಚರ್ಚೆ ನಡೆಸಿದರು.

ಕಳೆದ ಬಾರಿಯ ಮಳೆಗಾಲದಲ್ಲಿ ಹೆಚ್ಚು ಸಮಸ್ಯೆಯಾಗಿದ್ದ ಪ್ರದೇಶಗಳಲ್ಲಿ ಈ ಬಾರಿ ಯಾವುದೇ ರೀತಿಯ ಸಮಸ್ಯೆ ಆಗದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಸಾಯಿ ಲೇಔಟ್, ಪೈ ಲೇಔಟ್, ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್, ಕೋಗಿಲು ಕ್ರಾಸ್, ಸರ್ಜಾಪುರ ರಸ್ತೆ (ಇಬ್ಬಲೂರು ಜಂಕ್ಷನ್), ಅಬ್ಬಿಗೆರೆ ಕೆರೆ ಕೋಡಿ, ಮೈಸೂರು ರಸ್ತೆ, ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಸೇರಿದಂತೆ ಇನ್ನಿತರೆ ಸ್ಥಳಗಳಲ್ಲಿ ಮಳೆಗಾಲ ಪ್ರಾರಂಭಕ್ಕೂ ಮುನ್ನ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ನಗರದಲ್ಲಿ 198 ಪ್ರವಾಹ ಪೀಡಿತ ಪ್ರದೇಶಗಳ ಜೊತೆಗೆ ಹೊಸದಾಗಿ 11 ಪ್ರದೇಶಗಳು ಸೇರಿದಂತೆ ಒಟ್ಟು 209 ಪ್ರವಾಹ ಪೀಡಿತ ಪ್ರದೇಶಗಳಿವೆ. 166 ಸ್ಥಳಗಳಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬಾಕಿ 43 ಪ್ರದೇಶಗಳಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು. ಅಧಿಕಾರಿಗಳು ಪ್ರವಾಹ ಪೀಡಿತ ಸ್ಥಳಗಳಿಗೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಬೇಕು ಎಂದು ಆದೇಶಿಸಿದರು.

ವಿಶೇಷ ಆಯುಕ್ತರಾದ ಡಾ. ಕೆ. ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಅವಿನಾಶ್ ಮೆನನ್ ರಾಜೇಂದ್ರನ್, ಪ್ರೀತಿ ಗೆಹ್ಲೋಟ್, ವಲಯ ಆಯುಕ್ತರಾದ ಸತೀಶ್, ರಮ್ಯಾ, ರಮೇಶ್, ಕರೀಗೌಡ, ಸ್ನೇಹಲ್, ದಿಗ್ವಿಜಯ್ ಬೋಡ್ಕೆ ಉಪಸ್ಥಿತರಿದ್ದರು.

ಬಂಡೆಹೊಸೂರು ಗ್ರಾಮದಲ್ಲಿ ಸಿದ್ದೇಶ್ವರ ಸ್ವಾಮಿ ಜಾತ್ರೆಯಲ್ಲಿ ಪಲ್ಲಕ್ಕಿ ಉತ್ಸವ ನಡೆಯಿತು

ಸಿದ್ದೇಶ್ವರ ಜಾತ್ರಾ ಮಹೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಂಡೆಹೊಸೂರು ಗ್ರಾಮದಲ್ಲಿ ಸಿದ್ದೇಶ್ವರಸ್ವಾಮಿಯ ಜಾತ್ರಾಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಗುರುವಾರ ಬೆಳಿಗ್ಗೆಯಿಂದ ಸಿದ್ದೇಶ್ವರಸ್ವಾಮಿಗೆ ಮಹಾರುದ್ರಾಭಿಷೇಕ ಅಲಂಕಾರ, ನಾಗರಕಟ್ಟೆಗೆ ಹಾಲು ಎರೆಯುವುದು, ಅರ್ಚನೆ, ಮಹಾಮಂಗಳಾರತಿ ವಿಶೇಷ ಪೂಜೆ ಕಂಕೈರ್ಯಗಳು ನಡೆದವು.

ಮಧ್ಯಾಹ್ನ ಬಸವನ ಸಮೇತ ರಾಜಬೀದಿಗಳಲ್ಲಿ ದೇವರು ಹೊಳೆಗೆ ಹೋಗುವುದು, ಹೊಳೆ ಆಡುವುದು, ಪಲ್ಲಕ್ಕಿಗಳ ಮೆರವಣಿಗೆ ನಡೆಯಿತು. ಬಂಡೆ ಹೊಸೂರು ಮತ್ತು ಬೆಂಗಳೂರು ನಗರದ ಸುತ್ತಮುತ್ತಲಿನ ಗ್ರಾಮಗಳಿಂದ ಹದಿನೆಂಟು ಊರುಗಳಿಂದ 250ಕ್ಕೂ ಹೆಚ್ಚು ಕುಟುಂಬಗಳು ಜಾತ್ರೆಯಲ್ಲಿ ಪಾಲ್ಗೊಂಡಿದ್ದವು.

ಪ್ರತಿ ಐದು ವರ್ಷಕೊಮ್ಮೆ ಸಿದ್ದೇಶ್ವರಸ್ವಾಮಿ ಜಾತ್ರೆ ನಡೆಸಲಾಗುತ್ತದೆ ಎಂದು ದೇವಸ್ಥಾನದ ಅಭಿವೃದ್ಧಿ ಸಮಿತಿ ಟ್ರಸ್ಟಿ ಲೋಕೇಶ್ ತಿಳಿಸಿದರು.

ವಿಜಯಪುರ: ಒಂದೇ ಶಾಲೆಯ 3 ಶಿಕ್ಷಕಿಯರು ಅಮಾನತು

ಪ್ರಜಾವಾಣಿ ವಾರ್ತೆ

ವಿಜಯಪುರ: ಕರ್ತವ್ಯದಲ್ಲಿ ನಿರ್ಲಕ್ಷ್ಯ ಹಾಗೂ ಕನ್ನಡ ಮಾಧ್ಯಮ ಸರ್ಕಾರಿ ಶಾಲೆಯನ್ನು ದುರುದ್ದೇಶದಿಂದ ಮುಚ್ಚಲು ಪ್ರಯತ್ನಿಸಿದ ಆರೋಪದಡಿ ವಿಜಯಪುರ ನಗರದ ಕೆಜಿಎಸ್ ನಂ.2 ಸರ್ಕಾರಿ ಶಾಲೆಯ ಪ್ರಭಾರಿ ಮುಖ್ಯಶಿಕ್ಷಕಿ ಸೇರಿ ಮೂವರು ಶಿಕ್ಷಕಿಯರನ್ನು ಸೇವೆಯಿಂದ ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದೆ.

ಶಾಲೆಯ ಪ್ರಭಾರಿ ಮುಖ್ಯಶಿಕ್ಷಕಿ ಎನ್.ಎಂ. ಅಣ್ಣೆಪ್ಪನವರ, ಸಹ ಶಿಕ್ಷಕಿ ಸಿ.ಎಸ್.ಮೈತ್ರಿ ಮತ್ತು ಆರ್.ಎಂ. ಹೋಳಿನ ಅವರನ್ನು ಅಮಾನತುಗೊಳಿಸಿ ವಿಜಯಪುರ ನಗರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ ಗುರುವಾರ ಆದೇಶ ಹೊರಡಿಸಿದ್ದಾರೆ.

ಶಾಲೆಯಲ್ಲಿ ಮೂವರು ಶಿಕ್ಷಕಿಯರು ಮಾತ್ರವೇ ಕಾರ್ಯನಿರ್ವಹಿಸುತ್ತಿದ್ದರು. ಶಾಲಾ ಮಕ್ಕಳ ದಾಖಲಾತಿ ಹೆಚ್ಚಿಸುವಲ್ಲಿ ವಿಫಲ, ಬೋಧನೆಯಲ್ಲಿ ನಿರಾಸಕ್ತಿ, ಮಕ್ಕಳಿಗೆ ಗೃಹ ಪಾಠ ನೀಡದಿರುವುದು ಹಾಗೂ ಕಚೇರಿ ಕೆಲಸವೆಂದು ಶಾಲೆಯಿಂದ ಹೊರಗಡೆ ಇರುವುದು ಮಾಡುತ್ತಿದ್ದರು. ಅಲ್ಲದೇ, ಕಳೆದ ಒಂದು ವರ್ಷದಿಂದ ನಿರಂತರ ಜಗಳವಾಡುತ್ತಿದ್ದ ಕುರಿತು ವಿಚಾರಣಾ ವರದಿ ಆಧಾರದ ಮೇಲೆ ಎಲ್ಲರನ್ನೂ ಅಮಾನತು ಮಾಡಲಾಗಿದೆ.

ಅಲ್ಲದೇ, ಪ್ರಭಾರಿ ಮುಖ್ಯ ಶಿಕ್ಷಕಿ ಎನ್.ಎಂ.ಅಣ್ಣೆಪ್ಪನವರ ಅವರು 20 ವಿದ್ಯಾರ್ಥಿಗಳ ಪೈಕಿ 14 ವಿದ್ಯಾರ್ಥಿಗಳ ವರ್ಗಾವಣೆ ಪ್ರಮಾಣಪತ್ರಗಳನ್ನು ಮತ್ತು ಆರ್.ಎಂ. ಹೋಳಿನ ಹಾಗೂ ಮೈತ್ರಿ ತಲಾ 4 ವಿದ್ಯಾರ್ಥಿಗಳ ವರ್ಗಾವಣೆ ಪ್ರಮಾಣಪತ್ರಗಳನ್ನು ಏಕಾಏಕಿ ಬೇರೆ ಶಾಲೆಗೆ ನೀಡಿ ಕನ್ನಡ ಮಾಧ್ಯಮ ಸರ್ಕಾರಿ ಶಾಲೆಯನ್ನು ದುರುದ್ದೇಶದಿಂದ ಮುಚ್ಚುವ ಹುನ್ನಾರದ ಪ್ರಯತ್ನ ಮೇಲ್ನೋಟಕ್ಕೆ ಕಂಡು ಬಂದಿದೆ. ಹೀಗಾಗಿ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಸೇವೆಯಿಂದ ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ರಾಜ್ಯಸಭೆ: ನಾಸಿರ್–ಅಗರವಾಲ್ ಜಟಾಪಟಿ

ಪ್ರಜಾವಾಣಿ ವಾರ್ತೆ

ಸೈಯದ್ ನಾಸಿರ್ ಹುಸೇನ್

ರಾಧಾ ಮೋಹನ್‌ದಾಸ್ ಅಗರವಾಲ್

ನವದೆಹಲಿ: ರಾಜ್ಯಸಭೆಯಲ್ಲಿ ವಕ್ಫ್ ಮಸೂದೆಯ ಚರ್ಚೆಯ ಸಂದರ್ಭದಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸಯ್ಯದ್ ನಾಸಿರ್ ಹುಸೇನ್ ಹಾಗೂ ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರವಾಲ್ ನಡುವೆ ಜಟಾಪಟಿ ನಡೆಯಿತು.

ಮಸೂದೆಯ ಚರ್ಚೆಯಲ್ಲಿ ಪಾಲ್ಗೊಂಡ ಅಗರವಾಲ್, 'ನಾಸಿರ್ ಅವರು ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದ ಸಂದರ್ಭದಲ್ಲಿ ಕರ್ನಾಟಕ ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಘೋಷಣೆಗಳನ್ನು ಕೂಗಲಾಗಿತ್ತು. ಆದರೆ, ಆರೋಪಿಗಳನ್ನು ಬಂಧಿಸಿಲ್ಲ. ಈ ಘೋಷಣೆಗಳನ್ನು ವಿರೋಧಿಸಿದ ಬಿಜೆಪಿ ಕಾರ್ಯಕರ್ತರನ್ನು ಜೈಲಿಗೆ ಕಳುಹಿಸಲಾಗಿತ್ತು' ಎಂದು ಆರೋಪಿಸಿದರು.

ಈ ಮಾತಿಗೆ ನಾಸಿರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಸದನದ ಘನತೆ ಕುಗ್ಗಿಸುವ ಇಂತಹ ಹೇಳಿಕೆ ನೀಡುವುದನ್ನು ತಡೆಯಬೇಕು ಎಂದು ಕಾಂಗ್ರೆಸ್‌ನ ಪ್ರಮೋದ್ ತಿವಾರಿ ಅವರು ರಾಜ್ಯಸಭಾ ನಿಯಮಗಳನ್ನು ಉಲ್ಲೇಖಿಸಿದರು.

ಆಗ ಅಗರವಾಲ್ ಬೆಂಬಲಕ್ಕೆ ಗೃಹ ಸಚಿವ ಅಮಿತ್ ಶಾ ಹಾಗೂ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಧಾವಿಸಿ, 'ಹುಸೇನ್ ವಿರುದ್ಧ ಅಗರವಾಲ್ ಆರೋಪ ಮಾಡಿಲ್ಲ. ಬೇರೆ ಯಾರೋ ಘೋಷಣೆ ಕೂಗಿದ್ದಾರೆ' ಎಂದರು.

ನಾಸಿರ್ ಅವರು ಪ್ರತಿಕ್ರಿಯೆ ನೀಡಲು ಮುಂದಾದರು. 'ವಕ್ಫ್ ಮಸೂದೆ ಬಗ್ಗೆ ನೀವು ಈಗಾಗಲೇ ವಿಸ್ತೃತವಾಗಿ ಮಾತನಾಡಿದ್ದೀರಿ. ಮತ್ತೆ ಅವಕಾಶ ನೀಡಲು ಸಾಧ್ಯವಿಲ್ಲ' ಎಂದು ಸಭಾಪತಿ ಸ್ಪಷ್ಟಪಡಿಸಿದರು.

ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಮಧ್ಯಪ್ರವೇಶಿಸಿ, 'ಅಗರವಾಲ್ ಮಾಡಿರುವ ಆರೋಪಗಳಿಗೆ ವಿವರಣೆ ನೀಡಲು ಹುಸೇನ್ ಅವರಿಗೆ 30 ಸೆಕೆಂಡು ಅಥವಾ 10 ಸೆಕೆಂಡುಗಳ ಕಾಲಾವಕಾಶ ನೀಡಬೇಕು' ಎಂದು ಒತ್ತಾಯಿಸಿದರು.

'ಹುಸೇನ್ ಅವರಿಗೆ ಈ ಹಿಂದೆಯೇ ಅವಕಾಶ ನೀಡಲಾಗಿತ್ತು. ಅವರ ಮಾತುಗಳನ್ನು ಎಲ್ಲರೂ ಕೇಳಿದ್ದೇವೆ' ಎಂದು ನಿರ್ಮಲಾ ಹೇಳಿದರು. ಈ ಹೇಳಿಕೆಗೆ ಕಾಂಗ್ರೆಸ್ ಸದಸ್ಯರು ಆಕ್ಷೇಪಿಸಿದರು.

'ಕೈ; ಸರ್ಕಾರಕ್ಕೆ ರಾಹುಲ್- ಪ್ರಿಯಾಂಕಾ ಒತ್ತಡ'

ಸಂಸದ ತೇಜಸ್ವಿ ಸೂರ್ಯ

ನವದೆಹಲಿ: ವಯನಾಡ್‌ನ ಮಾಜಿ ಹಾಗೂ ಹಾಲಿ ಸಂಸದರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ವಾದ್ರಾ ಒತ್ತಡಕ್ಕೆ ಮಣಿದಿರುವ ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಬಂಡಿಪುರ ಅಭಯಾರಣ್ಯದಲ್ಲಿ ರಾತ್ರಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲು ಮುಂದಾಗಿದೆ ಎಂದು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಆರೋಪಿಸಿದರು.

ಲೋಕಸಭೆಯಲ್ಲಿ ಗುರುವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ಸರ್ಕಾರದ ತೀರ್ಮಾನದಿಂದಾಗಿ ಬಂಡಿಪುರದ ಸೂಕ್ಷ್ಮ ಪರಿಸರ ವ್ಯವಸ್ಥೆ ಮೇಲೆ ಪ್ರಹಾರ ಮಾಡಿದಂತಾಗುತ್ತದೆ. ಕೇಂದ್ರ ಅರಣ್ಯ ಸಚಿವರು ಈ ವಿಷಯದಲ್ಲಿ ಮಧ್ಯ ಪ್ರವೇಶಿಸಿ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕು' ಎಂದು ಕೋರಿದರು.

ತೆಲಂಗಾಣದಲ್ಲಿ ರಿಯಲ್ ಎಸ್ಟೇಟ್ ಮಾಫಿಯಾದ ಆಣತಿಯಂತೆ ಕಾರ್ಯನಿರ್ವಹಿಸುತ್ತಿರುವ ಕಾಂಗ್ರೆಸ್ ಸರ್ಕಾರವು ಮಧ್ಯರಾತ್ರಿಯ ಕಾರ್ಯಾಚರಣೆ ನಡೆಸಿ ಕಾಂಚ ಗಚಿಬೌಲಿಯಲ್ಲಿ 400 ಎಕರೆ ಅರಣ್ಯ ಭೂಮಿಯನ್ನು ನಾಶ ಮಾಡಿದೆ ಎಂದರು.

ಸ್ವಾಮಿಯ 1,044 ನೇ ಪ್ರತಿಷ್ಠಾಪನಾ ದಿನ

ಬಾಹುಬಲಿಯ ಮೆರವಣಿಗೆ

ಪ್ರಜಾವಾಣಿ ವಾರ್ತೆ

ಶ್ರವಣಬೆಳಗೊಳದ ಮುಖ್ಯ ರಸ್ತೆಯಲ್ಲಿ ಸುವರ್ಣ ರಥದ ಭವ್ಯ ಮೆರವಣಿಗೆ ಸಾಗಿದಾಗ, ಭಕ್ತರು ಶ್ರೀಫಲಗಳೊಂದಿಗೆ ದೀಪದ ಆರತಿ ಸಮರ್ಪಿಸಿದರು

ಶ್ರವಣಬೆಳಗೊಳ: ಭಗವಾನ್ ಬಾಹುಬಲಿ ಸ್ವಾಮಿಯ 1,044ನೇ ಪ್ರತಿಷ್ಠಾಪನಾ ದಿನದ ಪ್ರಯುಕ್ತ, ಸುವರ್ಣ ರಥದಲ್ಲಿ ಪ್ರತಿಷ್ಠಾಪಿಸಿದ್ದ ಬಾಹುಬಲಿ ಮೂರ್ತಿಯ ಅದ್ದೂರಿಯ ಮೆರವಣಿಗೆಗೆ ಕ್ಷೇತ್ರದ ಪೀಠಾಧಿಪತಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಬುಧವಾರ ರಾತ್ರಿ ಶ್ರೀಫಲ ಅರ್ಪಿಸುವುದರೊಂದಿಗೆ ಚಾಲನೆ ನೀಡಿದರು.

ರಥದ ಮಧ್ಯಭಾಗದಲ್ಲಿ ಪ್ರತಿಷ್ಠಾಪಿಸಿದ್ದ ಮೂರ್ತಿಯ ಸುತ್ತ ಅಷ್ಟ ಮಂಗಲಗಳನ್ನು ಇರಿಸಲಾಗಿದ್ದು, ವಿದ್ಯುತ್ ದೀಪಗಳನ್ನು ಅಳವಡಿಸಲಾಗಿತ್ತು. ಶೋಭಾಯಾತ್ರೆಯ ಮುಂಭಾಗ ನೂತನವಾಗಿ ಅರ್ಪಿಸಿದ ರಜತದ ದಂಡಗಳ ಗೌರವ, ರಜತದ ಚಾಮರಗಳ ಮೂಲಕ ಬಾಲಕರು ಸಲ್ಲಿಸಿದ ಸೇವೆ ಕಣ್ಮನ ಸೆಳೆಯಿತು. ಕನ್ಯಾಶ್ರಮದ ಬಾಲಕಿಯರು, ವಿದ್ಯಾಪೀಠದ ಬಾಲಬ್ರಹ್ಮಚಾರಿಗಳು, ಧರ್ಮಧ್ವಜಗಳನ್ನು ಹಿಡಿದು ಸಾಗುತ್ತಿದ್ದಂತೆಯೇ ವಿವಿಧ ಮಂಗಲ ವಾದ್ಯಗಳು, ಮಂಗಳೂರಿನ ಚೆಂಡೆ ವಾದ್ಯ, ಅರಸೀಕೆರೆಯ ಚಿಟ್ಟಿಮೇಳಗಳ ಸಂಗೀತಕ್ಕೆ ಯುವಕ ಯುವತಿಯರು ನರ್ತಿಸಿದರು. ಶ್ರಾವಕ- ಶ್ರಾವಕಿಯರು ಭಗವಾನ್ ಬಾಹುಬಲಿ ಸ್ವಾಮಿಗೆ ಜಯಘೋಷಗಳನ್ನು ಮೊಳಗಿಸಿದಾಗ ಇಕ್ಕೆಲಗಳಲ್ಲಿ ನೆರೆದಿದ್ದವರು ಕಣ್ತುಂಬಿಕೊಂಡರು.

ಮನೆಗಳ ಮುಂದೆ ಸುಂದರವಾಗಿ ರಂಗೋಲಿ ಹಾಕಿದ್ದ ಮಹಿಳೆಯರು, ಉತ್ಸವಕ್ಕೆ ಹಣ್ಣು ಕಾಯಿ, ಹೂ, ದೀಪದಾರತಿಯನ್ನು ಸಮರ್ಪಿಸಿದರು. ಈ ಉತ್ಸವವು ಜೈನಮಠದಿಂದ ಹೊರಟು ಭಂಡಾರ ಬಸದಿಯ ಸುತ್ತ ಸಾಗಿ ಮೈಸೂರು ಕಲ್ಯಾಣಿ, ಬೆಂಗಳೂರು ರಸ್ತೆಗಳ ಮೂಲಕ ಜೈನಮಠಕ್ಕೆ ತಲುಪಿತು.

ಚೈತ್ರ ಶುದ್ಧ ಷಷ್ಠಿ ಗುರುವಾರ ವದೆಗಲ್ ಚನ್ನಣ್ಣ ಸಿದ್ಧರ ಬಸದಿಯಲ್ಲಿ ಮತ್ತು ಜಾರುಗುಪ್ಪೆ ಪಾರ್ಶ್ವನಾಥ ಬಸದಿ ಚತುರ್ವಂಶತಿ ತೀರ್ಥಂಕರರ ಬಸದಿಗಳಲ್ಲಿ ವಿಶೇಷ ಅಭಿಷೇಕ ಆರಾಧನೆಗಳು ನಡೆದವು. ಪೂಜೆಯ ನೇತೃತ್ವವನ್ನು ನಂದಕುಮಾರ್ ಶಾಸ್ತ್ರಿ, ಎಸ್.ಪಿ.ಜಿನೇಶ್, ಪ್ರೇಮ್‌ಕುಮಾರ್, ಕಿರಣ್, ಜ್ವಾಲಾಕುಮಾರ್, ವಿಮಲ್ ತಂಡದವರು ವಹಿಸಿದ್ದರು.

ಗ್ರಾಮ ಪಂಚಾಯಿತಿ ಸದಸ್ಯರಾದ ಶಾಲಿನಿ ದೇವೇಂದ್ರ ಕುಮಾರ್, ಎಸ್.ಬಿ.ಯಶಸ್, ಲೋಕೇಶ್, ಕೂಷ್ಮಾಂಡಿನಿ ಮಹಿಳಾ ಸಮಾಜದ ಅಧ್ಯಕ್ಷೆ ಮಹಾಲಕ್ಷ್ಮಿ, ಪ್ರಮೋದ್ ಕುಮಾರ್, ಜೈನ ಸಮಾಜದ ಕಾರ್ಯದರ್ಶಿ ಎಸ್.ಬಿ. ಬಾನುಕುಮಾರ್, ಆಡಳಿತ ಮಂಡಳಿಯ ಕಾರ್ಯದರ್ಶಿ ಎಸ್.ಪಿ.ಮಹೇಶ್, ಸದಸ್ಯರಾದ ಸಂಜು, ಭರತೇಶ್, ಕಿರಣ್, ಶ್ರೇಯಸ್ ಇದ್ದರು.

ಸಂಕ್ಷಿಪ್ತ ಸುದ್ದಿ

ನಟ ಜಗ್ಗೇಶ್‌ಗೆ ಶ್ರೀಕೃಷ್ಣದೇವರಾಯ ಪುರಸ್ಕಾರ

ಬೆಂಗಳೂರು: ತೆಲುಗು ವಿಜ್ಞಾನ ಸಮಿತಿ ನೀಡುವ ಶ್ರೀಕೃಷ್ಣ ದೇವರಾಯ ಪುರಸ್ಕಾರಕ್ಕೆ ನಟ ಮತ್ತು ರಾಜ್ಯಸಭಾ ಸದಸ್ಯ ಜಗ್ಗೇಶ್ ಅವರನ್ನು ಆಯ್ಕೆ ಮಾಡಲಾಗಿದೆ. ನಟ ಸಾಯಿ ಕುಮಾರ್ ಅವರಿಗೆ ಸುವರ್ಣ ಸತ್ಕಾರ ನೀಡಲಿದೆ.

ಏಪ್ರಿಲ್ 6ರಂದು ಬೆಳಿಗ್ಗೆ 10ಕ್ಕೆ ಮಲ್ಲೇಶ್ವರದ ವೈಯಾಲಿಕಾವಲ್‌ನಲ್ಲಿರುವ ಶ್ರೀಕೃಷ್ಣದೇವರಾಯ ಕಲಾಮಂದಿರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪುರಸ್ಕಾರ ನೀಡಲಾಗುವುದು. ಪ್ರಶಸ್ತಿಯು ₹ 25 ಸಾವಿರ ನಗದು ಹೊಂದಿದೆ. ಸಮಾರಂಭದಲ್ಲಿ ಆಂಧ್ರ ಪ್ರದೇಶದ ವಿಧಾನಸಭೆಯ ಉಪಾಧ್ಯಕ್ಷ ಕೆ. ರಘುರಾಮ ಕೃಷ್ಣರಾಜು, ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ, ತೆಲುಗು ವಿಜ್ಞಾನ ಸಮಿತಿ ಅಧ್ಯಕ್ಷ ಎ. ರಾಧಾಕೃಷ್ಣರಾಜು, ತೆಲುಗು ವಿಜ್ಞಾನ ಸಮಿತಿ ವಿದ್ಯಾಸಂಸ್ಥೆಯ ಅಧ್ಯಕ್ಷ ಶ್ಯಾಮರಾಜು ಭಾಗವಹಿಸಲಿದ್ದಾರೆ ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಐ. ಲಕ್ಷ್ಮೀ ರೆಡ್ಡಿ ತಿಳಿಸಿದ್ದಾರೆ.

ವಿಶೇಷ ಅನುದಾನಕ್ಕೆ ಮನವಿ

ಬೆಂಗಳೂರು: ಬರಗೂರು ರಾಮಚಂದ್ರಪ್ಪ ನೇತೃತ್ವದ ಸಾಂಸ್ಕೃತಿಕ ವಿಶ್ವಕೋಶ ರಚನಾ ಸಮಿತಿ ಸಲಹೆಯಂತೆ 'ಬಂಜಾರ ಸಾಂಸ್ಕೃತಿಕ ವಿಶ್ವಕೋಶ' ರಚಿಸಲು ವಿಶೇಷ ಅನುದಾನ ಕೋರಿ ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ಎಸ್. ತಂಗಡಗಿ ಅವರಿಗೆ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.

ವಿಶ್ವಕೋಶ ರಚನೆಗೆ ತಗಲುವ ಆರಂಭದ ಅನುದಾನವನ್ನು ಬಿಡುಗಡೆ ಮಾಡುವುದಾಗಿ ಸಚಿವರು ಭರವಸೆ ನೀಡಿದರು. ನಿಯೋಗದಲ್ಲಿ ಭಾಷಾ ತಜ್ಞ ಹಂಪ ನಾಗರಾಜಯ್ಯ, ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್, ಪರಿಸರ ತಜ್ಞ ಡಿ. ಪರಮೇಶ್ ನಾಯಕ್ ಇದ್ದರು.

ಹೆಚ್ಚುವರಿ ಆಹಾರಧಾನ್ಯ: ಕೇಂದ್ರಕ್ಕೆ ಮನವಿ

ನವದೆಹಲಿ: ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಅಡಿಯಲ್ಲಿ ಅಕ್ಕಿಯ ಜೊತೆಗೆ ಹೆಚ್ಚುವರಿ ಆಹಾರ ಧಾನ್ಯಗಳನ್ನು ಕರ್ನಾಟಕಕ್ಕೆ ಒದಗಿಸಬೇಕು ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಮನವಿ ಮಾಡಿದರು.

ಕರ್ನಾಟಕ ಸರ್ಕಾರವು ಈ ಹಿಂದೆ ಅಕ್ಕಿಯ ಜೊತೆಗೆ ಗೋಧಿ, ಸಕ್ಕರೆ ಮತ್ತಿತರ ಸಾಮಗ್ರಿಗಳನ್ನು ವಿತರಿಸುತ್ತಿತ್ತು. ಪ್ರಸ್ತುತ ಪಡಿತರ ಚೀಟಿದಾರರು ಅಕ್ಕಿ, ರಾಗಿ ಮತ್ತು ಜೋಳ ಮಾತ್ರ ಪಡೆಯುತ್ತಿದ್ದಾರೆ. ಇತ್ತೀಚೆಗೆ ಪಿಡಿಎಸ್ ಫಲಾನುಭವಿಗಳ ಸಮೀಕ್ಷೆ ನಡೆಸಲಾಗಿತ್ತು. ಶೇ 92 ಪಡಿತರ ಚೀಟಿದಾರರು ಗೋಧಿ, ಸಕ್ಕರೆ ಮತ್ತು ಇತರ ಆಹಾರ ಧಾನ್ಯಗಳ ಅಗತ್ಯವಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಕ್ಕಿಯ ಜೊತೆಗೆ ತೈಲ ಮತ್ತು ಬೇಳೆಯನ್ನು ವಿತರಿಸಲು ವ್ಯವಸ್ಥೆ ಮಾಡಬೇಕಿದೆ. ಇದಕ್ಕ ಕೇಂದ್ರದ ನೆರವು ಬೇಕು' ಎಂದು ಕೋರಿದರು.

ಬೆಕ್ಕು ನುಗ್ಗಿರಬಹುದು ಎಂದು ಭಾವಿಸಿ ಸುಮ್ಮನಿದ್ದ ದಂಪತಿ • ಐದು ತಾಸು ಕಾರ್ಯಾಚರಣೆ

ಜಿಗಣಿ: ಮನೆ ಹೊಕ್ಕ ಚಿರತೆ ಸೆರೆ

ಪ್ರಜಾವಾಣಿ ವಾರ್ತೆ

ಆನೇಕಲ್ ತಾಲ್ಲೂಕಿನ ಜಿಗಣಿಯಲ್ಲಿ ಸೆರೆಯಾದ ಚಿರತೆ

ಆನೇಕಲ್: ತಾಲ್ಲೂಕಿನ ಜಿಗಣಿ ಪುರಸಭೆ ವ್ಯಾಪ್ತಿಯ ಕುಂಟ್ಲುರೆಡ್ಡಿ ಬಡಾವಣೆಯಲ್ಲಿ ಗುರುವಾರ ಮನೆಯೊಂದಕ್ಕೆ ನುಗ್ಗಿದ ಚಿರತೆಯನ್ನು ಅರಣ್ಯ ಇಲಾಖೆಯ ಸಿಬ್ಬಂದಿ ಐದು ತಾಸಿಗೂ ಹೆಚ್ಚು ಕಾರ್ಯಾಚರಣೆ ನಡೆಸಿ ಸೆರೆಹಿಡಿದಿದ್ದಾರೆ.

ಜಿಗಣಿ ಪುರಸಭೆಯ 18ನೇ ವಾರ್ಡ್‌ನ ವೆಂಕಟೇಶ್ ಮತ್ತು ವೆಂಕಟಲಕ್ಷ್ಮಿ ದಂಪತಿ ಮನೆಯೊಳಗೆ ಗುರುವಾರ ಬೆಳಗ್ಗೆ 8ರ ಸುಮಾರಿಗೆ ಚಿರತೆ ಏಕಾಏಕಿ ನುಗ್ಗಿತ್ತು. ಮನೆಯಲ್ಲಿ ಟಿ.ವಿ. ನೋಡುತ್ತಾ ಕುಳಿತಿದ್ದ ದಂಪತಿಯು ಬೆಕ್ಕು ನುಗ್ಗಿರಬಹುದೆಂದು ಭಾವಿಸಿ ಸುಮ್ಮನಾಗಿದ್ದರು.

ಕುಂಟ್ಲುರೆಡ್ಡಿ ಬಡಾವಣೆಯಲ್ಲಿ ಬೆಳಿಗ್ಗೆ 7.30ರ ಸುಮಾರಿಗೆ ಕಾಣಿಸಿಕೊಂಡ ಚಿರತೆ ಜನರನ್ನು ಕಂಡು ಗಾಬರಿಗೊಂಡು, ಬಾಗಿಲು ತೆರೆದಿದ್ದ ವೆಂಕಟೇಶ್ ಅವರ ಮನೆಗೆ ನುಗ್ಗಿದೆ. ಕೊಠಡಿಯೊಳಗಿನ ಮಂಚದ ಕೆಳಗೆ ಅವಿತುಕೊಂಡಿದೆ. ಕೊಠಡಿ ಒಳಗೆ ಹೋದ ವೆಂಕಟಲಕ್ಷ್ಮಿ ಅವರಿಗೆ ಮಂಚದ ಕೆಳಗಿಂದ ಹೊರಚಾಚಿದ್ದ ಚಿರತೆಯ ಉದ್ದನೆಯ ಬಾಲ ಕಂಡಿದೆ.

ದಿಟ್ಟಿಸಿ ನೋಡಿದ ಅವರಿಗೆ ಚಿರತೆ ಮೇಲಿನ ಚುಕ್ಕಿಗಳು ಕಂಡಿವೆ. ತಮ್ಮ ಮನೆಯ ಮಂಚದ ಕೆಳಗಿರುವುದು ಬೆಕ್ಕು ಅಲ್ಲ, ಚಿರತೆ ಎಂದು ಮನದಟ್ಟಾಗಿದ್ದೇ ತಡ ನಿಂತಲ್ಲೇ ಬೆವರಿದ್ದಾರೆ.

ತಕ್ಷಣ ಸಾವರಿಕೊಂಡ ಅವರು, ಕಾಲಿನ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ವಿಶ್ರಾಂತಿ ಪಡೆಯುತ್ತಿದ್ದ ಪತಿ ವೆಂಕಟೇಶ್ ಅವರನ್ನು ಮೆಲ್ಲನೆ ಕರೆದುಕೊಂಡು ಮನೆಯಿಂದ ಹೊರಗೆ ಓಡಿಬಂದಿದ್ದಾರೆ.

ಮನೆಯ ಬಾಗಿಲು ಮುಚ್ಚಿ ಬೀಗ ಹಾಕಿ, ಅರಣ್ಯ ಇಲಾಖೆ ಸಿಬ್ಬಂದಿಗೆ ಫೋನ್ ಮೂಲಕ ತಮ್ಮ ಮನೆಯಲ್ಲಿ ಚಿರತೆ ಅವಿತುಕೊಂಡಿರುವ ವಿಷಯ ತಿಳಿಸಿದ್ದಾರೆ.

ಸ್ಥಳಕ್ಕೆ ಧಾವಿಸಿದ ಅರಣ್ಯ ಇಲಾಖೆಯ ಸಿಬ್ಬಂದಿ ಮತ್ತು ಜಿಗಣಿ ಪೊಲೀಸರು ಕಾರ್ಯಾಚರಣೆ ಆರಂಭಿಸಿದರು. ಐದು ತಾಸಿಗೂ ಹೆಚ್ಚು ಹೊತ್ತು ಕಾರ್ಯಾಚರಣೆ ನಡೆಸಿ ಸಿಬ್ಬಂದಿ ಚಿರತೆಗೆ ಅರವಳಿಕೆ ಮದ್ದು ನೀಡುವಲ್ಲಿ ಯಶಸ್ವಿಯಾದರು. ನಂತರ ಚಿರತೆ ಹಿಡಿದು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಸಾಗಿಸಿದರು.

6ರಿಂದ 8 ವರ್ಷದ ಹೆಣ್ಣುಚಿರತೆಗೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಪಶು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕಾರ್ಯಾಚರಣೆಯಲ್ಲಿ ಅರಣ್ಯ ಸಂರಕ್ಷಣಾಧಿಕಾರಿ ಶಿವಶಂಕರ್, ಬೆಂಗಳೂರು ನಗರ ಉಪ ಅರಣ್ಯ ಸಂರಕ್ಷಣಾಧಿಕಾರಿ ರವೀಂದ್ರಕುಮಾರ್, ಆರ್‌ಎಫ್‌ಒ ಶ್ರೀಧರ್, ಡಿಆರ್‌ಎಫ್‌ಒ ಬಾಲಕೃಷ್ಣ, ಬನ್ನೇರುಘಟ್ಟ ಉದ್ಯಾನದ ವೈದ್ಯ ಕಿರಣ್ ಭಾಗಿಯಾಗಿದ್ದರು.

ಮನೆಯೊಳಗೆ ಚಿರತೆ ಹೊಕ್ಕಿರುವ ವಿಷಯ ತಿಳಿಯುತ್ತಿದ್ದಂತೆಯೇ ಚಿರತೆ ನೋಡಲು ಜಿಗಣಿಯ ಕುಂಟ್ಲುರೆಡ್ಡಿ ಬಡಾವಣೆಯ ಮನೆ ಮುಂದೆ ಜನರು ಮುಗಿಬಿದ್ದರು. ಜನರನ್ನು ನಿಯಂತ್ರಿಸುವುದೇ ಪೊಲೀಸರಿಗೆ ಕಷ್ಟವಾಯಿತು.

ಎನ್‌ಆರ್‌ಐಗೆ 'ಪ್ರಜಾವಾಣಿ' ವಿಡಿಯೊ ವರದಿ ಪ್ರೇರಣೆ

ಬಳ್ಳಿ ಆಲೂಗಡ್ಡೆ ಹುಡುಕಿ ಬಂದ ವಿಜ್ಞಾನಿ

ಪ್ರಜಾವಾಣಿ ವಾರ್ತೆ

ಶಿಡ್ಲಘಟ್ಟ ತಾಲ್ಲೂಕಿನ ಅಪ್ಪೇಗೌಡನಹಳ್ಳಿ ರೈತ ಎ.ಎಂ.ತ್ಯಾಗರಾಜ್ ಬೆಳೆದಿರುವ ಬಳ್ಳಿ ಆಲೂಗಡ್ಡೆಯನ್ನು ತೆಗೆದುಕೊಂಡು ಹೋದ ಅನಿವಾಸಿ ಭಾರತೀಯ ರಾಘವರೆಡ್ಡಿ

ಶಿಡ್ಲಘಟ್ಟ: ನಾಲ್ಕು ವರ್ಷಗಳಿಂದ ಬಳ್ಳಿ ಆಲೂಗಡ್ಡೆ ಬೆಳೆಯುತ್ತಿರುವ ತಾಲ್ಲೂಕಿನ ಅಪ್ಪೇಗೌಡನಹಳ್ಳಿ ರೈತ ಎ.ಎಂ. ತ್ಯಾಗರಾಜ್ ಅವರನ್ನು ಹುಡುಕಿಕೊಂಡು ಅಮೆರಿಕದಲ್ಲಿ ನೆಲಸಿರುವ ಕೃಷಿ ವಿಜ್ಞಾನಿ ರಾಘವರೆಡ್ಡಿ ಗ್ರಾಮಕ್ಕೆ ಬಂದಿದ್ದಾರೆ.

ತ್ಯಾಗರಾಜ್ ಬೆಳೆದ ಬಳ್ಳಿ ಆಲೂಗಡ್ಡೆ ಕುರಿತು 'ಪ್ರಜಾವಾಣಿ' ವರದಿ ಪ್ರಕಟಿಸುವ ಜೊತೆಗೆ ವಿಡಿಯೊ ವರದಿ ಕೂಡ ಮಾಡಿತ್ತು. (https://www.youtube.com/watch?v=sKJZt3Sm-5w) ವಿಡಿಯೊ ನೋಡಿದ ರಾಘವರೆಡ್ಡಿ ಅವರು ತ್ಯಾಗರಾಜ್ ಅವರ ತೋಟಕ್ಕೆ ಭೇಟಿ ನೀಡಿದ್ದರು.

'ಬಳ್ಳಿ ಆಲೂಗಡ್ಡೆಯಲ್ಲಿ ಸಾಕಷ್ಟು ಔಷಧೀಯ ಗುಣಗಳಿವೆ. ಇದನ್ನು ಔಷಧೀಯ ಕಣಜ ಎಂದು ಆದಿವಾಸಿಗಳು ಬಳಸುತ್ತಿದ್ದರು. ತ್ಯಾಗರಾಜ್ ಬೆಳೆದಿರುವ ಬಳ್ಳಿ ಆಲೂಗಡ್ಡೆ ಬಗ್ಗೆ ವಿಡಿಯೊ ಕೃಷಿ ವಿಜ್ಞಾನಿಯಾದ ನನ್ನ ಗಮನವನ್ನು ಸಹಜವಾಗಿ ನೋಡಿದ ನಂತರ ಇಲ್ಲಿಗೆ ಹಿಂದಿರುಗಿದಾಗ ಅವರ ತೋಟಕ್ಕೆ ಭೇಟಿ ನೀಡಬೇಕು ಎಂದು ವಿಳಾಸ ಬರೆದಿಟ್ಟುಕೊಂಡಿದ್ದೆ. ತೋಟದಲ್ಲಿ ಬೆಳೆದ ಆಲೂಗಡ್ಡೆಗಳನ್ನು ತೆಗೆದುಕೊಂಡು ಹೋಗುತ್ತಿರುವೆ' ಎಂದು ರಾಘವರೆಡ್ಡಿ ತಿಳಿಸಿದರು.

'ಬೆಂಗಳೂರಿನ ಜಿಕೆವಿಕೆಯಲ್ಲಿ ಕೃಷಿ ವಿಜ್ಞಾನದಲ್ಲಿ ಎಂ.ಎಸ್ಸಿ ಪದವಿ ಪಡೆದ ನಂತರ ಉದ್ಯೋಗ ನಿಮಿತ್ತ 45 ವರ್ಷಗಳಿಂದ ಅಮೆರಿಕದ ಸಿಯಾಟೆಲ್‌ನಲ್ಲಿ ನೆಲಸಿರುವೆ. ಈಗ ಹೊಸಕೋಟೆ ಬಳಿ ದೇವನಗುಂದಿ ಹೊಸಹಳ್ಳಿಯಲ್ಲಿ ಜಮೀನು ಖರೀದಿಸಿ ಬರ ಸಹಿಷ್ಣು ಹಣ್ಣಿನ ಮರ ಮತ್ತು ಸಸ್ಯಗಳನ್ನು ಬೆಳೆಸುತ್ತಿದ್ದೇನೆ. ಮೂರು ವರ್ಷ ಆರೈಕೆ ಮಾಡಿದರೆ ಹಣ್ಣಿನ ಮರಗಳ ಅರಣ್ಯವನ್ನು ರೂಪಿಸುವ ಉದ್ದೇಶ ಹೊಂದಿದ್ದೇನೆ. ಬಳ್ಳಿ ಆಲೂಗಡ್ಡೆ ಕೂಡ ಈ ಅರಣ್ಯಕ್ಕೆ ಹೊಸ ಸೇರ್ಪಡೆಯಾಗಲಿದೆ. ಅಮೆರಿಕಕ್ಕೂ ಒಂದೆರಡು ಆಲೂಗಡ್ಡೆ ತೆಗೆದುಕೊಂಡು ಹೋಗುವೆ. ವರ್ಷಕ್ಕೊಮ್ಮೆ ಭಾರತಕ್ಕೆ ಬರುತ್ತಿರುತ್ತೇನೆ. ನಾನಿಲ್ಲದಿದ್ದಾಗ ಜಮೀನನ್ನು ನೋಡಿಕೊಳ್ಳಲು ಒಬ್ಬರನ್ನು ನೇಮಕ ಮಾಡಿರುವೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಹೆದ್ದಾರಿ ಕಾಮಗಾರಿಗೆ ವೇಗ: ಕಾರಜೋಳ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಚಿತ್ರದುರ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೆಲವೊಂದು ಹೆದ್ದಾರಿ ಕಾಮಗಾರಿಗಳು ನಿಧಾನಗತಿಯಲ್ಲಿ ಸಾಗುತ್ತಿವೆ. ಈ ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಸಂಸದ ಗೋವಿಂದ ಕಾರಜೋಳ ಆಗ್ರಹಿಸಿದರು.

ಲೋಕಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾರಜೋಳ ಪ್ರಶ್ನೆಗೆ ಉತ್ತರಿಸಿದ ಹೆದ್ದಾರಿ ಸಚಿವ ನಿತಿನ್ ಗಡ್ಕರಿ, 'ಚಿತ್ರದುರ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಏಳು ಹೆದ್ದಾರಿ ಯೋಜನೆಗಳು ಪ್ರಗತಿಯಲ್ಲಿವೆ' ಎಂದರು.

₹1167 ಕೋಟಿ ವೆಚ್ಚದಲ್ಲಿ ಚಳ್ಳಕೆರೆ-ಹಿರಿಯೂರು ಹೆದ್ದಾರಿಯನ್ನು ನಾಲ್ಕು ಪಥದ ಹೆದ್ದಾರಿಯನ್ನಾಗಿ ಪರಿವರ್ತಿಸುವ ಕೆಲಸ ಶೇ 95ರಷ್ಟು ಪೂರ್ಣಗೊಂಡಿದೆ. ₹109 ಕೋಟಿ ವೆಚ್ಚದ ಹೊಸದುರ್ಗ-ಹೊಳಲ್ಕೆರೆ ದ್ವಿಪಥ ಹೆದ್ದಾರಿ ಕಾಮಗಾರಿ ಶೇ 92ರಷ್ಟು ಮುಗಿದಿದೆ. ಕಡೂರು-ಹೊಸದುರ್ಗ ದ್ವಿಪಥ ಹೆದ್ದಾರಿ ಕಾಮಗಾರಿ ಶೇ 13ರಷ್ಟು ಮುಗಿದಿದೆ ಎಂದು ಸಚಿವರು ತಿಳಿಸಿದರು.

ಟ್ರಂಪ್ ಸುಂಕದಿಂದ ನಷ್ಟ ಖಚಿತ ಹಾನಿ ಮಿತಿಗೊಳಿಸುವುದು ಆದ್ಯತೆಯಾಗಲಿ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಾವು ವಿವಿಧ ದೇಶಗಳ ಉತ್ಪನ್ನಗಳ ಮೇಲೆ ಪ್ರತಿಸುಂಕ ವಿಧಿಸುವ ದಿನವನ್ನು 'ವಿಮೋಚನೆಯ ದಿನ' ಎಂದು ಕರೆದುಕೊಂಡಿದ್ದರು. ಆ ದಿನವಾದ ಗುರುವಾರ ಅವರು ಘೋಷಿಸಿರುವ ಸುಂಕ ಹೆಚ್ಚಳವು ಜಗತ್ತಿನ ವಿವಿಧ ಮಾರುಕಟ್ಟೆಗಳಲ್ಲಿ ತಲ್ಲಣ ಸೃಷ್ಟಿಸಿದೆ. ಜಾಗತಿಕ ಅರ್ಥವ್ಯವಸ್ಥೆಗೆ ಭಂಗ ತಂದಿರಿಸುವ ಹಾಗೂ ಭಾರಿ ಪ್ರಮಾಣದ ವಾಣಿಜ್ಯ ಸಮರಕ್ಕೆ ದಾರಿ ಮಾಡಿಕೊಡುವ ಭೀತಿಯನ್ನು ಅಧ್ಯಕ್ಷ ಟ್ರಂಪ್ ಅವರ ಘೋಷಣೆಗಳು ಸೃಷ್ಟಿಸಿವೆ. ಅಮೆರಿಕಕ್ಕೆ ಆಮದಾಗುವ ಎಲ್ಲವುಗಳ ಮೇಲೆ ಶೇಕಡ 10ರಷ್ಟು ಮೂಲ ತೆರಿಗೆಯನ್ನು ಅವರು ಘೋಷಿಸಿದ್ದಾರೆ. ವ್ಯಾಪಾರ ಮಿಗತೆ ಹೊಂದಿರುವ ವಿವಿಧ ದೇಶಗಳ ಮೇಲೆ ಅವರು ಹೆಚ್ಚುವರಿ ಸುಂಕವನ್ನು ಘೋಷಿಸಿದ್ದಾರೆ. ಚೀನಾದಿಂದ ಆಮದಾಗುವ ಉತ್ಪನ್ನಗಳ ಮೇಲೆ ಟ್ರಂಪ್ ನೇತೃತ್ವದ ಸರ್ಕಾರವು ಶೇಕಡ 54ರಷ್ಟು ಸುಂಕ ವಿಧಿಸಲಿದೆ. ಕಾಂಬೋಡಿಯಾ ಮೇಲೆ ಶೇ 49ರಷ್ಟು ಸುಂಕ ಘೋಷಿಸಲಾಗಿದೆ. ವಿಯೆಟ್ನಾಂ ಮೇಲೆ ಶೇ 46ರಷ್ಟು ಮತ್ತು ಶ್ರೀಲಂಕಾ ಮೇಲೆ ಶೇ 44ರಷ್ಟು ಸುಂಕ ವಿಧಿಸಲಾಗಿದೆ. ಐರೋಪ್ಯ ಒಕ್ಕೂಟದ ಮೇಲೆ ಶೇ 20ರಷ್ಟು, ದಕ್ಷಿಣ ಕೊರಿಯಾ ಮೇಲೆ ಶೇ 26ರಷ್ಟು, ಜಪಾನ್ ಮೇಲೆ ಶೇ 24ರಷ್ಟು ಹಾಗೂ ತೈವಾನ್ ಮೇಲೆ ಶೇ 32ರಷ್ಟು ಸುಂಕ ವಿಧಿಸಲಾಗಿದೆ. ಹೆಚ್ಚುವರಿ ಸುಂಕವು ತಕ್ಷಣದಿಂದಲೇ ಜಾರಿಗೆ ಬರುತ್ತದೆ, ಇದಕ್ಕಾಗಿ ಟ್ರಂಪ್ ಅವರು ರಾಷ್ಟ್ರೀಯ ತುರ್ತು ಸ್ಥಿತಿಯನ್ನು ಘೋಷಿಸಿದ್ದಾರೆ. ಅಮೆರಿಕದ ಅರ್ಥವ್ಯವಸ್ಥೆಗೆ ಹೊಸ ಚೇತನ ಬರಲಿದೆ, ತಯಾರಿಕಾ ವಲಯವು ಬಲ ಪಡೆಯಲಿದೆ ಎಂದು ಅವರು ಭರವಸೆ ನೀಡಿದ್ದಾರೆ. ಆದರೆ ಹೊಸ ಸುಂಕಗಳ ಕಾರಣದಿಂದಾಗಿ ಅಮೆರಿಕದ ಅರ್ಥವ್ಯವಸ್ಥೆಯಲ್ಲಿ ಹಣದುಬ್ಬರ ಹೆಚ್ಚಾಗಿ, ಆರ್ಥಿಕ ಬೆಳವಣಿಗೆಯು ಮಂದಗತಿಗೆ ಹೊರಳಿಕೊಳ್ಳುತ್ತದೆ ಎಂಬ ಭೀತಿಯೂ ಇದೆ.

ಸುಂಕ ಹೆಚ್ಚಳವು ಜಗತ್ತಿನ ವಿವಿಧ ಮಾರುಕಟ್ಟೆಗಳಲ್ಲಿ ತಲ್ಲಣ ಸೃಷ್ಟಿಸಿದೆ

ಭಾರತದಿಂದ ಅಮೆರಿಕ ಆಮದು ಮಾಡಿಕೊಳ್ಳುವ ಎಲ್ಲ ಉತ್ಪನ್ನ ಹಾಗೂ ಸೇವೆಗಳ ಮೇಲೆ ಶೇ 27ರಷ್ಟು ಸುಂಕ ಇರಲಿದೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಪಾಲಿಗೆ ಬಹಳ ಒಳ್ಳೆಯ ಸ್ನೇಹಿತ ಆಗಿದ್ದರೂ ಭಾರತವು ಅಮೆರಿಕವನ್ನು 'ನ್ಯಾಯಯುತವಾಗಿ' ಕಾಣುತ್ತಿಲ್ಲ ಎಂದು ಟ್ರಂಪ್ ದೂರಿದ್ದಾರೆ. ಭಾರತವು ಅಮೆರಿಕದ ಮೇಲೆ ಶೇ 52ರಷ್ಟು ತೆರಿಗೆ ವಿಧಿಸುತ್ತದೆ, ಹೀಗಾಗಿ ಅಮೆರಿಕವು ಭಾರತದ ಉತ್ಪನ್ನ, ಸೇವೆಗಳ ಮೇಲೆ ಶೇ 27ರಷ್ಟು ತೆರಿಗೆ ವಿಧಿಸಲಿದೆ ಎಂದು ಅವರು ಹೇಳಿದ್ದಾರೆ. ಭಾರತವು 'ಬಹಳ, ಬಹಳ ಕಠಿಣ' ದೇಶ ಎಂದು ಅವರು ಬಣ್ಣಿಸಿದ್ದಾರೆ. ಕೃಷಿ, ಆಹಾರ ಉತ್ಪನ್ನಗಳು, ಆಭರಣ, ಎಲೆಕ್ಟ್ರಾನಿಕ್ಸ್, ಜವಳಿ, ಆಟೊಮೊಬೈಲ್ ಸೇರಿದಂತೆ ಹಲವು ಉದ್ಯಮ ವಲಯಗಳ ಉತ್ಪನ್ನಗಳು, ಸೇವೆಗಳ ಮೇಲೆ ಇದರಿಂದಾಗಿ ಕೆಟ್ಟ ಪರಿಣಾಮ ಉಂಟಾಗಬಹುದು. ಆದರೆ, ಪರಿಣಾಮವು ನಿರ್ದಿಷ್ಟವಾಗಿ ಎಷ್ಟಿರುತ್ತದೆ ಎಂಬುದು ಗೊತ್ತಾಗಲು ಇನ್ನೂ ಹಲವು ದಿನಗಳು ಬೇಕಾಗಬಹುದು. ಕೆಲವು ವಿನಾಯಿತಿಗಳ ಕಾರಣದಿಂದಾಗಿ ಔಷಧ ಉದ್ಯಮಕ್ಕೆ ಒಂದಿಷ್ಟು ಲಾಭವಾಗಬಹುದು, ಭಾರತ ಮತ್ತು ಜವಳಿ ಉತ್ಪನ್ನಗಳನ್ನು ರಫ್ತು ಮಾಡುವ ಇತರ ಪ್ರಮುಖ ದೇಶಗಳಿಗೆ ವಿಧಿಸಿರುವ ಸುಂಕದಲ್ಲಿನ ವ್ಯತ್ಯಾಸದ ಕಾರಣದಿಂದಾಗಿ ಭಾರತದ ಜವಳಿ ಉದ್ಯಮಕ್ಕೆ ಒಂದಿಷ್ಟು ಪ್ರಯೋಜನ ಆಗಬಹುದು ಎಂಬ ಅಭಿಪ್ರಾಯ ಇದೆ. ಕೃಷಿ, ಎಲೆಕ್ಟ್ರಾನಿಕ್ಸ್ ಮತ್ತು ಆಭರಣಗಳ ರಫ್ತಿನ ಮೇಲೆ ಹೆಚ್ಚು ದುಷ್ಪರಿಣಾಮ ಉಂಟಾಗಬಹುದು.

ಟ್ರಂಪ್ ಅವರು ಘೋಷಿಸಿರುವ ಸುಂಕಗಳ ಪರಿಣಾಮವಾಗಿ ಭಾರತದ ಒಟ್ಟು ಆರ್ಥಿಕತೆಯ ಮೇಲೆ ಹೆಚ್ಚು ಪರಿಣಾಮ ಉಂಟಾಗಲಿಕ್ಕಿಲ್ಲ. ಏಕೆಂದರೆ ಭಾರತ ಮತ್ತು ಅಮೆರಿಕ ನಡುವಿನ ಸರಕು ವಹಿವಾಟಿನ ಪ್ರಮಾಣವು ಭಾರತದ ಜಿಡಿಪಿಯ ಶೇ 3ರಷ್ಟು ಮಾತ್ರ ಇದೆ. ಅಮೆರಿಕ ವಿಧಿಸಿರುವ ಸುಂಕದ ಪರಿಣಾಮವಾಗಿ ಭಾರತದ ಜಿಡಿಪಿ ಬೆಳವಣಿಗೆ ದರ ಶೇ 0.6ರಷ್ಟು ತಗ್ಗಬಹುದು ಎಂಬ ಒಂದು ಅಂದಾಜು ಇದೆ. ಆದರೆ ಈ ಕ್ರಮಗಳ ಪರೋಕ್ಷ ಪರಿಣಾಮಗಳು ಹಲವು ಇರುತ್ತವೆ. ಭಾರತದ ಸರಕು ಮತ್ತು ಸೇವೆಗಳಿಗೆ ಬೇಡಿಕೆ ತಗ್ಗಬಹುದು. ಹೊಸ ಮಾರುಕಟ್ಟೆಗಳ ಶೋಧಕ್ಕೆ ನಡೆಯುವ ತೀವ್ರ ಪೈಪೋಟಿಯ ನಡುವೆ ಜಾಗತಿಕ ಅರ್ಥವ್ಯವಸ್ಥೆಯ ಬೆಳವಣಿಗೆ ದರವು ಕಡಿಮೆ ಆಗಬಹುದು. ಭಾರತ ಮತ್ತು ಅಮೆರಿಕದ ನಡುವೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವೊಂದರ ಬಗ್ಗೆ ಮಾತುಕತೆಗಳು ಪ್ರಗತಿಯಲ್ಲಿವೆ. ಈ ಮಾತುಕತೆಗಳ ಫಲಿತಾಂಶ ಏನಿರಲಿದೆ ಎಂಬುದನ್ನು ಈಗಲೇ ಹೇಳುವುದು ಕಷ್ಟ. ಅಮೆರಿಕ ವಿಧಿಸಿರುವ ಸುಂಕಕ್ಕೆ ಪ್ರತಿಯಾಗಿ ಭಾರತವೂ ಸುಂಕ ವಿಧಿಸುವ ಸಾಧ್ಯತೆ ಇಲ್ಲ. ಟ್ರಂಪ್ ಅವರ ನಡೆಯಿಂದಾಗಿ ದೇಶದ ಅರ್ಥವ್ಯವಸ್ಥೆಗೆ ಒಂದಿಷ್ಟು ನಷ್ಟ ಉಂಟಾಗುವುದಂತೂ ಖಚಿತ. ಆದರೆ ಎಲ್ಲ ನಷ್ಟಗಳ ನಡುವೆಯೂ ಒಂದಿಷ್ಟು ಹೊಸ ಅವಕಾಶಗಳು ತೆರೆದುಕೊಳ್ಳಬಹುದು. ಆಗಬಹುದಾದ ನಷ್ಟವನ್ನು ಮಿತಿಗೊಳಿಸುವುದು ಭಾರತದ ಆದ್ಯತೆಯ ಕೆಲಸ ಆಗಬೇಕು.

ದಿನದ ಟ್ವೀಟ್

ಪ್ರತಿಸುಂಕ ಬೇಡ

ಭಾರತದಿಂದ ಅಮೆರಿಕಕ್ಕೆ ರಫ್ತಾಗುವುದರ ಮೇಲೆ ಶೇಕಡ 27ರಷ್ಟು ತೆರಿಗೆ ವಿಧಿಸಲಾಗಿದೆ. ಚೀನಾದಿಂದ ರಫ್ತಾಗುವುದರ ಮೇಲೆ ಶೇಕಡ 54ರಷ್ಟು ತೆರಿಗೆ ಇರುತ್ತದೆ. ಬಹುತೇಕ ಎಲ್ಲ ದೇಶಗಳ ಮೇಲೆಯೂ ಸುಂಕ ವಿಧಿಸಲಾಗಿದೆ. ಇದಕ್ಕೆ ಪ್ರತಿಸುಂಕ ವಿಧಿಸಬೇಕಾದ ಅಗತ್ಯವೇ ಇಲ್ಲ. ಅಮೆರಿಕದ ಜನ ಸ್ವಲ್ಪ ಕಾಲ ಇಷ್ಟು ಸುಂಕ ಪಾವತಿಸಲಿ, ಏನಾಗುತ್ತದೆ ಎಂಬುದನ್ನು ಗಮನಿಸಲಿ.

ದೀಪಕ್ ಶೆಣೈ, ಕ್ಯಾಪಿಟಲ್ ಮೈಂಡ್ ಕಂಪನಿಯ ಸಿಇಒ

ಕಿಡಿನುಡಿ

'ಗ್ಯಾರಂಟಿ'ಗಳ ಮೂಲಕ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಪತ್ನಿಗೆ ಸಹಾಯಧನ ನೀಡಿ, ಪತಿಯಿಂದ ಹಣ ವಸೂಲಿ ಮಾಡುತ್ತಿದೆ. ಕಾಂಗ್ರೆಸ್‌ಗೆ ಮತ ನೀಡಿದ ಜನರು ಪಾಪ ತೊಳೆದುಕೊಳ್ಳುವುದು ಹೇಗೆಂದು ಚಿಂತೆ ಮಾಡುತ್ತಿದ್ದಾರೆ.

ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 4-4-2000

• ಅನಂತನಾಗ್– ಪೊಲೀಸರ ಗುಂಡಿಗೆ 10 ಜನರ ಬಲಿ

ಶ್ರೀನಗರ, ಏ. 3 (ಯುಎನ್‌ಐ, ಪಿಟಿಐ)– ಉಗ್ರಗಾಮಿಗಳು ಮತ್ತು ಭದ್ರತಾ ಪಡೆಯ ನಡುವಿನ ಗುಂಡಿನ ಚಕಮಕಿಯಲ್ಲಿ ನಾಗರಿಕರು ಜೀವ ಕಳೆದುಕೊಳ್ಳುತ್ತಿರುವುದನ್ನು ವಿರೋಧಿಸಿ ಅನಂತನಾಗ್‌ನಲ್ಲಿ ಮೆರವಣಿಗೆ ಹೊರಟಿದ್ದ ಪ್ರತಿಭಟನಕಾರರ ಮೇಲೆ ಪೊಲೀಸರು ಗುಂಡು ಹಾರಿಸಿದಾಗ 10 ಮಂದಿ ಮೃತಪಟ್ಟಿದ್ದಾರೆ. ಘಟನೆಯಲ್ಲಿ 20ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಅನಂತನಾಗ್ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಪರಿಸ್ಥಿತಿ ಉದ್ವಿಗ್ನವಾಗಿದ್ದು, ಕರ್ಫ್ಯೂ ವಿಧಿಸಲಾಗಿದೆ. ಅನಂತನಾಗ್ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಸಿಖ್ಖರ ಹತ್ಯೆಯ ವೇಳೆ, ಭದ್ರತಾಪಡೆಯ ಸಿಬ್ಬಂದಿ ಉಗ್ರಗಾಮಿಗಳೆಂಬ ಶಂಕೆಯಿಂದ ಐದು ಮಂದಿ ಗ್ರಾಮಸ್ಥರನ್ನು ಗುಂಡಿಟ್ಟು ಕೊಂದಿದ್ದರು. ಈ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಗ್ರಾಮಸ್ಥರು ಮೆರವಣಿಗೆ ಹೊರಟಿದ್ದರು.

• ಬೆಂಗಳೂರು ಬಸ್ ಡಿಕ್ಕಿ 15 ಮಂದಿ ಸಾವು

ಹೈದರಾಬಾದ್, ಏ. 3– ಬೆಂಗಳೂರಿನಿಂದ ಹೈದರಾಬಾದ್‌ಗೆ ಬರುತ್ತಿದ್ದ ಖಾಸಗಿ ಟ್ರಾವೆಲ್ ಏಜೆನ್ಸಿಯ ಬಸ್ಸೊಂದು ಇಂದು ಮುಂಜಾನೆ ಕರ್ನೂಲು ಬಳಿ ಟಿಪ್ಪರ್‌ಗೆ ಡಿಕ್ಕಿ ಹೊಡೆದು ಕನಿಷ್ಠ 15 ಮಂದಿ ಮೃತಪಟ್ಟಿದ್ದಾರೆ. ಘಟನೆಯಲ್ಲಿ ಇತರ 11 ಮಂದಿಗೆ ಗಾಯಗಳಾಗಿವೆ.

ಸತ್ತವರ ಪೈಕಿ ಬಸ್ಸಿನ ಇಬ್ಬರು ಚಾಲಕರು ಒಳಗೊಂಡಂತೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ 12 ಮಂದಿ ಸೇರಿದ್ದಾರೆ. ಟಿಪ್ಪರ್‌ನಲ್ಲಿ ಸಾಗುತ್ತಿದ್ದ ಮೂವರು ಕೂಡಾ ಸ್ಥಳದಲ್ಲಿಯೇ ಜೀವ ಕಳೆದುಕೊಂಡಿದ್ದಾರೆ ಎಂದು ಕರ್ನೂಲು ಪೊಲೀಸರು ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 4-4-1975

• ನಗರದ ನೀರಿನಲ್ಲಿ ಡಿ.ಡಿ.ಟಿ? ತಜ್ಞರ ಭಿನ್ನಮತ

ಬೆಂಗಳೂರು, ಏ. 3– ಒಬ್ಬ ತಜ್ಞರ ಅಭಿಪ್ರಾಯದಂತೆ ಬೆಂಗಳೂರಿನ ಜನರು ಕಳೆದ ನಾಲ್ಕು ದಿನಗಳಿಂದ ಡಿ.ಡಿ.ಟಿ ಬೆರೆತ ನೀರು ಕುಡಿದಿದ್ದಾರೆ. ಆದರೆ, ತಾವು ಪರೀಕ್ಷಿಸಿದ ನೀರಿನಲ್ಲಿ ಡಿ.ಡಿ.ಟಿ ಪತ್ತೆಯಾಗಲಿಲ್ಲವೆಂದು ಮತ್ತೊಬ್ಬ ತಜ್ಞರು ವರದಿ ನೀಡಿದ್ದಾರೆ.

ಎರಡೂ ಅಭಿಪ್ರಾಯಗಳನ್ನು ಸಭೆಯಲ್ಲಿ ಮಂಡಿಸಿದ ಪೌರಾಡಳಿತ ಸಚಿವ ಡಿ.ಕೆ. ನಾಯ್ಕರ್, ಸಂಗ್ರಹಿಸಲಾಗಿದ್ದ ನೀರನ್ನು ಖಾಲಿ ಮಾಡಿ ಈಗ ಅರ್ಕಾವತಿ ನೀರನ್ನು ಮಾತ್ರ ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು. ನೀರನ್ನು ಮತ್ತಷ್ಟು ಪರೀಕ್ಷೆಗೆ ಕಳುಹಿಸುವ ಬಗ್ಗೆಯೂ ಆಶ್ವಾಸನೆ ನೀಡಿದರು.

• ಕಲ್ಕತ್ತ ಘಟನೆ ತಮ್ಮ ಹತ್ಯೆ ಯತ್ನ: ಜೆ.ಪಿ. ಶಂಕೆ

ಕಲ್ಕತ್ತ, ಏ. 3– ವಿದ್ಯಾರ್ಥಿಗಳು ಮತ್ತು ಯುವಕರ ಸಭೆಯನ್ನು ಉದ್ದೇಶಿಸಿ ಮಾತನಾಡುವುದನ್ನು ರದ್ದುಗೊಳಿಸುವಂತೆ ಬುಧವಾರ ನಡೆದ ಘಟನೆಯು ತಮ್ಮ ಹತ್ಯೆಯ ಪ್ರಯತ್ನವಿರಬಹುದು ಎಂದು ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣ್ ಶಂಕೆ ವ್ಯಕ್ತಪಡಿಸಿದ್ದಾರೆ.

ಇಲ್ಲಿಂದ ಪಟ್ನಾಗೆ ವಾಪಸಾಗುವ ಮುನ್ನ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಛಾತ್ರ ಪರಿಷತ್ ಮತ್ತು ಯುವಜನ ಕಾಂಗ್ರೆಸ್ಸಿನ ಸ್ವಯಂ ಸೇವಕರು ತಮ್ಮ ಕಾರಿಗೆ ಮುತ್ತಿಗೆ ಹಾಕಿದ್ದನ್ನು ಪ್ರಸ್ತಾಪಿಸಿ 'ನನ್ನನ್ನು ಹೊಡೆದು ಸಾಯಿಸಬಹುದಿತ್ತು' ಎಂದು ಹೇಳಿದರು.

ರಸಾಸ್ವಾದನೆಯ ಮಾದರಿ ಬದಲಾವಣೆಗೆ ಬೇಕು ಸಾಂಸ್ಕೃತಿಕ ಕ್ರಾಂತಿ

ಕಪ್ಪು ಬಣ್ಣಕ್ಕೆ ಕೊಡೋಣ ಮನ್ನಣೆ

ವಿಶ್ಲೇಷಣೆ

ಯೋಗೇಂದ್ರ ಯಾದವ್

'ನನ್ನನ್ನು ಮತ್ತೆ ಹೊಟ್ಟೆಯೊಳಗೆ ಹಾಕಿ ಬಿಳಿಯಾಗಿ ಮತ್ತು ಸುಂದರಿಯಾಗಿ ಹೊರಗೆ ಕರೆತರುತ್ತೀಯಾ ಎಂದು ನಾಲ್ಕು ವರ್ಷದವಳಿದ್ದಾಗ ಅಮ್ಮನನ್ನು ನಾನು ಕೇಳಿದ್ದೆ. ಚೆನ್ನಾಗಿಲ್ಲದ ಬಣ್ಣದವಳು ಎಂಬ ಸಂಕಥನದ ಅಡಿಯಲ್ಲಿ ಹುದುಗಿ 50ಕ್ಕೂ ಹೆಚ್ಚು ವರ್ಷ ಬದುಕಿದ್ದೇನೆ'.

ತಮ್ಮ ಕಪ್ಪು ಬಣ್ಣದ ಕುರಿತು ಕೇಳಿಬಂದಿರುವ ಅವಮಾನಕರ ಪ್ರತಿಕ್ರಿಯೆಗಳಿಗೆ ಉತ್ತರವಾಗಿ ಕೇರಳ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾರದಾ ಮುರಳೀಧರನ್ ಅವರು ಫೇಸ್‌ಬುಕ್‌ನಲ್ಲಿ ಹಾಕಿರುವ ಮನ ಕಲಕುವಂತಹ ಪೋಸ್ಟ್ ಇದು. ನಮ್ಮ ಸಾರ್ವಜನಿಕ ಸಂಸ್ಕೃತಿಯಲ್ಲಿ ಅತ್ಯಂತ ಮಹತ್ವದ ಕ್ಷಣ ಎಂದು ಇದನ್ನು ಪರಿಗಣಿಸಲೇಬೇಕು. ಭಾರತದ ಕೋಟ್ಯಂತರ ಮಹಿಳೆಯರು (ಹಲವು ಗಂಡಸರು ಕೂಡ) ದಿನವೂ ಅನುಭವಿಸುವ ಭಾವನೆಗಳಿಗೆ, ಜೀವನದ ಉದ್ದಕ್ಕೂ ಅನುಭವಿಸುವ ಚಿತ್ರಹಿಂಸೆಗೆ ಶಾರದಾ ಅವರು ಅಕ್ಷರ ರೂಪ ಕೊಟ್ಟಿದ್ದಾರೆ. ಇಂತಹುದನ್ನು ಅನುಭವಿಸಿ ಬಂದಿದ್ದೇನೆ ಎಂದು ಹೇಳಲು ಅಂತಃಶಕ್ತಿ ಬೇಕು. ಇದನ್ನು ಸಾರ್ವಜನಿಕವಾಗಿ ಹೇಳಲು ದಿಟ್ಟತನ ಇರಬೇಕು. ವಿಶೇಷ ಸ್ಥಾನ, ಮಾತನಾಡುವ ಶಕ್ತಿ ಮತ್ತು ಮಾತನಾಡಿದರೆ ಕೇಳುತ್ತಾರೆ ಎಂಬ ಭರವಸೆ ಇರಬೇಕು. ಆ ವಿಶೇಷ ಸ್ಥಾನವೇ ವಿಮೋಚನೆಯ ಅವಕಾಶವನ್ನೂ ಒದಗಿಸುತ್ತದೆ ಎಂಬುದಕ್ಕೆ ಇಲ್ಲೊಂದು ನಿದರ್ಶನ ಇದೆ.

ಸರಿಯಾಗಿ 65 ವರ್ಷಗಳ ಹಿಂದೆ, 1960ರ ಮಾರ್ಚ್‌ನಲ್ಲಿ ರಾಮಮನೋಹರ ಲೋಹಿಯಾ ಅವರು 'ಸ್ಕಿನ್ ಕಲರ್ ಆ್ಯಂಡ್ ಬ್ಯೂಟಿ' ('ಇಂಟರ್‌ವಲ್ ಡ್ಯೂರಿಂಗ್ ಪಾಲಿಟಿಕ್ಸ್' ಸಂಕಲನದಲ್ಲಿದೆ) ಎಂಬ ಅಸಾಧಾರಣ ಪ್ರಬಂಧವನ್ನು ಬರೆದಿದ್ದರು. 'ಬಣ್ಣದ ದಬ್ಬಾಳಿಕೆ'ಯ ಆರಂಭಿಕ ವಿಮರ್ಶೆಗಳಲ್ಲಿ ಇದೂ ಒಂದು. ಹೆಣ್ಣಿನ ಸೌಂದರ್ಯ ಬಣ್ಣದಲ್ಲಿದೆ ಎಂಬ ಮಿಥ್ಯೆಯನ್ನು ಒಡೆಯಲು ಲೋಹಿಯಾ ಬಯಸಿದ್ದರು. 'ಹೆಣ್ಣು ಕಪ್ಪಾಗಿದ್ದರೂ ಬೆಳ್ಳಗಿದ್ದರೂ ಪ್ರೀತಿಸುವ ಮತ್ತು ಪ್ರೀತಿಗೊಳಪಡುವ ಆಕೆಯ ಸೌಂದರ್ಯವು ನಕ್ಷತ್ರಗಳಿಂದ ಕಂಗೊಳಿಸುವ ಆಕಾಶದಂತೆ ಇರುತ್ತದೆ' ಎಂದು ಬರೆದಿದ್ದರು.

ಚರ್ಮದ ಬಣ್ಣವು ಬಿಳಿಯಾಗಿರಬೇಕು ಎಂಬ ಹಂಬಲವು ಸರಳವಾದ ವ್ಯವಹಾರ ಅಲ್ಲ ಎಂಬುದು ಶಾರದಾ ಅವರ 305 ಪದಗಳ ಪೋಸ್ಟ್ ಮತ್ತು ಲೋಹಿಯಾ ಅವರ ಪ್ರಬಂಧವನ್ನು ಓದಿದಾಗ ಅರ್ಥವಾಗುತ್ತದೆ. ಕಪ್ಪು ಬಣ್ಣದ ಕುರಿತು ಇರುವ ಪೂರ್ವಗ್ರಹವನ್ನು ಅರ್ಥ ಮಾಡಿಕೊಳ್ಳಲು ಹೊರಟರೆ, ನಮ್ಮ ಕಾಲದ ಸಂಸ್ಕೃತಿ, ಸಮಾಜ, ಆರ್ಥಿಕ ಮತ್ತು ರಾಜಕೀಯ ಅಸಮಾನತೆಯ ಕೊನೆಯಿಲ್ಲದ ಸ್ವರೂಪವು ಕಣ್ಣ ಮುಂದೆ ಬರುತ್ತದೆ. 'ಸೌಂದರ್ಯವು ರಾಜಕಾರಣ. ಅದು, ಮನುಷ್ಯ ಮೌಲ್ಯದ ಮೇಲೆ ಹೋರಾಡಿ ಗೆದ್ದವರು ತಮ್ಮದೆಂದು ಹೇಳಿಕೊಳ್ಳುವ ಪಾರಿತೋಷಕ. ಕುರೂಪತನ ಎಂಬ ಕುಟುಕುವಿಕೆಯು ಒಂದು ಆಯುಧ; ಕೆಲವು ಗುಂಪುಗಳು ಕೀಳು, ಹಾಗಾಗಿಯೇ ಕುರೂಪಿ ಎಂದು ಸಮಾಜದ ಶ್ರೇಣೀಕರಣದ ಮೇಲಿನ ಸ್ತರದಲ್ಲಿ ಇರುವವರು ತಮ್ಮ ಮೇಲರಿಮೆಯನ್ನು ಸ್ಥಾಪಿಸಲು ಬಳಸುವ ಆಯುಧ' ಎಂದು ಮ್ಯಾಕ್ಸಿನ್ ಲೀಡ್ಸ್ ಕ್ರೆಗ್ ಅವರು 'ಬ್ಯೂಟಿ ಪಾಲಿಟಿಕ್ಸ್' ಕೃತಿಯಲ್ಲಿ ಹೇಳುತ್ತಾರೆ.

ಈ ವಿದ್ಯಮಾನವನ್ನು ಶಾರದಾ ಅವರು ನಿರ್ಭಿಡೆಯಿಂದ ಕಪ್ಪಿನ ಬಗೆಗಿನ ಪೂರ್ವಗ್ರಹ ಎಂದು ಬಣ್ಣಿಸುತ್ತಾರೆ. ಈ ಪೂರ್ವಗ್ರಹವನ್ನು ಅವರು ಮತ್ತಷ್ಟು ಸ್ಪಷ್ಟಪಡಿಸುತ್ತಾರೆ: 'ಇದು ಬಣ್ಣದ ಬಗೆಗಿನ ಪೂರ್ವಗ್ರಹವಷ್ಟೇ ಅಲ್ಲ, ಕಪ್ಪು ಎಂದರೆ ಅದು ಎಂದೂ ಒಳ್ಳೆಯದು ಮಾಡದು, ಕಪ್ಪು ಎಂಬುದು ಕೆಡುಕು, ಈ ಹಸಿ ದಬ್ಬಾಳಿಕೆಯೇ ಕತ್ತಲಿನ ಕೇಂದ್ರ'. ಗಾಢ ಛಾಯೆ ಎಂಬಂತಹ ನಯ– ನಾಜೂಕಿನ ಪದವನ್ನು ಅವರು ಬಳಸುವುದಿಲ್ಲ. ತಮ್ಮದು ಉಜ್ವಲವಾದ ಕಪ್ಪು ಬಣ್ಣ ಎನ್ನುತ್ತಾರೆ.

ಲೋಹಿಯಾ ಅವರು ಅಮೆರಿಕದ ಕಪ್ಪುವರ್ಣೀಯರ ಚಳವಳಿಯ ಜೊತೆಗೆ ಗುರುತಿಸಿಕೊಂಡಿದ್ದರು. ಜನಾಂಗೀಯ ತಾರತಮ್ಯದ ವಿರುದ್ಧ ಪ್ರತಿಭಟಿಸಿ ಅವರು ಅಲ್ಲಿ ಬಂಧನಕ್ಕೂ ಒಳಗಾಗಿದ್ದರು. 'ಯುರೋಪ್‌ನ ಬಿಳಿಯರು ಈ ಜಗತ್ತನ್ನು ಆಳಿದ ರೀತಿಯಲ್ಲಿ ಆಫ್ರಿಕಾದ ನೀಗ್ರೊಗಳು (ಆಗ ಈ ಪದದ ಬಳಕೆ ಇನ್ನೂ ಇತ್ತು) ಆಳಿರುತ್ತಿದ್ದರೆ ಹೆಣ್ಣಿನ ಸೌಂದರ್ಯದ ಮಾನದಂಡ ಭಿನ್ನವಾಗಿರುತ್ತಿತ್ತು ಎಂಬುದರಲ್ಲಿ ಅನುಮಾನವೇ ಇಲ್ಲ. ಕವಿಗಳು ಮತ್ತು ಪ್ರಬಂಧಕಾರರು ನೀಗ್ರೊ ಚರ್ಮವು ಮೃದು ರೇಷ್ಮೆಯಂತೆ, ಸ್ಪರ್ಶ ಮತ್ತು ನೋಟವು ಹಿತಕರ ಎಂದು ಬಣ್ಣಿಸುತ್ತಿದ್ದರು. ಸುಂದರವಾದ ತುಟಿಗಳು ಅಥವಾ ಸೊಬಗಿನ ಮೂಗಿಗೆ ನೀಗ್ರೊಗಳು ಉದಾಹರಣೆಯಾಗಿ ರಸಾಸ್ವಾದನೆಯ ವಿಧಾನವೇ ಬೇರೆ ಆಗಿರುತ್ತಿತ್ತು' ಎಂದು ಲೋಹಿಯಾ ಪ್ರತಿಪಾದಿಸಿದ್ದರು.

50 ವರ್ಷಗಳಿಂದ 'ಈ ಸಂಕಥನದ ಹಿಂದೆ ಹುದುಗಿಹೋಗಿದ್ದೆ' ಎಂಬ ಶಾರದಾ ಅವರ ಮಾತುಗಳು ಈ ತಾರತಮ್ಯವು ಎಷ್ಟು ವ್ಯಾಪಕ ಮತ್ತು ಗಾಢ ಎಂಬುದನ್ನು ಗುರುತಿಸುತ್ತದೆ. ವರ್ಣೀಯ ಹೆಣ್ಣು ತಳಮಳ ಮತ್ತು ಕೀಳರಿಮೆಯನ್ನೇ ಉಂಡು ಬೆಳೆಯುತ್ತಾಳೆ ಎಂಬುದನ್ನು ಲೋಹಿಯಾ ನಮಗೆ ನೆನಪಿಸುತ್ತಾರೆ. ಸರ್ವವ್ಯಾಪಿ ವಾಸ್ತವವನ್ನು ಗುರುತಿಸಲು ಅವರ ಮಾತುಗಳು ನಮಗೆ ನೆರವಾಗುತ್ತವೆ. ಬಿಳಿಯು ಸೌಂದರ್ಯದ ಅನ್ವರ್ಥನಾಮ ಎಂದು ಭಾರತದ ಸಿನಿಮಾ ರಂಗ ಪರಿಗಣಿಸುತ್ತದೆ. ಕಪ್ಪು ವರ್ಣೀಯರನ್ನು ತಾರತಮ್ಯದಿಂದ ನೋಡಲಾಗುತ್ತಿದೆ, ಅದೊಂದು ಕಳಂಕ ಎಂದು ಪರಿಗಣಿಸಲಾಗುತ್ತಿದೆ ಎಂಬುದನ್ನು ಭಾರತೀಯ ಸಾಹಿತ್ಯವು ಗುರುತಿಸಿದೆ. ಅಭಿರುಚಿ ಹೇಗಿದೆ ಎಂಬುದಕ್ಕೆ ಮಾರುಕಟ್ಟೆಗಳು– ಮದುವೆ ಮಾರುಕಟ್ಟೆ ಮತ್ತು ಸೌಂದರ್ಯವರ್ಧಕ ಉತ್ಪನ್ನಗಳ ಮಾರುಕಟ್ಟೆ– ಅತ್ಯುತ್ತಮ ಸೂಚಕಗಳಾಗಿವೆ. ಮದುವೆಗೆ ಸಂಬಂಧಿಸಿದ ಜಾಹೀರಾತುಗಳಲ್ಲಿ ಈ ಕುರಿತಂತೆ ಯಾವುದೇ ದ್ವಂದ್ವ ಇಲ್ಲ. ಭಾರತದ ಚರ್ಮದ ಆರೈಕೆಯ ಉತ್ಪನ್ನ ಮಾರುಕಟ್ಟೆಯಲ್ಲಿ ಅರ್ಧದಷ್ಟು ಉತ್ಪನ್ನಗಳು ಒಂದಲ್ಲ ಒಂದು ರೀತಿಯಲ್ಲಿ ಚರ್ಮದ ಬಣ್ಣವನ್ನು ಬಿಳಿ ಮಾಡುವವೇ ಆಗಿವೆ. ₹35 ಸಾವಿರ ಕೋಟಿಗೂ ಹೆಚ್ಚು ವಹಿವಾಟು ನಡೆಯುತ್ತಿದ್ದು ಪ್ರತಿವರ್ಷ ಶೇ 6ರಷ್ಟು ಬೆಳವಣಿಗೆಯೂ ಇದೆ. ಬಿಳಿ ಬಣ್ಣದ್ದು ಏನೇ ಇದ್ದರೂ ಅದಕ್ಕೊಂದು ಸಕಾರಾತ್ಮಕತೆಯ ಪ್ರಭೆ ಇದೆ. ಕಪ್ಪು ಇದಕ್ಕೆ ತದ್ವಿರುದ್ಧ. ಈ ಪೂರ್ವಗ್ರಹದ ಕೆಲವೊಂದು ಅಂಶಗಳು ನಮ್ಮ ಪ್ರತಿಭಟನೆಯ ಸಾರ್ವಜನಿಕ ಸಂಸ್ಕೃತಿಯ ಭಾಗವೂ ಆಗಿವೆ: ಕರಾಳ ದಿನ, ಕಪ್ಪು ಪಟ್ಟಿ ಹೀಗೆಯೇ ಮುಂದುವರಿಯುತ್ತದೆ.

ದಬ್ಬಾಳಿಕೆಯ ವ್ಯವಸ್ಥಿತ ಸ್ವರೂಪ ಹೇಗಿದೆ ಎಂಬುದನ್ನು ಗುರುತಿಸುವುದು ಮುಂದಿನ ಹಂತ. ಶಾರದಾ ಅವರ ಹೇಳಿಕೆಯು ಅವರು ಹೆಣ್ಣು ಎಂಬುದನ್ನು ಸೂಚಿಸುತ್ತದೆ. ಜಾತಿಯನ್ನು ಬಹಿರಂಗಪಡಿಸುವುದಿಲ್ಲ ಎಂದೂ ಶಾರದಾ ಅವರು ಹೇಳಿಕೊಂಡಿದ್ದಾರೆ. ಕಪ್ಪು ಬಣ್ಣದ ಕುರಿತು ಇರುವ ಪೂರ್ವಗ್ರಹವು ರಸಾಸ್ವಾದನೆಗೆ ಸಂಬಂಧಿಸಿದ್ದು ಮಾತ್ರ ಅಲ್ಲ, ಹಲವು ಶ್ರೇಣೀಕರಣಗಳಲ್ಲಿ ಬೇರೂರಿದೆ ಎಂಬುದನ್ನು ಲೋಹಿಯಾ ಗುರುತಿಸಿದ್ದಾರೆ. ಇದು ಅಧಿಕಾರದಲ್ಲಿ ನೆಲೆಯೂರಿರುವ ಸಾಂಸ್ಕೃತಿಕ ಮತ್ತು ರಾಚನಿಕ ತಾರತಮ್ಯವನ್ನು ಒಳಗೊಂಡಿರುವ ವ್ಯವಸ್ಥೆ. ಜಗತ್ತಿನಾದ್ಯಂತ ಕಪ್ಪಿನ ಕಳಂಕವನ್ನು ಹೊರಬೇಕಾದುದು ಹೆಣ್ಣಿನ ದೇಹವೇ ಆಗಿದೆ. ಭಾರತದಲ್ಲಿ ಈ ತಾರತಮ್ಯವು ಎರಡು ರೀತಿಯಲ್ಲಿ ವ್ಯಕ್ತವಾಗುತ್ತದೆ: ಜಾತಿ ತಾರತಮ್ಯ ಮತ್ತು ದಕ್ಷಿಣದ ಮೇಲೆ ಉತ್ತರದ ಪ್ರಾಬಲ್ಯ. ವರ್ಣ ದಬ್ಬಾಳಿಕೆಗೆ ಪ್ರತಿರೋಧ ಒಡ್ಡಿದರೆ ಅನ್ಯಾಯದ ಹಲವು ಆಯಾಮಗಳು ತೆರೆದುಕೊಳ್ಳುತ್ತವೆ. ಅವುಗಳೆಂದರೆ, ವಸಾಹತು, ಜನಾಂಗೀಯ, ಲಿಂಗತ್ವ, ಜಾತಿ, ಪ್ರಾದೇಶಿಕ.

ಪ್ರತಿರೋಧವು ಕಪ್ಪಿನ ಸೌಂದರ್ಯವನ್ನು ಸಂಭ್ರಮಿಸುವುದರೊಂದಿಗೆ ಆರಂಭಗೊಳ್ಳಬೇಕು. ನಂದಿತಾ ದಾಸ್ ಅವರು ದಶಕದ ಹಿಂದೆ 'ಕಪ್ಪು ಸುಂದರ' ಎಂಬ ಅಭಿಯಾನವನ್ನು ನಡೆಸಿದ್ದರು. ಈ ವಿಚಾರದಲ್ಲಿ ಸಾರ್ವಜನಿಕ ಪ್ರಜ್ಞೆಯನ್ನು ಬದಲಾಯಿಸಲು ನಡೆಸಿದ ಈ ಪ್ರಯತ್ನವು ದಿಟ್ಟವಾದುದಾಗಿತ್ತು.

ಇಂತಹ ಪ್ರತಿರೋಧ ರಾಜಕಾರಣದ ಭವಿಷ್ಯ ಏನು? ಲೋಹಿಯಾ ಅವರ ಪ್ರಬಂಧ ಪ್ರಕಟವಾಗಿ 65 ವರ್ಷಗಳಾದವು. 'ಕಪ್ಪು ಸುಂದರ' ಅಭಿಯಾನ ನಡೆದು ದಶಕ ಕಳೆದಿದೆ. ಆದರೆ ಏನೂ ಬದಲಾದಂತೆ ಕಾಣಿಸುತ್ತಿಲ್ಲ. ಸೌಂದರ್ಯವನ್ನು ಮೌಲ್ಯಮಾಪನ ಮಾಡುವ ವಿಧಾನಕ್ಕೆ ಸಂಬಂಧಿಸಿ 'ರಸಾಸ್ವಾದನಾ ಕ್ರಾಂತಿ'ಯೊಂದು ನಡೆಯಬೇಕು ಎಂದು ಲೋಹಿಯಾ ಹೇಳಿದ್ದರು. ಈ ಕ್ರಾಂತಿಯು ಯಾವ ಮಾರ್ಗದಲ್ಲಿ ಸಾಗಬೇಕು ಎಂಬುದು ಸ್ಪಷ್ಟವಿಲ್ಲ. ಆದರೆ ಸಂಕುಚಿತವಾದ ಪಕ್ಷ ರಾಜಕಾರಣ ಅಥವಾ ಸರ್ಕಾರಿ ಮನಃಸ್ಥಿತಿಯ ರಾಜಕಾರಣ ಅಲ್ಲ ಎಂಬುದು ನಮಗೆ ತಿಳಿದಿದೆ. ಇಂತಹ ರಾಜಕಾರಣವು ಸಾಂಸ್ಕೃತಿಕ ರಾಜಕಾರಣ ಆಗಿರಬೇಕು. ಅದು ಯುವಜನರನ್ನು ವಿಶೇಷವಾಗಿ ಯುವತಿಯರನ್ನು ಕೇಂದ್ರೀಕರಿಸಿ ಇರಬೇಕು. ಸಾಮೂಹಿಕ ಮಾಧ್ಯಮಗಳಲ್ಲಿ ಪ್ರಕಟವಾಗುವ ಚಿತ್ರಣಗಳಿಗೆ ಸವಾಲೆಸೆಯಬೇಕು. ವಿದೇಶದಲ್ಲಿದ್ದು ಅಲ್ಲಿಂದ ಹಿಂದಿರುಗಿದ ಯುವಜನ ಅಲ್ಲಿ ಜನಾಂಗೀಯ ಮತ್ತು ವರ್ಣ ತಾರತಮ್ಯವನ್ನು ಎದುರಿಸಿರುತ್ತಾರೆ. ಅಂತಹವರೇ ಇಲ್ಲಿನ ವರ್ಣ ತಾರತಮ್ಯದ ಪ್ರತಿರೋಧಕ್ಕೆ ಕಿಡಿ ಹತ್ತಿಸಬೇಕು.

ಸುಭಾಷಿತ

ಮಕ್ಕಳಿಗಾಗಿ ಆಸ್ತಿ ಮಾಡಿಡಬೇಡಿ, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ.

-ಶಿವರಾಮ ಕಾರಂತ

ಚುರುಮುರಿ

ಹನಿ ಹನಿ ಹಳ್ಳ!

• ಬಿ.ಎನ್. ಮಲ್ಲೇಶ್

'ಹನಿಹನಿಗೂಡಿದ್ರೆ ಹಳ್ಳ, ತೆನೆತೆನೆಗೂಡಿದ್ರೆ ಬಳ್ಳ...' ಎಂದು ಹಾಡ್ತೋತ ಹರಟೆಕಟ್ಟೆಗೆ ಬಂದ ದುಬ್ಬೀರ.

'ಅದು ಹನಿ ಹನಿ ಅಂತ ಹೋದ್ರೆ ಹಳ್ಳ ಕಣೋ ದುಬ್ಬೀರ...' ಮಂಜಮ್ಮ ತಿದ್ದಿದಳು.

'ಕರೆಕ್ಟ್, ಆದ್ರೆ ಹಳ್ಳಕ್ಕೆ ಹೆಂಗೆ ಬಿದ್ರು ಅಂತ ಪೊಲೀಸ್ರು ತನಿಖೆ ಮಾಡಾಕೋದ್ರೆ ಸಾಕ್ಷಿನೇ ಸಿಗ್ತಿಲ್ಲಂತಪ...' ತೆಪರೇಸಿ ನಕ್ಕ.

'ಕೇಸು ಹಳ್ಳ ಹಿಡಿದಂಗೇ ಬಿಡು, ಅದಿರ್ಲಿ, ಎಲ್ಲಿ ಕೊಟ್ರೇಶಿ ಕಾಣ್ತಿಲ್ಲ?'

'ಅವ್ನು ಫ್ರೀಡಂ ಪಾರ್ಕ್‌ಗೆ ಹೋಗ್ಯಾನಂತೆ...'

'ಯಾಕೆ?'

'ಎಲ್ಲ ಬೆಲೆ ಏರಿದಾವಲ್ಲ, ಮನಿ ಖರ್ಚಿಗೆ ಈ ತಿಂಗಳಿಂದ ಸಾವಿರ ರೂಪಾಯಿ ಜಾಸ್ತಿ ಕೊಡಿ ಅಂತ ಅವನೆಂಡ್ತಿ ಜಗಳಕ್ಕೆ ಬಿದ್ದಿದ್ಲಂತೆ...'

'ಅದ್ಕೆ? ಅಲ್ಲಿ ಹೋಗಿ ಮಕ್ಕಂಡ್ರೆ ಬೆಲೆ ಇಳೀತವಾ?'

'ಏನಪ, ಗೊತ್ತಿಲ್ಲ... ಅಲ್ಲ, ಈ ರಾಜಕಾರಣಿಗಳು ತಮ್ಮ ಸಂಬಳ ಏರಿದಾಗ ಒಬ್ರೂ ಪಿಟಿಕ್ಕನ್ನಲ್ಲ. ಈಗ ಹಾದಿಬೀದೀಲಿ ಹೋರಾಡ್ತ ಕುಂತವೆ...' ತೆಪರೇಸಿ ಆಕ್ಷೇಪಿಸಿದ.

'ಮತ್ತೆ ಸುಮ್ನೆ ಬಿಡ್ಬೇಕಾ? ಹಾಲು, ಡೀಸೇಲು, ಟೋಲು, ಕರೆಂಟು... ಎ ಟು ಜಡ್ ಎಲ್ಲ ಏರಿದಾವೆ, ಒಂದಾದ್ರು ಇಳಿದೈತಾ?' ಮಂಜಮ್ಮ ಗರಂ ಆದಳು.

'ಸನ್ ಸೆಕ್ಸ್ ಒಂದು ಇಳಿದೇತಂತೆ ನೋಡು...' ಗುಡ್ಡೆ ಕಿಸಕ್ಕೆಂದ.

'ಲೇಯ್ ಅದು ಸೆನ್‌ಸೆಕ್ಸ್ ಅಂತ. ಸನ್ ಅಲ್ಲ...' ದುಬ್ಬೀರ ತಿದ್ದಿದ.

'ನೋಡ್ರಪ, ಹಾಲಿನ ರೇಟು ಜಾಸ್ತಿ ಆಗಿರೋದ್ರಿಂದ ಇವತ್ತಿಂದ ಚಾ ರೇಟು ಜಾಸ್ತಿ ಮಾಡ್ತಿದೀನಿ, ಎಲ್ಲ ಸಹಕರಿಸ್ಬೇಕು...' ಮಂಜಮ್ಮ ಘೋಷಿಸಿದಳು.

'ಅದೆಲ್ಲ ಆಗಲ್ಲ, ನಾವೂ ಫ್ರೀಡಂ ಪಾರ್ಕಲ್ಲಿ ಧರಣಿ ಕೂತ್ಕಂತೀವಿ, ಏನೋ ಗುಡ್ಡೆ?' ಎಂದ ತೆಪರೇಸಿ.

'ನೀವು ಹೋಗಿ ಕುತ್ಕಳ್ರಪ್ಪ, ನಾ ಬರಲ್ಲ...'

'ಯಾಕೆ?'

'ನಂದು ಉದ್ರಿ ಲೆಕ್ಕ... ಎಷ್ಟು ಏರಿಸಿದ್ರೂ ದುಡ್ಡು ಕೊಡೋರ್ಯಾರು?'

'ಅಯ್ಯೋ ಮನೆಹಾಳ...' ಮಂಜಮ್ಮ ನಗುತ್ತಲೇ ಗುಡ್ಡೆ ಮೇಲೆ ಚಾ ಕಪ್ಪು ಒಗೆದಳು.

ಸಂಗತ

ಕನ್ನಡ ಘಟಕ: ಇಲಾಖೆಗೊಂದು ಬೇಕು

ಆಡಳಿತದಲ್ಲಿ ಕನ್ನಡ ಬಳಕೆಯ ಸ್ಥಿತಿ ಚಿಂತಾಜನಕವಾಗಿದೆ

• ಎಂ.ಅಬ್ದುಲ್ ರೆಹಮಾನ್ ಪಾಷ

ಅರಣ್ಯ ಇಲಾಖೆಯ ಮುಖ್ಯ ಕಚೇರಿಯಲ್ಲಿ ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನೆಗಾಗಿ ಇತ್ತೀಚೆಗೆ ಹೋಗಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಇಲಾಖೆಯಲ್ಲಿ 'ಕನ್ನಡ ಘಟಕ'ವನ್ನು ಸ್ಥಾಪಿಸುವಂತೆ ಸಲಹೆ ನೀಡಿದ್ದಾರೆ. ಇಲಾಖೆಗೆ ಸಂಬಂಧಪಟ್ಟ ತಾಂತ್ರಿಕ ಪದಕೋಶವನ್ನು ಪ್ರಕಟಿಸಬೇಕು ಎಂದಿದ್ದಾರೆ. ನಿಜವೆಂದರೆ, ಇಂಥ ಕನ್ನಡ ಘಟಕಗಳು ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಸ್ಥಾಪನೆ ಆಗಬೇಕು.

1963ರಷ್ಟು ಹಿಂದೆಯೇ ಕರ್ನಾಟಕ ಅಧಿಕೃತ ಭಾಷಾ ಕಾಯ್ದೆಯು ಕನ್ನಡವನ್ನು ರಾಜ್ಯದ ಆಡಳಿತ ಭಾಷೆಯನ್ನಾಗಿ ಘೋಷಿಸಿ, ಅದರ ಅನುಷ್ಠಾನದಲ್ಲಿ ಸೂಕ್ತವಾದ ಹಂತಗಳನ್ನು ಸೂಚಿಸಿತ್ತು. ಈ ಹೊತ್ತಿಗೆ ಗ್ರಾಮ ಪಂಚಾಯಿತಿಯಿಂದ ಹಿಡಿದು ವಿಧಾನಸೌಧದ ಇಲಾಖೆಗಳವರೆಗೆ ಎಲ್ಲವೂ ಕನ್ನಡದಲ್ಲಿ ನಡೆಯಬೇಕಾಗಿತ್ತು. ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ತಕ್ಕಮಟ್ಟಿಗೆ ಆಗಿದ್ದರೂ ರಾಜ್ಯ ಮಟ್ಟದ ಹಲವಾರು ಇಲಾಖಾ ಕಚೇರಿಗಳಲ್ಲಿ ಕನ್ನಡದ ಬಳಕೆ ನಿರೀಕ್ಷಿಸಿದ ಮಟ್ಟದಲ್ಲಿ ಇಲ್ಲ. ಅಷ್ಟೇ ಅಲ್ಲ, ಕನ್ನಡ ಭಾಷೆಯ ಬಳಕೆಯೂ ನಿರೀಕ್ಷಿಸುವಷ್ಟು ಪರಿಣಾಮಕಾರಿಯಾಗಿಲ್ಲ.

ಇತ್ತೀಚೆಗೆ ಶಿಕ್ಷಣ ಇಲಾಖೆಯ ಒಂದು ಪ್ರಮುಖ ವಿಭಾಗದ ನೂರಕ್ಕೂ ಹೆಚ್ಚು ಪುಟದ ಪತ್ರವ್ಯವಹಾರದ ಸಾಮಗ್ರಿಯನ್ನು ಕನ್ನಡದಿಂದ ಇಂಗ್ಲಿಷಿಗೆ ಅನುವಾದ ಮಾಡಬೇಕಾದ ಕೆಲಸ ಬಂದಿತ್ತು. ಅಲ್ಲಿನ ಪತ್ರಗಳು, ಆದೇಶಗಳು, ಟಿಪ್ಪಣಿಗಳಲ್ಲಿ ಕನ್ನಡದ ಬಳಕೆ ಶೋಚನೀಯ ಎನ್ನಿಸಿತು.

ಕಚೇರಿಗಳಲ್ಲಿ ವಿವಿಧ ಬಗೆಯ ಪತ್ರಗಳು, ಆದೇಶಗಳ ಕರಡನ್ನು, ಟಿಪ್ಪಣಿಗಳನ್ನು ಬರೆಯುವವರು ಸಾಮಾನ್ಯವಾಗಿ ಸಹಾಯಕರು. ಅದನ್ನು ನೋಡುವ ಅಧಿಕಾರಿಗಳು ಕರಡಿನಲ್ಲಿರುವ ಕಾಗುಣಿತ ತಪ್ಪುಗಳನ್ನಾಗಲೀ, ವಾಕ್ಯರಚನೆಗಳನ್ನಾಗಲೀ ತಿದ್ದಲು ಹೋಗುವುದಿಲ್ಲ. ಇದೇ ಬರಹ ಸಹಾಯಕರಿಂದ ನಿರ್ದೇಶಕರವರೆಗೆ ಒಂದೆರಡು ಸಲ ಮೇಲೆ–ಕೆಳಗೆ ಓಡಾಡಿ, ಹೋಗಬೇಕಾದ ಇಲಾಖೆಗೆ ರವಾನೆಯಾಗುತ್ತದೆ. ಆಡಳಿತ ಕನ್ನಡದ ಬಳಕೆಯ ಮಟ್ಟಿಗೆ ಅಲ್ಲಿಯೂ ಇದೇ ಸ್ಥಿತಿ. ಕೆಲವೇ ಉದಾಹರಣೆಗಳನ್ನು ಬಿಟ್ಟರೆ ಆಡಳಿತದಲ್ಲಿ ಕನ್ನಡದ ಬಳಕೆಯ ಸ್ಥಿತಿ ಇಷ್ಟೇ ಚಿಂತಾಜನಕವಾಗಿದೆ.

ಇದಕ್ಕೆ ಕಾರಣವಿದೆ. ಆಡಳಿತ ಕನ್ನಡ ಎನ್ನುವುದು ಕನ್ನಡ ಭಾಷೆಯಲ್ಲಿಯೇ ಒಂದು ವಿಶಿಷ್ಟ ತಾಂತ್ರಿಕ ಶೈಲಿ ಎನ್ನುವುದನ್ನು ನಾವು ಮನಗಂಡಿಲ್ಲ. ಇದರಲ್ಲಿ ಬಳಕೆಯಾಗುವ ಪದಗಳಿಂದ ಹಿಡಿದು, ವಾಕ್ಯರಚನೆ, ಲೇಖನ ಚಿಹ್ನೆಗಳು, ನಮೂನೆಯ ವಿನ್ಯಾಸ ಎಲ್ಲವೂ ವಿಶಿಷ್ಟವಾಗಿರುತ್ತದೆ. ಇದು ಯಾರಿಗೂ ಹುಟ್ಟಿನಿಂದಲೇ ಬರುವುದಿಲ್ಲ, ಇದನ್ನು ಕಲಿಯಬೇಕಾಗುತ್ತದೆ. ಎಲ್ಲಿ ಕಲಿಯುವುದು? ನಮ್ಮ ಶಾಲೆಗಳಲ್ಲಿ ಹತ್ತು ವರ್ಷಗಳಲ್ಲಿ ಕಲಿಸುವ ಕನ್ನಡದಲ್ಲಿ ನಾವು ಹೆಚ್ಚಿನಂಶ ಸಾಹಿತ್ಯ, ಅದಕ್ಕೆ ತಕ್ಕ ವ್ಯಾಕರಣ, ಛಂದಸ್ಸು ಕಲಿಯುತ್ತೇವೆ. ವ್ಯವಹಾರ, ಆಡಳಿತ, ವಿಜ್ಞಾನ– ತಂತ್ರಜ್ಞಾನದಂತಹ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಯ ಕುರಿತು ಶಾಲೆಗಳಲ್ಲಿ ಏನನ್ನೂ ಕಲಿಯುವುದಿಲ್ಲ. ಇನ್ನೆಲ್ಲಿ ಕಲಿಯಬೇಕು? ಎಲ್ಲಿಯೂ ಇಲ್ಲ. ಹೀಗಾಗಿ, ಸರ್ಕಾರಿ ನೌಕರಿಗೆ ಸೇರಿದ ನಂತರ ಶಾಲೆಯಲ್ಲಿ ಕಲಿತ ಕನ್ನಡ ಯಾವುದೇ ಪ್ರಯೋಜನಕ್ಕೆ ಬರುವುದಿಲ್ಲ.

1970ರ ದಶಕದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖ್ಯ ಕಾರ್ಯವೇ ವಿವಿಧ ಹಂತಗಳ ಆಡಳಿತ ಕನ್ನಡ ತರಬೇತಿಗಳನ್ನು ಹಮ್ಮಿಕೊಳ್ಳುವುದಾಗಿತ್ತು. ಇದರಲ್ಲಿ, ಮೈಸೂರಿನ ಭಾರತೀಯ ಭಾಷೆಗಳ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಭಾಷಾಂತರ ಇಲಾಖೆ ಇವೂ ಒಳಗೊಂಡಿದ್ದವು. ಆಗ, ಆಡಳಿತ ಕನ್ನಡ ಕೈಪಿಡಿಗಳು, ಆಡಳಿತ ಪದಕೋಶ, ಕಾನೂನು ಪದಕೋಶ, ಇಲಾಖಾವಾರು ಪದಕೋಶಗಳು ಪ್ರಕಟವಾದವು. ತರಬೇತಿದಾರರ ತರಬೇತಿ, ತರಬೇತಿಗಳಿಗಾಗಿ ಪಠ್ಯಕ್ರಮಗಳು, ಸಾಮಗ್ರಿ ರಚಿತವಾದವು, ಇಡೀ ರಾಜ್ಯದಲ್ಲಿ ಭರಾಟೆಯಿಂದ ತರಬೇತಿಗಳು ನಡೆದವು. ಮುಂದಿನ ದಶಕದಲ್ಲಿ ಆಡಳಿತ ಕನ್ನಡದ ತರಬೇತಿಗಳು ನಿಂತೇಹೋದವು. ಆಗ ತರಬೇತಿ ಹೊಂದಿದ್ದ ಸಿಬ್ಬಂದಿ– ಅಧಿಕಾರಿಗಳು ಈಗ ನಿವೃತ್ತರಾಗಿರುತ್ತಾರೆ. ಅದರ ನಂತರ ಬಂದ ಸಿಬ್ಬಂದಿ– ಅಧಿಕಾರಿಗಳಿಗೆ ವಿಶಿಷ್ಟ ತರಬೇತಿ ಇಲ್ಲದೇ ಪರಿಣಾಮಕಾರಿಯಾದ ಆಡಳಿತ ಕನ್ನಡ ಕೌಶಲ ಬರಬೇಕು ಎಂದರೆ, ಅದೇನು ಚಮತ್ಕಾರವೇ?

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಅರಣ್ಯ ಇಲಾಖೆಯಲ್ಲಿ 'ಕನ್ನಡ ಘಟಕ'ವನ್ನು ಸ್ಥಾಪಿಸಲು ಸೂಚಿಸಿರುವುದೇ ಒಂದು ಹೊಸ ಸಬಲೀಕರಣಕ್ಕೆ ನಾಂದಿಯಾಗಲಿ. ಅವರು ಹೇಳಿರುವ ಹಾಗೆ, ಪ್ರತಿಯೊಂದು ಇಲಾಖೆಯ ಪ್ರಧಾನ ಕಚೇರಿಯಲ್ಲಿ ಒಂದು 'ಆಡಳಿತ ಕನ್ನಡ' ಘಟಕ ತೆರೆಯಬೇಕು. ಅದರಲ್ಲಿ ಆಯಾ ಇಲಾಖೆಗೆ ಸಂಬಂಧಿಸಿದಂತೆ ಆಡಳಿತ ಕನ್ನಡದಲ್ಲಿ ಸಿಬ್ಬಂದಿ– ಅಧಿಕಾರಿಗಳ ತರಬೇತಿಗಳು ನಡೆಯಬೇಕು. ಎಲ್ಲಾ ಇಲಾಖೆಗಳ ವಿಶಿಷ್ಟ ಪದಕೋಶ ರಚನೆ– ಪ್ರಕಟಣೆ ಆಗಬೇಕು. ಈವರೆಗೆ ಇಂಗ್ಲಿಷಿನಲ್ಲಿರುವ ಸುತ್ತೋಲೆ, ಆದೇಶ, ಕೈಪಿಡಿಗಳನ್ನು ಆಯಾ ಇಲಾಖೆಯೇ ಅನುವಾದಿಸಿಕೊಳ್ಳುವಂತಾಗಬೇಕು. ಇಲಾಖೆಯಲ್ಲಿ ಈಗಲೂ ಇರಬಹುದಾದ, ಇಲಾಖಾ ಕನ್ನಡ ಪರೀಕ್ಷೆಗಳನ್ನು ಪಾಸು ಮಾಡುವ ಅಗತ್ಯವುಳ್ಳ ಸಿಬ್ಬಂದಿಗೆ, ಕನ್ನಡೇತರರಿಗೆ ಕನ್ನಡ ತರಬೇತಿಗಳನ್ನು ನಡೆಸಬೇಕು. ಪ್ರಾಧಿಕಾರ ಇಂಥ ಘಟಕದ ರಚನೆ ಮತ್ತು ಉದ್ದೇಶಗಳ ಬಗ್ಗೆ ಮಾರ್ಗದರ್ಶನ ಮಾಡಬೇಕು. ಇದಕ್ಕೆ ಹೆಚ್ಚುವರಿ ಹಣ ಬೇಕಾಗುತ್ತದೆ. ಆದರೆ ಹಳಸಾದ, ಗೊಂದಲಮಯ ಕನ್ನಡವನ್ನು ಬಳಸಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ನಷ್ಟ ಉಂಟುಮಾಡುವ ಮತ್ತು ವಿಳಂಬಕ್ಕೆ ಕಾರಣವಾಗುವುದರ ಬದಲಿಗೆ ಈ ಹೂಡಿಕೆ ಹೆಚ್ಚು ಸುಸ್ಥಿರವಾದದ್ದು.

ಎಲ್ಲಕ್ಕಿಂತ ಹೆಚ್ಚಾಗಿ ಶಾಲೆಗಳಲ್ಲಿ ಕಲಿಸುವ ಕನ್ನಡ ಪಠ್ಯಕ್ರಮದಲ್ಲಿ ವ್ಯಾವಹಾರಿಕ, ಆಡಳಿತ, ವಿಜ್ಞಾನ, ತಂತ್ರಜ್ಞಾನ, ನ್ಯಾಯಾಂಗ, ವಾಣಿಜ್ಯ ಕನ್ನಡವನ್ನು ಪರಿಚಯಿಸುವ ಕೆಲಸ ತುರ್ತಾಗಿ ಆಗಬೇಕು.

ವಾಚಕರ ವಾಣಿ

ಮಹಿಳಾ ರಾಜಕೀಯ ಪಕ್ಷ: ಇಂದಿನ ಅಗತ್ಯ

ಮಹಿಳೆಯರಿಗೆ ಶಾಸನಸಭೆಗಳಲ್ಲಿ ಶೇಕಡ 33ರಷ್ಟು ಮೀಸಲಾತಿಯನ್ನು ತಕ್ಷಣ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಬೆಂಗಳೂರಲ್ಲಿ ಕೆಪಿಸಿಸಿ ಕಚೇರಿ ಮುಂದೆ ಪೋಸ್ಟರ್ ಹಿಡಿದು ನಿಂತ ಮಹಿಳೆಯರ ಚಿತ್ರ ಗಮನಸೆಳೆಯಿತು (ಪ್ರ.ವಾ., ಏಪ್ರಿಲ್ 3). ಮಹಿಳೆಯರು ತಮ್ಮ ಅನೇಕ ಬೇಡಿಕೆಗಳ ಕುರಿತು ಧರಣಿ, ಪ್ರತಿಭಟನೆ, ಮತಪ್ರದರ್ಶನ ನಡೆಸುತ್ತಲೇ ಇರುತ್ತಾರೆ. ಇಂಥ ಆಗ್ರಹ, ಪ್ರತಿಭಟನೆಗಳಿಗೆ ಸರ್ಕಾರಗಳು ಜಗ್ಗುವುದೂ ಇಲ್ಲ, ಬಗ್ಗುವುದೂ ಇಲ್ಲ.

ತಾಯಂದಿರೇ, ನೀವು ದೇಶದ ಒಟ್ಟು ಜನಸಂಖ್ಯೆಯ ಶೇ 50ರಷ್ಟು ಇದ್ದೀರಿ. ನೀವು ಪುರುಷಪ್ರಾಧಾನ್ಯ ಸರ್ಕಾರಗಳನ್ನು ಕಾಡುವುದು, ಬೇಡುವುದು ಸಾಕು. ನಿಮ್ಮದೇ ಸರ್ಕಾರ ರಚನೆಯ ಕುರಿತು ಯೋಚಿಸಲು ಇದು ಸಕಾಲ. ಇಂದಿನ ಸರ್ಕಾರಗಳ ಆಡಳಿತ ವೈಖರಿಯನ್ನು ನೋಡಿ ಜನ ಬೇಸತ್ತಿದ್ದಾರೆ. ಇವೆಲ್ಲವುಗಳಿಂದ ಜನರಿಗೆ ಮುಕ್ತಿ ಬೇಕಾಗಿದೆ. ಪಾರದರ್ಶಕವಾದ ಪರಿಣಾಮಕಾರಿ ಆಡಳಿತ ವ್ಯವಸ್ಥೆ ಬೇಕಾಗಿದೆ. ಪುರುಷ ಪ್ರಧಾನ ಪಕ್ಷಗಳು ಸಮರ್ಪಕ ಆಡಳಿತ ನೀಡಲು ವಿಫಲವಾಗಿವೆ. ಪರ್ಯಾಯ ಮಹಿಳಾ ರಾಜಕೀಯ ಪಕ್ಷದ ಸಂಘಟನೆ ಇಂದಿನ ಅಗತ್ಯವಾಗಿದೆ.

'ತೊಟ್ಟಿಲು ತೂಗುವ ಕೈ ದೇಶವನ್ನು ತೂಗಬಲ್ಲದು'. ಅನೇಕ ರಂಗಗಳಲ್ಲಿ ಇಂದು ಮಹಿಳೆಯರು ಮುಂಚೂಣಿಯಲ್ಲಿ ಇದ್ದಾರೆ. ಅವರ ಕಾರ್ಯಕ್ಷಮತೆ, ದಕ್ಷತೆ ಪುರುಷರಿಗಿಂತ ಕಡಿಮೆ ಏನಲ್ಲ. ತಮ್ಮದೇ ಆದ ಮಹಿಳಾ ರಾಜಕೀಯ ಪಕ್ಷವನ್ನು ಸ್ಥಾಪಿಸಿಕೊಂಡು ದೇಶದ ಚುಕ್ಕಾಣಿಯನ್ನು ಹಿಡಿಯಲು ಮಹಿಳೆಯರು ಏಕೆ ಮುಂದಾಗಬಾರದು? ದೇಶಕ್ಕೆ ಇಂದು ಪರ್ಯಾಯ, ಪ್ರಾಮಾಣಿಕ ರಾಜಕೀಯ ಶಕ್ತಿಯ ಅವಶ್ಯಕತೆ ಇದೆ.

ವೆಂಕಟೇಶ ಮಾಚಕನೂರ, ಧಾರವಾಡ

ಉಪಾಧ್ಯಕ್ಷ ಹುದ್ದೆ ಭರ್ತಿಗೆ ಕ್ರಮ ಜರುಗಿಸಿ

ಲೋಕಸಭೆಯ ಉಪಾಧ್ಯಕ್ಷ ಹುದ್ದೆಯು 2019ರಿಂದ ಖಾಲಿಯಾಗಿಯೇ ಉಳಿದಿರುವ ಬಗ್ಗೆ ಸಂಸದರೊಬ್ಬರು ಕಳವಳ ವ್ಯಕ್ತಪಡಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಲೋಕಸಭಾಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡುತ್ತಾರೆ. ಅಂತಹ ಸಂದರ್ಭಗಳಲ್ಲಿ ಲೋಕಸಭೆಯ ಅಧ್ಯಕ್ಷರಿಗೆ ಇರುವ ಬಹುಪಾಲು ಅಧಿಕಾರಗಳನ್ನು ಅವರು ಚಲಾಯಿಸಬಹುದು. ಆದರೆ, ರಾಜಕೀಯ ಕಾರಣದಿಂದಾಗಿ ಈ ಹುದ್ದೆಯನ್ನು ತುಂಬದೇ ಇರುವುದು ಸರಿಯಲ್ಲ.

ದಶಕಗಳ ಹಿಂದೆ ಈ ಹುದ್ದೆಯನ್ನು ವಿರೋಧ ಪಕ್ಷದವರಿಗೆ ನೀಡುವ ಸಂಪ್ರದಾಯ ಚಾಲ್ತಿಯಲ್ಲಿತ್ತು. ಬಳಿಕ ಅದು ಆಳುವ ಪಕ್ಷಕ್ಕೆ ಅಪಥ್ಯ ಆಗತೊಡಗಿತು. ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಎರಡೂ ಹುದ್ದೆಗಳಿಗೆ ಆಡಳಿತ ಪಕ್ಷದ ಸದಸ್ಯರೇ ಚುನಾಯಿತರಾಗುತ್ತಿದ್ದಾರೆ. ಒಂದು ವೇಳೆ ಈ ಹುದ್ದೆಯನ್ನು ವಿರೋಧ ಪಕ್ಷಗಳಿಗೆ ನೀಡಿದರೆ, ಆ ಮೂಲಕ ಆಯ್ಕೆಯಾಗುವ ಉಪಾಧ್ಯಕ್ಷರು ಲೋಕಸಭೆಯಲ್ಲಿ ವಿರೋಧ ಪಕ್ಷಗಳ ದನಿಯಾಗಬಹುದು. ಅದೇನೇ ಇರಲಿ, ಈ ಹುದ್ದೆಯನ್ನು ಬೇಗ ತುಂಬುವತ್ತ ಕೇಂದ್ರ ಸರ್ಕಾರ ಈಗಲಾದರೂ ಗಮನಹರಿಸಬೇಕಾಗಿದೆ.

ಕೆ.ವಿ.ವಾಸು, ಮೈಸೂರು

ನಗರದ ದುಃಸ್ಥಿತಿ: ನಿವಾರಣೆ ಎಂದು?

'ದೊಡ್ಡ ಯೋಜನೆಗಳ ಭಾರದಲ್ಲಿ ಗೌಣವಾದ ಜನರ ನಿರೀಕ್ಷೆಗಳು' ಶೀರ್ಷಿಕೆಯ ಸಂಪಾದಕೀಯ (ಪ್ರ.ವಾ., ಏ. 3) ಸಕಾಲಿಕ ಮತ್ತು ಸರ್ಕಾರದ ಬೇಜವಾಬ್ದಾರಿ ನಡೆಗೆ ಕನ್ನಡಿ ಹಿಡಿದಿದೆ. ತಾವು ಅಧಿಕಾರಕ್ಕೆ ಬಂದರೆ ಜನರನ್ನು ಸುಖದ ಉಯ್ಯಾಲೆಯಲ್ಲಿ ತೂಗುತ್ತೇವೆ ಎಂದು ಹೇಳಿತ್ತು ಕಾಂಗ್ರೆಸ್. ಆ ಪಕ್ಷದ ನೇತೃತ್ವದ ಸರ್ಕಾರ ಈಗ ವಿವಿಧ ರೂಪದಲ್ಲಿ ಕರಗಳನ್ನು ಹೇರಿ ಜನರನ್ನು ಸಡಿಲಗೊಂಡ, ತುಕ್ಕು ಹಿಡಿದ ಉಯ್ಯಾಲೆಯಲ್ಲಿ ಕುಳ್ಳಿರಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು, ಸಂಬಂಧಿಸಿದ ಸಚಿವರು ಯಾವುದೇ ವಂದಿಮಾಗಧರಿಲ್ಲದೆ ಬಿಎಂಟಿಸಿಯಲ್ಲಾಗಲೀ, ಕಾಲ್ನಡಿಗೆಯಲ್ಲಾಗಲೀ ಬೆಂಗಳೂರಿನ ಕೆಲವು ಭಾಗಗಳಲ್ಲಿ ಸಂಚರಿಸಿದರೆ ತಿಳಿಯುತ್ತದೆ ನಗರವಾಸಿಗಳ ಪಾಡು. ಪಾದಚಾರಿ ಮಾರ್ಗಗಳು ಸಮರ್ಪಕವಾಗಿಲ್ಲದ ಕಾರಣ ರಸ್ತೆಗಳ ಮೇಲೇ ನಡೆದಾಡಬೇಕಾದ ಸ್ಥಿತಿ ಅನೇಕ ಕಡೆ ಇದೆ. ಪಾದಚಾರಿ ಮಾರ್ಗಗಳನ್ನು ತಮ್ಮ ಪಿತ್ರಾರ್ಜಿತ ಆಸ್ತಿ ಎಂಬಂತೆ ಕೆಲವರು ಆಕ್ರಮಿಸಿ ವ್ಯಾಪಾರ– ವಹಿವಾಟು ನಡೆಸುತ್ತಿದ್ದಾರೆ. ಮೇಲ್ಸೇತುವೆ, ಮೆಟ್ರೊ ರೈಲು ನಿರ್ಮಾಣ, ರಸ್ತೆ ವಿಸ್ತರಣೆ, ವೈಟ್ ಟಾಪಿಂಗ್ ಹೆಸರಿನಲ್ಲಿ ರಸ್ತೆಗಳನ್ನು ಅಗೆದು ಅಧ್ವಾನ ಮಾಡಲಾಗಿದೆ. ಎಲ್ಲೆಲ್ಲೂ ದೂಳು ತುಂಬಿಕೊಂಡ, ಗುಂಡಿಮಯ ರಸ್ತೆಗಳು ಕಾಣಸಿಗುತ್ತವೆ. ಹೇಳುವವರೂ ಇಲ್ಲ, ಕೇಳುವವರೂ ಇಲ್ಲ ಎನ್ನುವಂತಹ ದುಃಸ್ಥಿತಿ ಆವರಿಸಿದೆ.

ರಮೇಶ್ ಬಿ., ಬೆಂಗಳೂರು

ಸುಂಕ ಹೆಚ್ಚಳ: ಅಮೆರಿಕದಲ್ಲಿ ಹಣದುಬ್ಬರಕ್ಕೆ ದಾರಿ?

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತ ಸೇರಿದಂತೆ ವಿಶ್ವದ ಎಲ್ಲ ದೇಶಗಳಿಂದ ತಮ್ಮ ದೇಶಕ್ಕೆ ಆಮದಾಗುವ ಉತ್ಪನ್ನಗಳು, ಸೇವೆಗಳ ಮೇಲೆ ಹೊಸದಾಗಿ ಒಂದಿಷ್ಟು ಸುಂಕವನ್ನು ವಿಧಿಸಿದ್ದಾರೆ. ಈ ಎಲ್ಲ ದೇಶಗಳು ಅಮೆರಿಕವನ್ನು ಸರಿಯಾಗಿ ನಡೆಸಿಕೊಂಡಿಲ್ಲ ಎಂಬುದು ಅವರ ಮಾತು. ಹೊಸದಾಗಿ ತಾವು ವಿಧಿಸಿರುವ ಸುಂಕದ ಪರಿಣಾಮವಾಗಿ ಅಮೆರಿಕಕ್ಕೆ ಒಳ್ಳೆಯದಾಗುತ್ತದೆ ಎಂದು ಅವರು ಹೇಳುತ್ತಿದ್ದಾರೆ. ಆದರೆ ಅರ್ಥಶಾಸ್ತ್ರಜ್ಞರ ಪೈಕಿ ಕೆಲವರ ಅಭಿಪ್ರಾಯ ಬೇರೆಯದೇ ಆಗಿದೆ.

ಟ್ರಂಪ್ ಅವರ ನಡೆಯ ಕಾರಣದಿಂದಾಗಿ ಅಮೆರಿಕಕ್ಕೆ ಆಮದಾಗುವ ಎಲ್ಲ ಉತ್ಪನ್ನಗಳು ಮತ್ತು ಸೇವೆಗಳು ದುಬಾರಿ ಆಗುತ್ತವೆ. ಅಂದರೆ, ಅಮೆರಿಕದ ಗ್ರಾಹಕರು ಇದುವರೆಗೆ ಬಳಕೆ ಮಾಡುತ್ತಿದ್ದ, ಮುಂದೆ ಬಳಕೆ ಮಾಡಲಿರುವ ವಿದೇಶಿ ಉತ್ಪನ್ನಗಳು ಹಾಗೂ ಸೇವೆಗಳಿಗೆ ಹೆಚ್ಚು ದುಡ್ಡು ಕೊಡಬೇಕಾಗುತ್ತದೆ. ಇದು ನೇರವಾಗಿ ಅಲ್ಲಿ ಹಣದುಬ್ಬರದ ಹೆಚ್ಚಳಕ್ಕೆ ದಾರಿ ಮಾಡಿಕೊಡುತ್ತದೆ. ವರದಿಯೊಂದರ ಪ್ರಕಾರ 2024ರಲ್ಲಿ ಅಮೆರಿಕ ಆಮದು ಮಾಡಿಕೊಂಡಿರುವ ಉತ್ಪನ್ನಗಳ ಮೌಲ್ಯವನ್ನು ಪ್ರತಿ ಕುಟುಂಬದ ಮಟ್ಟಕ್ಕೆ ಲೆಕ್ಕ ಹಾಕಿದರೆ ಅದು 24 ಸಾವಿರ ಡಾಲರ್ ಆಗುತ್ತದೆ. ಸುಂಕದ ಪರಿಣಾಮವಾಗಿ, ಅಮೆರಿಕದ ಪ್ರತಿ ಕುಟುಂಬವು ತಾವು ಇದುವರೆಗೆ ಬಳಸುತ್ತಿದ್ದ ಉತ್ಪನ್ನಗಳನ್ನೇ ಮುಂದೆಯೂ ಬಳಸಲು ಹೆಚ್ಚುವರಿಯಾಗಿ 7,300 ಡಾಲರ್ ವ್ಯಯಿಸಬೇಕಾಗುತ್ತದೆ. ಇದಕ್ಕೆ ಅಲ್ಲಿನ ಜನ ಸಿದ್ಧರಿದ್ದಾರೆಯೇ? ಇದಕ್ಕೆ ಕೆಲವು ತಿಂಗಳಲ್ಲಿ ಉತ್ತರ ಸಿಗಬಹುದು.

ಟ್ರಂಪ್ ಅವರ ನಡೆಯು ಸದ್ಯದ ಸ್ಥಿತಿಯಲ್ಲಿ ಅಮೆರಿಕದ ಗ್ರಾಹಕರ ಜೇಬಿಗೆ ಹೊಸ ಹೊರೆಯನ್ನು ಹಾಕುವಂತೆ ಕಾಣುತ್ತಿದೆ.

ರವಿಕಿರಣ್ ಶೆಟ್ಟಿ, ನೇರಳಕಟ್ಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜಗದ ಆರ್ಥಿಕತೆಗೆ ಭಾರಿ ಹೊಡೆತ?

ಪಾಲುದಾರ ದೇಶಗಳ ಮೇಲೆ ಟ್ರಂಪ್ ಪ್ರತಿಸುಂಕ ಅಮೆರಿಕದ 'ವಿಮೋಚನಾ ದಿನ' ಎಂದು ಘೋಷಣೆ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿದಂತೆಯೇ ಮಾಡಿದ್ದಾರೆ; ಭಾರತವೂ ಸೇರಿದಂತೆ ಜಗತ್ತಿನ 180 ದೇಶಗಳ ಮೇಲೆ ಪ್ರತಿಸುಂಕ ಘೋಷಣೆ ಮಾಡಿದ್ದಾರೆ. ಚೀನಾ ಸೇರಿದಂತೆ ಐರೋಪ್ಯ ಒಕ್ಕೂಟದ ಕೆಲವು ದೇಶಗಳನ್ನು 'ಅತಿಕೆಟ್ಟ ಅಪರಾಧಿಗಳು' ಎಂದು ಕರೆದಿರುವ ಅವರು, ಅವುಗಳ ಮೇಲೆ ಅತಿಹೆಚ್ಚು ಪ್ರಮಾಣದ ಪ್ರತಿಸುಂಕ ವಿಧಿಸಿದ್ದಾರೆ. ಅಮೆರಿಕದ ಹಿತಾಸಕ್ತಿ ಕಾಪಾಡಲು ಇದು ಅನಿವಾರ್ಯ ಎನ್ನುವಂತೆ ಅವರು ತಮ್ಮ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ. ಆದರೆ, ಇದು ಜಾಗತಿಕ ಆರ್ಥಿಕತೆಗೆ, ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಭಾರಿ ಹೊಡೆತ ನೀಡಲಿದೆ ಎನ್ನುವ ವಿಶ್ಲೇಷಣೆ ಕೇಳಿಬಂದಿದೆ

ಪ್ರಜಾವಾಣಿ ವಾರ್ತೆ

ಡೊನಾಲ್ಡ್ ಟ್ರಂಪ್ ಅವರು ಎರಡನೆಯ ಬಾರಿಗೆ ಅಧ್ಯಕ್ಷರಾಗಿ ಆಯ್ಕೆ ಆದಾಗಿನಿಂದ ಭಾರತವೂ ಸೇರಿದಂತೆ ಹಲವು ದೇಶಗಳ ಸುಂಕ ನೀತಿಯ ವಿರುದ್ಧ ಆಕ್ಷೇಪ ಎತ್ತಿದ್ದರು. ಅಮೆರಿಕ ಕೂಡ ಇತರೆ ದೇಶಗಳ ಸರಕುಗಳ ಮೇಲೆ ಹೆಚ್ಚು ಸುಂಕ ವಿಧಿಸಲಿದೆ ಎಂದು ಹೇಳುತ್ತಲೇ ಬಂದಿದ್ದರು. ಡೊನಾಲ್ಡ್ ಟ್ರಂಪ್ ಅವರ ಆಡಳಿತ ಶೈಲಿಯನ್ನು ಅರಿತಿದ್ದವರು ಅದೊಂದು ಬೆದರಿಕೆಯ ತಂತ್ರ ಎಂದೇ ಪರಿಗಣಿಸಿದ್ದರು. ಆದರೆ, ಟ್ರಂಪ್ ತಾವು ಹೇಳಿದಂತೆ ಅಮೆರಿಕದೊಳಗೆ ಬರುವ ಇತರೆ ದೇಶಗಳ ಸರಕುಗಳ ಮೇಲೆ ಪ್ರತಿಸುಂಕ ಹೇರಿ ಆದೇಶವನ್ನೇ ಹೊರಡಿಸಿದ್ದಾರೆ.

ಚೀನಾ ಮತ್ತು ಐರೋಪ್ಯ ಒಕ್ಕೂಟ ಸೇರಿದಂತೆ ಅಮೆರಿಕದ 60 ಪಾಲುದಾರ ರಾಷ್ಟ್ರಗಳು ಅನ್ಯಾಯದ ಸುಂಕ ನೀತಿ ಅನುಸರಿಸುತ್ತಿವೆ ಎಂದಿರುವ ಟ್ರಂಪ್, ಅವುಗಳನ್ನು 'ಅತಿಕೆಟ್ಟ ಅಪರಾಧಿಗಳು' (worst offenders) ಎಂದು ಕರೆದಿದ್ದಾರೆ. ಅವುಗಳ ಮೇಲೆ ಅತಿ ಹೆಚ್ಚು ಸುಂಕ ವಿಧಿಸಿದ್ದಾರೆ. ಸಣ್ಣ ರಾಷ್ಟ್ರ, ದೊಡ್ಡ ರಾಷ್ಟ್ರ, ಶ್ರೀಮಂತ-ಬಡ ರಾಷ್ಟ್ರ ಎಂಬ ಯಾವುದೇ ಮಾನದಂಡ ಅನುಸರಿಸದೆ ತಮ್ಮದೇ ಲೆಕ್ಕಾಚಾರದಂತೆ ಪ್ರತೀಕಾರ ಸುಂಕ ಹೇರಿದ್ದಾರೆ.

ಅಮೆರಿಕದ ಎಲ್ಲ ವ್ಯಾಪಾರ ಪಾಲುದಾರರ ಮೇಲೆ ಏ.5ರವರೆಗೆ ಶೇ 10ರಷ್ಟು ಮೂಲಸುಂಕ ವಿಧಿಸಲಾಗಿದೆ. ಏ.9ರ ನಂತರ ಈ ಪ್ರಮಾಣವು ಮತ್ತಷ್ಟು ಹೆಚ್ಚಲಿದೆ. ಒಂದೊಂದು ದೇಶಕ್ಕೂ ಒಂದೊಂದು ಪ್ರಮಾಣದಲ್ಲಿ ಪ್ರತಿಸುಂಕ ವಿಧಿಸಲಾಗಿದೆ. ಅಮೆರಿಕದ ಮೇಲೆ ಯಾವ ದೇಶ ಎಷ್ಟು ಸುಂಕ ವಿಧಿಸುತ್ತಿದೆ ಎನ್ನುವುದನ್ನು ಉಲ್ಲೇಖಿಸಿಯೇ, ಪ್ರತಿಸುಂಕದ ಪ್ರಮಾಣವನ್ನು ಪ್ರಕಟಿಸಲಾಗಿದೆ.

ತಮ್ಮ ಸುಂಕ ಏರಿಕೆಯನ್ನು 'ರಾಷ್ಟ್ರೀಯ ತುರ್ತುಪರಿಸ್ಥಿತಿಯ ಕ್ರಮ' ಎಂದು ಟ್ರಂಪ್ ಸಮರ್ಥಿಸಿಕೊಂಡಿದ್ದಾರೆ. ಸುಂಕ ಹೇರಿದ ದಿನವನ್ನು (ಏ.2) ಅಮೆರಿಕದ 'ವಿಮೋಚನಾ ದಿನ' ಎಂದು ಪ್ರತಿಪಾದಿಸಿದ್ದಾರೆ. ಅಮೆರಿಕದಲ್ಲಿ ಸಮೃದ್ಧಿಯ ಹೊಸ ಯುಗ ಆರಂಭವಾಗಲಿದೆ ಎಂದು ಘೋಷಿಸಿದ್ದಾರೆ.

ಅಮೆರಿಕದ ಅತ್ಯಂತ ನಿಕಟ ವ್ಯಾಪಾರ ಪಾಲುದಾರ ರಾಷ್ಟ್ರಗಳಾದ ಮೆಕ್ಸಿಕೊ, ಕೆನಡಾದ ಕೆಲವು ವಸ್ತುಗಳ ಮೇಲೆ ಪ್ರತಿಸುಂಕ ವಿಧಿಸಲಾಗಿದ್ದರೂ ಸದ್ಯಕ್ಕೆ ಅಲ್ಲಿನ ಸುಂಕ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಟ್ರಂಪ್ ಹೇಳಿದ್ದಾರೆ. ಉಳಿದಂತೆ ಅಮೆರಿಕದೊಂದಿಗೆ ಸ್ನೇಹದಿಂದ ಇರುವ ಬ್ರಿಟನ್, ಭಾರತದಂಥ ರಾಷ್ಟ್ರಗಳ ಮೇಲೂ ಸುಂಕ ವಿಧಿಸಲಾಗಿದೆ. ದಕ್ಷಿಣ ಆಫ್ರಿಕಾದ ಲೆಸೊಥೊದಂತಹ (ಶೇ 50) ಸಣ್ಣ ರಾಷ್ಟ್ರವನ್ನೂ ಅವರು ಹೊರತುಪಡಿಸಿಲ್ಲ. ಸ್ಕಾಟ್ಲೆಂಡ್‌ನ ವಿಸ್ಕಿ ಉದ್ಯಮ, ಜಗತ್ತಿನ ವಿವಿಧ ರಾಷ್ಟ್ರಗಳ ಕಾರು ತಯಾರಿಕಾ ಉದ್ಯಮಗಳೂ ಸೇರಿದಂತೆ ಜಗತ್ತಿನ ಹಲವು ಉದ್ಯಮಗಳು ಇದರಿಂದ ಸಂಕಷ್ಟಕ್ಕೀಡಾಗುವ ಸಾಧ್ಯತೆ ಇದೆ.

ಸಂಭವನೀಯ ಪರಿಣಾಮಗಳು

- ಮಿತ್ರರಾಷ್ಟ್ರಗಳೊಂದಿಗಿನ ಸಂಬಂಧದಲ್ಲಿ ಬಿರುಕು
- ಜಾಗತಿಕ ಪೂರೈಕೆ ಸರಪಳಿಯ ಮೇಲೆ ವ್ಯತಿರಿಕ್ತ ಪರಿಣಾಮ
- ಅಮೆರಿಕ ಆಮದು ಮಾಡಿಕೊಳ್ಳುವ ವಸ್ತುಗಳ ಬೆಲೆ ದುಬಾರಿ. ಇದರಿಂದ ಮಾರಾಟದಲ್ಲಿ ಕುಸಿತ
- ಜಾಗತಿಕ ಮಟ್ಟದಲ್ಲಿ ಉದ್ಯಮಗಳು ನಷ್ಟಕ್ಕೊಳಗಾಗಿ ಬಾಗಿಲು ಮುಚ್ಚಬೇಕಾದ ಸ್ಥಿತಿ; ನಿರುದ್ಯೋಗ ಪ್ರಮಾಣ ಹೆಚ್ಚಳ
- ಹಲವು ದೇಶಗಳಲ್ಲಿ ಇದರಿಂದ ಆರ್ಥಿಕ ಹಿಂಜರಿತ
- ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕತೆಗಳ ಮೇಲೆ ಪ್ರತಿಕೂಲ ಪರಿಣಾಮ
- ಭಾರತದಂಥ ಕೆಲವು ರಾಷ್ಟ್ರಗಳಿಗೆ ಹೊಸ ಮಾರುಕಟ್ಟೆ ರೂಪಿಸಿಕೊಳ್ಳಲು ಸಕಾಲ
- ವ್ಯಾಪಾರ ಸಂಬಂಧಿ ಮಾತುಕತೆಗೆ ಬರುವಂತೆ ವಿದೇಶದ ಮೇಲೆ ಪರೋಕ್ಷ ಒತ್ತಡ

ಕೆಲವು ರಾಷ್ಟ್ರಗಳು ಅಮೆರಿಕದ ಕ್ರಮವನ್ನು ವಿರೋಧಿಸಿವೆ. ಪ್ರತಿಸುಂಕ ಹೇರಿಕೆಯನ್ನು ವಿರೋಧಿಸುವುದಾಗಿ ಹೇಳಿರುವ ಚೀನಾದ ಹಣಕಾಸು ಸಚಿವಾಲಯವು, 'ನಮ್ಮ ಹಕ್ಕು ಮತ್ತು ಹಿತಾಸಕ್ತಿ ಕಾಪಾಡಿಕೊಳ್ಳಲು ನಾವು ಅಮೆರಿಕಕ್ಕೆ ತಕ್ಕ ಪ್ರತ್ಯುತ್ತರ ನೀಡುತ್ತೇವೆ' ಎಂದು ತಿಳಿಸಿದೆ. ಪೋಲೆಂಡ್, ಇದು ತನ್ನ ದೇಶದ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದಿದೆ. ಇದರಿಂದ ಉಂಟಾಗುವ ವ್ಯಾಪಾರ ಸಮರ ಎದುರಿಸಲು ಸಿದ್ಧ ಎಂದು ಫ್ರಾನ್ಸ್ ಹೇಳಿದೆ. ಜಪಾನ್ ಪಶ್ಚಾತ್ತಾಪ ವ್ಯಕ್ತಪಡಿಸಿದ್ದರೆ, ತೈವಾನ್ ಮಾತುಕತೆಯ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ಪ್ರಯತ್ನಿಸುವುದಾಗಿ ಹೇಳಿದೆ. ಇಸ್ರೇಲ್ ಆಘಾತ ವ್ಯಕ್ತಪಡಿಸಿದೆ; ಅಮೆರಿಕದ ಸರಕುಗಳ ಮೇಲೆ ಎಲ್ಲ ಸುಂಕವನ್ನೂ ರದ್ದುಪಡಿಸಿರುವ ತನ್ನ ಕ್ರಮದಿಂದ ಮುಂದೆ ಅಮೆರಿಕದ ನಿಲುವು ಬದಲಾಗಬಹುದು ಎಂದು ಭರವಸೆ ವ್ಯಕ್ತಪಡಿಸಿದೆ.

ಅಣುಬಾಂಬ್ ಎಸೆದ ಟ್ರಂಪ್: ಅಮೆರಿಕದ ಪ್ರತಿಸುಂಕ ಹೇರಿಕೆಯ ಬಗ್ಗೆ ವಿಶ್ವದ ಅನೇಕ ಸಂಸ್ಥೆಗಳು, ಅರ್ಥಶಾಸ್ತ್ರಜ್ಞರು ಆಘಾತ ವ್ಯಕ್ತಪಡಿಸಿದ್ದಾರೆ. ಟ್ರಂಪ್ ಅವರು ಜಗತ್ತಿನ ವ್ಯಾಪಾರ ವ್ಯವಸ್ಥೆಯ ಮೇಲೆ ಅಣು ಬಾಂಬ್ ಎಸೆದಿದ್ದಾರೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಮಾಜಿ ಮುಖ್ಯ ಅರ್ಥಶಾಸ್ತ್ರಜ್ಞ ಕೆನ್ ರಾಗಫ್ ಹೇಳಿದ್ದಾರೆ.

ಅಮೆರಿಕದ ಪ್ರತಿಸುಂಕ ಹೇರಿಕೆಯು ಜಗತ್ತಿನ ಆರ್ಥಿಕತೆಗೆ ಭಾರಿ ಹೊಡೆತ ಎನ್ನುವುದು ಉರ್ಸುಲಾ ವ್ಯಾನ್ ಡೆನ್ ಲೇಯೆರ್ ಅಭಿಪ್ರಾಯ. ಜಗತ್ತಿನ ಕೋಟ್ಯಂತರ ಮಂದಿಯ ಜೀವನದ ಮೇಲೆ ಇದು ಪರಿಣಾಮ ಬೀರುತ್ತದೆ ಎಂದಿದ್ದಾರೆ. ಅಮೆರಿಕದೊಂದಿಗಿನ ಮಾತುಕತೆ ವಿಫಲವಾದರೆ, ಐರೋಪ್ಯ ಒಕ್ಕೂಟ ಕೂಡ ಪ್ರತ್ಯುತ್ತರ ನೀಡಬಹುದು ಎಂದು ಎಚ್ಚರಿಸಿದ್ದಾರೆ.

ಲೆಕ್ಕಾಚಾರ ಹೇಗೆ?

ಅಮೆರಿಕ ಮತ್ತು ಅದರ ಪಾಲುದಾರ ರಾಷ್ಟ್ರಗಳ ನಡುವೆ ಇರುವ ವ್ಯಾಪಾರ ಕೊರತೆಯ ಆಧಾರದಲ್ಲಿ ಪ್ರತಿ ಸುಂಕವನ್ನು ಟ್ರಂಪ್ ಸರ್ಕಾರ ಲೆಕ್ಕ ಹಾಕಿದೆ. ವ್ಯಾಪಾರ ಕೊರತೆಯನ್ನು ಸರಿದೂಗಿಸುವುದಕ್ಕೆ ಅಗತ್ಯವಾಗಿ ಬೇಕಾದ ಸುಂಕದ ಪ್ರಮಾಣವನ್ನು ನಿಗದಿ ಪಡಿಸಲಾಗಿದೆ ಎಂದು ಅದು ಹೇಳಿದೆ.

ಅಮೆರಿಕವು ತನ್ನ ಪ್ರತಿಯೊಂದು ಪಾಲುದಾರ ರಾಷ್ಟ್ರದೊಂದಿಗೆ ಹೊಂದಿರುವ ವ್ಯಾಪಾರ ಕೊರತೆಯ ಮೊತ್ತವನ್ನು, ಆ ದೇಶದಿಂದ ಮಾಡುವ ಒಟ್ಟು ಆಮದಿನ ಮೌಲ್ಯದಿಂದ ಭಾಗಿಸುವುದು. ಆ ಮೊತ್ತವನ್ನು ಎರಡರಿಂದ ಭಾಗಿಸುವ ಮೂಲಕ ಪ್ರತಿ ಸುಂಕದ ಪ್ರಮಾಣವನ್ನು ಲೆಕ್ಕಹಾಕಲಾಗಿದೆ.

ಭಾರತ–ಅಮೆರಿಕ ಸರಕು ದ್ವಿಪಕ್ಷೀಯ ವ್ಯಾಪಾರ

2023: ₹10.59 ಲಕ್ಷ ಕೋಟಿ

2024: ₹11.02 ಲಕ್ಷ ಕೋಟಿ

ಭಾರತದಿಂದ ಅಮೆರಿಕ ಆಮದು

2023: ₹7.14 ಲಕ್ಷ ಕೋಟಿ

2024: ₹7.45 ಲಕ್ಷ ಕೋಟಿ

ಭಾರತಕ್ಕೆ ಅಮೆರಿಕ ರಫ್ತು

2023: ₹3.44 ಲಕ್ಷ ಕೋಟಿ

2024: ₹3.56 ಲಕ್ಷ ಕೋಟಿ

ಭಾರತದೊಂದಿಗೆ ಅಮೆರಿಕದ ವ್ಯಾಪಾರ ಕೊರತೆ

2023: ₹3.69 ಲಕ್ಷ ಕೋಟಿ

2024: ₹3.90 ಲಕ್ಷ ಕೋಟಿ

ಕೃಷಿ ವಲಯದ ಉತ್ಪನ್ನಗಳ ಮೇಲೆ ವಿಧಿಸಲಾಗುತ್ತಿರುವ ಹಾಲಿ ಸುಂಕ

ಉತ್ಪನ್ನಗಳು	ಭಾರತ	ಅಮೆರಿಕ
	ಸರಾಸರಿ ಸುಂಕ(%)	
ಆಲ್ಕೋಹಾಲ್, ವೈನ್ ಇತ್ಯಾದಿ	124.58	2.49
ಹಾಲಿನ ಉತ್ಪನ್ನಗಳು	39.78	1.54
ಮೀನು, ಮಾಂಸ (ಶೈತ್ಯೀಕರಿಸಿದ್ದು ಮತ್ತು ಸಂಸ್ಕರಿಸಿದ್ದು)	28.42	0.59
ಸಜೀವ ಪ್ರಾಣಿಗಳು ಮತ್ತು ಉತ್ಪನ್ನಗಳು	28.4	0.66
ಸಂಸ್ಕರಿಸಿದ ಆಹಾರ, ಸಕ್ಕರೆ, ಕೋಕೊ	29.66	4.67
ಅಡುಗೆ ಎಣ್ಣೆಗಳು	12.07	1.4
ಧಾನ್ಯಗಳು, ತರಕಾರಿ, ಹಣ್ಣುಗಳು, ಮಸಾಲೆ ಪದಾರ್ಥಗಳು	8.82	3.1
ತಂಬಾಕು, ಸಿಗರೇಟ್, ಇತರೆ ಉತ್ಪನ್ನಗಳು	33	201.15

ಭಾರತ–ಅಮೆರಿಕ ವಲಯವಾರು ವ್ಯಾಪಾರ ಮೌಲ್ಯ (ಕೋಟಿಗಳಲ್ಲಿ)

ವಲಯ	ಭಾರತಕ್ಕೆ ಅಮೆರಿಕದ ರಫ್ತು	ಭಾರತದಿಂದ ಅಮೆರಿಕದ ಆಮದು
ಕೃಷಿ, ಮಾಂಸ, ಆಹಾರ ಸಂಸ್ಕರಣೆ	₹16,558	₹51,551
ವಾಹನಗಳು	₹3,585	₹23,898
ವಜ್ರ, ಚಿನ್ನ ಮತ್ತು ಉತ್ಪನ್ನಗಳು	₹16,387	₹1.01ಲಕ್ಷ
ರಾಸಾಯನಿಕ ಮತ್ತು ಔಷಧ	₹30,043	₹1.57 ಲಕ್ಷ
ಎಲೆಕ್ಟ್ರಿಕಲ್, ಟೆಲಿಕಾಂ, ಎಲೆಕ್ಟ್ರಾನಿಕ್ಸ್ ಉತ್ಪನ್ನಗಳು	₹11,436	₹1.23 ಲಕ್ಷ
ವೈದ್ಯಕೀಯ, ಚರ್ಮ, ಕಾಗದ, ಗಾಜು, ಹಡಗು, ವಿಮಾನ ಹಾಗೂ ಇತರೆ ವರ್ಗಗಳ ಉತ್ಪನ್ನಗಳು	₹28,592	₹70,328
ಪ್ಲಾಸ್ಟಿಕ್, ಉತ್ಪನ್ನಗಳು	₹12,034	₹11,608
ಯಂತ್ರೋಪಕರಣ, ಕಂಪ್ಯೂಟರ್‌ಗಳು	₹24,325	₹60,599
ಕಬ್ಬಿಣ, ಉಕ್ಕು ಮತ್ತು ಮೂಲ ಲೋಹಗಳು	₹20,910	₹46,089
ಜವಳಿ ಮತ್ತು ಉಡುಪು	₹3,414	₹92,178
ಅದಿರು, ಖನಿಜಗಳು ಮತ್ತು ಪೆಟ್ರೋಲಿಯಂ	₹94,909	₹28,507

ಜನರೇ ಇಲ್ಲದ ದ್ವೀಪಗಳಿಗೂ ಸುಂಕ

ಟ್ರಂಪ್ ಅವರು ಜನವಸತಿಯೇ ಇಲ್ಲದ ಎರಡು ದ್ವೀಪಗಳ ಮೇಲೂ ಪ್ರತಿಸುಂಕ ಹೇರುವ ಮೂಲಕ ಅಚ್ಚರಿ ಉಂಟುಮಾಡಿದ್ದಾರೆ. ಅಂಟಾರ್ಕ್ಟಿಕಾ ಹತ್ತಿರದ, ಗ್ಲೇಸಿಯರ್‌ಗಳಿಂದ ಆವೃತವಾಗಿರುವ, ಪೆಂಗ್ವಿನ್ ಮತ್ತು ಸೀಲ್‌ಗಳ ಆವಾಸಸ್ಥಾನವಾಗಿರುವ, ಜನರೇ ಇಲ್ಲದ ಹರ್ಡ್ ಮತ್ತು ಮೆಕ್‌ಡೊನಾಲ್ಡ್ ದ್ವೀಪಗಳ ಮೇಲೂ ಅಮೆರಿಕ ಶೇ 10ರಷ್ಟು ಪ್ರತಿಸುಂಕ ವಿಧಿಸಿದೆ.

ಆಸ್ಟ್ರೇಲಿಯಾಕ್ಕೆ ಹೊಂದಿಕೊಂಡಿರುವ ಈ ದ್ವೀಪಗಳಿಗೆ ಹೋಗಬೇಕೆಂದರೆ, ಪರ್ತ್‌ನಿಂದ ಸಮುದ್ರ ಮಾರ್ಗವಾಗಿ ಕನಿಷ್ಠ ಎರಡು ವಾರ ಪ್ರಯಾಣಿಸಬೇಕು. 10 ವರ್ಷದ ಹಿಂದೆ ಕೆಲವರು ಇಲ್ಲಿಗೆ ಭೇಟಿ ನೀಡಿದ್ದೇ ಕೊನೆ. ನಂತರ ಮನುಷ್ಯರೇ ಇಲ್ಲಿಗೆ ಕಾಲಿಟ್ಟಿಲ್ಲ. ಆದರೂ ಸುಂಕದ ಘೋಷಣೆ ಹೊರಬಿದ್ದಿದೆ. ಆಸ್ಟ್ರೇಲಿಯಾದ ಪ್ರಧಾನಿ ಆಂಥೊನಿ ಅಲ್ಬನೀಸ್ 'ಭೂಮಿ ಮೇಲಿನ ಯಾವ ಜಾಗವೂ ಸುರಕ್ಷಿತವಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

ಆಧಾರ: ಪಿಟಿಐ, ಬಿಬಿಸಿ, ಆಫೀಸ್ ಆಫ್ ಯುನೈಟೆಡ್ ಟ್ರೇಡ್ ರೆಪ್ರೆಸೆಂಟೇಟಿವ್, ಜಿಟಿಆರ್‌ಐ, ರಾಯಿಟರ್ಸ್

ಭಾರತದ ಮುಂದೆ ಅವಕಾಶಗಳು

ಅಮೆರಿಕವು ಭಾರತದ ಮೇಲೆ ಶೇ 27ರಷ್ಟು ಪ್ರತಿ ಸುಂಕ ವಿಧಿಸಿದ್ದರೂ, ಇದನ್ನೇ ಅವಕಾಶವನ್ನಾಗಿ ಬಳಸುವ ಸಾಧ್ಯತೆಯೂ ಭಾರತಕ್ಕೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಭಾರತಕ್ಕೆ ಹೋಲಿಸಿದರೆ ಚೀನಾ, ವಿಯೆಟ್ನಾಂ, ಥಾಯ್ಲೆಂಡ್, ಶ್ರೀಲಂಕಾ ಬಾಂಗ್ಲಾದೇಶ ಸೇರಿದಂತೆ ಏಷ್ಯಾದ ಹಾಗೂ ಭಾರತದ ನೆರೆಹೊರೆಯ ಹಲವು ರಾಷ್ಟ್ರಗಳಿಗೆ ಟ್ರಂಪ್ ಅವರು ಹೆಚ್ಚಿನ ಪ್ರತಿಸುಂಕ ವಿಧಿಸಿದ್ದಾರೆ. ಇದು ಜವಳಿ, ಎಲೆಕ್ಟ್ರಾನಿಕ್ಸ್, ಯಂತ್ರೋಪಕರಣ ಸೇರಿದಂತೆ ವಿವಿಧ ವಲಯಗಳಲ್ಲಿ ಭಾರತಕ್ಕೆ ಅಭಿವೃದ್ಧಿ ಹೊಂದಲು ಉತ್ತಮ ಅವಕಾಶ ಕಲ್ಪಿಸಿದೆ ಎಂದು ಜಿಟಿಆರ್‌ಐ ಅಭಿಪ್ರಾಯಪಟ್ಟಿದೆ.

ಜವಳಿ ಉದ್ಯಮಕ್ಕೆ ಸಂಬಂಧಿಸಿದಂತೆ ಅಮೆರಿಕದಲ್ಲಿ ತನ್ನ ಮಾರುಕಟ್ಟೆಯನ್ನು ಭಾರತ ವಿಸ್ತರಿಸಬಹುದಾಗಿದೆ. ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ತೈವಾನ್ ಮೇಲೆಯೂ ಟ್ರಂಪ್ ಹೆಚ್ಚು ಸುಂಕ ವಿಧಿಸಿದ್ದಾರೆ. ಕೇಂದ್ರ ಸರ್ಕಾರವು ಸೆಮಿಕಂಡಕ್ಟರ್ ಕ್ಷೇತ್ರಕ್ಕೆ ಹೆಚ್ಚಿನ ಮೂಲಸೌಕರ್ಯ ಕಲ್ಪಿಸಿ, ನೀತಿ ನಿರೂಪಣೆಯ ಬೆಂಬಲವನ್ನು ನೀಡಿದ್ದೇ ಆದರೆ, ಸೆಮಿಕಂಡಕ್ಟರ್‌ಗಳ ಪರೀಕ್ಷೆ, ಪ್ಯಾಕೇಜಿಂಗ್ ಹಾಗೂ ಅಗ್ಗದ ಮೈಕ್ರೊಚಿಪ್ ತಯಾರಿಕೆ ಕ್ಷೇತ್ರದಲ್ಲಿರುವ ಅವಕಾಶವನ್ನು ಬಳಸಿಕೊಳ್ಳಬಹುದು. ಯಂತ್ರೋಪಕರಣ, ವಾಹನಗಳು ಮತ್ತು ಆಟಿಕೆಗಳ ವಲಯಗಳಲ್ಲಿ ಚೀನಾ ಮತ್ತು ಥಾಯ್ಲೆಂಡ್ ಪ್ರಾಬಲ್ಯ ಹೊಂದಿದ್ದು, ಈ ವಲಯಗಳಿಗೂ ಭಾರತ ಬಂಡವಾಳ ಆಕರ್ಷಿಸಬಹುದು, ತಯಾರಿಕೆ ಹೆಚ್ಚಿಸುವ ಮೂಲಕ ಅಮೆರಿಕಕ್ಕೆ ರಫ್ತಿನ ಪ್ರಮಾಣವನ್ನು ಜಾಸ್ತಿ ಮಾಡಬಹುದು ಎಂದು ಅದು ಹೇಳಿದೆ.

ನಿಯಮ ಉಲ್ಲಂಘನೆ

ವಿಶ್ವ ವಾಣಿಜ್ಯ ಸಂಸ್ಥೆಯ (ಡಬ್ಲ್ಯುಟಿಒ) 1994ರ ಗ್ಯಾಟ್ ಒಪ್ಪಂದದ ಪ್ರಕಾರ, ಯಾವ ಸದಸ್ಯ ರಾಷ್ಟ್ರವೂ ಮಿತಿ ಮೀರಿ ಸುಂಕ ಹೇರುವಂತಿಲ್ಲ. ಅಮೆರಿಕವು ಉಕ್ಕಿನ ಮೇಲೆ ಶೇ 25ರಷ್ಟು ಸುಂಕ ವಿಧಿಸುವ ಮೂಲಕ ಒಪ್ಪಿತ ಮಿತಿಯನ್ನು ಉಲ್ಲಂಘಿಸಿದೆ ಎಂದು ಡಬ್ಲ್ಯುಟಿಒ ಆಕ್ಷೇಪ ವ್ಯಕ್ತಪಡಿಸಿತ್ತು. ನಂತರವೂ ಅಮೆರಿಕ ಸುಂಕ ವಿಧಿಸುವುದನ್ನು ಮುಂದುವರಿಸಿತು. ಈಗ ಪ್ರತಿಸುಂಕ ಹೇರುವ ಮೂಲಕ ಡಬ್ಲ್ಯುಟಿಒ ನಿಯಮಗಳನ್ನು ಮತ್ತೆ ಹಲವು ರೀತಿಯಲ್ಲಿ ಉಲ್ಲಂಘಿಸಿದೆ ಎಂದು ಜಿಟಿಆರ್‌ಐ ವರದಿ ಉಲ್ಲೇಖಿಸಿದೆ.

'ಮಹಾನ್' ಚಿತ್ರಕ್ಕೆ ವಿಜಯ ರಾಘವೇಂದ್ರ ನಾಯಕ

ಪಿ.ಸಿ.ಶೇಖರ್, ಶಿವರಾಜ್‌ಕುಮಾರ್, ಪ್ರಕಾಶ್

'ಲವ್ ಬರ್ಡ್ಸ್', 'ಬ್ಯಾಡ್' ಸಿನಿಮಾ ಬಳಿಕ ಪಿ.ಸಿ.ಶೇಖರ್ ಆ್ಯಕ್ಷನ್ ಕಟ್ ಹೇಳುತ್ತಿರುವ ಹೊಸ ಸಿನಿಮಾದ ಶೀರ್ಷಿಕೆಯನ್ನು ನಟ ಶಿವರಾಜ್‌ಕುಮಾರ್ ಇತ್ತೀಚೆಗೆ ಅನಾವರಣಗೊಳಿಸಿದರು.

'ಮಹಾನ್' ಎಂಬ ಶೀರ್ಷಿಕೆಯ ಈ ಸಿನಿಮಾದಲ್ಲಿ ನಾಯಕನಾಗಿ ವಿಜಯ ರಾಘವೇಂದ್ರ ನಟಿಸಲಿದ್ದಾರೆ. ಆಕಾಶ್ ಪಿಕ್ಚರ್ಸ್ ಲಾಂಛನದಲ್ಲಿ ಪ್ರಕಾಶ್ ಈ ಚಿತ್ರವನ್ನು ನಿರ್ಮಾಣ ಮಾಡಲಿದ್ದಾರೆ.

'ಇದು ದೇಶಕ್ಕೆ ಅನ್ನ ನೀಡುವ ಅನ್ನದಾತನಾದ ರೈತನ ಕುರಿತಾದ ಕಥೆ. ಹಾಗಾಗಿ ಚಿತ್ರಕ್ಕೆ 'ಮಹಾನ್' ಎಂದು ಹೆಸರಿಡಲಾಗಿದೆ. 'ಮಹಾನ್' ಎಂದರೆ ಪ್ರಮುಖ, ಶ್ರೇಷ್ಠ ಎಂಬ ಅರ್ಥಗಳು ಬರುತ್ತವೆ. ಅನ್ನ ನೀಡುವ ರೈತ ಎಲ್ಲರಿಗಿಂತ ದೊಡ್ಡವನು. ಸದ್ಯದಲ್ಲೇ ಚಿತ್ರೀಕರಣ ಆರಂಭವಾಗಲಿದೆ. ಚಿತ್ರದಲ್ಲಿ ಇನ್ನೂ ಪ್ರಮುಖ ಕಲಾವಿದರು ಅಭಿನಯಿಸುತ್ತಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಮಾಹಿತಿ ನೀಡುತ್ತೇವೆ. ಚಿತ್ರದಲ್ಲಿ ಮನರಂಜನೆಯ ಜೊತೆಗೆ ಸಂದೇಶವೂ ಇದೆ' ಎಂದಿದ್ದಾರೆ ಪಿ.ಸಿ.ಶೇಖರ್.

'ಪುನೀತ್ ನಿವಾಸ' ಟ್ರೇಲರ್ ಬಿಡುಗಡೆ

ಅಭಿಜಿತ್

ದಿವಂಗತ ನಟ ಪುನೀತ್ ರಾಜ್‌ಕುಮಾರ್ ಅವರ ಆದರ್ಶ, ವ್ಯಕ್ತಿತ್ವದ ಕುರಿತಾದ ಕಥೆಯನ್ನು ಹೊಂದಿರುವ 'ಪುನೀತ್ ನಿವಾಸ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಾಗೇಂದ್ರ ಪ್ರಸಾದ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಪುನೀತ್ ನಿವಾಸದ ಒಳಗೆ ಬಂದಾಗ ಪುನೀತ್ ಅವರೇ ಕಾಣಿಸುತ್ತಾರೆ. ಸಿನಿಮಾ ಮಾಡಬೇಕೆಂದು ಹಣ ಕೂಡಿಟ್ಟುಕೊಂಡಿದ್ದ ಒಬ್ಬ ಬಡ ಹುಡುಗ ಕೊನೆಗೆ ಪುನೀತ್ ಆದರ್ಶಗಳಿಂದ ಹೇಗೆ ಪ್ರಭಾವಿತನಾಗುತ್ತಾನೆ ಎಂಬುದೇ ಚಿತ್ರದ ಕಥೆ' ಎಂದರು ನಿರ್ಮಾಪಕ ಎಸ್.ಮೋಹನ್.

ನಟ ಅಭಿಜಿತ್ ಮುಖ್ಯ ಪಾತ್ರದಲ್ಲಿದ್ದಾರೆ. 'ಈ ಶೀರ್ಷಿಕೆಗೆ ದೊಡ್ಡ ಪವರ್ ಇದೆ. ಟೈಟಲ್ ಹೇಳಿದಾಗಲೇ ಚಿತ್ರ ಒಪ್ಪಿಕೊಂಡೆ. ನಾನು ಪುನೀತ್ ಅವರ ಜೊತೆ ನಟಿಸಬೇಕು ಎಂದುಕೊಂಡಿದ್ದೆ. ಅದು ಸಾಧ್ಯವಾಗಲಿಲ್ಲ. ಈಗ ಅವರ ಹೆಸರಿನ ಚಿತ್ರದಲ್ಲಿ ಅಭಿನಯಿಸಿದ್ದೇನೆ' ಎಂದರು ಅಭಿಜಿತ್.

ಎಂ.ಎಸ್.ಉಮೇಶ್, ಡಿಂಗ್ರಿ ನಾಗರಾಜ್, ಟೆನ್ನಿಸ್ ಕೃಷ್ಣ ಮುಂತಾದವರು ಚಿತ್ರದಲ್ಲಿದ್ದಾರೆ. ಎಸ್.ಬಾಲು ಛಾಯಾಚಿತ್ರಗ್ರಹಣ, ಮುತ್ತುರಾಜ್ ಸಂಕಲನ ಈ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಹಳಕಟ್ಟಿ ಎಂಬ ವಚನ ಗುಮ್ಮಟ

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

166

ನಮ್ಮಲ್ಲಿ ಫ.ಗು.ಹಳಕಟ್ಟಿ ಅಂತ ಒಬ್ಬರು ಇದ್ದರು. ಅವರು ದೊಡ್ಡ ವಕೀಲರು. ಅವಾಗ ಬಾಂಬೆದೊಳಗೆ ವಿಧಾನ ಪರಿಷತ್ ಸದಸ್ಯರಿದ್ದರು. ಅವರು 84 ವರ್ಷ ಬದುಕಿದ್ದರು. 64 ವರ್ಷ ವಚನ ಸಾಹಿತ್ಯದ ಸಂಗ್ರಹದಲ್ಲಿ ತೊಡಗಿಕೊಂಡಿದ್ದರು. ವಚನಗಳೆಲ್ಲ ಮೊದಲು ತಾಳೆಗರಿಯಲ್ಲಿದ್ದವು. ಅವುಗಳನ್ನು ಹೀಗೆಯೇ ಬಿಟ್ಟರೆ ಹಾಳಾಗಿ ಹೋಗುತ್ತವೆ ಎಂದು ಮನೆಮನೆಗೆ ಹೋಗಿ ಭಿಕ್ಷೆ ಬೇಡಿ, ಹಣಕೊಟ್ಟು ತಾಳೆಗರಿಗಳನ್ನು ತಂದು ವಚನಗಳನ್ನು ಮೊದಲು ಪ್ರಿಂಟ್ ಮಾಡಿದವರು ಹಳಕಟ್ಟಿ ಅವರು. ಅವರು ಶಾಸಕರಾಗಿದ್ದವರು. ಬೇರೆ ಏನಾದರೂ ಮಾಡಬಹುದಿತ್ತು. ಆದರೆ, ಅವರು ವಚನ ಸಂಗ್ರಹದಲ್ಲಿಯೇ ತಮ್ಮ ಆಯುಷ್ಯ ಕಳೆದರು. ಆವಾಗ ಮಂಗಳೂರಿನಲ್ಲಿ ಒಂದೇ ಒಂದು ಪ್ರಿಂಟಿಂಗ್ ಪ್ರೆಸ್ ಇತ್ತು. ಅದು ಬಿಟ್ಟು ರಾಜ್ಯದಲ್ಲಿ ಬೇರೆ ಪ್ರೆಸ್ ಇರಲಿಲ್ಲ. ಅವರು ಪ್ರಿಂಟ್ ಮಾಡೋದಿಲ್ಲ ಅಂದರಂತೆ. ಅದಕ್ಕೆ ಹಳಕಟ್ಟಿ ಅವರು ತಮ್ಮ ಆಸ್ತಿಪಾಸ್ತಿ ಎಲ್ಲ ಮಾರಿ ತಾವೇ ಸ್ವತಃ ಪ್ರಿಂಟಿಂಗ್ ಪ್ರೆಸ್ ಹಾಕಿದರು. ಹಲವು ಸಂಪುಟಗಳಲ್ಲಿ ವಚನ ಸಾಹಿತ್ಯವನ್ನು ಹೊರ ತಂದರು. ಒಳಗೆ ಹರುಕು ಅಂಗಿ ಇರುತ್ತಿತ್ತಂತೆ. ಮೇಲೆ ಚಲೋ ಕೋಟು ಹಾಕಿಕೊಳ್ಳುತ್ತಿದ್ರಂತೆ. ಯಾಕೆಂದರೆ ಹೊಸ ಅಂಗಿ ತೆಗೆದುಕೊಂಡರೆ ಮತ್ತೆ ರೊಕ್ಕ ಇರೋದಿಲ್ಲ ಅದಕ್ಕೆ. ಮನೆ ಮನೆಗೆ ಸೈಕಲ್‌ಗಳಲ್ಲಿ ಓಡಾಡಿ ವಚನದ ಕಟ್ಟುಗಳನ್ನು ಜೋಪಾನ ಮಾಡುತ್ತಿದ್ದರಂತೆ. ಒಂದು ದಿನ ಯಾರೋ ಒಬ್ಬರು ಹಳಕಟ್ಟಿ ಅವರಿಗೆ ಬಟ್ಟೆ ಕೊಟ್ಟರಂತೆ. ಅದಕ್ಕೆ ಹಳಕಟ್ಟಿ ಅವರು 'ಅಯ್ಯೋ ಬಟ್ಟೆ ಯಾಕೆ ಕೊಟ್ಟಿರಿ. ನನ್ನ ಸೈಕಲ್ ಟ್ಯೂಬ್‌ಗೆ ಒಂದಿಷ್ಟು ಹಣ ಕೊಟ್ಟಿದ್ದರೆ ಮನೆ ಮನೆಗೆ ತಿರುಗಿ ವಚನಗಳ ತಾಳೆಗರಿ ಕಟ್ಟು ತರಲು ಅನುಕೂಲ ಆಗುತ್ತಿತ್ತು' ಎಂದರಂತೆ. ಇಡೀ ವಚನ ಸಾಹಿತ್ಯ ನಮ್ಮ ಕೈಸೇರಿದ್ದು ಫ.ಗು.ಹಳಕಟ್ಟಿ ಅವರ ತ್ಯಾಗದಿಂದ. ಇಡೀ ನಾಡಿಗೆ, ಇಡೀ ಜಗತ್ತಿಗೆ ವಚನ ಸಿಕ್ಕಿದ್ದು ಅವರಿಂದ. ಕನ್ನಡದ ದೊಡ್ಡ ಕವಿ ಬಿ.ಎಂ.ಶ್ರೀ ಅವರು ಒಮ್ಮೆ ವಿಜಾಪುರಕ್ಕೆ ಕನ್ನಡದ ಕಾರ್ಯಕ್ರಮಕ್ಕೆ ಹೋಗಿದ್ದರಂತೆ. ಆಗ ಕಾರ್ಯಕ್ರಮದ ಆಯೋಜಕರು ಬಿಎಂಶ್ರೀ ಅವರನ್ನು ಗೋಲ ಗುಮ್ಮಟ ತೋರಿಸಲು ಕರೆದುಕೊಂಡು ಹೋದರಂತೆ. ಆಗ ಬಿಎಂಶ್ರೀ ಅವರು 'ನಾನು ವಿಜಾಪುರಕ್ಕೆ ಗೋಲ ಗುಮ್ಮಟ ನೋಡಲು ಬಂದಿಲ್ಲ. ವಚನ ಸಾಹಿತ್ಯವನ್ನು ರಕ್ಷಿಸಿದ ವಚನ ಗುಮ್ಮಟ ಫ.ಗು.ಹಳಕಟ್ಟಿ ಅವರನ್ನು ನೋಡಲು ಬಂದಿದ್ದೇನೆ' ಎಂದರಂತೆ. ಆ ಗುಮ್ಮಟ ಒಂದು ಸಲ ಧ್ವನಿ ಮಾಡಿದರೆ ಏಳು ಸಲ ಪ್ರತಿಧ್ವನಿ ಮಾಡುತ್ತದೆ ಅಷ್ಟೆ. ಆದರೆ ಫ.ಗು.ಹಳಕಟ್ಟಿ ಕಟ್ಟಿದ ಗುಮ್ಮಟ ಕಾಲ ಕಾಲಕ್ಕೆ ಕೋಟ್ಯಂತರ ಜನರ ಹೃದಯದಲ್ಲಿ ನಿರಂತರ ಪ್ರತಿಧ್ವನಿ ಮಾಡುತ್ತಲೇ ಇರುತ್ತದೆ ಎಂದು ಹೇಳಿದರಂತೆ.

ಹಳಕಟ್ಟಿ ಅವರು ಶಾಸಕರಾಗಿ ಏನಾದರೂ ಮಾಡಬಹುದಿತ್ತು. ಆದರೆ ಅವರು ಲೋಕಕಲ್ಯಾಣಕ್ಕಾಗಿ ವಚನ ಸಂಗ್ರಹಕ್ಕೆ ತಮ್ಮ ಜೀವನ ಮೀಸಲಿಟ್ಟರು. ಹೃದಯದಲ್ಲಿ ಮೀಸಲು ಮಾಡಿದರೆ ಮನಸ್ಸು ಹರಿದಾಡುವುದಿಲ್ಲ. ಮನಸ್ಸು ಹರಿದಾಡದೇ ಇದ್ದರೆ ಜೀವನದಲ್ಲಿ ನೀವು ಗುರಿ ತಲುಪುತ್ತೀರಿ. ಮನಸ್ಸು ನಿರ್ಮಲವಾಗಿರಬೇಕು. ಅಂದರೆ ಜೀವನದಲ್ಲಿ ಉತ್ಸಾಹ ಬರುತ್ತದೆ. ನಮಗೆ ಜೀವನದಲ್ಲಿ ಉತ್ಸಾಹವೇ ಇಲ್ಲ. ಬೆಳಿಗ್ಗೆ ಎದ್ದರೆ ನಮ್ಮ ಭಾಷೆ ಏನು ಎಂದರೆ, ದೇವರು ಕಣ್ಣು ಮುಚ್ಚಬೇಕಾಗಿತ್ತು ಎನ್ನುತ್ತೇವೆ. ದೇವರು ಯಾಕೆ ಕಣ್ಣು ಮುಚ್ಚಬೇಕು. ನಿಮಗೆ ಕಣ್ಣು ತೆಗಿ ಅಂತ ಹೇಳಿದವರು ಯಾರು?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶುಕ್ರವಾರ ಏಪ್ರಿಲ್ 4, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುದ್ಧ ಸಪ್ತಮಿ ಗಂ. 20-13 **ನಕ್ಷತ್ರ:** ಮೃಗಶಿರ ಗಂ. 05-51 ನಂತರ ಆರ್ದ್ರಾ ಗಂ. 29-21 **ಯೋಗ:** ಶೋಭನ ಗಂ. 21-45 **ಕರಣ:** ಗರ ಗಂ. 08-52, ಮೀನ ಮಾಸದ 21 ನೇ ದಿನ, ಮಳೆನಕ್ಷತ್ರ: ರೇವತಿ 2.

ರಾಹುಕಾಲ: ಬೆಳಿಗ್ಗೆ 10-30 – 12-00

ಸೂರ್ಯೋದಯ: 06-28 **ಸೂರ್ಯಾಸ್ತ:** 06-39

ಮುಸ್ಲಿಂ ದಿನಾಂಕ: 05 ಶವ್ವಾಲ್

ಅದೃಷ್ಟ ಸಂಖ್ಯೆ: 3, 5

ಮೇಷ: ದೇಹಾರೋಗ್ಯಕ್ಕಾಗಿ, ವೈದ್ಯರ ಸಲಹೆಯಂತೆ ಪೌಷ್ಟಿಕ ಆಹಾರ ಸೇವಿಸುವುದು, ಕೆಲಸದೊತ್ತಡವನ್ನು ಕಡಿಮೆ ಮಾಡಿಕೊಳ್ಳುವುದು ಉತ್ತಮ. ಭಯ ಪಡುವ ಅವಶ್ಯಕತೆ ಇಲ್ಲ.

ವೃಷಭ: ಹಿರಿಯ ಅಧಿಕಾರಿಗಳೊಂದಿಗೆ ವಾಗ್ವಾದಕ್ಕಿಳಿಯುವ ಬದಲು ಸಮಾಧಾನ ಚಿತ್ತದಿಂದ ಕೆಲಸ ಮಾಡಿದಲ್ಲಿ, ಎಲ್ಲ ಕೆಲಸಗಳು ಸರಾಗವಾಗಿ ನೆರವೇರಲಿವೆ. ಮಕ್ಕಳ ಆರೋಗ್ಯ ಸುಧಾರಿಸಲಿದೆ.

ಮಿಥುನ: ಹಣ್ಣಿನ ರಸ ವ್ಯಾಪಾರಿಗಳಿಗೆ ಲಾಭ-ನಷ್ಟ ಎರಡೂ ಉಂಟಾಗಲಿದೆ. ಔಷಧಿ ಹಾಗೂ ರಾಸಾಯನಿಕ ವಲಯದ ಅಧಿಕಾರಿಗಳಿಗೆ ಇಂದು ಹರ್ಷದಾಯಕ ದಿನವಾಗಿರುತ್ತದೆ.

ಕರ್ಕಾಟಕ: ಹೊಸ ಯೋಜನೆಗಳನ್ನು ಆರಂಭಿಸಲು ಮತ್ತು ಬಾಕಿ ಉಳಿದ ಕೆಲಸ ಪೂರ್ತಿಗೊಳಿಸಲು ಈ ದಿನ ಪ್ರಶಸ್ತವಾಗಿದೆ. ನಿಮ್ಮೊಳಗಿನ ಸೃಜನಶೀಲತೆಗೆ ಉತ್ತಮ ವೇದಿಕೆ ಸಿಗಲಿದೆ. ಜೀವನದಲ್ಲಿ ಭಾರಿ ಬದಲಾವಣೆ ಕಾಣಲಿದ್ದೀರಿ.

ಸಿಂಹ: ಸ್ನೇಹಿತರು ನಿಮ್ಮ ಆಲೋಚನೆಗಳನ್ನು ಗೌರವಿಸಿ, ಸಲಹೆಗಳನ್ನು ಪಾಲಿಸಲಿದ್ದಾರೆ. ರಾಜಕಾರಣಿಗಳಿಗೆ ಪಕ್ಷದಲ್ಲಿನ ನಿಮ್ಮ ಸ್ಥಾನಮಾನದ ಅರಿವುಂಟಾಗುವುದು. ವಾಹನ ಚಾಲನೆ ಮಾಡುವಾಗ ಜಾಗ್ರತೆ.

ಕನ್ಯಾ: ಹೊಸ ಕೆಲಸ ಶುರು ಮಾಡುವ ಮುನ್ನ, ಮುಂದಿನ ಕ್ರಮಗಳ ಬಗ್ಗೆ ಗಂಭೀರವಾಗಿ ಯೋಚಿಸಿ ತೀರ್ಮಾನಿಸುವುದು ಸೂಕ್ತ. ಕಾರ್ಯದೊತ್ತಡದ ಬಗ್ಗೆ ಪ್ರೀತಿ ಪಾತ್ರರೊಡನೆ ಮುಕ್ತವಾಗಿ ಮಾತನಾಡುವಿರಿ.

ತುಲಾ: ಮನೆಯಲ್ಲಿ ನಿಮ್ಮಿಂದ ಉಂಟಾದ ಹೊಸ ಬದಲಾವಣೆಗೆ ಹೊಂದಿಕೊಳ್ಳಲು ಕುಟುಂಬವರೆಲ್ಲರೂ ಯತ್ನಿಸುವರು. ಕಲುಷಿತ ಆಹಾರ ಸೇವನೆಯಿಂದ ಆರೋಗ್ಯ ಹದಗೆಡುವ ಲಕ್ಷಣಗಳಿದ್ದು, ಜಾಗ್ರತೆ ವಹಿಸಿ.

ವೃಶ್ಚಿಕ: ಕೆಲಸದ ಒತ್ತಡದಿಂದ ಬಳಲಿರುವ ನೀವು, ಆಯಾಸ ಪರಿಹಾರಕ್ಕಾಗಿ ವಿಶ್ರಾಂತಿ ಪಡೆಯುವುದು ಉತ್ತಮ. ಸಂಶೋಧಕರಿಗೆ, ನ್ಯಾಯಾಂಗ ಇಲಾಖೆಯವರಿಗೆ ಒಳ್ಳೆಯ ದಿನ. ವ್ಯಾಪಾರಿಗಳಿಗೆ ಕೊಂಚ ಬಿಡುವು ಸಿಗಲಿದೆ.

ಧನು: ಕಾನೂನು ವಿಷಯದ ಅಧ್ಯಯನದಲ್ಲಿ ತೊಡಗಿರುವವರಿಗೆ ಶುಭವಾಗುವುದು. ಬಡಗಿಗಳಿಗೆ ಇಂದು ಸುಯೋಗವಿದೆ. ಈಶ್ವರನ ಕೃಪೆಯಿಂದ ಆರ್ಥಿಕ ಸ್ಥಿತಿಗತಿ ಇನ್ನಷ್ಟು ಉತ್ತಮಗೊಳ್ಳಲಿದೆ.

ಮಕರ: ಗೃಹ ನಿರ್ಮಾಣದಂತಹ ವಿಚಾರವನ್ನು ಅವಲೋಕಿಸಲು ಒಳ್ಳೆಯ ದಿನ. ನೀವೇನೆಂದು ಇತರರಿಗೆ ತೋರಿಸಲು ಇಂದು ಸೂಕ್ತ ದಿನ. ಕೌಟುಂಬಿಕ ಸಮಸ್ಯೆಗಳಿಗೆ ತಾಳ್ಮೆಯಿಂದ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿ.

ಕುಂಭ: ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಸಿಕ್ಕು, ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಸಿಗುವ ಅವಕಾಶವಿದೆ. ಆದರೆ ಉದ್ಯೋಗದ ಸ್ಥಳದ ಬಗ್ಗೆ ತುಸು ಜಾಗ್ರತೆ ವಹಿಸಿ. ಷೇರು ವ್ಯವಹಾರದಲ್ಲಿ ಲಾಭವಾಗಲಿದೆ.

ಮೀನ: ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಂತಸದ ಸುದ್ದಿ ಕೇಳಲಿದ್ದೀರಿ. ಅನಿರೀಕ್ಷಿತ ವರ್ಗಾವಣೆಯಿಂದ ಅನುಕೂಲವೇ ಆಗಲಿದೆ. ಋಣದ ಬಾಧೆಯಿಂದ ಮುಕ್ತರಾಗುವತ್ತ ಆಲೋಚಿಸಿ.

ಪದಬಂಧ 6001

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಡಗು ನಿಲ್ಲುವ ಸ್ಥಳ (3)
6.ಗಾಜು ತಿರುಗಿಸಿ ಆಡಿದ ಜೂಜು (3)
7.ವಾದ ವಿವಾದಗಳ ನಿರ್ಣಯ (3)
8.ಸೊಕ್ಕು ಹೀಗೆ ಬಂದಿದೆ (3)
10.ಸಣ್ಣ ಸಣ್ಣ ಗೆಜ್ಜೆಗಳಿರುವ ಕಾಲಿನ ಕಡಗ (3)
14.ಛೇದನವಿದ್ದಾಗ ಕತ್ತರಿಸುವಿಕೆಯೇ! (3)
16.ದರ್ಪಣ ಇಲ್ಲಿದೆ (3)
17.ವಠಾರದವರು ತೋರಿಸಿದ ಹೊಟ್ಟೆ (3)
18.ಜೀ ಎನ್ನುತ್ತಿರುವ ಮಂತ್ರಿ (3)

ಮೇಲಿಂದ ಕೆಳಕ್ಕೆ

1.ಇದು ಬಂಡನ ಅಸಲು! (4)
2.ಜರೂರಾಗಿ ತೋರಿಸಿದ ಸಾಕ್ಷ್ಯ (4)
3.ಚಂದ್ರ ಮತ್ತು ಸೂರ್ಯನ ಸುತ್ತ ಇರುವ ಪ್ರಭಾಮಂಡಲ (3)
4.ತಪರಾಕಿ ನೀಡಿದರೂ ಈ ಹೊಗಳಿಕೆ! (3)
5.ನಡುವಿನ ಭಾಗವಿದು (4)
9.ಮಾರನೊಳಗಿನ ಅಂದ! (3)
10.ಧ್ವನಿಯ ನಡುಕ (3)
11.ಸಮಗ್ರವಾಗಿ ಎಂದು ಹೀಗೆ ಹೇಳಿ (4)
12.ದುಂಬಿಯ ಧ್ವನಿ (4)
13.ನೀರಿನಲ್ಲಿ ವಾಸಿಸುವ ಪ್ರಾಣಿ (4)
14.ಈ ರೀತಿ ಕುಚೇಷ್ಟೆ ಮಾಡಿ ರೇಗಿಸು (3)
15.ಜನರು ಒಪ್ಪಿಸಿದ ಕಾಣಿಕೆ (3)



6000ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಪಸ್ವರ 3.ವಜ್ರೋತ್ಸವ 5.ಸನ್ಮಾನ 6.ಕಲಹ 8.ಬಾಲಕ 9.ಉತ್ತರ 10.ಕನಕ 12.ಬಿಂದಿಗೆ 14.ಕರಣಿಕ 15.ಹತಬಲ

ಮೇಲಿಂದ ಕೆಳಕ್ಕೆ:
1.ಅಭ್ರಕ 2.ರಸ 3.ವನ 4.ವಲ್ಮೀಕ 7.ಹರಟೆಗಾರ 8.ಬಾಲಬಡುಕ 9.ಉದಕ 11.ಕಲಿಲ 12.ಬಿಂಕ 13.ಗೆಹ

ಸುಡೊಕು 6386

	2			6	7	4		
3		4					7	2
	7			4	8		6	3
	4			3			8	5
8		9		7				
	5		8		4		9	7
2				9		7	3	
		3					1	
6			4			5		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6385 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಷೇರುಪೇಟೆ ವಹಿವಾಟು ▼322



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,332
ಇಂದಿನ ಅಂತ್ಯ	23,250
▼	82
ದಿನದ ಕನಿಷ್ಠ	23,145

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹490
12 ಕ್ಕೆ	₹66
ಮೈಸೂರು	
100ಕ್ಕೆ	₹490

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹301-553
ದ್ವಿತಳಿ (ಬಿ.ವಿ)	₹255-668

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹203
ಆರ್‌ಎಸ್‌ಎಸ್-5	₹198
ಗುಡ್ ಲಾಟ್	₹189

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹28000
ಎಸಿ	₹16800
ಆರ್‌ಪಿ	₹22750
ಆರ್‌ಸಿ	₹12750

ಸೌರ ವಿದ್ಯುತ್ ಪೂರೈಕೆಗೆ ಹಿಂದೂಸ್ತಾನ್ ಪವರ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಪ್ರದೇಶದ ವಿದ್ಯುತ್ ಕಾರ್ಪೊರೇಷನ್ ಲಿಮಿಟೆಡ್‌ನೊಟ್ಟಿಗೆ (ಯುಪಿಪಿಸಿಎಲ್) 425 ಮೆಗಾವಾಟ್ ಸೌರ ವಿದ್ಯುತ್ ಯೋಜನೆಯ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದು ಹಿಂದೂಸ್ತಾನ್ ಪವರ್ ಗುರುವಾರ ತಿಳಿಸಿದೆ.

ಈ ವಿದ್ಯುತ್ ಖರೀದಿ ಒಪ್ಪಂದದ ಪ್ರಕಾರ ಯುಪಿಪಿಸಿಎಲ್ 25 ವರ್ಷದವರೆಗೆ ಸ್ಥಿರ ದರದಲ್ಲಿ ವಿದ್ಯುತ್ ಖರೀದಿಸಲಿದೆ. ಒಪ್ಪಂದಕ್ಕೆ ಸಹಿ ಹಾಕಿದ ದಿನಾಂಕದಿಂದ 24 ತಿಂಗಳೊಳಗೆ ಯೋಜನೆಯು ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ.

'2028ರ ವೇಳೆಗೆ 5 ಗಿಗಾವಾಟ್ ನವೀಕರಿಸಬಹುದಾದ ಇಂಧನ ಉತ್ಪಾದಿಸುವ ಗುರಿ ಹೊಂದಲಾಗಿದೆ. 425 ಮೆಗಾವಾಟ್ ಸೌರ ವಿದ್ಯುತ್ ಪೂರೈಕೆ ಒಪ್ಪಂದವು ಕಂಪನಿಯನ್ನು ಸದೃಢಗೊಳಿಸಲಿದೆ. ದೇಶದ ನವೀಕರಿಸಬಹುದಾದ ಇಂಧನ ಗುರಿಗೆ ಇದು ಪೂರಕವಾಗಿದೆ' ಎಂದು ಹಿಂದೂಸ್ತಾನ್ ಪವರ್‌ನ ಅಧ್ಯಕ್ಷ ರತುಲ್ ಪುರಿ ಹೇಳಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಶಿವಮೊಗ್ಗ	
ಬೆಟ್ಟೆ	53349-54399
ಗೊರಬಲು	20046-23190
ರಾಶಿ	45009-53389
ಸರಕು	88096-88096
ಸಿದ್ದಾಪುರ	
ಬಿಳಿಗೋಟು	23889-29319
ಚಾಲಿ	33499-39139
ಕೋಕ	14619-22159
ಹಳೆಚಾಲಿ	37109-37109
ಕೆಂಪುಗೋಟು	20319-21209
ರಾಶಿ	40189-46599
ತಟ್ಟಿಬೆಟ್ಟೆ	27219-40189
ಯಲ್ಲಾಪುರ	
ಬಿಳಿಗೋಟು	12899-28500
ಚಾಲಿ	30000-39535
ಕೋಕ	4699-16000
ಕೆಂಪುಗೋಟು	16899-26118
ರಾಶಿ	38809-55099
ತಟ್ಟಿಬೆಟ್ಟೆ	30369-38189

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1330 (1325)
ಸೂರ್ಯಕಾಂತಿ (ರಿಫೈನ್ಡ್)	₹1415 (1420)
ಪಾಮೋಲಿನ್	₹1360 (1360)

ವಿನಿಮಯ ದರ

$ ಡಾಲರ್	85.30
£ ಪೌಂಡ್	112.54
€ ಯುರೊ	94.27
¥ ಯೆನ್ (100ಕ್ಕೆ)	59

ದೇಶದ ಷೇರುಪೇಟೆಗೆ ತಟ್ಟಿದ ಅಮೆರಿಕದ ಪ್ರತಿ ಸುಂಕ ಬಿಸಿ

ಐ.ಟಿ ಷೇರು ಮೌಲ್ಯ ಇಳಿಕೆ

ಮುಂಬೈ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿರುವ ಪ್ರತಿ ಸುಂಕ ನೀತಿಯು ದೇಶದ ಷೇರುಪೇಟೆ ಮೇಲೂ ಪರಿಣಾಮ ಬೀರಿದೆ. ಗುರುವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಇಳಿಕೆ ಕಂಡಿವೆ.

ಐ.ಟಿ ವಲಯದ ಮೇಲೆ ಪ್ರತಿ ಸುಂಕ ಹೇರಿಕೆ ಬಗ್ಗೆ ಟ್ರಂಪ್ ಆಡಳಿತವು ಯಾವುದೇ ಪ್ರಸ್ತಾಪ ಮಾಡಿಲ್ಲ. ಆದರೂ, ಐ.ಟಿ ಕಂಪನಿಗಳ ಷೇರಿನ ಮೌಲ್ಯದಲ್ಲಿ ಶೇ 10ರಷ್ಟು ಇಳಿಕೆಯಾಗಿದೆ. ಫಾರ್ಮಾ ವಲಯದ ಮೇಲೆ ಸುಂಕ ಹೇರಿಲ್ಲ. ಇದರಿಂದ ಫಾರ್ಮಾ ಕಂಪನಿಗಳ ಷೇರಿನ ಮೌಲ್ಯದಲ್ಲಿ ಶೇ 7ರಷ್ಟು ಹೆಚ್ಚಳವಾಗಿದೆ.

ಐ.ಟಿ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಮಾರುಕಟ್ಟೆಯು ಕುಸಿತ ಕಂಡಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 322 ಅಂಶ ಇಳಿಕೆ ಕಂಡು, 76,295 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 809 ಅಂಶ ಇಳಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 82 ಅಂಶ ಇಳಿಕೆ ಕಂಡು, 23,250 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟಿಸಿಎಸ್, ಎಚ್‌ಸಿಎಲ್ ಟೆಕ್ನಾಲಜೀಸ್, ಟೆಕ್ ಮಹೀಂದ್ರ, ಇನ್ಫೊಸಿಸ್, ಟಾಟಾ ಮೋಟರ್ಸ್, ಬಜಾಜ್ ಫೈನಾನ್ಸ್, ಕೋಟಕ್ ಮಹೀಂದ್ರ ಬ್ಯಾಂಕ್, ಮಹೀಂದ್ರ ಆ್ಯಂಡ್ ಮಹೀಂದ್ರ, ಭಾರ್ತಿ ಏರ್‌ಟೆಲ್, ಮಾರುತಿ ಸುಜುಕಿ ಇಂಡಿಯಾ, ಟಾಟಾ ಸ್ಟೀಲ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಪವರ್‌ಗ್ರಿಡ್, ಸನ್ ಫಾರ್ಮಾ, ಅಲ್ಟ್ರಾ ಟೆಕ್ ಸಿಮೆಂಟ್, ಎನ್‌ಟಿಪಿಸಿ, ಏಷ್ಯನ್ ಪೇಂಟ್ಸ್, ನೆಸ್ಲೆ ಇಂಡಿಯಾ, ಟೈಟನ್, ಇಂಡಸ್ ಇಂಡ್ ಬ್ಯಾಂಕ್, ಎಕ್ಸಿಸ್ ಬ್ಯಾಂಕ್ ಷೇರಿನ ಮೌಲ್ಯ ಏರಿಕೆಯಾಗಿದೆ.

ಟ್ರಂಪ್ ಸುಂಕ ನೀತಿಯು ಏಷ್ಯಾದ ಮಾರುಕಟ್ಟೆ ಮೇಲೂ ಪರಿಣಾಮ ಬೀರಿದೆ. ಟೋಕಿಯೊ ಶೇ 3, ಹಾಂಗ್‌ಕಾಂಗ್ ಶೇ 1.52, ಸೋಲ್ ಶೇ 0.76 ಹಾಗೂ ಶಾಂಘೈ ಷೇರುಪೇಟೆಯು ಶೇ 0.24ರಷ್ಟು ಇಳಿಕೆ ಕಂಡಿದೆ.

ಚಿನ್ನ ₹200 ಏರಿಕೆ, ಬೆಳ್ಳಿ ₹1 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಆಭರಣ ತಯಾರಕರು ಮತ್ತು ದಾಸ್ತಾನುಗಾರರಿಂದ ಬೇಡಿಕೆ ಹೆಚ್ಚಾಗಿದ್ದರಿಂದ ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರ ಗುರುವಾರ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರ (ಶೇ 99.9 ಪರಿಶುದ್ಧತೆ) ₹200 ಏರಿಕೆಯಾಗಿ, ₹94,350ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ದರವು ಇಷ್ಟೇ ಪ್ರಮಾಣದಲ್ಲಿ ಹೆಚ್ಚಳವಾಗಿ ₹93,900 ಆಗಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹1 ಸಾವಿರ ಇಳಿಕೆಯಾಗಿ, ₹1,00,500 ರಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಟ್ರಂಪ್ ಸುಂಕ ನೀತಿಯಿಂದ ಒಂದು ಔನ್ಸ್ (28.34 ಗ್ರಾಂ) ಚಿನ್ನದ ಬೆಲೆ ₹2.70 ಲಕ್ಷಕ್ಕೆ ಏರಿಕೆಯಾಗಿತ್ತು. ಲಾಭ ಗಳಿಕೆಗಾಗಿ ವ್ಯಾಪಾರಿಗಳು ಮುಂದಾಗಿದ್ದರಿಂದ ದರವು ₹2.63 ಲಕ್ಷಕ್ಕೆ ಇಳಿಯಿತು' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ರೂಪಾಯಿ ಮೌಲ್ಯ 22 ಪೈಸೆ ಏರಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು ಗುರುವಾರದ ವಹಿವಾಟಿನಲ್ಲಿ 22 ಪೈಸೆ ಏರಿಕೆ ಆಗಿದೆ. ಪ್ರತೀ ಡಾಲರ್ ಮೌಲ್ಯ ₹85.30 ಆಗಿದೆ.

ಭಾರತಕ್ಕೆ ಹೋಲಿಸಿದರೆ ಇತರೆ ರಾಷ್ಟ್ರಗಳ ಮೇಲೆ ಅಮೆರಿಕವು ಹೆಚ್ಚು ಪ್ರತಿ ಸುಂಕ ವಿಧಿಸಿದೆ. ಇದು ರೂಪಾಯಿ ಬಲಗೊಳ್ಳಲು ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಪಿಎಫ್ ಹಣ ಹಿಂಪಡೆಯುವಿಕೆ ನಿಯಮ ಸರಳೀಕರಣ

ನವದೆಹಲಿ (ಪಿಟಿಐ): ಭವಿಷ್ಯ ನಿಧಿ ಹಣ ಹಿಂಪಡೆಯುವ ವೇಳೆ ಚಂದಾದಾರರು ಇನ್ನು ಮುಂದೆ ಆನ್‌ಲೈನ್‌ನಲ್ಲಿ ರದ್ದು ಮಾಡಲಾದ ಚೆಕ್ ಅನ್ನು ಅಪ್‌ಲೋಡ್ ಮಾಡಬೇಕಿಲ್ಲ. ಜೊತೆಗೆ, ಅವರ ಬ್ಯಾಂಕ್ ಖಾತೆಯ ವಿವರವನ್ನು ಉದ್ಯೋಗದಾತ ಸಂಸ್ಥೆಯು ದೃಢೀಕರಿಸುವ ಅಗತ್ಯವಿಲ್ಲ ಎಂದು ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಗುರುವಾರ ತಿಳಿಸಿದೆ.

ಪ್ರಸ್ತುತ ಚಂದಾದಾರರು ಆನ್‌ಲೈನ್ ಮೂಲಕ ಭವಿಷ್ಯ ನಿಧಿ ಹಣ ಹಿಂಪಡೆಯಲು ಅರ್ಜಿ ಸಲ್ಲಿಸುವ ವೇಳೆ ಚೆಕ್ ಪ್ರತಿಯ ಫೋಟೊ ಅಪ್‌ಲೋಡ್ ಮಾಡಬೇಕಿದೆ. ಅಥವಾ ಸಾರ್ವತ್ರಿಕ ಖಾತೆ ಸಂಖ್ಯೆ (ಯುಎಎನ್) ಅಥವಾ ಪಿಎಫ್ ಸಂಖ್ಯೆ ಜೊತೆಗೆ ಜೋಡಣೆ ಆಗಿರುವ ಬ್ಯಾಂಕ್ ಖಾತೆಯ ಪಾಸ್‌ಬುಕ್ ಪ್ರತಿಯನ್ನು ಅಪ್‌ಲೋಡ್ ಮಾಡಬೇಕಿದೆ.

ಉದ್ಯೋಗದಾತ ಸಂಸ್ಥೆಯು ಚಂದಾದಾರರು ನಮೂದಿಸುವ ಬ್ಯಾಂಕ್ ಖಾತೆಯ ವಿವರಗಳಿಗೆ ಅನುಮೋದನೆ ನೀಡುವ ಅಗತ್ಯವಿತ್ತು. ಸಂಸ್ಥೆಯು ಇದನ್ನು ದೃಢೀಕರಿಸುವ ಅಗತ್ಯವಿಲ್ಲ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

ಇದರಿಂದ ತ್ವರಿತವಾಗಿ ಕ್ಲೇಮು ಪ್ರಕ್ರಿಯೆ ನಡೆಯಲಿದ್ದು, ಅಂದಾಜು 8 ಕೋಟಿ ಚಂದಾದಾರರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದೆ.

ಏಕೀಕೃತ ಪಿಂಚಣಿ ಜಾರಿ: ಕೇಂದ್ರ

ನವದೆಹಲಿ (ಪಿಟಿಐ): ದೇಶದಲ್ಲಿ ಏಪ್ರಿಲ್ 1ರಿಂದ ಏಕೀಕೃತ ಪಿಂಚಣಿ ಯೋಜನೆಯು (ಯುಪಿಎಸ್) ಜಾರಿಗೊಂಡಿದೆ ಎಂದು ಕೇಂದ್ರ ಹಣಕಾಸು ಸೇವೆಗಳ ಕಾರ್ಯದರ್ಶಿ ಎಂ. ನಾಗರಾಜು ಗುರುವಾರ ಹೇಳಿದ್ದಾರೆ.

ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಪಿಂಚಣಿ ಯೋಜನೆಯಡಿ (ಎನ್‌ಪಿಎಸ್) ಇರುವ ಕೇಂದ್ರ ಸರ್ಕಾರಿ ನೌಕರರಿಗೆ ನಿವೃತ್ತಿಯ ಹಿಂದಿನ 12 ತಿಂಗಳ ಸರಾಸರಿ ಮೂಲ ವೇತನದ ಕನಿಷ್ಠ ಶೇ 50ರಷ್ಟು ಪಿಂಚಣಿ ಸಿಗಲಿದೆ ಎಂದರು.

ಟಿಟಿಡಿ ವಿಐಪಿ ದರ್ಶನ ವೇಳೆಯಲ್ಲಿ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿರುಮಲ ತಿರುಪತಿ ದೇವಸ್ಥಾನದಲ್ಲಿ (ಟಿಟಿಡಿ) ಭಕ್ತರಿಗೆ ದರ್ಶನ ಶೀಘ್ರ ದೊರೆಯುವಂತೆ ಮಾಡುವ ಉದ್ದೇಶದಿಂದ ವಿಐಪಿ (ಅತಿ ಗಣ್ಯ ವ್ಯಕ್ತಿ) ದರ್ಶನದ ಸಮಯದಲ್ಲಿ ಬದಲಾವಣೆ ಮಾಡಲಾಗಿದೆ. ಏಪ್ರಿಲ್ 1ರಿಂದ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದೆ ಎಂದು ಟಿಟಿಡಿ ಟ್ರಸ್ಟ್ ಸದಸ್ಯ ಎಸ್. ನರೇಶ್ ಕುಮಾರ್ ತಿಳಿಸಿದ್ದಾರೆ.

ಬೆಳಿಗ್ಗೆ 8.30ರಿಂದ 10ರ ವರೆಗೆ ವಿಐಪಿ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಇದರಿಂದ ಶೀಘ್ರ ದರ್ಶನದ ಹಾಗೂ ಸರ್ವ ದರ್ಶನದ ಸರದಿಯಲ್ಲಿ ತೆರಳುವ ಭಕ್ತರಿಗೆ ಬಹಳಷ್ಟು ಸಮಯ ವ್ಯಯವಾಗುತ್ತಿತ್ತು. ಇದನ್ನು ತಪ್ಪಿಸುವ ನಿಟ್ಟಿನಲ್ಲಿ ಇತ್ತೀಚೆಗೆ ನಡೆದ ಟಿಟಿಡಿ ಮಂಡಳಿ ಸಭೆಯಲ್ಲಿ ವಿಐಪಿ ದರ್ಶನದ ಸಮಯವನ್ನು ಬದಲಾವಣೆ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ನರೇಶ್ ಕುಮಾರ್

ಏಪ್ರಿಲ್ 1ರಿಂದ ಬೆಳಿಗ್ಗೆ 5.30ರಿಂದ 7.30ರವರೆಗೆ ವಿಐಪಿ ದರ್ಶನಕ್ಕೆ ಸಮಯ ನಿಗದಿ ಮಾಡಲಾಗಿದೆ. ವಾರಾಂತ್ಯ ಹಾಗೂ ವಿಶೇಷ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಈ ಸಮಯದಲ್ಲಿ ದರ್ಶನಕ್ಕೆ ಅವಕಾಶ ನೀಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ವ್ಯಾಪಾರ ಸಮರಕ್ಕೆ ರಣಕಹಳೆ

ಒಂದನೇ ಪುಟದಿಂದ...

ಟ್ರಂಪ್ ನೀತಿಗೆ ಪ್ರತಿಕ್ರಿಯಿಸಿರುವ ಕೇಂದ್ರ ಸರ್ಕಾರವು, 'ಪ್ರತಿ ಸುಂಕದಿಂದ ಭಾರತದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಅವಲೋಕನ ನಡೆಸಲಾಗುತ್ತಿದೆ' ಎಂದು ಹೇಳಿದೆ.

'ಅಮೆರಿಕವೇ ಮೊದಲು' ಎಂಬುದು ಟ್ರಂಪ್ ನೀತಿ. ಆದರೆ, ಪ್ರಧಾನಿ ನರೇಂದ್ರ ಮೋದಿ ಪಾಲಿಗೆ ಭಾರತವೇ ಮೊದಲು. ಹಾಗಾಗಿ, ಪ್ರತಿ ಸುಂಕದ ಸವಾಲುಗಳನ್ನು ಹೇಗೆ ನಿಭಾಯಿಸಬೇಕು ಎಂಬ ಬಗ್ಗೆ ಪರಿಶೀಲಿಸಲಾಗುತ್ತಿದೆ' ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಹೇಳಿದ್ದಾರೆ.

'ಅಮೆರಿಕವು ಭಾರತದ ಮೇಲೆ ಹೇಗೆ ಪ್ರತಿ ಸುಂಕವನ್ನು ಅನುಷ್ಠಾನಗೊಳಿಸಲಿದೆ ಎಂಬುದನ್ನು ಜಾಗರೂಕವಾಗಿ ಪರಿಶೀಲಿಸಲಾಗುತ್ತಿದೆ. ಈ ಬಗ್ಗೆ ದೇಶೀಯ ಕೈಗಾರಿಕಾ ವಲಯದ ಪರಿಣತರು ಮತ್ತು ರಫ್ತುದಾರರ ಅಭಿಪ್ರಾಯ ಪಡೆಯಲು ನಿರ್ಧರಿಸಲಾಗಿದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಹೇಳಿದೆ. ಇದರಿಂದ ಸೃಷ್ಟಿಯಾಗುವ ಲಾಭ ಪಡೆಯುವ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ. ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಬಗ್ಗೆ ಉಭಯ ದೇಶಗಳ ನಡುವೆ ಚರ್ಚೆ ನಡೆಯುತ್ತಿದೆ. ಇದರ ಪ್ರಯೋಜನ ಪಡೆಯಲು ತ್ವರಿತವಾಗಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದೆ.

ಈ ನಿರ್ಧಾರವು ಅಲ್ಪ ಅವಧಿಯಲ್ಲಿ ಅಮೆರಿಕದ ಆರ್ಥಿಕತೆ ಮೇಲೆಯೇ ವ್ಯತಿರಿಕ್ತ ಪರಿಣಾಮ ಬೀರಲಿದೆ. ಇದು 'ಸೆಲ್ಫ್ ಗೋಲ್'. ಭಾರತದ ಮೇಲೆ ಸುಂಕ ವಿಧಿಸುವುದರಿಂದ ಅಲ್ಲಿನ ಗ್ರಾಹಕರು ಭಾರತದ ಉತ್ಪನ್ನಗಳಿಗೆ ಹೆಚ್ಚು ಬೆಲೆ ತೆರಬೇಕಾಗುತ್ತದೆ. ಇದು ಉತ್ಪನ್ನಗಳಿಗೆ ಬೇಡಿಕೆಯನ್ನು ಕುಗ್ಗಿಸಲಿದೆ. ಪರಿಣಾಮವಾಗಿ ಭಾರತದ ಅಭಿವೃದ್ಧಿಯೂ ಕುಂಠಿತಗೊಳ್ಳಲಿದೆ. ಆದರೆ, ಒಟ್ಟಾರೆಯಾಗಿ ಈ ಕ್ರಮದಿಂದ ಭಾರತದ ಮೇಲಾಗುವ ಪರಿಣಾಮ ಅತ್ಯಲ್ಪ

ರಘುರಾಮ್ ರಾಜನ್, ಅರ್ಥಶಾಸ್ತ್ರಜ್ಞ

ಯಾವ ವಲಯಗಳಿಗೆ ಪ್ರಯೋಜನ?

ಪ್ರತಿ ಸುಂಕ ನೀತಿಯು ದೇಶದ ಉಕ್ಕು, ಅಲ್ಯುಮಿನಿಯಂ, ವಾಹನ ಬಿಡಿಭಾಗ, ಕತ್ತರಿಸಿದ ಮತ್ತು ಪಾಲಿಶ್ ಮಾಡಿದ ವಜ್ರಗಳ ಮಾರುಟ್ಟೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಔಷಧ ಮತ್ತು ಜವಳಿ ವಲಯಕ್ಕೆ ಹೆಚ್ಚಿನ ಪ್ರಯೋಜನವಾಗಲಿದೆ ಎಂದು ಹೇಳಿದ್ದಾರೆ.

ಆದರೆ ಉಕ್ಕು, ಅಲ್ಯುಮಿನಿಯಂ, ವಾಹನ ವಲಯದ ಮೇಲೆ ಅಮೆರಿಕವು ಶೇ 25ರಷ್ಟು ಸುಂಕವನ್ನು ಈಗಾಗಲೇ ವಿಧಿಸುತ್ತಿದೆ. ಕೃಷಿ, ಎಂಜಿನಿಯರಿಂಗ್ ಸರಕು, ಎಲೆಕ್ಟ್ರಾನಿಕ್ಸ್, ಹರಳು ಮತ್ತು ಚಿನ್ನಾಭರಣ ವಲಯದ ಮೇಲೆ ಸುಂಕ ನೀತಿ ಪರಿಣಾಮ ಬೀರಲಿದೆ ಎಂದು ತಿಳಿಸಿದ್ದಾರೆ.

ಟ್ರಂಪ್ ನೀತಿಯು ದೇಶೀಯ ರಫ್ತುದಾರರಿಗೆ ಸವಾಲುಗಳನ್ನು ಒಡ್ಡಿದೆ. ಆದರೆ, ಇತರೆ ಪ್ರತಿಸ್ಪರ್ಧಿ ದೇಶಗಳಿಗೆ ಹೋಲಿಸಿದರೆ ಭಾರತದ ಮೇಲಿನ ಪ್ರತಿ ಸುಂಕ ಕಡಿಮೆ ಎಂದು ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟ (ಎಫ್‌ಐಇಒ) ಪ್ರತಿಕ್ರಿಯಿಸಿದೆ.

ಫಲಿಸದ ಕೇಂದ್ರದ ಕಾರ್ಯತಂತ್ರ

ಕಳೆದ ಕೆಲವು ವಾರಗಳಲ್ಲಿ ಭಾರತವು 8,500 ಕೈಗಾರಿಕಾ ಉತ್ಪನ್ನಗಳ ಮೇಲಿನ ಸುಂಕದ ಪ್ರಮಾಣವನ್ನು ಕಡಿಮೆ ಮಾಡಿತ್ತು. ಅಮೆರಿಕದಿಂದ ಆಮದಾಗುವ ಬಾರ್ಬನ್ ವಿಸ್ಕಿ ಮೇಲಿನ ಶೇ 150ರಷ್ಟು ಸುಂಕವನ್ನು ಶೇ 100ಕ್ಕೆ ತಗ್ಗಿಸಿತ್ತು. ಅಮೆರಿಕದಿಂದ ಪೂರೈಕೆಯಾಗುವ ವಿದ್ಯುತ್‌ಚಾಲಿತ ವಾಹನಗಳು, ಕೃಷಿ ಉತ್ಪನ್ನಗಳ ಮೇಲೆ ಭಾರತವು ಅತಿಹೆಚ್ಚು ಸುಂಕ ವಿಧಿಸುತ್ತದೆ ಎಂದು ಟ್ರಂಪ್ ಟೀಕಿಸಿದ್ದರು.

ಪ್ರತಿ ಸುಂಕದ ಬಿಸಿಯಿಂದ ತಪ್ಪಿಸಿಕೊಳ್ಳಲು ಕೇಂದ್ರ ಸರ್ಕಾರವು ಕಳೆದ ಮೂರ್ನಾಲ್ಕು ವಾರಗಳಿಂದಲೂ ಹಲವು ಕಾರ್ಯತಂತ್ರ ಹೆಣೆದಿತ್ತು. ಅಮೆರಿಕದ ಕೃಷಿ ಉತ್ಪನ್ನಗಳ ಮೇಲಿನ ಸುಂಕ ಕಡಿತಗೊಳಿಸುವ ಕುರಿತು ಭಾರತಕ್ಕೆ ಭೇಟಿ ನೀಡಿದ್ದ ಟ್ರಂಪ್ ಪ್ರತಿನಿಧಿಗಳಿಗೆ ಭರವಸೆ ನೀಡಿತ್ತು. ಇದು ಯಾವುದೇ ಫಲ ನೀಡಿಲ್ಲ ಎಂದು ತಜ್ಞರು ಹೇಳಿದ್ದಾರೆ.

ಯಾವ ದೇಶದ ಮೇಲೆ ಎಷ್ಟು ಪ್ರತಿ ಸುಂಕ (%)

ಕಾಂಬೋಡಿಯಾ	49
ವಿಯೆಟ್ನಾಂ	46
ಶ್ರೀಲಂಕಾ	44
ಮ್ಯಾನ್ಮಾರ್	45
ಸಿರಿಯಾ	41
ಮಾರಿಷಸ್	40
ಇರಾಕ್	39
ಥಾಯ್ಲೆಂಡ್	37
ಬಾಂಗ್ಲಾದೇಶ	37
ಚೀನಾ	34
ತೈವಾನ್	32
ದಕ್ಷಿಣ ಆಫ್ರಿಕಾ	31
ಪಾಕಿಸ್ತಾನ	30
ದಕ್ಷಿಣ ಕೊರಿಯಾ	26
ಜಪಾನ್	24
ಮಲೇಷ್ಯಾ	24
ಐರೋಪ್ಯ ಒಕ್ಕೂಟ	20
ಇಸ್ರೇಲ್	17

'ಪ್ರತಿ ಸುಂಕಕ್ಕೆ ಭಾರತದ ಕ್ರಮವೇನು?'

ಕೇಂದ್ರಕ್ಕೆ ರಾಹುಲ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಚೀನಾ ಅತಿಕ್ರಮಿಸಿರುವ ಭೂ ಪ್ರದೇಶ ಮರಳಿ ಪಡೆಯಲು ಮತ್ತು 'ಮಿತ್ರ' ಅಮೆರಿಕ ವಿಧಿಸಿರುವ ಶೇ 27 ಪ್ರತಿ ಸುಂಕಕ್ಕೆ ಯಾವ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವನ್ನು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಪ್ರಶ್ನಿಸಿದರು.

ಲೋಕಸಭೆಯಲ್ಲಿ ಗುರುವಾರ ಶೂನ್ಯ ವೇಳೆಯಲ್ಲಿ ಮಾತನಾಡಿದ ಅವರು, 'ಭಾರತದ 4,000 ಚದರ ಕಿ.ಮೀ. ಪ್ರದೇಶವನ್ನು ಚೀನಾ ಅತಿಕ್ರಮಿಸಿರುವುದು ಎಲ್ಲರಿಗೂ ತಿಳಿದಿರುವ ಸತ್ಯ. ಹೀಗಿದ್ದರೂ ವಿದೇಶಾಂಗ ಕಾರ್ಯದರ್ಶಿ ಚೀನಾದ ರಾಯಭಾರಿ ಜತೆ ಕೇಕ್ ಕತ್ತರಿಸಿದ್ದಾರೆ. ಗಾಲ್ವನ್ ಕಣಿವೆಯಲ್ಲಿ ನಡೆದ ಸಂಘರ್ಷದ ವೇಳೆ ಭಾರತದ 20 ಯೋಧರು ಹುತಾತ್ಮರಾದರು. ಯೋಧರ ಬಲಿದಾನವನ್ನು ಕೇಂದ್ರ ಸರ್ಕಾರ ಈ ರೀತಿ ಕೇಕ್ ಕತ್ತರಿಸಿ ಸಂಭ್ರಮಿಸಿತೇ, ಇದು ನನಗೆ ನಿಜಕ್ಕೂ ಆಘಾತ ಉಂಟು ಮಾಡಿದೆ. ಕೇಸರಿ ಪಕ್ಷ (ಬಿಜೆಪಿ) ಹಾಗೂ ಆರ್‌ಎಸ್‌ಎಸ್ ಪ್ರತಿ ವಿದೇಶಿಯನ ಎದುರು ತಲೆ ಬಾಗುತ್ತವೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ನೆರೆ ರಾಷ್ಟ್ರದೊಂದಿಗೆ ಸಹಜ ಸಂಬಂಧ ಕಾಪಾಡಿಕೊಳ್ಳುವುದನ್ನು ನಾವು ವಿರೋಧಿಸುವುದಿಲ್ಲ. ಆದರೆ, ಅದಕ್ಕೂ ಮೊದಲು ನಾವು ಕಳೆದುಕೊಂಡಿರುವ ಭೂಮಿ ಹಿಂಪಡೆಯಲೇಬೇಕು. ಪ್ರಧಾನಿ ಹಾಗೂ ರಾಷ್ಟ್ರಪತಿಯವರು ಚೀನಾಗೆ ಪತ್ರ ಬರೆದಿರುವುದು ನನ್ನ ಗಮನಕ್ಕೆ ಬಂದಿದೆ. ಇದು ನಮ್ಮವರಿಂದ ತಿಳಿದುಬಂದ ವಿಚಾರವಲ್ಲ. ಬದಲಾಗಿ, ಚೀನಾ ರಾಯಭಾರಿಯೇ ಈ ಬಗ್ಗೆ ಹೇಳುತ್ತಿದ್ದಾರೆ' ಎಂದು ರಾಹುಲ್ ಹೇಳಿದರು.

'ನೀವು (ಕೇಂದ್ರ) ಚೀನಾಕ್ಕೆ 4,000 ಕಿ.ಮೀ ಭೂಮಿ ನೀಡಿದ್ದೀರಿ. ಮತ್ತೊಂದೆಡೆ, ನಮ್ಮ ಮಿತ್ರ (ಅಮೆರಿಕ) ಇದ್ದಕ್ಕಿದ್ದಂತೆ ಶೇ 27 ಪ್ರತಿ ಸುಂಕ ವಿಧಿಸಿದೆ. ಇದು ನಮ್ಮ ಆರ್ಥಿಕತೆಯನ್ನು ಸಂಪೂರ್ಣ ಹಾಳುಮಾಡುತ್ತದೆ. ನಮ್ಮ ವಾಹನ ಉದ್ಯಮ, ಔಷಧ ಉದ್ಯಮ ಮತ್ತು ಕೃಷಿ ಎಲ್ಲವೂ ಸಂಕಷ್ಟಕ್ಕೆ ಸಿಲುಕಲಿವೆ. ಪ್ರತಿ ಸುಂಕದ ವಿಚಾರದಲ್ಲಿ ಯಾವ ಕ್ರಮ ತೆಗೆದುಕೊಳ್ಳಲಾಗುವುದೆಂದು ಕೇಂದ್ರ ಸರ್ಕಾರ ಉತ್ತರ ನೀಡಬೇಕು' ಎಂದು ಅವರು ಒತ್ತಾಯಿಸಿದರು.

'ಹಿಂದೂ ಮಹಾಸಾಗರ–ಪೆಸಿಫಿಕ್ ಸಮುದ್ರದಲ್ಲಿ ಸಂಘರ್ಷ ಮುಕ್ತ ವ್ಯವಸ್ಥೆ ಜಾರಿಗೆ ಬೆಂಬಲ'

ಬ್ಯಾಂಕಾಕ್ (ಪಿಟಿಐ): 'ಹಿಂದೂ ಮಹಾಸಾಗರ–ಪೆಸಿಫಿಕ್ ಸಾಗರದಲ್ಲಿ ಸಂಘರ್ಷ ಮುಕ್ತ ವ್ಯವಸ್ಥೆ ಜಾರಿಯಾಗಬೇಕು ಎಂಬುದನ್ನು ಭಾರತ ಹಾಗೂ ಥಾಯ್ಲೆಂಡ್ ದೇಶಗಳು ಬೆಂಬಲಿಸುತ್ತವೆ. ನೀತಿಗಳು ಅಭಿವೃದ್ಧಿ ಕೇಂದ್ರಿತವಾಗಿರಬೇಕೇ ಹೊರತು ವಿಸ್ತಾರವಾದ ಆಗಬಾರದು' ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟರು.

ಥಾಯ್ಲೆಂಡ್ ಪ್ರಧಾನಿ ಪೆಟೊಂತಾರ್ನ್ ಶಿನೊವಾರ್ಥ್ ಅವರೊಂದಿಗೆ ನಡೆಸಿದ ಮಾಧ್ಯಮ ಗೋಷ್ಠಿಯಲ್ಲಿ ಪ್ರಧಾನಿ ಮೋದಿ ಮಾತನಾಡಿದರು. ಇದಕ್ಕೂ ಮೊದಲು ಎರಡು ದೇಶಗಳ ಮಧ್ಯದ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಬಲಗೊಳಿಸುವ ಬಗ್ಗೆ ಮಾತುಕತೆ ನಡೆಸಲಾಯಿತು.

'ಪ್ರವಾಸ, ಸಂಸ್ಕೃತಿ ಮತ್ತು ಶಿಕ್ಷಣಕ್ಕೆ ಸಂಬಂಧಿಸಿ ಎರಡೂ ದೇಶಗಳ ನಡುವೆ ಸಹಕಾರ ನೀಡಿದ ಕುರಿತು ಒತ್ತು ನೀಡಲಾಯಿತು. ವ್ಯಾಪಾರ, ಹೂಡಿಕೆಗಳ ಬಗ್ಗೆಯೂ ಮಾತುಕತೆ ನಡೆಯಿತು. ಸಣ್ಣ ಮತ್ತು ಮಧ್ಯಮ ಕೈಗಾರಿಕೆ, ಕೈಮಗ್ಗ ಮತ್ತು ಕರಕುಶಲ ಕ್ಷೇತ್ರಗಳ ಬಗ್ಗೆ ಒಪ್ಪಂದ ಮಾಡಿಕೊಳ್ಳಲಾಯಿತು' ಎಂದು ಪ್ರಧಾನಿ ಮೋದಿ ಹೇಳಿದರು.

'ನಾನು ಇಲ್ಲಿಗೆ ಬಂದ ನೆನಪಿನಲ್ಲಿ 18ನೇ ಶತಮಾನದ 'ರಾಮಾಯಣ' ಕಥೆಯನ್ನು ಹೇಳುವ ಮ್ಯೂರಲ್ ಚಿತ್ರಕಲೆಯುಳ್ಳ ವಿಶೇಷ ಅಂಚೆಚೀಟಿಯನ್ನು ಥಾಯ್ಲೆಂಡ್ ಸರ್ಕಾರವು ಬಿಡುಗಡೆ ಮಾಡಿದ್ದರ ಬಗ್ಗೆ ಕೃತಜ್ಞನಾಗಿದ್ದೇನೆ' ಎಂದರು.

ಥಾಯ್ಲೆಂಡ್‌ನಲ್ಲಿರುವ ಭಾರತೀಯರು ಪ್ರಧಾನಿ ಮೋದಿ ಅವರನ್ನು ಗುರುವಾರ ಸ್ವಾಗತಿಸಿದರು –ಪಿಟಿಐ ಚಿತ್ರ

ಪ್ರಧಾನಿ ಮೋದಿ ಅವರಿಗೆ ಥಾಯ್ಲೆಂಡ್ ಪ್ರಧಾನಿ ಪೆಟೊಂತಾರ್ನ್ ಶಿನೊವಾರ್ಥ್ ಅವರು ತ್ರಿಪಿಟಿಕವನ್ನು ಉಡುಗೊರೆ ನೀಡಿದರು. 'ಬುದ್ಧನಲವಾದ ಭಾರತದ ಪರವಾಗಿ ನಾನು ಇದನ್ನು ಕೈಮುಗಿದು ಸ್ವೀಕರಿಸುತ್ತೇನೆ' ಎಂದು ಪ್ರಧಾನಿ ಮೋದಿ ಹೇಳಿದರು.

ಶ್ರೀಲಂಕಾ ಭೇಟಿ: ಮೋದಿ ಅವರು ಶುಕ್ರವಾರ ಶ್ರೀಲಂಕಾಗೆ ಮೂರು ದಿನಗಳ ಭೇಟಿಗಾಗಿ ತೆರಳಲಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Domestic Helpers / Housekeeping

ಜಾಬ್! ಜಾಬ್!! ಜಾಬ್!!! ಹೌಸ್ ಕೀಪಿಂಗ್ ಸಿಬ್ಬಂದಿ ಮತ್ತು ಸೂಪರ್‌ವೈಸರ್‌ಗಳು ಬೆಂಗಳೂರಿನ ಕಲ್ಯಾಣನಗರ ದಲ್ಲಿರುವ ಪ್ರಸಿದ್ಧ ಆಸ್ಪತ್ರೆಗೆ ತುರ್ತಾಗಿ ಬೇಕಾಗಿದ್ದಾರೆ. ಸಂಬಳ : ಸಿಬ್ಬಂದಿಗೆ ರೂ.19300/-, ಸೂಪರ್‌ವೈಸರ್ಗೆ ರೂ. 23000/- ವಯಸ್ಸು : 18 ವರ್ಷದಿಂದ 39 ವರ್ಷಗಳವರೆಗೆ 9945779607, 9112959375, 9108946691

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ. ಊಟವಸತಿವಿದೆ. 14,000 - 18,000. ಸಂಪರ್ಕಿಸಿ: 8951315839, 7022770052.

Cook

ಯುವಕ, ಯುವತಿಯರಿಗೆ ಹೋಟೆಲ್ ಕೆಲಸದಲ್ಲಿ ಅಡಿಗೆ ಮಾಡಲು ಮತ್ತು ಹೆಲ್ಪರ್ ಕೆಲಸ ಖಾಲಿ ಇದೆ. ಸಂಬಳ : 25,000 ರಿಂದ 30,000 ಸಾವಿರವರೆಗೆ.ಶೇಷಾದ್ರಿಪುರಂ, ಬೆಂಗಳೂರು. **Ph:** 9019626612

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9148525233

ಪ್ರವಾಸ

Travel Agencies

ನೇಪಾಳ ಪ್ರವಾಸ 7 ದಿನಗಳು 27/4/25 ಮುಕ್ತಿನಾಥ ಪೋಕ್ರ ಕಟ್ಮಂಡ್ ಪಶುಪತಿನಾಥ ಜಲ್ ನಾರಾಯಣ. ಬುದ್ಧ ಜನ್ಮಸ್ಥಳ ಇತರೆ ಸ್ಥಳಗಳು 6360146483/ 9019462508

Travel

9ದಿನಗಳ ಕಾಶಿ ಅಯೋಧ್ಯ ಪ್ರಯಾಗ್‌ರಾಜ್. 11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 6 ದಿನಗಳ ಬಾಲಿ. 7 ದಿನಗಳ ಲೇಲಡಾಕ್ 11 ದಿನಗಳ ವಿಯೆಟ್ನಾಂ,ಕಾಂಬೋಡಿಯ ಸಂಪರ್ಕಿಸಿ: ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04. 9900099252 9900080793

7 ದಿನಗಳ ಅಷ್ಟ ಜ್ಯೋತಿರ್ಲಿಂಗ. 14 ದಿನಗಳ ಚಾರ್‌ಧಾಮ. ಕಾಶಿ ಯಾತ್ರೆ. ಸಂಪರ್ಕಿಸಿ. ವಿಜಯ ಟ್ರಾವಲ್ಸ್ ಮಲ್ಲೇಶ್ವರಂ, ಬೆಂಗಳೂರು: 9448294477

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply

0.80 ಟಿಎಂಸಿ ಅಡಿ ನೀರು ಹರಿಸಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಲಮಟ್ಟಿ ಜಲಾಶಯದ ಅಚ್ಚುಕಟ್ಟು ಪ್ರದೇಶದಲ್ಲಿನ ಬೆಳೆದು ನಿಂತಿರುವ ಬೆಳೆಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಶುಕ್ರವಾರದಿಂದ (ಏ.4) ಇದೇ 6ರವರೆಗೆ ಬಸವಸಾಗರ (ನಾರಾಯಣಪುರ) ಜಲಾಶಯದಿಂದ 0.80 ಟಿಎಂಸಿ ಅಡಿ ನೀರು ಹರಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.

ಯಾದಗಿರಿ ಜಿಲ್ಲೆಯ ಕೊಡೆಕಲ್ಲ ಗ್ರಾಮದ ಮಲ್ಲಪ್ಪ ಬಸಣ್ಣ ನವಲಗುಡ್ಡ ಸೇರಿದಂತೆ ಇತರರು ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಚಿಲ್ಲಕೂರು ಸುಮಲತಾ ಅವರಿದ್ದ ಏಕಸದಸ್ಯ ನ್ಯಾಯಪೀಠ (ಕಲಬುರಗಿ) ಗುರುವಾರ ಈ ಕುರಿತಂತೆ ಆದೇಶಿಸಿದೆ.

'ರಾಜ್ಯ ಸರ್ಕಾರ ಕಳೆದ ತಿಂಗಳ 14ರಂದು ಕೃಷ್ಣಾ ಮೇಲ್ದಂಡೆ ಯೋಜನೆಯ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಕೈಗೊಂಡಿರುವ ತೀರ್ಮಾನದ ಅನುಸಾರ, ಬಸವಸಾಗರ ಜಲಾಶಯದಿಂದ ನೀರು ಹರಿಸಲು ಬದ್ಧವಾಗಿರುವಂತೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ವಾದ ಮಂಡಿಸಿದರು. ಹೈಕೋರ್ಟ್ ವಕೀಲೆ ಮೊನಿಕಾ ಪಾಟೀಲ ವಕಾಲತ್ತು ವಹಿಸಿದ್ದರು.

'ಎಕ್ಸ್' ನೆಲದ ಕಾನೂನು ಗೌರವಿಸಲಿ

'ಎಕ್ಸ್ (ಟ್ವಿಟರ್) ಒಂದು ಮಧ್ಯವರ್ತಿ ಸಂಸ್ಥೆಯಾಗಿದ್ದು ದೇಶದ ಎಲ್ಲೆಡೆ ಕಾರ್ಯನಿರ್ವಹಿಸುತ್ತಿರುವಾಗ ಅದು ಈ ನೆಲದ ಕಾನೂನುಗಳಿಗೆ ಬದ್ಧರಾಗಿಬೇಕು' ಎಂದು ಕೇಂದ್ರ ಸರ್ಕಾರ ಹೈಕೋರ್ಟ್‌ಗೆ ಅರುಹಿದೆ.

'ಮಾಹಿತಿ ಹಂಚಿಕೆಯನ್ನು ನಿರ್ಬಂಧಿಸುವ ದಿಸೆಯಲ್ಲಿ ಮಾಹಿತಿ ತಂತ್ರಜ್ಞಾನ ಕಾಯ್ದೆ–2000ರ ಕಲಂ 79(3)ರ ಅಡಿಯಲ್ಲಿ ಜಾರಿಗೆ ತರಲಾಗಿರುವ ಸಹಯೋಗ ಪೋರ್ಟಲ್ ಕಾನೂನಿನ ವೈರುಧ್ಯಗಳಿಗೆ ಸಾಕ್ಷಿಯಾಗಿದೆ' ಎಂದು ಆಕ್ಷೇಪಿಸಿ 'ಎಕ್ಸ್'ನ ಸ್ಥಳೀಯ ಅಧಿಕೃತ ಪ್ರತಿನಿಧಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಕೆ.ಜಿ. ರಾಘವನ್ ಅವರ ವಾದಕ್ಕೆ ಪ್ರತಿಯಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ಎಕ್ಸ್ ಮಾಹಿತಿ ಹಂಚಿಕೆಯ ವೇದಿಕೆ ಎಂಬುದನೊ ಸರಿ. ಆದರೆ ಇಲ್ಲಿ ಯಾರೋ ಒಬ್ಬರು ಬಂದು ಮಾನಹಾನಿಕರ ಹೇಳಿಕೆಯನ್ನು ಪ್ರಕಟಿಸಿದರೆ ಅದರ ಹೊಣೆಗಾರಿಕೆಯ ಜವಾಬ್ದಾರಿಯನ್ನು ವೇದಿಕೆಯೂ ಹೊರಬೇಕಾಗುತ್ತದೆ' ಎಂದರು.

ಇದೇ ವೇಳೆ, 'ಕೇಂದ್ರ ಸರ್ಕಾರ ಸಲ್ಲಿಸಿರುವ ಆಕ್ಷೇಪಣೆಗೆ ಪ್ರತಿಯಾಗಿ ಮಾರುತ್ತರ ಸಲ್ಲಿಸಲು ಅವಕಾಶ ನೀಡಬೇಕು' ಎಂಬ ಅರ್ಜಿದಾರರ ಮನವಿಯನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಿತು. ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್ ಹಾಜರಿದ್ದರು.

'ಮಾಹಿತಿ ತಂತ್ರಜ್ಞಾನ ಕಾಯ್ದೆ 69ಎ ಅಡಿಯಲ್ಲಿ ಮಾತ್ರವೇ ನಿರ್ಬಂಧದ ಆದೇಶ ಹೊರಡಿಸಬಹುದು. ಆದ್ದರಿಂದ, ಮಾಹಿತಿ ಹಂಚಿಕೆ ನಿರ್ಬಂಧಿಸುವ ನಿಟ್ಟಿನಲ್ಲಿ 'ಎಕ್ಸ್' ಕಾರ್ಪ್ ಕಂಪನಿಯ ಅಧಿಕಾರಿಗಳು, ನೌಕರರು ಮತ್ತು ಪ್ರತಿನಿಧಿಗಳ ವಿರುದ್ಧ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗದಂತೆ ಪ್ರತಿವಾದಿಗಳಿಗೆ ಆದೇಶಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಬಿಸಿಗಾಳಿ: ಪೌರ ಕಾರ್ಮಿಕರ ರಕ್ಷಣೆಗೆ ಕ್ರಮವೇನು?

'**ಪೌರ ಕಾರ್ಮಿಕರು** ಅಥವಾ ನೈರ್ಮಲ್ಯ ಕಾರ್ಮಿಕರನ್ನು ಬಿಸಿಗಾಳಿಯಿಂದ ರಕ್ಷಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಸಮಗ್ರ ಯೋಜನಾ ವರದಿ ಸಲ್ಲಿಸಿ' ಎಂದು ಹೈಕೋರ್ಟ್ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ 'ಅಖಿಲ ಭಾರತ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್' ಸಲ್ಲಿಸಿದ್ದ ಅರ್ಜಿಯನ್ನು ಆಲಿಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ಬಡ ಪೌರ ಕಾರ್ಮಿಕರು ರಕ್ಷಣೆಗಾಗಿ ಸರ್ಕಾರವನ್ನೇ ಅವಲಂಬಿಸಿದ್ದಾರೆ. ಹಾಗಾಗಿ, ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಲ್ಲವೇ' ಎಂದು ಸರ್ಕಾರದ ಪರ ವಕೀಲರನ್ನು ಪ್ರಶ್ನಿಸಿದ ನ್ಯಾಯಪೀಠ, ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಶುಕ್ರವಾರಕ್ಕೆ (ಏ.4) ಮುಂದೂಡಿತು.

'ಬೇಸಿಗೆ ಸಮಯದಲ್ಲಿ ಪೌರ ಕಾರ್ಮಿಕರ ರಕ್ಷಣೆಗೆ ಸಂಬಂಧಿಸಿದಂತೆ ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗ 2025ರ ಮಾರ್ಚ್ 12ರಂದು ಹೊರಡಿಸಿರುವ ಆದೇಶವನ್ನು ಪಾಲನೆ ಮಾಡುವಂತೆ ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹಾಗೂ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಮಾಹಿತಿ ಆಯುಕ್ತರ ನೇಮಕ: ಜೂನ್‌ಗೆ ಮುಂದೂಡಿಕೆ

ರಾಜ್ಯ ಮುಖ್ಯ ಮಾಹಿತಿ ಆಯುಕ್ತ ಮತ್ತು ಮಾಹಿತಿ ಆಯುಕ್ತರ ನೇಮಕಾತಿ ಪ್ರಶ್ನಿಸಿದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಜೂನ್ ಮೂರನೇ ವಾರಕ್ಕೆ ಮುಂದೂಡಿದೆ.

ಮಾಹಿತಿ ಆಯುಕ್ತರ ಹುದ್ದೆಯ ಆಕಾಂಕ್ಷಿಯಾಗಿದ್ದ ಜೆ.ಪಿ.ನಗರ 7ನೇ ಹಂತದ ನಿವಾಸಿಯಾದ ಸಾಮಾಜಿಕ ಕಾರ್ಯಕರ್ತ ಕೆ. ಮಲ್ಲಿಕಾರ್ಜುನ ರಾಜು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ವಕೀಲ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ನೇಮಕಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಪ್ರಮಾಣ ಪತ್ರ ಸಲ್ಲಿಸಬೇಕಿದ್ದು ವಿಚಾರಣೆ ಬಾಕಿಯಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಇದನ್ನು ಪರಿಗಣಿಸಿದ ನ್ಯಾಯಪೀಠ ವಿಚಾರಣೆಯನ್ನು ಜೂನ್ ಮೂರನೇ ವಾರಕ್ಕೆ ಮುಂದೂಡಿತು.

'ಕರ್ನಾಟಕ ಮಾಹಿತಿ ಹಕ್ಕು ಆಯೋಗದ ಮುಖ್ಯ ಆಯುಕ್ತರಾಗಿ ಎ.ಎಂ.ಪ್ರಸಾದ್ ಹಾಗೂ ಆಯುಕ್ತರಾಗಿ ಕೆ.ರಾಮನ್, ಡಾ.ಹರೀಶ್ ಕುಮಾರ್, ರುದ್ರಣ್ಣ ಹರ್ತಿಕೋಟೆ, ನಾರಾಯಣ ಜಿ.ಚನ್ನಾಳ, ಎಸ್.ರಾಜಶೇಖರ, ಕೆ.ಬದ್ರುದ್ದೀನ್ ಮತ್ತು ಬಿ.ಆರ್. ಮಮತಾ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ 2025ರ ಜನವರಿ 30ರಂದು ಹೊರಡಿಸಿರುವ ಆದೇಶವನ್ನು ರದ್ದುಪಡಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸುಪ್ರೀಂ ಕೋರ್ಟ್‌ನಲ್ಲಿ ಮುಖಭಂಗ

25 ಸಾವಿರ ಶಿಕ್ಷಕರ ನೇಮಕ ಅಸಿಂಧು

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಸರ್ಕಾರಿ, ಅನುದಾನಿತ ಶಾಲೆಗಳಲ್ಲಿನ 25,753 ಶಿಕ್ಷಕರು ಹಾಗೂ ಇತರ ಸಿಬ್ಬಂದಿ ನೇಮಕವನ್ನು ಅಸಿಂಧುಗೊಳಿಸಿ ಸುಪ್ರೀಂ ಕೋರ್ಟ್ ಗುರುವಾರ ಮಹತ್ವದ ತೀರ್ಪು ನೀಡಿದೆ. ಸುಪ್ರೀಂ ಕೋರ್ಟ್‌ನ ಈ ತೀರ್ಪು ಪಶ್ಚಿಮ ಬಂಗಾಳ ಸರ್ಕಾರಕ್ಕಾದ ಭಾರಿ ಮುಖಭಂಗ ಎಂದೇ ವಿಶ್ಲೇಷಿಸಲಾಗುತ್ತಿದೆ.

ಈ ನೇಮಕಾತಿ ರದ್ದುಗೊಳಿಸಿ ಕಲ್ಕತ್ತ ಹೈಕೋರ್ಟ್, 2024ರ ಏಪ್ರಿಲ್ 22ರಂದು ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಅಲ್ಲದ, ಹೊಸದಾಗಿ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು ಹಾಗೂ ಈ ಪ್ರಕ್ರಿಯೆಯನ್ನು ಮೂರು ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕು ಎಂದು ಟಿಎಂಸಿ ನೇತೃತ್ವದ ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ನೇಮಕಾತಿ ಪ್ರಕ್ರಿಯೆ ಕುರಿತು ಸಿಬಿಐ ತನಿಖೆ ನಡೆಸುವಂತೆ ಕಲ್ಕತ್ತ ಹೈಕೋರ್ಟ್ ನಿರ್ದೇಶನ ನೀಡಿರುವುದನ್ನು ಪ್ರಶ್ನಿಸಿ ಪಶ್ಚಿಮ ಬಂಗಾಳ ಸರ್ಕಾರ ಸಲ್ಲಿಸಿರುವ ಮೇಲ್ಮನವಿ ಸೇರಿ ಇತರ ಅರ್ಜಿಗಳ ವಿಚಾರಣೆಯನ್ನು ಶುಕ್ರವಾರ (ಏಪ್ರಿಲ್ 4) ನಡೆಸುವುದಾಗಿ ಹೇಳಿದೆ.

ಮುಖ್ಯನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜಯ ಕುಮಾರ್ ಅವರು ಇದ್ದ ನ್ಯಾಯಪೀಠ ಈ ತೀರ್ಪು ನೀಡಿದ್ದು, 'ಇಡೀ ನೇಮಕಾತಿ ಪ್ರಕ್ರಿಯೆ ಸರಿಪಡಿಸಲು ಸಾಧ್ಯವಿಲ್ಲದಷ್ಟು ಕಳಂಕ ಮತ್ತು ದೋಷದಿಂದ ಕೂಡಿದೆ' ಎಂದು ಹೇಳಿದೆ. ವಿಸ್ತೃತ ತೀರ್ಪು ಇನ್ನಷ್ಟೆ ಲಭ್ಯವಾಗಬೇಕಿದೆ.

ಮಾನವೀಯತೆ ದೃಷ್ಟಿಯಿಂದ, ಕೆಲ ಅಂಗವಿಕಲ ನೌಕರರಿಗೆ ವಿನಾಯಿತಿ ನೀಡಿರುವ ನ್ಯಾಯಪೀಠ, ಇಂಥವರು ಉದ್ಯೋಗದಲ್ಲಿ ಮುಂದುವರಿಯಲು ಅನುಮತಿ ನೀಡಿದೆ.

ನೇಮಕಾತಿ ರದ್ದುಗೊಂಡಿರುವ ನೌಕರರು, ಈ ವರೆಗೆ ತಾವು ಪಡೆದಿರುವ ವೇತನ ಹಾಗೂ ಇತರ ಭತ್ಯೆಗಳನ್ನು ಮರಳಿಸುವ ಅಗತ್ಯ ಇಲ್ಲ ಎಂದೂ ಹೇಳಿದೆ.

'ನಮ್ಮ ಅಭಿಪ್ರಾಯದಲ್ಲಿ, ಇಡೀ ನೇಮಕಾತಿ ಪ್ರಕ್ರಿಯೆ ದೋಷದಿಂದ ಕೂಡಿದ್ದು, ಉದ್ದೇಶ ಈಡೇರಿಸುವಲ್ಲಿ ವಿಫಲವಾಗಿದೆ. ಭಾರಿ ಪ್ರಮಾಣದಲ್ಲಿ ಅಕ್ರಮಗಳು ನಡೆದಿವೆ. ಜೊತೆಗೆ, ಈ ಅಕ್ರಮಗಳನ್ನು ಮುಚ್ಚಿ ಹಾಕಲು ನಡೆಸಿದ ಪ್ರಯತ್ನಗಳಿಂದಾಗಿ ಇಡೀ ನೇಮಕಾತಿ ಪ್ರಕ್ರಿಯೆ ದುರಸ್ತಿ ಮಾಡಲಾಗದಂತಹ ಸ್ಥಿತಿ ತಲುಪಿದೆ' ಎಂದು ನ್ಯಾಯಮೂರ್ತಿಗಳು ಕಟು ಮಾತುಗಳಲ್ಲಿ ಹೇಳಿದ್ದಾರೆ.

ತೀರ್ಪು ಒಪ್ಪಲಾಗದು: ಮಮತಾ

ಮಮತಾ ಬ್ಯಾನರ್ಜಿ

ಕೋಲ್ಕತ: 'ನ್ಯಾಯಾಂಗದ ಬಗ್ಗೆ ನನಗೆ ಅಪಾರ ಗೌರವ ಇದೆ. ಶಿಕ್ಷಕರ ನೇಮಕ ಅಸಿಂಧುಗೊಳಿಸಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಮಾನವೀಯತೆ ದೃಷ್ಟಿಯಿಂದ ಒಪ್ಪಿಕೊಳ್ಳಲಾಗದು. ಆದಾಗ್ಯೂ ಸುಪ್ರೀಂ ಕೋರ್ಟ್ ಆದೇಶವನ್ನು ಪಾಲಿಸಲಾಗುವುದು' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಸುಪ್ರೀಂ ಕೋರ್ಟ್ ತೀರ್ಪನ್ನು ನಾವು ಒಪ್ಪಿಕೊಳ್ಳಲೇಬೇಕು ಹಾಗೂ ಕಾನೂನು ಪ್ರಕಾರ ಏನು ಸಾಧ್ಯವೋ ಆ ಎಲ್ಲ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

'ಈ ಪ್ರಕರಣದ ಆರೋಪಿಯಾಗಿರುವ ರಾಜ್ಯದ ಮಾಜಿ ಶಿಕ್ಷಣ ಸಚಿವ ಪಾರ್ಥ ಚಟರ್ಜಿ ಸದ್ಯ ಜೈಲಿನಲ್ಲಿ ಇದ್ದಾರೆ. ಮಧ್ಯಪ್ರದೇಶದ ವ್ಯಾಪಂ ಪ್ರಕರಣದಲ್ಲಿ ಎಷ್ಟು ಜನ ಬಿಜೆಪಿ ನಾಯಕರನ್ನು ಬಂಧಿಸಲಾಗಿದೆ? ರಾಜ್ಯದ ಶಿಕ್ಷಣ ವ್ಯವಸ್ಥೆ ಹಾಳಾಗಲಿ ಎಂಬುದು ಬಿಜೆಪಿಯ ಬಯಕೆಯಾಗಿದೆಯೇ' ಎಂದು ಅವರು ಪ್ರಶ್ನಿಸಿದರು.

'ಉದ್ಯೋಗ ಕಳೆದುಕೊಂಡವರನ್ನು ನಾನು ಭೇಟಿ ಮಾಡಿ, ಭರವಸೆ ಕಳೆದುಕೊಳ್ಳದಂತೆ ಅವರಲ್ಲಿ ಧೈರ್ಯ ತುಂಬುವೆ' ಎಂದೂ ಮಮತಾ ಹೇಳಿದರು.

ಸುಪ್ರೀಂ ಕೋರ್ಟ್ ತೀರ್ಪಿನ ಕಾರಣದಿಂದ ತೆರವಾಗಲಿರುವ ಹುದ್ದೆಗಳ ನೇಮಕಾತಿಗೆ ಪಶ್ಚಿಮ ಬಂಗಾಳ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು. ತಪ್ಪಿದಲ್ಲಿ ರಾಜ್ಯದ ಶಿಕ್ಷಣ ವ್ಯವಸ್ಥೆ ಮೇಲೆ ಅಡ್ಡ ಪರಿಣಾಮ ಉಂಟಾಗಲಿದೆ.
ಮೊಹಮ್ಮದ್ ಸಲೀಂ, ಸಿಪಿಎಂ ರಾಜ್ಯ ಘಟಕದ ರಾಜ್ಯ ಕಾರ್ಯದರ್ಶಿ

127 ಅರ್ಜಿಗಳ ವಿಚಾರಣೆ

ಈ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿ ಕಲ್ಕತ್ತ ಹೈಕೋರ್ಟ್ ನೀಡಿದ್ದ ತೀರ್ಪು ಪ್ರಶ್ನಿಸಿ 127 ಅರ್ಜಿಗಳು ಸಲ್ಲಿಕೆಯಾಗಿದ್ದವು. ಈ ಅರ್ಜಿಗಳ ವಿಚಾರಣೆ ನಡೆಸಿದ್ದ ನ್ಯಾಯಪೀಠ, ಫೆಬ್ರುವರಿ 10ರಂದು ತನ್ನ ತೀರ್ಪನ್ನು ಕಾಯ್ದಿರಿಸಿತ್ತು.

ಪಶ್ಚಿಮ ಬಂಗಾಳ ಸಿಬ್ಬಂದಿ ನೇಮಕಾತಿ ಆಯೋಗ (ಎಸ್‌ಎಸ್‌ಸಿ) 2016ರಲ್ಲಿ ನೇಮಕಾತಿ ಪರೀಕ್ಷೆ ನಡೆಸಿತ್ತು. 24,640 ಹುದ್ದೆಗಳಿಗಾಗಿ 23 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. 25,753 ಮಂದಿಗೆ ನೇಮಕಾತಿ ಪತ್ರ ನೀಡಲಾಗಿತ್ತು. 'ಇದು ವ್ಯವಸ್ಥಿತ ವಂಚನೆ' ಎಂದು ಕೋರ್ಟ್ ಹೇಳಿದೆ.

ಈ ನೇಮಕಾತಿ ಹಗರಣಕ್ಕೆ ಸಂಬಂಧಿಸಿ ಪಶ್ಚಿಮ ಬಂಗಾಳದ ಮಾಜಿ ಶಿಕ್ಷಣ ಸಚಿವ ಪಾರ್ಥ ಚಟರ್ಜಿ, ಟಿಎಂಸಿ ಶಾಸಕರಾದ ಮಾಣಿಕ್ ಭಟ್ಟಾಚಾರ್ಯ ಹಾಗೂ ಜೀವನ್ ಕೃಷ್ಣ ಸಹಾ ಅವರ ವಿರುದ್ಧ ತನಿಖೆ ನಡೆಯುತ್ತಿದೆ.

ಇಡೀ ನೇಮಕಾತಿ ಪ್ರಕ್ರಿಯೆಯೇ ದೋಷದಿಂದ ಕೂಡಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಹೀಗಾಗಿ, ಅರ್ಹ ಅಭ್ಯರ್ಥಿಗಳು ಯಾರು? ಅರ್ಹರಲ್ಲದವರು ಯಾರು ಎಂಬುದನ್ನು ಗುರುತಿಸಲು ಸಾಧ್ಯವಿಲ್ಲ. ನ್ಯಾಯಸಮ್ಮತ ನೇಮಕಾತಿ ಪ್ರಕ್ರಿಯೆಯಿಂದ ವಂಚಿತಗೊಂಡಿರುವ ಲಕ್ಷಾಂತರ ಅಭ್ಯರ್ಥಿಗಳ ಭವಿಷ್ಯದ ಬಗ್ಗೆಯೂ ಚಿಂತನೆ ಅಗತ್ಯ
ವಿಕಾಸರಂಜನ್ ಭಟ್ಟಾಚಾರ್ಯ, ಕೆಲ ಅರ್ಜಿದಾರರ ಪರ ವಕೀಲ

ನೇಮಕಾತಿಯನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿರುವ ಕಾರಣ 26 ಸಾವಿರ ಶಿಕ್ಷಕರು/ಇತರ ಸಿಬ್ಬಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ಮಮತಾ ಬ್ಯಾನರ್ಜಿ ಕೂಡಲೇ ರಾಜೀನಾಮೆ ನೀಡಬೇಕು. ಶಿಕ್ಷಕರ ನೇಮಕಾತಿಯಲ್ಲಿ ನಡೆದ ಭಾರಿ ಭ್ರಷ್ಟಾಚಾರಕ್ಕೆ ಮಮತಾ ಬ್ಯಾನರ್ಜಿ ಅವರೇ ಹೊಣೆ
ಸುಕಾಂತ ಮಜುಂದಾರ, ಕೇಂದ್ರ ಸಚಿವ, ಬಿಜೆಪಿಯ ಪಶ್ಚಿಮ ಬಂಗಾಳ ಘಟಕದ ಅಧ್ಯಕ್ಷ

'ಕ್ರಮ ಕೈಗೊಳ್ಳದೇ ತಪ್ಪು ಮಾಡಿದೆವಾ?'

ತೆಲಂಗಾಣ ಸಿ.ಎಂ ವಿರುದ್ಧ 'ಸುಪ್ರೀಂ' ಮತ್ತೆ ಆಕ್ರೋಶ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಬಿಆರ್‌ಎಸ್ ಪಕ್ಷದ ಶಾಸಕರು ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿದರೂ ಅವರ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯುವುದಿಲ್ಲ' ಎಂದು ವಿಧಾನಸಭೆಯಲ್ಲಿ ಹೇಳಿದ್ದ ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ವಿರುದ್ಧ ಸುಪ್ರೀಂ ಕೋರ್ಟ್ ಗುರುವಾರ ಮತ್ತೆ ಅಸಮಾಧಾನ ವ್ಯಕ್ತಪಡಿಸಿದೆ.

'ನ್ಯಾಯಾಂಗ ನಿಂದನೆಗಾಗಿ ಕ್ರಮ ಕೈಗೊಳ್ಳದೇ ಮತ್ತು ಆಗ ಅವರನ್ನು (ಮುಖ್ಯಮಂತ್ರಿ ರೇವಂತ ರೆಡ್ಡಿ) ಹಾಗೆಯೇ ಬಿಡುವ ಮೂಲಕವೇ ನಾವು ತಪ್ಪು ಮಾಡಿದೆವಾ?' ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇದ್ದ ಪೀಠ ಹೇಳಿದೆ.

ಪಕ್ಷಾಂತರ ಮಾಡಿರುವ ಬಿಆರ್‌ಎಸ್‌ನ 10 ಶಾಸಕರನ್ನು ಅನರ್ಹಗೊಳಿಸುವಂತೆ ಕೋರಿದ ಅರ್ಜಿಗಳನ್ನು ಇತ್ಯರ್ಥಪಡಿಸಲು ತೆಲಂಗಾಣ ವಿಧಾನ ಸಭಾಧ್ಯಕ್ಷ ವಿಳಂಬ ಮಾಡುತ್ತಿದ್ದಾರೆ ಎಂಬ ಆರೋಪ ಕುರಿತ ಮೇಲ್ಮನವಿಗಳ ವಿಚಾರಣೆ ವೇಳೆ, ಈ ಮಾತು ಹೇಳಿರುವ ನ್ಯಾಯಪೀಠ, ತೀರ್ಪನ್ನು ಕಾಯ್ದಿರಿಸಿದೆ.

ದೆಹಲಿ ಅಬಕಾರಿ ನೀತಿ ಹಗರಣದ ಜೊತೆ ನಂಟಿನ ಪ್ರಕರಣದಲ್ಲಿ ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರಿಗೆ ಕಳೆದ ವರ್ಷ ಸುಪ್ರೀಂ ಕೋರ್ಟ್ ಜಾಮೀನು ನೀಡಿದ್ದರ ಬಗ್ಗೆ ರೇವಂತ ರೆಡ್ಡಿ ಹೇಳಿಕೆ ನೀಡಿದ್ದರು. ರೆಡ್ಡಿ ಅವರ ಹೇಳಿಕೆಗೆ ಆಗ ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿತ್ತು.

ಈ ಸಂಗತಿಯನ್ನು ಪ್ರಸ್ತಾಪಿಸಿದ ನ್ಯಾಯಪೀಠ, 'ಈ ಹಿಂದಿನ ಅನುಭವದ ಆಧಾರದ ಮೇಲೆ ಮುಖ್ಯಮಂತ್ರಿ ಸ್ವಲ್ಪ ಮಟ್ಟಿನ ಸಂಯಮ ತೋರಬೇಕಿತ್ತು' ಎಂದು ವಿಧಾನಸಭಾಧ್ಯಕ್ಷರ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರನ್ನು ಉದ್ದೇಶಿಸಿ ಹೇಳಿತು.

ಬಿಆರ್‌ಎಸ್ ನಾಯಕ ಪಾಡಿ ಕೌಶಿಕ್ ರೆಡ್ಡಿ ಪರ ಹಾಜರಿದ್ದ ಹಿರಿಯ ವಕೀಲ ಸಿ.ಎ.ಸುಂದರಮ್, 'ಈ ವಿಚಾರವು ಸುಪ್ರೀಂ ಕೋರ್ಟ್‌ನಲ್ಲಿದೆ. ಈ ಬಗ್ಗೆ ಪ್ರಸ್ತಾಪಿಸುವುದು ಬೇಡ ಎಂದು ವಿಧಾನಸಭೆ ಕಲಾಪದಲ್ಲಿ ಪಾಲ್ಗೊಂಡಿದ್ದ ಬಿಆರ್‌ಎಸ್ ಶಾಸಕರೊಬ್ಬರು ಹೇಳಿದ್ದರು. ಆದರೂ, ಮುಖ್ಯಮಂತ್ರಿ ಈ ಹೇಳಿಕೆ ನೀಡಿದರು' ಎಂದು ಪೀಠಕ್ಕೆ ತಿಳಿಸಿದರು.

'ಮುಖ್ಯಮಂತ್ರಿ ಇಂತಹ ಹೇಳಿಕೆ ನೀಡಿದ್ದರೂ, ವಿಧಾನಸಭಾಧ್ಯಕ್ಷ ಏನೂ ಹೇಳಲಿಲ್ಲ' ಎಂದೂ ಸುಂದರಮ್ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ಶಾಸಕರ ಅನರ್ಹತೆ ಕೋರುವ ಅರ್ಜಿಗಳ ಕುರಿತು ತೀರ್ಮಾನವನ್ನೇ ತೆಗೆದುಕೊಳ್ಳದೇ ಸುಮ್ಮನಿರಬೇಕೇ ಹಾಗೂ ಸಂವಿಧಾನದ 10ನೇ ಪರಿಚ್ಛೇದವನ್ನು ರದ್ದುಗೊಳಿಸಬೇಕೇ' ಎಂದು ಪೀಠ ಕೇಳಿತು.

ವಿಧಾನಸಭೆ ಸದಸ್ಯರು ಪಕ್ಷಾಂತರ ಮಾಡಿದಲ್ಲಿ ಶಾಸಕ ಸ್ಥಾನದಿಂದ ಅವರನ್ನು ಅನರ್ಹಗೊಳಿಸುವ ಅವಕಾಶಗಳನ್ನು 10ನೇ ಪರಿಚ್ಛೇದ ಒಳಗೊಂಡಿದೆ.

'ಇದು ಅಸಾಧಾರಣ ಪ್ರಕರಣವೆಂದು ಪರಿಗಣಿಸಿ, ಅನರ್ಹತೆಗೆ ಸಂಬಂಧಿಸಿದ ಅರ್ಜಿಗಳ ಕುರಿತು ನಿರ್ಧಾರ ಕೈಗೊಳ್ಳಲು ಕಾಲಮಿತಿ ನಿಗದಿಪಡಿಸಬೇಕು' ಎಂದು ಸುಂದರಮ್ ಮನವಿ ಮಾಡಿದರು.

ದೇಶದಲ್ಲಿ 22 ಲಕ್ಷ ನುರಿತ ಚಾಲಕರ ಕೊರತೆ: ಗಡ್ಕರಿ

ನವದೆಹಲಿ (ಪಿಟಿಐ): ವಿಶ್ವ ಬ್ಯಾಂಕ್ ನೀಡಿರುವ ವರದಿಯ ಪ್ರಕಾರ ನಮ್ಮ ದೇಶದಲ್ಲಿ 22 ಲಕ್ಷ ನುರಿತ ಚಾಲಕರ ಕೊರತೆ ಇದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಈ ವಿಷಯ ತಿಳಿಸಿದ ಅವರು, 'ರಸ್ತೆ ಅಪಘಾತಗಳಿಂದಾಗಿ ವಾರ್ಷಿಕ 1.8 ಲಕ್ಷ ಮಂದಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಚಾಲಕರಿಗೆ ತರಬೇತಿ ಸೌಕರ್ಯಗಳ ಲಭ್ಯತೆ ಇಲ್ಲದಿರುವುದು ಹಾಗೂ ಚಾಲಕರು ಅಗತ್ಯ ಪರಿಣತಿ ಹೊಂದದೆ ಇರುವುದರಿಂದ ಹೆಚ್ಚಿನ ಅಪಘಾತಗಳು ಸಂಭವಿಸಿವೆ. ಇದಕ್ಕೆ ಪರಿಹಾರ ಕಂಡುಕೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರವು ದೇಶದಾದ್ಯಂತ ಚಾಲನಾ ತರಬೇತಿ ಸಂಸ್ಥೆಗಳನ್ನು ಆರಂಭಿಸುತ್ತಿದೆ' ಎಂದು ತಿಳಿಸಿದ್ದಾರೆ.

₹4,500 ಕೋಟಿ ಮೊತ್ತದ ಈ ಯೋಜನೆಯಡಿ, ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ 1,600 ಚಾಲನಾ ತರಬೇತಿ ಕೇಂದ್ರಗಳನ್ನು ಹಂತಹಂತವಾಗಿ ಆರಂಭಿಸಲಾಗುವುದು. ಈ ಮೂಲಕ 60 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲಾಗುವುದು ಎಂದೂ ತಿಳಿಸಿದ್ದಾರೆ.

ವಕ್ಫ್ ತಿದ್ದುಪಡಿ ಮಸೂದೆ ನಸುಕಿನ 1.56ಕ್ಕೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಾದಿತ ವಕ್ಫ್ (ತಿದ್ದುಪಡಿ) ಮಸೂದೆಯ ಬಗ್ಗೆ ಚರ್ಚಿಸಿ, ಮತದಾನ ಪ್ರಕ್ರಿಯೆ ಪೂರ್ಣಗೊಳಿಸಲು ಲೋಕಸಭೆಯು ಗುರುವಾರ ನಸುಕಿನ 1.56ರವರೆಗೂ ಕಲಾಪ ನಡೆಸಿತು.

ವಕ್ಫ್ ಮಸೂದೆಯ ಕುರಿತಾಗಿ ಹಾಗೂ ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಹೇರಿದ್ದಕ್ಕೆ ಅನುಮತಿ ನೀಡುವ ಸಲುವಾಗಿ ಸದನದಲ್ಲಿ 15 ತಾಸು 41 ನಿಮಿಷಗಳ ಕಲಾಪ ನಡೆಯಿತು.

ವಕ್ಫ್ ತಿದ್ದುಪಡಿ ಮಸೂದೆಯ ಪರವಾಗಿ ಲೋಕಸಭೆಯಲ್ಲಿ 288 ಮತಗಳು ಚಲಾವಣೆಯಾದವು, ವಿರುದ್ಧವಾಗಿ 232 ಮತಗಳು ಬಿದ್ದವು. ವಕ್ಫ್ ತಿದ್ದುಪಡಿ ಮಸೂದೆ ಕುರಿತ ಚರ್ಚೆ ಹಾಗೂ ಅದರ ಅಂಗೀಕಾರಕ್ಕೆ ನಡೆದ ಮತದಾನವು ಗುರುವಾರ ನಸುಕಿನ 1.56ಕ್ಕೆ ಕೊನೆಗೊಂಡಿತು.

ವಕ್ಫ್ ಮಂಡಳಿಯಲ್ಲಿ ಮುಸ್ಲಿಮೇತರರನ್ನು ನೇಮಕ ಮಾಡಬಾರದು ಎಂಬ ತಿದ್ದುಪಡಿಯನ್ನು ಆರ್‌ಎಸ್‌ಪಿ ಸದಸ್ಯ ಎನ್.ಕೆ. ಪ್ರೇಮಚಂದ್ರನ್ ಮಂಡಿಸಿದರು. ಆದರೆ ಇದಕ್ಕೆ ಸೋಲಾಯಿತು.

ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಯ ಬಗ್ಗೆ ಲೋಕಸಭೆಯು ಗುರುವಾರ ನಸುಕಿನ 2 ಗಂಟೆಗೆ ಚರ್ಚಿಸಿತು. ವಿರೋಧ ಪಕ್ಷಗಳ ಎಂಟು ಸದಸ್ಯರು ಇದರ ಕುರಿತಾಗಿ ಮಾತನಾಡಿದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಉತ್ತರ ನೀಡಿದರು. ನಸುಕಿನ 2 ಗಂಟೆಯಲ್ಲಿ ಈ ವಿಷಯವನ್ನು ಕೈಗೆತ್ತಿಕೊಂಡಿದ್ದಕ್ಕೆ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದವು.

ಮರಳಿ ಕಾಡಿಗೆ ರಾಂಚಿಯಲ್ಲಿರುವ ಬಿಹಾರ ರಾಜ್ಯ ಸಹಕಾರ ಮಾರಾಟ ಒಕ್ಕೂಟದ ಶೀತಲ ಘಟಕದ ಆವರಣ ಪ್ರವೇಶಿಸಿದ್ದ ಎರಡು ಕಾಡಾನೆಗಳನ್ನು ಅರಣ್ಯಕ್ಕೆ ಅರಣ್ಯಾಧಿಕಾರಿಗಳು ಗುರುವಾರ ಓಡಿಸಿದರು
ಪಿಟಿಐ ಚಿತ್ರ

ಸಂವಿಧಾನದ ಮೇಲಿನ ನಿರ್ಲಜ್ಜ ದಾಳಿ

ವಕ್ಫ್ ತಿದ್ದುಪಡಿ ಮಸೂದೆ: ಕೇಂದ್ರದ ವಿರುದ್ಧ ಸೋನಿಯಾ ಗಾಂಧಿ ಟೀಕೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ವಕ್ಫ್ ತಿದ್ದುಪಡಿ ಮಸೂದೆ ದೇಶದ ಸಂವಿಧಾನದ ಮೇಲಿನ 'ನಿರ್ಲಜ್ಜ ದಾಳಿ' ಎಂದು ಟೀಕಿಸಿರುವ ಕಾಂಗ್ರೆಸ್‌ನ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, 'ಇದು ಸಮಾಜವನ್ನು ಶಾಶ್ವತವಾಗಿ ಧ್ರುವೀಕರಣ ಸ್ಥಿತಿಯಲ್ಲಿಡಲು ಬಿಜೆಪಿ ಹೆಣೆದ ಉದ್ದೇಶಪೂರ್ವಕ ಕಾರ್ಯತಂತ್ರದ ಭಾಗವಾಗಿದೆ' ಎಂದು ಗುರುವಾರ ಕಿಡಿಕಾರಿದ್ದಾರೆ.

ಸಂವಿಧಾನ ಸದನದ ಸೆಂಟ್ರಲ್ ಹಾಲ್‌ನಲ್ಲಿ ನಡೆದ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯಲ್ಲಿ ಪಕ್ಷದ ಸಂಸದರನ್ನು ಉದ್ದೇಶಿಸಿ ಮಾತನಾಡಿದ ಸೋನಿಯಾ, 'ಒಂದು ದೇಶ, ಒಂದು ಚುನಾವಣೆ ಮಸೂದೆ ಕೂಡ ಸಂವಿಧಾನದ ಮೇಲಿನ ಮತ್ತೊಂದು ವಿಧ್ವಂಸಕ ದಾಳಿ. ಪಕ್ಷ ಇದನ್ನು ಬಲವಾಗಿ ವಿರೋಧಿಸುತ್ತದೆ' ಎಂದು ಹೇಳಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಒಬಿಸಿಗಳಿಗೆ ಸೇರಿದ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಮೀಸಲಾತಿ ನೀಡಬೇಕೆಂಬ ಬೇಡಿಕೆಯೊಂದಿಗೆ ಸಂಸತ್ತು ಅಂಗೀಕರಿಸಿದ ಮಹಿಳಾ ಮೀಸಲಾತಿ ಮಸೂದೆಯ ಅನುಷ್ಠಾನವನ್ನು ಸರ್ಕಾರ ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುತ್ತಿದೆ ಎಂದು ಅವರು ಆರೋಪಿಸಿದರು.

'ಭಾರತವನ್ನು ಕಣ್ಗಾವಲಿನ ರಾಷ್ಟ್ರವನ್ನಾಗಿ ಮಾಡಲು ಹೊರಟಿರುವ ಉದ್ದೇಶವನ್ನು ಮತ್ತು ಮೋದಿ ಸರ್ಕಾರದ ವೈಫಲ್ಯಗಳನ್ನು ಜನರ ಮುಂದೆ ತೆರೆದಿಡುವುದು ಹಾಗೂ ನ್ಯಾಯಕ್ಕಾಗಿ ಸರಿಯಾದ ಹೋರಾಟ ನಡೆಸುವುದು ಅತ್ಯಗತ್ಯ' ಎಂದು ಅವರು ಒತ್ತಿ ಹೇಳಿದರು.

'ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರಿಗೆ ಸಂಸತ್‌ನಲ್ಲಿ ಮಾತನಾಡಲು ಅವಕಾಶ ನೀಡುತ್ತಿಲ್ಲ. ಸಮಸ್ಯೆಗಳ ಬಗ್ಗೆ ಕಾಂಗ್ರೆಸ್‌ಗೆ ದನಿ ಎತ್ತಲು ಅವಕಾಶ ನೀಡದಿರಲು ಆಡಳಿತಾರೂಢ ಪಕ್ಷಗಳು ಆಗಾಗ್ಗೆ ಗೊಂದಲವನ್ನು ಸೃಷ್ಟಿಸುತ್ತಿವೆ' ಎಂದು ಆರೋಪಿಸಿದರು.

ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳು, ಚೀನಾ ಗಡಿ ವಿವಾದ, ರಕ್ಷಣಾ ಮತ್ತು ವಿದೇಶಾಂಗ ವ್ಯವಹಾರಗಳಂತಹ ಸಚಿವಾಲಯಗಳ ಕಾರ್ಯವೈಖರಿಯ ಕುರಿತು ಹಾಗೂ ಸಾರ್ವಜನಿಕ ಪ್ರಾಮುಖ್ಯದ ಹಲವು ವಿಷಯಗಳ ಬಗ್ಗೆ ಚರ್ಚೆ ಆಗಬೇಕೆಂದು ಪಕ್ಷವು ಒತ್ತಾಯಿಸಿದೆ. ಆದರೆ, ದುರದೃಷ್ಟವಶಾತ್ ಆಡಳಿತಾರೂಢ ಬಿಜೆಪಿ ಇದಕ್ಕೆ ನಿರಾಕರಿಸಿದೆ ಎಂದು ಹೇಳಿದರು.

'ಕೋರ್ಟ್‌ನಲ್ಲಿ ನ್ಯಾಯ ಸಿಗಲಿದೆ'

ಲಖನೌ: ವಕ್ಫ್ ತಿದ್ದುಪಡಿ ಮಸೂದೆ –2025 ಅನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು ಎಂದು ಹಿರಿಯ ಮುಸ್ಲಿಂ ಧರ್ಮಗುರು ಮತ್ತು ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ (ಎಐಎಂಪಿಎಲ್‌ಬಿ) ಸದಸ್ಯ ಮೌಲಾನಾ ಖಾಲಿದ್ ರಶೀದ್ ಫಿರಂಗಿ ಮಹಾಲಿ ಗುರುವಾರ ಹೇಳಿದ್ದಾರೆ.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ನೇತೃತ್ವದ ಸಂಯುಕ್ತ ಜನತಾದಳ ಮತ್ತು ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ಟಿಡಿಪಿ ಈ ಮಸೂದೆಯನ್ನು ವಿರೋಧಿಸಲಿವೆ ಎಂಬ ನಿರೀಕ್ಷೆಯಲ್ಲಿ ಮುಸ್ಲಿಮರಿದ್ದರು. ಆದರೆ, ಈ ಇಬ್ಬರು ಮಸೂದೆ ಬೆಂಬಲಿಸಿದರು ಎಂದು ಫಿರಂಗಿ ಮಹಾಲಿ ಹೇಳಿದರು.

'ಮಸೂದೆಯು ಸಂವಿಧಾನಕ್ಕೆ ವಿರುದ್ಧವಾಗಿರುವುದರಿಂದ ನಮಗೆ ನ್ಯಾಯಾಲಯದಲ್ಲಿ ನ್ಯಾಯ ಸಿಗುವ ನಂಬಿಕೆ ಇದೆ' ಎಂದು ಅವರು ಹೇಳಿದರು.

ಡಿಎಂಕೆಯಿಂದ 'ಸುಪ್ರೀಂ'ಗೆ ಮೊರೆ

ಚೆನ್ನೈ: ಲೋಕಸಭೆ ಅಂಗೀಕರಿಸಿರುವ ವಕ್ಫ್ (ತಿದ್ದುಪಡಿ) ಮಸೂದೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುವುದಾಗಿ ತಮಿಳುನಾಡಿನ ಆಡಳಿತ ಪಕ್ಷ ಡಿಎಂಕೆ ಹೇಳಿದೆ.

ಲೋಕಸಭೆಯಲ್ಲಿ ಈ ಮಸೂದೆ ಅಂಗೀಕರಿಸಿರುವುದನ್ನು ವಿರೋಧಿಸಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸೇರಿ ಡಿಎಂಕೆ ಶಾಸಕರು ಕಪ್ಪುಪಟ್ಟಿ ಧರಿಸಿ ಗುರುವಾರ ವಿಧಾನಸಭೆಯಲ್ಲಿ ಪ್ರತಿಭಟಿಸಿದರು.

'ವಕ್ಫ್ ಆಸ್ತಿ ವಿಚಾರವಾಗಿ ಡಿಎಂಕೆ ಹೋರಾಟ ನಡೆಸಲಿದ್ದು, ಜಯಶಾಲಿಯಾಗಲಿದೆ' ಎಂದು ಸ್ಟಾಲಿನ್ ವಿಶ್ವಾಸ ವ್ಯಕ್ತಪಡಿಸಿದರು.

ಅನುರಾಗ್ ರಾಜೀನಾಮೆಗೆ ಆಗ್ರಹ

ಮಲ್ಲಿಕಾರ್ಜುನ ಖರ್ಗೆ

ನವದೆಹಲಿ (ಪಿಟಿಐ): ಬಿಜೆಪಿ ಸಂಸದ ಅನುರಾಗ್ ಠಾಕೂರ್ ತಮ್ಮ ಕುರಿತು ಲೋಕಸಭೆಯಲ್ಲಿ ಮಾಡಿದ ಗಂಭೀರ ಆರೋಪವನ್ನು ಸಾಬೀತುಪಡಿಸಬೇಕು. ಇಲ್ಲದಿದ್ದರೆ, ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದರು.

'ನನ್ನನ್ನು ಬೆದರಿಸಿ, ನಾನು ತಲೆ ತಗ್ಗಿಸುವಂತೆ ಮಾಡಲು ಬಿಜೆಪಿ ನಾಯಕರು ಬಯಸಿರಬಹುದು. ಆದರೆ, ನಾನು ಎಂದಿಗೂ ತಲೆ ಬಾಗುವುದಿಲ್ಲ ಎಂಬ ಮಾತನ್ನು ಅವರಿಗೆ ನೆನಪಿಸಲು ಬಯಸುತ್ತೇನೆ' ಎಂದರು.

ಗುರುವಾರ ರಾಜ್ಯಸಭೆಯ ಕಲಾಪ ಆರಂಭವಾಗುತ್ತಿದ್ದಂತೆಯೇ ಈ ಬಗ್ಗೆ ಪ್ರಸ್ತಾಪಿಸಿದ ಖರ್ಗೆ, 'ನನ್ನ ಜೀವನವು ತೆರೆದ ಪುಸ್ತಕವಾಗಿದ್ದು, ಸಾರ್ವಜನಿಕ ಜೀವನದಲ್ಲಿ ಮೌಲ್ಯಗಳನ್ನು ಪಾಲಿಸಿದ್ದೇನೆ. ಸುಮಾರು 60 ವರ್ಷಗಳ ನನ್ನ ರಾಜಕೀಯ ಜೀವನದಲ್ಲಿ ಎಂದಿಗೂ ಇಂಥ ಸನ್ನಿವೇಶ ಎದುರಿಸಿಲ್ಲ. ಅನುರಾಗ್ ಠಾಕೂರ್ ನನ್ನ ವಿರುದ್ಧ ತಪ್ಪು ಮತ್ತು ಆಧಾರ ರಹಿತ ಆರೋಪಗಳನ್ನು ಮಾಡಿದ್ದಾರೆ. ನನ್ನ ವಿರುದ್ಧ ನೀಡಿರುವ ಮಾನಹಾನಿ ಹೇಳಿಕೆಯನ್ನು ಹಿಂಪಡೆಯುವಂತೆ ನನ್ನ ಸಹೋದ್ಯೋಗಿಗಳು ಒತ್ತಾಯಿಸಿದ್ದರು' ಎಂದರು.

'ನನ್ನ ವ್ಯಕ್ತಿತ್ವಕ್ಕೆ ಹಾನಿಯಾಗಿದೆ. ಎಲ್ಲ ಮಾಧ್ಯಮಗಳು ಆ ಸುದ್ದಿಯನ್ನು ಬಿತ್ತರಿಸಿವೆ. ಸಾಮಾಜಿಕ ಮಾಧ್ಯಮಗಳಲ್ಲಿ ಅದನ್ನು ಹರಡಲಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಬಿಜೆಪಿಯ ಸದನ ನಾಯಕ ಜೆ.ಪಿ. ನಡ್ಡಾ ಅವರು ಕ್ಷಮೆ ಕೋರಬೇಕು. ಆಡಳಿತಾರೂಢ ಪಕ್ಷ ಮಾಡಬಹುದಾದ ಕನಿಷ್ಠ ಕೆಲಸ ಇದಾಗಿದ್ದು, ಅದನ್ನು ಮಾಡಲೇಬೇಕು. ನನ್ನ ವಿರುದ್ಧದ ಆರೋಪಗಳನ್ನು ಠಾಕೂರ್ ಸಾಬೀತುಪಡಿಸದಿದ್ದರೆ, ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಒಂದು ವೇಳೆ ಆರೋಪ ಸಾಬೀತುಪಡಿಸಿದಲ್ಲಿ, ನಾನು ರಾಜೀನಾಮೆ ನೀಡಲು ಸಿದ್ಧ' ಎಂದರು.

ಖರ್ಗೆ ಅವರ ಭಾಷಣ ಮುಗಿದ ಕೂಡಲೇ ಪ್ರತಿಪಕ್ಷಗಳ ಸದಸ್ಯರು ಕಲಾಪವನ್ನು ಬಹಿಷ್ಕರಿಸಿ, ಹೊರ ನಡೆದರು.

ಲೋಕಸಭೆ: ಶೂನ್ಯವೇಳೆ- ದಾಖಲೆಯ ಕಲಾಪ

ಪ್ರಜಾವಾಣಿ ವಾರ್ತೆ

ನವದೆಹಲಿ: ವಕ್ಫ್ (ತಿದ್ದುಪಡಿ) ಮಸೂದೆ ಕುರಿತ ಚರ್ಚೆ ನಡೆದ ಬುಧವಾರ ಮತ್ತು ಗುರುವಾರ ದೀರ್ಘ ಅವಧಿಗೆ ಕಲಾಪ ನಡೆಸಿದ ಲೋಕಸಭೆಯು, ಗುರುವಾರ ಇನ್ನೊಂದು ದಾಖಲೆ ಬರೆಯಿತು. ಶೂನ್ಯ ವೇಳೆಯಲ್ಲಿ 200ಕ್ಕೂ ಹೆಚ್ಚು ಸಂಸದರು ಸಾರ್ವಜನಿಕ ಮಹತ್ವದ ವಿಷಯಗಳನ್ನು ಪ್ರಸ್ತಾಪಿಸಿ, ಚರ್ಚಿಸಿದರು. ಕರ್ನಾಟಕದ ಸದಸ್ಯರೂ ಭಾಗಿಯಾಗಿದ್ದರು.

ಸದನದಲ್ಲಿ ಕಲಾಪ ನಡೆಯುವ ಸಂದರ್ಭದಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಸಂಸದರಿಗೆ ಮಾತನಾಡಲು ಅವಕಾಶ ಕಲ್ಪಿಸಲಾಗುವುದು ಎಂದು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ಕಲಾಪ ಸಲಹಾ ಸಮಿತಿಯಲ್ಲಿ ಭರವಸೆ ನೀಡಿದ್ದರು.

2019ರಲ್ಲಿ ಶೂನ್ಯವೇಳೆಯಲ್ಲಿ 161 ಸಂಸದರು ಮಾತನಾಡಿದ್ದರು.

ಚೀನಾ ಜೊತೆಗಿನ ಗಡಿ ವಿವಾದವನ್ನು ಕೇಂದ್ರ ಸರ್ಕಾರ ನಿರ್ವಹಿಸಿದ ಬಗೆ ಮತ್ತು ಅಮೆರಿಕವು ವಿಧಿಸಿರುವ ಸುಂಕದ ಬಗ್ಗೆ ರಾಹುಲ್ ಪ್ರಸ್ತಾಪಿಸಿದರು. ಇದಕ್ಕೆ ಬಿಜೆಪಿಯ ನಿಶಿಕಾಂತ ದುಬೆ, ಅನುರಾಗ್ ಠಾಕೂರ್ ತಿರುಗೇಟು ನೀಡಿದರು.

ಕರ್ನಾಟಕದ ಪ್ರಭಾ ಮಲ್ಲಿಕಾರ್ಜುನ, ಸಿ.ಎನ್. ಮಂಜುನಾಥ್, ತೇಜಸ್ವಿ ಸೂರ್ಯ, ಶ್ರೇಯಸ್ ಎಂ. ಪಟೇಲ್, ಎಂ. ಮಲ್ಲೇಶ್ ಬಾಬು, ಕ್ಯಾಪ್ಟನ್ ಬ್ರಿಜೇಶ್ ಚೌಟ, ಯದುವೀರ ಒಡೆಯರ್, ಸಾಗರ್ ಖಂಡ್ರೆ, ಪಿ.ಸಿ. ಗದ್ದಿಗೌಡರ ಮಾತನಾಡಿದರು.

ಸಂಕ್ಷಿಪ್ತ ಸುದ್ದಿ

'ಕರಾವಳಿ ಹಡಗು ಸರಕು ಸಾಗಣೆ' ಮಸೂದೆ ಅಂಗೀಕಾರ

ನವದೆಹಲಿ (ಪಿಟಿಐ): ದೇಶದ ಕರಾವಳಿಯಲ್ಲಿ ವಾಣಿಜ್ಯ ವಹಿವಾಟು ನಡೆಸುವ ಹಡಗುಗಳ ನಿಯಂತ್ರಣಕ್ಕೆ ಅವಕಾಶ ಕಲ್ಪಿಸುವ 'ಕರಾವಳಿ ಹಡಗು ಸರಕು ಸಾಗಣೆ ಮಸೂದೆ 2024' ಅನ್ನು ಲೋಕಸಭೆ ಅಂಗೀಕರಿಸಿದೆ.

ಮಸೂದೆಯನ್ನು ಗುರುವಾರ ಧ್ವನಿಮತದಿಂದ ಅಂಗೀಕರಿಸಲಾಯಿತು. ಈ ಕುರಿತ ಚರ್ಚೆಗೆ ಉತ್ತರಿಸಿದ ಬಂದರು ಮತ್ತು ಜಲಮಾರ್ಗ ಸಚಿವ ಸರ್ಬಾನಂದ ಸೊನೊವಾಲ್, 'ಕರಾವಳಿ ವ್ಯಾಪ್ತಿಯಲ್ಲಿ ವಾಣಿಜ್ಯ ವಹಿವಾಟಿನ ಅವಕಾಶಗಳನ್ನು ಪೂರ್ಣ ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಇದು ಪ್ರಮುಖವಾಗಿದೆ' ಎಂದು ಅಭಿಪ್ರಾಯಪಟ್ಟರು.

'ಪಟಾಕಿ ನಿಷೇಧ ಆದೇಶ ರದ್ದು ಸಾಧ್ಯವಿಲ್ಲ'

ನವದೆಹಲಿ (ಪಿಟಿಐ): 'ದೆಹಲಿಯಲ್ಲಿ ಗಾಳಿಯ ಗುಣಮಟ್ಟವು ಹಲವು ತಿಂಗಳಿಂದ ಹದಗೆಟ್ಟ ಸ್ಥಿತಿಯಲ್ಲಿಯೇ ಇದೆ. ಹೀಗಿರುವಾಗ ಪಟಾಕಿಗಳ ಮಾರಾಟ, ತಯಾರಿಕೆ ಅಥವಾ ಸಂಗ್ರಹಕ್ಕೆ ವಿಧಿಸಿರುವ ನಿಷೇಧವನ್ನು ರದ್ದು ಮಾಡಲು ಸಾಧ್ಯವೇ ಇಲ್ಲ' ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

'ಬೀದಿಯಲ್ಲಿ ಕೆಲಸ ಮಾಡುವ ದೊಡ್ಡ ಸಂಖ್ಯೆಯ ಜನರು ವಾಯು ಮಾಲಿನ್ಯದಿಂದ ತೊಂದರೆಗೆ ಒಳಗಾಗಿದ್ದಾರೆ. ತಮ್ಮ ತಮ್ಮ ಮನೆಗಳಲ್ಲಿ ಏರ್‌ಪ್ಯೂರಿಫಯರ್‌ಗಳನ್ನು ಕೊಂಡುಕೊಳ್ಳಲು ಎಲ್ಲರಿಗೂ ಸಾಧ್ಯವಿಲ್ಲ' ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಹಾಗೂ ಉಜ್ಜಲ್ ಭುಯಾನ್ ಹೇಳಿದರು.

'ಪಟಾಕಿಗಳಿಂದ ಉಂಟಾಗಿರುವ ಈ ಮಾಲಿನ್ಯವು ತಗ್ಗಿದೆ ಎಂದು ನಮಗೆ ಅನ್ನಿಸದ ಹೊರತು ನಾವು ನಮ್ಮ ಹಿಂದಿನ ಆದೇಶಗಳನ್ನು ರದ್ದು ಮಾಡುವುದಿಲ್ಲ' ಎಂದು ಪೀಠ ಹೇಳಿತು.

'ಆರೋಪ ಸಾಬೀತುಪಡಿಸಲು ಸಿಬಿಐ ವಿಫಲ'

ಚಂಡೀಗಢ(ಪಿಟಿಐ): '2008ರಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ನಿವಾಸದ ಬಾಗಿಲಿನಲ್ಲಿ ನಗದು ಸಿಕ್ಕಿದ್ದ ಪ್ರಕರಣದಲ್ಲಿ ಆರೋಪಿಗಳ ವಿರುದ್ಧದ ಆಪಾದನೆಗಳನ್ನು ಸಾಬೀತುಪಡಿಸುವಲ್ಲಿ ಸಿಬಿಐ ಸಂಪೂರ್ಣ ವಿಫಲವಾಗಿದೆ' ಎಂದು ಸಿಬಿಐನ ವಿಶೇಷ ನ್ಯಾಯಾಲಯವೊಂದು ಹೇಳಿದೆ.

'ಸಿಬಿಐ ಈ ಮೊದಲು ಪ್ರಕರಣ ಮುಕ್ತಾಯಗೊಳಿಸಲು ನಿರ್ಧರಿಸಿತ್ತು. ಈ ನಿಲುವಿಗೇ ಅದು ಅಂಟಿಕೊಂಡಿರಬೇಕಿತ್ತು' ಎಂದು ವಿಶೇಷ ಸಿಬಿಐ ನ್ಯಾಯಾಧೀಶೆ ಅಲ್ಕಾ ಮಲಿಕ್ ಹೇಳಿದ್ದಾರೆ.

ಪ್ರಕರಣದಲ್ಲಿ ಆರೋಪಿಗಳಾಗಿದ್ದ, ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನಿರ್ಮಲ್ ಯಾದವ್ ಹಾಗೂ ಇತರ ನಾಲ್ವರನ್ನು ದೋಷಮುಕ್ತಗೊಳಿಸಿ ಮಾರ್ಚ್ 29ರಂದು ಸಿಬಿಐ ವಿಶೇಷ ನ್ಯಾಯಾಲಯ ತೀರ್ಪು ಪ್ರಕಟಿಸಿತ್ತು.

₹15 ಲಕ್ಷ ನಗದು ಇರುವ ಪೊಟ್ಟಣವನ್ನು 2008ರ ಆಗಸ್ಟ್ 13ರಂದು ನ್ಯಾಯಮೂರ್ತಿ ನಿರ್ಮಲ್‌ಜಿತ್ ಕೌರ್ ನಿವಾಸಕ್ಕೆ ತಪ್ಪಾಗಿ ತಲುಪಿಸಲಾಗಿತ್ತು. ಆಸ್ತಿ ವಿವಾದವೊಂದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಪ್ರಭಾವ ಬೀರಲು ನ್ಯಾಯಮೂರ್ತಿ ಯಾದವ್ ಅವರಿಗೆ ತಲುಪಿಸಬೇಕಿದ್ದ ಹಣ ಇದಾಗಿತ್ತು ಎಂದು ಆರೋಪಿಸಲಾಗಿತ್ತು.

ಪ್ರಕರಣ ಮುಕ್ತಾಯಗೊಳಿಸಿ 2009ರ ಡಿಸೆಂಬರ್‌ನಲ್ಲಿ ನ್ಯಾಯಾಲಯಕ್ಕೆ ಸಿಬಿಐ ವರದಿ ಸಲ್ಲಿಸಿತ್ತು. ಇದನ್ನು ತಿರಸ್ಕರಿಸಿದ್ದ ಸಿಬಿಐ ವಿಶೇಷ ನ್ಯಾಯಾಲಯ, ಪ್ರಕರಣ ಕುರಿತು ಮರುತನಿಖೆ ನಡೆಸುವಂತೆ 2010ರ ಮಾರ್ಚ್‌ನಲ್ಲಿ ಆದೇಶಿಸಿತ್ತು.

ಪ್ರಧಾನ ಇಂಜಿನಿಯರ್‌ರವರ ಕಛೇರಿ, ಪಿ.ಆರ್.ಎ.ಎಂ.ಸಿ.,
ಪಿ.ಡಬ್ಲ್ಯೂ.ಡಿ., ಬೆಂಗಳೂರು–560001
ಸಂಖ್ಯೆ: ಲೋಇ/05/ಪಿಆರ್‌ಎಎಂಸಿ/2025–26 ದಿನಾಂಕ: 03.04.2025
ಟೆಂಡರ್ ಪ್ರಕಟಣೆ
ಉತ್ತರ ಕನ್ನಡ, ತುಮಕೂರು, ವಿಜಯಪುರ, ಹಾಸನ, ಕಲಬುರ್ಗಿ, ಬೆಳಗಾವಿ, ಶಿವಮೊಗ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಒಟ್ಟು ಹದಿನಾರು ರಸ್ತೆ ಸುರಕ್ಷತಾ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್‌ನಿಂದ (www.kppp.karnataka.gov.in) ದಿನಾಂಕ: 04.04.2025 ರಂದು ಸಂಜೆ 05:30ರ ನಂತರ ಪಡೆಯಬಹುದಾಗಿರುತ್ತದೆ.
ಸಹಿ/–
ವಾ.ಸಾ.ಸಂ.ಇ/ವಾಪ್ರ/52/ಅಕಾರ್/2025–26 ಕಾರ್ಯಪಾಲಕ ಇಂಜಿನಿಯರ್, ಪಿಆರ್‌ಎಎಂಸಿ, ಲೋ.ಇ. ಬೆಂಗಳೂರು

ಕರ್ನಾಟಕ ಗೃಹ ಮಂಡಳಿ
ಸಂಖ್ಯೆ:ಕಗೃಮಂ/ಕಾ/ಹಂಚಿಕೆ/2025–26 ದಿನಾಂಕ: 02.04.2025
ಸಾರ್ವಜನಿಕ ಪ್ರಕಟಣೆ
ಕರ್ನಾಟಕ ಗೃಹ ಮಂಡಳಿಯಿಂದ ನಿವೇಶನ/ಮನೆಗಳ ಹಂಚಿಕೆ ಪಡೆದಿರುವ ಹಲವು ಹಂಚಿಕೆದಾರರು ವಿಳಂಬದ ಅವಧಿಗೆ ವಿಧಿಸುವ ಬಡ್ಡಿಯ ದರವನ್ನು ಕಡಿಮೆ ಮಾಡುವಂತೆ ಕೋರುತ್ತಿದ್ದು, ಈ ಕುರಿತು ಮಂಡಳಿ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಹಂಚಿಕೆದಾರರ/ಬಿಡ್ಡುದಾರರ ಹಿತದೃಷ್ಟಿಯಿಂದ 2015–16ನೇ ಸಾಲಿನ ನಂತರದ ಹಂಚಿಕೆ ಪ್ರಕರಣಗಳಲ್ಲಿ ನಿವೇಶನದ ಮೊತ್ತ ಪಾವತಿಸುವಲ್ಲಿ ಬಾಕಿ ಉಳಿಸಿಕೊಂಡಿರುವ ಹಂಚಿಕೆದಾರರು/ಬಿಡ್ಡುದಾರರಿಗೆ ಪ್ರೋತ್ಸಾಹದಾಯಕವಾಗಿ ಒಂದು ತಿಂಗಳ ಕಾಲಾವಧಿಯಲ್ಲಿ ಒಂದೇ ಇಡಿಗಂಟಿನಲ್ಲಿ ಹಣ ಪಾವತಿಸುವಂತಹ ಹಂಚಿಕೆದಾರರು/ಬಿಡ್ಡುದಾರರಿಗೆ ವಿಧಿಸುವ ಬಡ್ಡಿ ದರದಲ್ಲಿ ಶೇಕಡ 13.50ರ ಬದಲಿಗೆ ಶೇಕಡ 10.50ರಷ್ಟು ಬಡ್ಡಿ ದರವನ್ನು ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಈ ಸೌಲಭ್ಯವು ದಿನಾಂಕ: 01.04.2025ರಿಂದ 30.04.2025ರವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ
ಸಹಿ/–ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
DIPR/CP/VCPL/60/2025-26

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ "ಎ" ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027. ದೂ: 080–22483636/38/39, ಇಮೇಲ್: jmsg@ksbcl.com
KSBCL/MIS/ERP/ERP-Excise/AMC/Tender-001/2025-26 ದಿನಾಂಕ : 02.04.2025
ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವು ಕೆಟಿಪಿಪಿ ಕಾಯ್ದೆ 1999 ಮತ್ತು ನಿಯಮಗಳು 2000 ರ ಪ್ರಕಾರ ಅರ್ಹ ಬಿಡ್ಡರ್‌ಗಳಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ಆನ್‌ಲೈನ್ ಟೆಂಡರ್ ಅನ್ನು ಆಹ್ವಾನಿಸುತ್ತದೆ. **"ಕೆಎಸ್‌ಬಿಸಿಎಲ್ ಇಆರ್‌ಪಿ ಮತ್ತು ಅಬಕಾರಿ ಇಲಾಖೆಯ ಅಪ್ಲಿಕೇಷನ್‌ಗಳ ವಾರ್ಷಿಕ ನಿರ್ವಹಣಾ ಒಪ್ಪಂದ (AMC) ಗಾಗಿ ಸೇವಾ ಪೂರೈಕೆದಾರರ ಆಯ್ಕೆ"**ಯನ್ನು ಸಿದ್ಧಪಡಿಸಿ ಸಲ್ಲಿಸಲು ಅರ್ಹ ಬಿಡ್ಡರ್‌ಗಳಿಂದ ಆಹ್ವಾನಿಸಲಾಗಿದೆ. ವಿವರವಾದ ಮಾಹಿತಿಯನ್ನು ವೆಬ್‌ಸೈಟ್: **https://kppp.karnataka.gov.in** ಮತ್ತು ನಿಗಮದ ವೆಬ್‌ಸೈಟ್ **https://ksbcl.karnataka.gov.in** ನಿಂದ ಡೌನ್‌ಲೋಡ್ ಮಾಡಬಹುದು.
(1) ಟೆಂಡರ್ ಪ್ರಕಟಣೆ : **02.04.2025.** (2) ಪೂರ್ವ ಬಿಡ್ ಸಭೆಯ ದಿನಾಂಕ : **09.04.2025 – 11.00 ಗಂಟೆಗೆ.** (3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **21.04.2025 – 17.00 ಗಂಟೆವರೆಗೆ.** (4) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : **22.04.2025 – 17.00 ಗಂಟೆಗೆ.**
ಸಹಿ/–
DIPR/CP/YC/70/25-26 ಕಾರ್ಯನಿರ್ವಾಹಕ ನಿರ್ದೇಶಕರು (ಹ & ಆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560 002
ದೂರವಾಣಿ: 080–22213530/22241325
ಇ–ಮೇಲ್: kanbhavblr@gmail.com
ವೆಬ್‌ಸೈಟ್: www.kannadasiri.in, www.kanaja.in
ಸಂಖ್ಯೆ : ಡಿಕೆಸಿ–40025/5/2025 ದಿನಾಂಕ: 03.04.2025
ಮರು ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಏರ್ಪಡಿಸುವ ಜಯಂತಿಗಳು, ಪ್ರಶಸ್ತಿ ಪ್ರದಾನ, ಇತ್ಯಾದಿ ಕಾರ್ಯಕ್ರಮಗಳಿಗೆ ಅಗತ್ಯವಿರುವ ಊಟ/ತಿಂಡಿ/ಕಾಫಿ/ಟೀ/ನೀರು/ಡ್ರೈಫ್ರೂಟ್ಸ್ ಇತ್ಯಾದಿ ವ್ಯವಸ್ಥೆ ಮಾಡಲು ನೋಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ನಿಗದಿತ ನಮೂನೆಯಲ್ಲಿ ತಾಂತ್ರಿಕ ಹಾಗೂ ಆರ್ಥಿಕ ಬಿಡ್ ವಿಧಾನದಲ್ಲಿ ಮರು ಟೆಂಡರ್ ಆಹ್ವಾನಿಸಲಾಗಿದೆ.
1) ಟೆಂಡರ್‌ಗೆ ಇಟ್ಟ ಮೊತ್ತ : ರೂ. 75,00,000/–. **2) ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ವೆಬ್‌ಸೈಟ್ / ದಿನಾಂಕ:** http://www.eproc.karnataka.gov.in ದಿನಾಂಕ: 04.04.2025. **3) ಇಎಂಡಿ ಮೊತ್ತ:** ರೂ.1,87,500/–. **4) ಟೆಂಡರ್ ಡಾಕ್ಯುಮೆಂಟ್ ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ ಮತ್ತು ಸಮಯ :** 11.04.2025 ಸಂಜೆ 4.00 ಗಂಟೆ. **5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ :** 15.04.2025 ಸಂಜೆ 4.00 ಗಂಟೆ. **6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:** 17.04.2025 ಸಂಜೆ 4.00 ಗಂಟೆ. **7) ಯಾವುದೇ ವಿಚಾರಣೆ, ಸ್ಪಷ್ಟೀಕರಣಕ್ಕಾಗಿ ಸಂಪರ್ಕಿಸಬಹುದಾದ ಅಧಿಕಾರಿ ವಿಳಾಸ ಹಾಗೂ ದೂರವಾಣಿ ಸಂಖ್ಯೆ:** ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560 002. ದೂ : 080–22213530.
ಸಹಿ/– ನಿರ್ದೇಶಕರು
ವಾ.ಸಾ.ಸಂ.ಇ/ವಾಪ್ರ/57/ಅಕಾರ್/2025–26 ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಅಂ/ಪಂ.ರಾ.ಇಂ.ವಿ/ಬ/ಎಇ–1 /ವಿ.ವಿ.ಲೆ.ಶಿ/ಟೆಂಡರು/2024–25/
ದಿನಾಂಕ 01–04–2025
ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ **2024–25 ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ, 2024–25 ನೇ ಸಾಲಿನ ಕೆ.ಕೆ.ಆರ್.ಡಿ.ಬಿ. 2024–25 ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆ, 15ನೇ ಹಣಕಾಸು ಮತ್ತು ಎಮ್.ಜಿ.ಎನ್.ಆರ್.ಜಿ.ಎ ಒಟ್ಟು 04** ಕಾಮಗಾರಿಗಳಿಗೆ ಇ–ಪ್ರೊಕ್ಯೂರ್ಮೆಂಟ್ (ಕೆ.ಕೆ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಆಹ್ವಾನಿಸಿದೆ. ಸದರಿ ಕಾಮಗಾರಿಗಳಲ್ಲಿ **ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ 01, ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ 00 ಕೆಟಗರಿ II A 01 ಮತ್ತು ಕೆಟಗರಿ I 00** ಕಾಮಗಾರಿಗಳನ್ನು ಕಾಯ್ದಿರಿಸಲಾಗಿದೆ.
ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 01–04–2025** ರಿಂದ **ದಿನಾಂಕ 08–04–2025** ರಂದು **ಸಂಜೆ 4.30** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 08–04–2025 ರ 16.30** ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್ನ್ನು ಆನ್ ಲೈನ್‌ನಲ್ಲಿ **ದಿನಾಂಕ: 09–04–2025 ರಂದು 17.30** ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/09/ಕೆಎಸ್‌ಎಂಸಿಎ/2025–26

ರಾಮನ್ ಸಂಶೋಧನಾ ಸಂಸ್ಥೆ (ಆರ್ ಆರ್ ಐ)
ಸದಾಶಿವನಗರ, ಬೆಂಗಳೂರು–560080.
ಇ.ಓ.ಐ. ಸೂಚನೆ ಸಂಖ್ಯೆ : RRI/BNG/ಸಿವಿಲ್/ ಗಡಿ ಸಂಶೋಧನಾ ವಿಜ್ಞಾನ ಪ್ರಯೋಗಾಲಯಗಳು/2024–25/ EOI ನಂ. 02 ದಿನಾಂಕ : 19.03.2025
ಆಸಕ್ತಿಯ ಅಭಿವ್ಯಕ್ತಿ (EOI)
RRI, ಪ್ರಧಾನ ವೈಜ್ಞಾನಿಕ ಸಂಶೋಧನಾ ಸಂಸ್ಥೆ ಮತ್ತು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿದ್ದು, ಬೆಂಗಳೂರಿನ ಜಾಲಹಳ್ಳಿಯಲ್ಲಿ ಹೊಸ **"ಗಡಿ ಸಂಶೋಧನಾ ವಿಜ್ಞಾನ ಪ್ರಯೋಗಾಲಯಗಳು"** ಅನ್ನು ಪ್ರಸ್ತಾಪಿಸಿದೆ. RRI, ಆಸಕ್ತ ವಾಸ್ತುಶಿಲ್ಪಿಗಳು/ವಾಸ್ತುಶಿಲ್ಪ ಸಂಸ್ಥೆಗಳಿಂದ ಆಸಕ್ತಿಯ ಅಭಿವ್ಯಕ್ತಿಯನ್ನು ಆಹ್ವಾನಿಸುತ್ತದೆ. ಆಸಕ್ತಿಯ ಅಭಿವ್ಯಕ್ತಿ ದಾಖಲೆಯ ಕಾಯಂಪ್ರತಿಯನ್ನು ಎಲ್ಲಾ ಕೆಲಸದ ದಿನಗಳಲ್ಲಿ ಎಸ್ಟೇಟ್ ಮತ್ತು ಕಟ್ಟಡಗಳ ವಿಭಾಗ, RRI, ಬೆಂಗಳೂರಿನಿಂದ ಸಂಗ್ರಹಿಸಬಹುದು ಮತ್ತು CPP ಪೋರ್ಟಲ್ ಮತ್ತು RRI ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು.

ಕ್ರ ಸಂ.	ಯೋಜನೆಯ ಹೆಸರು	ಯೋಜನೆಯ ಅಂದಾಜು ವೆಚ್ಚ	EOI ದಾಖಲೆಗಾಗಿ ವಿನಂತಿಯನ್ನು ಮಾಡಬಹುದಾದ ಅವಧಿ	ಪೂರ್ವ ಬಿಡ್ ಸಭೆಯ ದಿನಾಂಕ ಮತ್ತು ಸಮಯ	ಪ್ರಸ್ತಾವನೆಗಳ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ಸಮಯ	ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ
1	ಕರ್ನಾಟಕದ ಬೆಂಗಳೂರಿನ ಜಾಲಹಳ್ಳಿಯಲ್ಲಿ "ಗಡಿ ಸಂಶೋಧನಾ ವಿಜ್ಞಾನ ಪ್ರಯೋಗಾಲಯಗಳ" ಸ್ಥಾಪನೆ	ರೂ. 9,000 ಲಕ್ಷಗಳು	20.03.2025 ರಿಂದ 30.04.2025 ರವರೆಗೆ	15.04.2025 ಮಧ್ಯಾಹ್ನ 2.00 ಗಂಟೆಗೆ	30.04.2025 ಮಧ್ಯಾಹ್ನ 2.00 ಗಂಟೆಗೆ	30.04.2025 ಸಂಜೆ 4.00 ಗಂಟೆಗೆ

ಆಡಳಿತ ಅಧಿಕಾರಿ
ರಾಮನ್ ಸಂಶೋಧನಾ ಸಂಸ್ಥೆ,
ಸದಾಶಿವನಗರ, ಬೆಂಗಳೂರು–560080.

ವೆಂಕಟೇಶ್, ರಘುವಂಶಿ ಅರ್ಧಶತಕ • ವೈಭವ್, ವರುಣ್‌ಗೆ ಮೂರು ವಿಕೆಟ್

ಕೋಲ್ಕತ್ತಕ್ಕೆ ಶರಣಾದ ಸನ್‌ರೈಸರ್ಸ್

ಕೋಲ್ಕತ್ತ (ಪಿಟಿಐ): ಎಡಗೈ ಬ್ಯಾಟರ್ ವೆಂಕಟೇಶ್ ಅಯ್ಯರ್ ಮತ್ತು 20 ವರ್ಷ ವಯಸ್ಸಿನ ಹುಡುಗ ಅಂಗಕ್ರಿಷ್ ರಘುವಂಶಿ ಅವರ ಅರ್ಧ ಶತಕಗಳ ಬಳಿಕ ವೈಭವ್ ಅರೋರಾ (29ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಗುರುವಾರ ಇಂಡಿಯನ್ ಪ್ರೀಮಿಯರ್ ಲೀಗ್‌ನ ಪಂದ್ಯದಲ್ಲಿ 80 ರನ್‌ಗಳಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಸದೆಬಡಿಯಿತು.

ಹಾಲಿ ಚಾಂಪಿಯನ್ ಕೋಲ್ಕತ್ತ ತಂಡವು ನಾಲ್ಕು ಪಂದ್ಯಗಳಲ್ಲಿ ಎರಡನೇ ಗೆಲುವು ದಾಖಲಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಕೊನೆಯ ಸ್ಥಾನದಿಂದ ಐದನೇ ಸ್ಥಾನಕ್ಕೆ ಏರಿತು. ಮತ್ತೊಂದೆಡೆ ಹಾಲಿ ರನ್ನರ್ಸ್ ಅಪ್ ಹೈದರಾಬಾದ್ ತಂಡವು ಹ್ಯಾಟ್ರಿಕ್ ಸೋಲಿನೊಡನೆ ಕೊನೆಯ ಸ್ಥಾನಕ್ಕೆ ಜಾರಿತು. ಕಳೆದ ಆವೃತ್ತಿಯ ಫೈನಲ್ ಪಂದ್ಯ ಸೇರಿದಂತೆ ಕೋಲ್ಕತ್ತ ವಿರುದ್ಧ ಸನ್‌ರೈಸರ್ಸ್ ತಂಡಕ್ಕೆ ಇದು ಸತತ ಐದನೇ ಸೋಲಾಗಿದೆ.

ಈಡನ್ ಗಾರ್ಡನ್‌ನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಸನ್‌ರೈಸರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕೋಲ್ಕತ್ತ ತಂಡವು ವೆಂಕಟೇಶ್ (60; 29ಎ, 4x7, 6x3) ಮತ್ತು ರಘುವಂಶಿ (50; 32ಎ, 4X5, 6X2) ಅವರ ಅರ್ಧಶತಕಗಳ ಬಲದಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 200 ರನ್ ಗಳಿಸಿತು.

ಈ ಗುರಿಯನ್ನು ಬೆನ್ನತ್ತಿದ ಹೈದರಾಬಾದ್ ತಂಡವು 16.4 ಓವರ್‌ಗಳಲ್ಲಿ 120 ರನ್ ಗಳಿಸಿ ಯಾವುದೇ ಹಂತದಲ್ಲೂ ಹೋರಾಟ ತೋರದ ಕಾರಣ ಸೋಲೊಪ್ಪಿಕೊಂಡಿತು. ವೇಗಿಗಳಾದ ವೈಭವ್ ಮತ್ತು ಹರ್ಷಿತ್ ರಾಣಾ (15ಕ್ಕೆ 1) ದಾಳಿಗೆ ಹೈದರಾಬಾದ್ ತಂಡವು ಆರಂಭದಲ್ಲೇ ಕುಸಿಯಿತು. ತಂಡವು 9 ರನ್ ಗಳಿಸುವಷ್ಟರಲ್ಲಿ ಟ್ರಾವಿಸ್ ಹೆಡ್ (4), ಅಭಿಷೇಕ್ ಶರ್ಮಾ (2) ಮತ್ತು ಇಶಾನ್ ಕಿಶನ್ (2) ಪೆವಿಲಿಯನ್ ಸೇರಿದ್ದರು.

ನಿತೀಶ್ ಕುಮಾರ್ ರೆಡ್ಡಿ (19), ಕಮಿಂದು ಮೆಂಡಿಸ್ (27;20ಎ) ಮತ್ತು ಹೆನ್ರಿಚ್ ಕ್ಲಾಸೆನ್ (33;21ಎ) ಕೊಂಚ ಹೋರಾಟ ತೋರಿದರು. ನಂತರದಲ್ಲಿ ಸ್ಪಿನ್ನರ್‌ಗಳಾದ ವರುಣ್ ಚಕ್ರವರ್ತಿ (22ಕ್ಕೆ 3), ಆ್ಯಂಡ್ರೆ ರಸೆಲ್ (21ಕ್ಕೆ 2) ಮತ್ತು ಸುನಿಲ್ ನಾರಾಯಣ್ (31ಕ್ಕೆ 1) ಕೈಚಳಕದ ಮುಂದೆ ಸನ್‌ರೈಸರ್ಸ್ ಬ್ಯಾಟರ್‌ಗಳು ನಿರುತ್ತರರಾದರು.

ಅಯ್ಯರ್ ಅರ್ಭಟ: ಇದಕ್ಕೂ ಮೊದಲು ಕೋಲ್ಕತ್ತ ತಂಡದ ಆರಂಭಿಕ ಜೋಡಿ ಕ್ವಿಂಟನ್ ಡಿ ಕಾಕ್ ಮತ್ತು ಸುನಿಲ್ ನಾರಾಯಣ್ 3ನೇ ಓವರ್ ಮುಗಿಯುವ ಮುನ್ನವೇ ಪೆವಿಲಿಯನ್‌ಗೆ ಮರಳಿದರು. ವೇಗಿ ಮೊಹಮ್ಮದ್ ಶಮಿ ಎಸೆತದಲ್ಲಿ ಸುನಿಲ್ ಅವರು ಕ್ಲಾಸೆನ್‌ಗೆ ಕ್ಯಾಚ್ ಆದರು. ನಾಯಕ ಪ್ಯಾಟ್ ಕಮಿನ್ಸ್ ಬೌಲಿಂಗ್‌ನಲ್ಲಿ ಕ್ವಿಂಟನ್ ಡಿಕಾಕ್ ಅವರು ಜೀಶನ್ ಅನ್ಸಾರಿಗೆ ಕ್ಯಾಚಿತ್ತರು.

ಕೋಲ್ಕತ್ತ ತಂಡದ ನಾಯಕ ಅಜಿಂಕ್ಯ ರಹಾನೆ (38; 27ಎ, 4X1, 6X4) ಇನಿಂಗ್ಸ್‌ಗೆ ಸ್ಥಿರತೆ ಒದಗಿಸಿದರು. ಅವರಿಗೆ ಉತ್ತಮ ಜೊತೆ ನೀಡಿದ ರಘುವಂಶಿ ಕೂಡ ಬೀಸಾಗಿ ಆಡಿದರು. ಇವರಿಬ್ಬರೂ 3ನೇ ವಿಕೆಟ್ ಜೊತೆಯಾಟದಲ್ಲಿ 81 ರನ್ ಸೇರಿಸಿದರು.

ಹಿಂದಿನ ಪಂದ್ಯಗಳಲ್ಲಿ ನಿರಾಸೆ ಮೂಡಿಸಿದ್ದ ವೆಂಕಟೇಶ್ ಈ ಪಂದ್ಯದಲ್ಲಿ ಕೊನೆಗೂ ಲಯ ಕಂಡುಕೊಂಡರು. ವೆಂಕಟೇಶ್ ಮತ್ತು ರಿಂಕು ಸಿಂಗ್ (ಔಟಾಗದೇ 32; 17ಎ, 4X4, 6X1) ಅವರ ಆರ್ಭಟಕ್ಕೆ ರನ್‌ಗಳು ವೇಗವಾಗಿ ಹರಿದುಬಂದವು. ಅವರ ಆಟದ ವೇಗಕ್ಕೆ ಇನಿಂಗ್ಸ್‌ನ ಕೊನೆಯ 5 ಓವರ್‌ಗಳಲ್ಲಿ 78 ರನ್‌ಗಳು ಸೇರಿದವು. ಇವರಿಬ್ಬರೂ ಐದನೇ ವಿಕೆಟ್ ಜೊತೆಯಾಟದಲ್ಲಿ 91 (41ಎಸೆತ) ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 6ಕ್ಕೆ 200 (ಅಜಿಂಕ್ಯ ರಹಾನೆ 38, ಅಂಗಕ್ರಿಷ್ ರಘುವಂಶಿ 50, ವೆಂಕಟೇಶ್ ಅಯ್ಯರ್ 60, ರಿಂಕು ಸಿಂಗ್ ಔಟಾಗದೇ 32, ಮೊಹಮ್ಮದ್ ಶಮಿ 29ಕ್ಕೆ1, ಪ್ಯಾಟ್ ಕಮಿನ್ಸ್ 44ಕ್ಕೆ1, ಜೀಶನ್ ಅನ್ಸಾರಿ 25ಕ್ಕೆ1, ಹರ್ಷಲ್ ಪಟೇಲ್ 43ಕ್ಕೆ1, ಕಮಿಂದು ಮೆಂಡಿಸ್ 4ಕ್ಕೆ1). **ಸನ್‌ರೈಸರ್ಸ್ ಹೈದರಾಬಾದ್:** 16.4 ಓವರ್‌ಗಳಲ್ಲಿ 120 (ನಿತೀಶ್ ಕುಮಾರ್ ರೆಡ್ಡಿ 17, ಕಮಿಂದು ಮೆಂಡಿಸ್ 27, ಹೆನ್ರಿಚ್ ಕ್ಲಾಸೆನ್ 33; ವೈಭವ್ ಅರೋರಾ 29ಕ್ಕೆ 3, ವರುಣ್ ಚಕ್ರವರ್ತಿ 22ಕ್ಕೆ 3, ಆ್ಯಂಡ್ರೆ ರಸೆಲ್ 21ಕ್ಕೆ 2).

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ 80 ರನ್‌ಗಳ ಜಯ. ಪಂದ್ಯದ ಆಟಗಾರ: ವೈಭವ್ ಅರೋರಾ

ವೆಂಕಟೇಶ್ ಅಯ್ಯರ್ —ಪಿಟಿಐ ಚಿತ್ರ

ವಿಕೆಟ್ ಪಡೆದ ಸಂಭ್ರಮದಲ್ಲಿ ವೈಭವ್ ಅರೋರಾ —ಎಎಫ್‌ಪಿ ಚಿತ್ರ

80
ಐಪಿಎಲ್‌ನಲ್ಲಿ ಯಾವುದೇ ತಂಡದ ವಿರುದ್ಧ ಸನ್‌ರೈಸರ್ಸ್ ಹೈದರಾಬಾದ್‌ಗೆ ಎದುರಾದ ಅತಿ ಹೆಚ್ಚು ರನ್ ಅಂತರದ ಸೋಲು ಇದಾಗಿದೆ. ಈ ಮೊದಲು ಚೆನ್ನೈ ವಿರುದ್ಧ 78 ರನ್‌ಗಳಿಂದ (2024) ಸೋತಿತ್ತು.

ಕಮಿಂದು ಮೆಂಡಿಸ್ ವಿಶಿಷ್ಟ ದಾಖಲೆ

ಸನ್‌ರೈಸರ್ಸ್ ಹೈದರಾಬಾದ್ ತಂಡದ ಆಲ್‌ರೌಂಡರ್ ಕಮಿಂದು ಮೆಂಡಿಸ್ ಐಪಿಎಲ್ ಇತಿಹಾಸದಲ್ಲಿ ವಿಶಿಷ್ಟ ದಾಖಲೆಯನ್ನು ಬರೆದರು.

ಗುರುವಾರದ ಪಂದ್ಯದಲ್ಲಿ ಅವರು ಒಂದೇ ಓವರ್‌ನಲ್ಲಿ ಎಡಗೈ ಮತ್ತು ಬಲಗೈ ಎರಡರಲ್ಲೂ ಬೌಲಿಂಗ್ ಮಾಡಿದರು. ವೆಂಕಟೇಶ್ ಅಯ್ಯರ್ ಮತ್ತು ಅಂಗಕ್ರಿಷ್ ರಘುವಂಶಿ ಅವರು ಕ್ರೀಸ್‌ನಲ್ಲಿದ್ದರು. ಈ ಓವರ್‌ನಲ್ಲಿ ಅವರು ಅಯ್ಯರ್‌ಗೆ ಕೆಲವು ಎಸೆತಗಳನ್ನು ಬಲಗೈನಲ್ಲಿ ಮತ್ತು ಅಂಗಕ್ರಿಷ್‌ಗೆ ಎಡಗೈನಲ್ಲಿ ಬೌಲ್ ಮಾಡಿದರು. ಅಂಗಕ್ರಿಷ್ ಅವರ ವಿಕೆಟ್ ಕೂಡ ಗಳಿಸಿದರು.

ರೋಹಿತ್, ಪಂತ್ ಮೇಲೆ ಒತ್ತಡ

ಮುಂಬೈ ಇಂಡಿಯನ್ಸ್–ಲಖನೌ ಸೂಪರ್ ಜೈಂಟ್ಸ್ ಸೆಣಸಾಟ

ಲಖನೌ (ಪಿಟಿಐ): ಭಾರತೀಯ ಕ್ರಿಕೆಟ್‌ನ ತಾರೆಯರಾದ ರೋಹಿತ್ ಶರ್ಮಾ ಮತ್ತು ರಿಷಭ್ ಪಂತ್ ಅವರು ಐಪಿಎಲ್‌ನ ಹಾಲಿ ಆವೃತ್ತಿಯಲ್ಲಿ ದೊಡ್ಡ ಮೊತ್ತ ಗಳಿಸಲು ವಿಫಲರಾಗುತ್ತಿದ್ದಾರೆ. ಮುಂಬೈ ಇಂಡಿಯನ್ಸ್ ತಂಡ, ಏಕನಾ ಕ್ರೀಡಾಂಗಣದಲ್ಲಿ ಶುಕ್ರವಾರ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದ್ದು, ಈ ಇಬ್ಬರು ಬ್ಯಾಟರ್‌ಗಳ ಪ್ರದರ್ಶನದ ಮೇಲೆ ಕುತೂಹಲದ ಕಣ್ಣು ಇದೆ.

ಐದು ಬಾರಿಯ ಚಾಂಪಿಯನ್ ಮುಂಬೈ ಇದುವರೆಗೆ ಸ್ಥಿರ ಪ್ರದರ್ಶನ ನೀಡಿಲ್ಲ. ಮೂರು ಪಂದ್ಯಗಳಿಂದ ಎರಡು ಪಾಯಿಂಟ್ಸ್ ಅಷ್ಟೇ ಗಳಿಸಿದೆ. ಭಾರತ ತಂಡದ ನಾಯಕ ರೋಹಿತ್ ವಿಫಲರಾಗುತ್ತಿರುವುದು ತಂಡಕ್ಕೆ ಕಳವಳ ಮೂಡಿಸಿದೆ.

ಲಖನೌ ತಂಡದ ಕಥೆಯೂ ಭಿನ್ನವಾಗಿಲ್ಲ. ಈ ತಂಡವೂ ಮೂರು ಪಂದ್ಯಗಳಿಂದ ಎರಡು ಪಾಯಿಂಟ್ಸ್ ಗಳಿಸಿದೆ. ಮೆಗಾ ಹರಾಜಿನಲ್ಲಿ ಅತಿ ಹೆಚ್ಚು ಮೊತ್ತಕ್ಕೆ ಬಿಡ್ ಆದ ನಾಯಕ ಪಂತ್ ತಿಣುಕಾಡುತ್ತಿರುವುದು ತಂಡದ ಬ್ಯಾಟಿಂಗ್ ಸರದಿಯ ಮೇಲೆ ಒತ್ತಡ ಹೆಚ್ಚಿಸಿದೆ.

ಇದರ ಜೊತೆಗೆ ಕ್ಯುರೇಟರ್‌ಗಳು ತವರು ತಂಡಕ್ಕೆ ಬೇಕಾದ ರೀತಿ ಪಿಚ್ ಸಿದ್ಧಪಡಿಸುತ್ತಿಲ್ಲ ಎಂಬ ದೂರುಗಳು ಕೇಳಿಬಂದಿವೆ. ಇದು ಫ್ರಾಂಚೈಸಿ ಕೋಚ್‌ಗಳು ಮತ್ತು ಆಟಗಾರರ ಹತಾಶೆಗೆ ಕಾರಣವಾಗಿದೆ. ಲಖನೌ ಮೆಂಟರ್ ಜಹೀರ್ ಖಾನ್ ಈಗಾಗಲೇ ಕ್ಯುರೇಟರ್ ಮೇಲೆ ವಾಗ್ಬಾಣ ಪ್ರಯೋಗಿಸಿದ್ದಾರೆ.

ಅಗ್ರ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರ ಅಲಭ್ಯತೆ, ತಂಡಕ್ಕೆ ಅವರು ಮರಳುವ ಕುರಿತಂತೆ ಫ್ರಾಂಚೈಸಿಯ ಮೌನವ್ರತ ಹಾರ್ದಿಕ್ ಪಾಂಡ್ಯ ನೇತೃತ್ವ ತಂಡಕ್ಕೆ ತಲೆನೋವು ತಂದಿದೆ. 23 ವರ್ಷ ವಯಸ್ಸಿನ ಎಡಗೈ ವೇಗಿ ಅಶ್ವಿನಿ ಕುಮಾರ್ (24ಕ್ಕೆ4) ತವರಿನಲ್ಲಿ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಮಿಂಚಿದ್ದು ಸ್ವಲ್ಪ ಸಮಾಧಾನ ತಂದಿದೆ.

ತಂಡ ಬ್ಯಾಟಿಂಗ್‌ನಲ್ಲಿ ಯಶಸ್ಸು ಗಳಿಸಬೇಕಾದರೆ ರೋಹಿತ್ ಮತ್ತು ಸೂರ್ಯಕುಮಾರ್ ಯಾದವ್ ಅವರ ಮೇಲೆ ಹೆಚ್ಚಿನ ಹೊಣೆಯಿದೆ.

ಲಖನೌ ತಂಡದ ಬ್ಯಾಟರ್ ನಿಕೋಲಸ್ ಪೂರನ್ ಉತ್ತಮ ಲಯದಲ್ಲಿದ್ದಾರೆ. ಮಿಚೆಲ್ ಮಾರ್ಷ್ ಎರಡು ಅರ್ಧ ಶತಕ ಬಾರಿಸಿದ್ದಾರೆ. ಶಾರ್ದೂಲ್ ಠಾಕೂರ್ ಮತ್ತು ರವಿ ಬಿಷ್ಣೋಯಿ ವೇಗ ಮತ್ತು ಸ್ಪಿನ್‌ನಲ್ಲಿ ತಂಡದ ಕೈಹಿಡಿದಿದ್ದಾರೆ. ಆದರೆ ಪಂತ್ ನಿರ್ವಹಣೆಯೇ ತಂಡದಲ್ಲಿ ಆತಂಕ ಮೂಡಿಸಿದೆ.

ಪಂದ್ಯ ಆರಂಭ: ರಾತ್ರಿ 7.30 **ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ರೋಹಿತ್ ಶರ್ಮಾ

ರಿಷಭ್ ಪಂತ್

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಪಿಬಿಕೆಎಸ್	2	2	0	4	1.485
2	ಡಿಸಿ	2	2	0	4	1.320
3	ಆರ್‌ಸಿಬಿ	3	2	1	4	1.149
4	ಜಿಟಿ	3	2	1	4	0.807
5	ಕೆಕೆಆರ್	4	2	2	4	0.070
6	ಎಂಐ	3	1	2	2	0.309
7	ಎಲ್‌ಎಸ್‌ಜಿ	3	1	2	2	-0.150
8	ಸಿಎಸ್‌ಕೆ	3	1	2	2	-0.771
9	ಆರ್‌ಆರ್	3	1	2	2	-1.112
10	ಎಸ್‌ಆರ್‌ಎಚ್	4	1	3	2	-1.612

ಆರೇಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 189 ರನ್

ಪರ್ಪಲ್ ಕ್ಯಾಪ್
ನೂರ್ ಅಹ್ಮದ್ (ಸಿಎಸ್‌ಕೆ) 9 ವಿಕೆಟ್

ಬಲಾಬಲ

ಪಂದ್ಯಗಳು	6
ಲಖನೌ ಜಯ	5
ಮುಂಬೈ ಜಯ	1

‘ಬೌಲಿಂಗ್, ಫಿಟ್‌ನೆಸ್ ಸುಧಾರಣೆಗೆ ಒತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ಸಿಕ್ಕ ವಿರಾಮವನ್ನು ಸಮರ್ಥವಾಗಿ ಬಳಸಿಕೊಂಡ ಮೊಹಮ್ಮದ್ ಸಿರಾಜ್ ತಮ್ಮ ಕೌಶಲಗಳನ್ನು ಸುಧಾರಿಸಿಕೊಂಡರು. ಫಿಟ್‌ನೆಸ್ ಉತ್ತಮಗೊಳಿಸಿಕೊಂಡರು. ಅದರ ಫಲ ಐಪಿಎಲ್ ಟೂರ್ನಿಯಲ್ಲಿ ಅವರಿಗೆ ಲಭಿಸುತ್ತಿದೆ.

ಬುಧವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ತಮ್ಮ ನಿಕಟಪೂರ್ವ ತಂಡವಾದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸೋಲಿಗೂ ಅವರು ಕಾರಣರಾದರು. ಸಿರಾಜ್ (19ಕ್ಕೆ3) ಅಮೋಘ ಬೌಲಿಂಗ್ ಬಲದಿಂದ ಗುಜರಾತ್ ಟೈಟನ್ಸ್ ತಂಡವು 8 ವಿಕೆಟ್‌ಗಳ ಸುಲಭ ಗೆಲುವನ್ನೂ ಸಾಧಿಸಿತು. ಏಳು ವರ್ಷ ಆರ್‌ಸಿಬಿಯಲ್ಲಿ ಆಡಿದ್ದವರು ಸಿರಾಜ್. ಈ ವರ್ಷ ಅವರನ್ನು ತಂಡವು ರಿಲೀಸ್ ಮಾಡಿತ್ತು ಮೆಗಾ ಹರಾಜಿನಲ್ಲಿ ಸಿರಾಜ್ ಅವರನ್ನು ಗುಜರಾತ್ ತಂಡವು ಖರೀದಿಸಿತ್ತು.

ಪವರ್‌ಪ್ಲೇನಲ್ಲಿಯೇ ಎರಡು ವಿಕೆಟ್ ಗಳಿಸಿದ್ದ ಸಿರಾಜ್ ಆತಿಥೇಯ ತಂಡಕ್ಕೆ ಆರಂಭಿಕ ಪೆಟ್ಟು ಕೊಟ್ಟಿದ್ದರು. ಪಂದ್ಯಶ್ರೇಷ್ಠ ಗೌರವ ಪಡೆದ ನಂತರ ಮಾಧ್ಯಮದೊಂದಿಗೆ ಮಾತನಾಡಿದ ಅವರು, ‘ಸತತವಾಗಿ ಪಂದ್ಯಗಳಲ್ಲಿ ಆಡುತ್ತಿದ್ದ ಸಂದರ್ಭದಲ್ಲಿ ನನ್ನ ಲೋಪಗಳನ್ನು ಗುರುತಿಸಿ ಸುಧಾರಿಸಿಕೊಳ್ಳಲು ಸಮಯ ಸಾಕಾಗುತ್ತಿರಲಿಲ್ಲ. ಪಂದ್ಯಕ್ಕೆ ಸಿದ್ಧವಾಗು-ವುದರತ್ತ ಹೆಚ್ಚು ಗಮನ ಇರುತ್ತಿತ್ತು. ಆದರೆ ಕೆಲವು ಅಂತರರಾಷ್ಟ್ರೀಯ ಸರಣಿಗಳಲ್ಲಿ ಆಡುವುದರಿಂದ ಬಿಡುವು ಸಿಕ್ಕಾಗ ಬೌಲಿಂಗ್ ಸುಧಾರಣೆಯತ್ತ ಹೆಚ್ಚು ಚಿತ್ತ ನೆಟ್ಟಿದ್ದೆ’ ಎಂದರು.

‘ನಾನು ಗುಜರಾತ್ ತಂಡವನ್ನು ಸೇರಿದ ಮೇಲೆ ಆಶು ಭಾಯ್ (ಕೋಚ್ ಆಶಿಶ್ ನೆಹ್ರಾ) ಜೊತೆ ಮಾತನಾಡಿದೆ. ಅವರು ನೀಡಿದ ಸಲಹೆ ಫಲಪ್ರದವಾಗಿವೆ. ನನ್ನ ಬೌಲಿಂಗ್ ಉತ್ತಮವಾಗಿದೆ. ತಂಡದಲ್ಲಿರುವ ಕಗಿಸೊ ರಬಾಡ, ಇಶಾಂತ್ ಶರ್ಮಾ ಮತ್ತು ಇನ್ನುಳಿದ ಬೌಲರ್‌ಗಳೊಂದಿಗೂ ಚರ್ಚಿಸುತ್ತೇನೆ. ಸಲಹೆ ಪಡೆದಿದ್ದೇನೆ. ಅವೆಲ್ಲವೂ ಬಹಳ ಉಪಯುಕ್ತವಾಗಿವೆ. ನಮ್ಮ ಮೇಲೆ ನಾವು ನಂಬಿಕೆ ಇಟ್ಟುಕೊಳ್ಳು-ವುದು ಮುಖ್ಯ ಎಂಬ ಅರಿವು ಮೂಡಿದೆ’ ಎಂದು 31 ವರ್ಷದ ಸಿರಾಜ್ ಹೇಳಿದರು.

ಮೊಹಮ್ಮದ್ ಸಿರಾಜ್

‘ಬೇಗ ವಿಕೆಟ್‌ಗಳ ಪತನ; ಸೋಲಿಗೆ ಕಾರಣ’


ರಜತ್ ಪಾಟೀದಾರ್

‘ಅಗ್ರಕ್ರಮಾಂಕದ ಬ್ಯಾಟರ್‌ಗಳು ಬೇಗ ಔಟಾಗಿದ್ದರಿಂದ ದೊಡ್ಡ ಮೊತ್ತ ಪೇರಿಸಲು ಸಾಧ್ಯವಾಗಲಿಲ್ಲ. ಪವರ್‌ಪ್ಲೇ ನಲ್ಲಿಯೇ ಮೂರು ವಿಕೆಟ್ ಕಳೆದುಕೊಂಡೆವು. ಅದರ ನಂತರವೂ 190 ರನ್‌ಗಳ ಮೊತ್ತದ ನಿರೀಕ್ಷೆಯಲ್ಲಿದ್ದೆವು’ ಎಂದು ಆರ್‌ಸಿಬಿ ತಂಡದ ನಾಯಕ ರಜತ್ ಪಾಟೀದಾರ್ ಹೇಳಿದರು.

‘ಜಿತೇಶ್ ಶರ್ಮಾ, ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ಟಿಮ್ ಡೇವಿಡ್ ಅವರು ಬಹಳ ಚೆನ್ನಾಗಿ ಬ್ಯಾಟಿಂಗ್ ಮಾಡಿದರು. ಅದರಿಂದಾಗಿ ಹೋರಾಟದ ಮೊತ್ತ ಗಳಿಸಲು ಸಾಧ್ಯವಾಯಿತು’ ಎಂದರು.

ಪಂದ್ಯದಲ್ಲಿ ಟಾಸ್ ಗೆದ್ದ ಗುಜರಾತ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರ್‌ಸಿಬಿ 20ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 169 ರನ್ ಗಳಿಸಿತು. ಅದಕ್ಕುತ್ತರವಾಗಿ ಗುಜರಾತ್ ತಂಡವು 17.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 170 ರನ್ ಗಳಿಸಿ ಜಯಿಸಿತು. ಜೋಸ್ ಬಟ್ಲರ್ ಅಜೇಯ 73 ಮತ್ತು ಸಾಯಿ ಸುದರ್ಶನ್ 49 ರನ್ ಗಳಿಸಿದರು .

ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ

ಚೇರಂಡ, ಚೋಡುಮಾಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಚೇರಂಡ ಹಾಗೂ ಚೋಡುಮಾಡ ತಂಡಗಳು ಇಲ್ಲಿ ನಡೆಯುತ್ತಿರುವ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಗುರುವಾರದ ಪಂದ್ಯಗಳಲ್ಲಿ ಜಯ ಸಾಧಿಸಿದವು.

ಇಲ್ಲಿನ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ಮೈದಾನದಲ್ಲಿ ನಡೆಯುತ್ತಿರುವ ಕೊಡವ ಕೌಟುಂಬಿಕ ಹಾಕಿ ಟೂರ್ನಿ ಮುದ್ದಂಡ ಕಪ್‌ನಲ್ಲಿ ಚೇರಂಡ ತಂಡವು 4–3 ಗೋಲುಗಳಿಂದ ಚೆನ್ನಪಂಡ ವಿರುದ್ಧ ರೋಚಕ ಜಯ ಸಾಧಿಸಿದರೆ, ಚೋಡುಮಾಡ ತಂಡದವರು ಟೈ ಬ್ರೇಕರ್‌ನಲ್ಲಿ 4-2 ಅಂತರದಲ್ಲಿ ಮುಂಡೋಟಿರ ತಂಡದ ವಿರುದ್ಧ ಗೆಲುವಿನ ನಗೆ ಬೀರಿದರು.

ಕಾಯಪಂಡ ತಂಡವು 5-0 ಗೋಲುಗಳಿಂದ ಉಪ್ಪಂಗಡ ತಂಡದ ವಿರುದ್ಧ ಭರ್ಜರಿ ಜಯ ಸಾಧಿಸಿತು.

ಇತರ ಫಲಿತಾಂಶ: ಪೊನ್ನಿಮಾಡ 2-0ಯಿಂದ ಕುಂದಿರ ವಿರುದ್ಧ; ಕುಟ್ಟಂಡ (ಅಮ್ಮತ್ತಿ) 3-0ಯಿಂದ ಚಟ್ಟಂಗಡ ವಿರುದ್ಧ; ಕನ್ನಂಬಿರ 3-1ರಿಂದ ಪಾಲೆಂಗಡ ವಿರುದ್ಧ, ಪುಟ್ಟಿಚಂಡ 1-0ಯಿಂದ ಕುಟ್ಟೇಟಿರ ವಿರುದ್ಧ; ಬೈರೇಟಿರ 1-0ಯಿಂದ ಪಳೆಯಂಡ (ಹಮ್ಮಿಯಾಲ) ವಿರುದ್ಧ; ಮಂದಂಗಡ 4-0ಯಿಂದ ಐಮಂಡ ವಿರುದ್ಧ; ಮಂಡೇಡ 3-0ಯಿಂದ ದೇಯಂಡ ವಿರುದ್ಧ; ಐತಿಚಂಡ 2-1ರಿಂದ ನಂದಿನೆರವಂಡ ವಿರುದ್ಧ; ಅಮ್ಮಂಡ 4-0ಯಿಂದ ಮುಂಡಂಡ ವಿರುದ್ಧ; ಮಾಳೇಟಿರ (ಕೆದಮುಳ್ಳೂರು) 5-0ಯಿಂದ ಕಟ್ಟೆರ ವಿರುದ್ಧ; ಸುಳ್ಳಿಮಾಡ 4-0ಯಿಂದ ಚೇಂದ್ರಿಮಾಡ ವಿರುದ್ಧ; ಚೋಕಿರ 3-1ರಿಂದ ವಲ್ಲಂಡ ವಿರುದ್ಧ; ತೆಕ್ಕಡ 2-0ಯಿಂದ ಚೊಟ್ಟೆಯಂಡ ವಿರುದ್ಧ; ಮಾಳೇಟಿರ (ಕುಕ್ಲೂರು) 1-0ಯಿಂದ ಅವರೆಮಾದಂಡ ವಿರುದ್ಧ; ಕಾವಾಡಿಚಂಡ 3-0ಯಿಂದ ಕಾಳಚಂಡ ವಿರುದ್ಧ, ಮೇಕೇರಿರ 4-0ಯಿಂದ ಕೈಬುಲಿರ ವಿರುದ್ಧ ಜಯ ಸಾಧಿಸಿದವು.

ಅನ್ನಡಿಯಂಡ ಮತ್ತು ಉಳ್ಳಿಯಡ ತಂಡಗಳು ವಾಕ್‌ಓವರ್ ಪಡೆದವು.

ತೆಕ್ಕಡ ಮತ್ತು ಚೊಟ್ಟೆಯಂಡ ತಂಡಗಳ ಆಟಗಾರರು ಚೆಂಡಿಗಾಗಿ ಪೈಪೋಟಿ ನಡೆಸಿದರು

ಸ್ವದೇಶಕ್ಕೆ ಮರಳಿದ ರಬಾಡ

ನವದೆಹಲಿ(ಪಿಟಿಐ): ಗುಜರಾತ್ ಟೈಟನ್ಸ್ ತಂಡದ ವೇಗದ ಬೌಲರ್ ಕಗಿಸೊ ರಬಾಡ ತಮ್ಮ ತವರು ದಕ್ಷಿಣ ಆಫ್ರಿಕಾಕ್ಕೆ ಮರಳಿದರು. ವೈಯಕ್ತಿಕ ಕಾರಣಗಳಿಂದಾಗಿ ಅವರು ಸ್ವದೇಶಕ್ಕೆ ತೆರಳಿದ್ದಾರೆ.

ರಬಾಡ ಅವರು ಟೂರ್ನಿಯಲ್ಲಿ ಎಷ್ಟು ಪಂದ್ಯಗಳಿಗೆ ಗೈರುಹಾಜರಾಗುವರು ಎಂಬುದನ್ನು ಗುಜರಾತ್ ಟೈಟನ್ಸ್ ತಂಡವು ತಿಳಿಸಿಲ್ಲ. ಇಲ್ಲಿಯವರೆಗೆ ಅವರು ಎರಡು ಪಂದ್ಯಗಳಲ್ಲಿ ಆಡಿದ್ದರು.

‘ತಮ್ಮ ವೈಯಕ್ತಿಕವಾದ ಮತ್ತು ಮಹತ್ವದ ವಿಷಯವೊಂದರ ಬಗ್ಗೆ ರಬಾಡ ಅವರು ಸ್ವದೇಶಕ್ಕೆ ತೆರಳಿದ್ದಾರೆ’ ಎಂದು ಗುಜರಾತ್ ತಂಡವು ಪ್ರಕಟಣೆಯಲ್ಲಿ ತಿಳಿಸಿದೆ.

ರಬಾಡ ಬದಲಿಗೆ ದಕ್ಷಿಣ ಆಫ್ರಿಕಾದವರೇ ಆದ ಗೆರಾಲ್ಡ್ ಕೋಟ್ಜಿಯಾ ಅಥವಾ ಅಫ್ಗಾನಿಸ್ತಾನದ ಕರೀಮ್ ಜನತ್ ಆಡುವ ಸಾಧ್ಯತೆ ಇದೆ.

ಎಂಟರ ಘಟ್ಟ ತಲುಪಿದ ಆರ್ಯನ್ ಶಾ ಚಿತ್ರ: ಪುಷ್ಕರ್ ವಿ.

ಟೆನಿಸ್: ಕ್ವಾರ್ಟರ್‌ಗೆ ಕರಣ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ಸೆಟ್‌ಗಳ ಹಣಾಹಣಿಯಲ್ಲಿ ದಿಟ್ಟ ಆಟವಾಡಿದ ಕರಣ್ ಸಿಂಗ್ ಅವರು ಗುರುವಾರ ರಷ್ಯಾದ ನಿಕಿತಾ ಇಯಾನಿನ್ ಅವರನ್ನು ಸೋಲಿಸಿ ಎಸ್.ಎಂ.ಕೃಷ್ಣ ಸ್ಮರಣಾರ್ಥ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ತಲುಪಿದರು.

ಕರ್ನಾಟಕ ರಾಜ್ಯ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ಕಬ್ಬನ್ ಪಾರ್ಕ್‌ನ ಎಸ್. ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದ-ಲ್ಲಿ ನಡೆಯುತ್ತಿರುವ ಐಟಿಎಫ್ ವಿಶ್ವ ಟೆನಿಸ್ ಟೂರ್ ಟೂರ್ನಿಯಲ್ಲಿ ಐದನೇ ಶ್ರೇಯಾಂಕದ ಕರಣ್ 3–6, 6–3, 7–5 ರಿಂದ ಜಯಗಳಿಸಿದರು. 2 ಗಂಟೆ 17 ನಿಮಿಷಗಳವರೆಗೆ ಬೆಳೆದ ಪಂದ್ಯವನ್ನು ಗೆದ್ದ ಕರಣ್ ಮುಂದಿನ ಸುತ್ತಿನ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಜೇ ಕ್ಲಾರ್ಕ್ ಅವರನ್ನು ಎದುರಿಸಲಿದ್ದಾರೆ.

ಹೋದ ವಾರ ಅಹಮದಾಬಾದಿನಲ್ಲಿ ನಡೆದ ಟೂರ್ನಿಯಲ್ಲಿ ಪ್ರಶಸ್ತಿ ಗೆದಿದ್ದ ಭಾರತದ ಆರ್ಯನ್ ಶಾ ಕೂಡ ಮುನ್ನಡೆ ಸಾಧಿಸಿದರು. ಆರನೇ ಶ್ರೇಯಾಂಕದ ಆರ್ಯನ್ 6–3, 6–2 ರಿಂದ ಕರ್ನಾಟಕದ ಎಸ್.ಡಿ.ಪ್ರಜ್ವಲ್ ದೇವ್ ಅವರನ್ನು ಮಣಿಸಿದರು. ಆರ್ಯನ್ ಅವರ ಮುಂದಿನ ಎದುರಾಳಿ ಎರಡನೇ ಶ್ರೇಯಾಂಕದ ಒಲಿವರ್ ಕ್ರಾಫರ್ಡ್. ಬ್ರಿಟನ್‌ನ ಒಲಿವರ್ ಎರಡನೇ ಸುತ್ತಿನಲ್ಲಿ 6–3, 7–6 (4) ರಿಂದ ಸಿದ್ಧಾರ್ಥ ರಾವತ್ ಅವರನ್ನು ಸೋಲಿಸಿದರು.

ಚಿರಾಗ್ ದುಹಾನ್, ಎರಡನೇ ಸುತ್ತಿನ ಇನ್ನೊಂದು ಪಂದ್ಯದಲ್ಲಿ 4–6, 7–5, 6–3 ರಿಂದ ಅಭಿನವ್ ಸಂಜೀವ್ ಶಣ್ಮುಗಮ್ ಅವರನ್ನು ಸೋಲಿಸಿದರು.

ಬ್ಯಾಸ್ಕೆಟ್‌ಬಾಲ್ ಲೀಗ್: ಮಲ್ಲಸಜ್ಜನ ತಂಡ ಜಯಭೇರಿ

ಬೆಂಗಳೂರು: ಮಂಜುನಾಥ್ ಅವರ ಆಟದ ಬಲದಿಂದ ಮಲ್ಲಸಜ್ಜನ ಬಿ.ಸಿ ಧಾರವಾಡ ತಂಡವು ಗುರುವಾರ ಕರ್ನಾಟಕ ಗ್ರಾಮೀಣ ಬ್ಯಾಸ್ಕೆಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ ಇನ್‌ಸ್ಪೈರ್ ಬಿ.ಸಿ ಧಾರವಾಡ ತಂಡವನ್ನು 63–44 ಪಾಯಿಂಟ್ಸ್‌ಗಳಿಂದ ಸೋಲಿಸಿತು.

ನಗರದ ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆದ ಪಂದ್ಯದಲ್ಲಿ ಮಲ್ಲಸಜ್ಜನ ತಂಡವು ವಿರಾಮದ ವೇಳೆಗೆ 40–27ರಿಂದ ಮುನ್ನಡೆ ಪಡೆದಿತ್ತು. ಉತ್ತರಾರ್ಧದಲ್ಲೂ ಪಾರಮ್ಯ ಮೆರೆಯಿತು. ಮಂಜುನಾಥ್ ಮತ್ತು ಸಮರ್ಥ್ ಕ್ರಮವಾಗಿ 22 ಮತ್ತು 12 ಅಂಕ ಗಳಿಸಿದರು. ಇನ್‌ಸ್ಪೈರ್ ಪರ ಪ್ರಶಾಂತ್ 21 ಅಂಕ ಕಲೆಹಾಕಿದರು.

ಇತರ ಫಲಿತಾಂಶ (ಲೀಗ್ ಹಂತ): ಕುವೆಂಪು ಬಿ.ಸಿ ಕಲಬುರ್ಗಿ (ಸಿರಾಜುದ್ದೀನ್ 29, ಸುರೇಶ್ 14) 65–59ರಿಂದ ಪಿನಾಕಿನಿ ಗೌರಿಬಿದನೂರು (ವಿದ್ಯಾ 21, ರವಿಚಂದ್ರ 14) ವಿರುದ್ಧ; ವಿಬಿಸಿ ಮಂಡ್ಯ (ಅಮರ್ತ್ಯ 22ಮ ಶಶಾಂಕ್ ಗೌಡ 19) 83–46ರಿಂದ ನಾಷನಲ್ಸ್ ಬಿ.ಸಿ ಮೈಸೂರು (ರೋನಕ್ 24) ವಿರುದ್ಧ; ವಿಜಯನಗರ ಬಿ.ಸಿ ಮೈಸೂರು (ಭುವನ್ 19, ವಿಕಾಸ್ 14) 70–61ರಿಂದ ವೈಎಫ್‌ಬಿಸಿ ಕೋಲಾರ (ರಾಜೇಶ್ 23, ಭುವನ್ 15) ವಿರುದ್ಧ ಗೆಲುವು ಸಾಧಿಸಿದವು.

ಬೆಳಿಗ್ಗೆ ನಡೆದ ಪಂದ್ಯದಲ್ಲಿ ಮಲ್ಲಸಜ್ಜನ (ಕಾರ್ತಿಕ್ 32, ಸಾಯಿನಾಥ್ 13) 78–70ರಿಂದ ವಿಜಯನಗರ ಬಿ.ಸಿ ಮೈಸೂರು (ಚೈತನ್ಯಾ 20, ವಿಶ್ವಾಸ್ 11) ಎದುರು; ಪಿನಾಕಿನಿ (ಅಬ್ದುಲ್ 22, ಲಿಖಿತ್ 20) 83–66ರಿಂದ ನ್ಯಾಷನಲ್ಸ್ ಬಿ.ಸಿ ಮೈಸೂರು (ರೋನಕ್ 33, ಸುಮನ್ 15) ಎದುರು; ಮಂಗಳೂರು ಬಿ.ಸಿ (ಪ್ರಾಸ್ತಿಕ್ 30) 62–48ರಿಂದ ವೈಎಫ್‌ಬಿಸಿ ಕೋಲಾರ (ರೂಪೇಶ್ 21) ಎದುರು; ವಿಬಿಸಿ ಮಂಡ್ಯ (ಅಮರ್ತ್ಯ 19) 75–58ರಿಂದ ವೈಸಿಬಿಸಿ ಬಳ್ಳಾರಿ (ಮಹೇಶ್ 21, ರೂಮನ್ 18) ಎದುರು ಜಯ ಗಳಿಸಿದವು.

ಐಎಸ್‌ಎಲ್: ಗೋವಾ ವಿರುದ್ಧ ಗೆಲುವಿನ ನಂತರ ಬಿಎಫ್‌ಸಿ ಕೋಚ್ ಹೇಳಿಕೆ

‘ಸಿದ್ಧತೆ, ಮನೋಭೂಮಿಕೆ ಯಶಸ್ಸಿಗೆ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಥಾ ಪರಿಸ್ಥಿತಿಯಲ್ಲೂ ಕಠಿಣ ಹೋರಾಟದಲ್ಲಿ ತೊಡಗುವ ಉತ್ಕಟ ಬಯಕೆಯೇ ಈ ಋತು ವಿನುದ್ದಕ್ಕೂ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡದ ಆಟದಲ್ಲಿ ಮೈದಳೆದಂತೆ ಕಾಣುತಿತ್ತು. ಎಫ್‌ಸಿ ಗೋವಾ ವಿರುದ್ಧ ಬುಧವಾರ ನಡೆದ ಐಎಸ್‌ಎಲ್ ಸೆಮಿಫೈನಲ್ ಮೊದಲ ಲೆಗ್‌ನಲ್ಲೂ ಈ ಮನೋಭಾವ ಎದ್ದುಕಂಡಿತು.

ಐಎಸ್‌ಎಲ್ ಪ್ಲೇ ಆಫ್ ಹಂತದಲ್ಲಿ ಸತತ ಎರಡು ಜಯ ಸಾಧಿಸಿದ ಮೂರನೇ ಕೋಚ್ ಎಂಬ ಹಿರಿಮೆ ಬಿಎಫ್‌ಸಿ ಹೆಡ್ ಕೋಚ್ ಜೆರಾರ್ಡ್ ಝರಗೋಝಾ ಅವರದಾಯಿತು. ಸೈಮನ್ ಗ್ರೇಸನ್ ಮತ್ತು ಪೀಟರ್ ಕ್ರಾಟ್ಕಿ ಮೊದಲ ಇಬ್ಬರು.

‘ಪೂರ್ವಸಿದ್ಧತೆ ಮತ್ತು ಮನೋಭೂಮಿಕೆ ನಮ್ಮ ತಂಡವು, ಗೋವಾ ವಿರುದ್ಧ ಕಂಠೀರವ ಕ್ರೀಡಾಂಗಣದಲ್ಲಿ 2–0 ಗೆಲುವು ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು’ ಎನ್ನುತ್ತಾರೆ ಝರಗೋಝಾ.

‘ಮುಂಬೈ ವಿರುದ್ಧ ಪ್ಲೇಆಫ್ ಪಂದ್ಯಕ್ಕೆ ಮೊದಲು 10 ದಿನ ನಮಗೆ ತರಬೇತಿಗೆ ದೊರಕಿತ್ತು. ಆಗಲೇ ತಂಡ ಪ್ಲೇ ಆಫ್ ಮೂಡ್‌ನಲ್ಲಿದ್ದುದು ವ್ಯಕ್ತವಾಗಿತ್ತು. ತಂಡದಲ್ಲಿ ಅಂಥ ವಿಶ್ವಾಸ ಕಾಣಬಹುದಾಗಿತ್ತು’ ಎಂದು ಬುಧವಾರ ತಂಡದ ಗೆಲುವಿನ ನಂತರ ಪತ್ರಿಕಾಗೋಷ್ಠಿಯಲ್ಲಿ ಝರಗೋಝಾ ಹೇಳಿದರು.

ಗೋವಾ ವಿರುದ್ಧ ಸೆಮಿಫೈನಲ್ ಲೆಗ್‌ಗೆ ಮೊದಲಿನ ಪಂದ್ಯದಲ್ಲಿ ಬ್ಲೂಸ್ ತಂಡ, ಮುಂಬೈ ಸಿಟಿ ಎಫ್‌ಸಿ ತಂಡವನ್ನು 5–0 ಗೋಲುಗಳಿಂದ ಸದೆಬಡಿದಿತ್ತು.

‘ಮುಂಬೈ ವಿರುದ್ಧದ ಗೆಲುವು ನಮಗೆ ಅಗತ್ಯ ಮನೋಬಲವನ್ನು ಒದಗಿಸಿತು. ಏಕೆಂದರೆ ಗೋವಾ ತಂಡ ಲೀಗ್‌ನ ಅತ್ಯುತ್ತಮ ತಂಡಗಳಲ್ಲಿ ಒಂದಾಗಿತ್ತು. ನಮಗೆ ಆ ತಂಡ ಎದುರಿಸಲು ಬೇಕಾದ ಸ್ಥೈರ್ಯವನ್ನು ಆ ಗೆಲುವು ಒದಗಿಸಿತ್ತು’ ಎಂದು ಹೇಳಿದರು.

ನಾಜೂಕಾದ ಫಿನಿಷಿಂಗ್ ಮೂಲಕ ಬಿಎಫ್‌ಸಿ ತಂಡ ದಾಳಿಯಲ್ಲಿ ಗಮನ ಸೆಳೆದರೆ, ಭಾರತ ತಂಡದ ಆಟಗಾರರಾದ ನಾಮ್‌ಗ್ಯಾಲ್ ಭುಟಿಯಾ, ಚಿಂಗ್ಲೆಸನಾ ಸಿಂಗ್, ರಾಹುಲ್ ಭೆಕೆ, ರೋಷನ್ ಸಿಂಗ್ ಅವರಿದ್ದ ರಕ್ಷಣಾ ಪಡೆಯ ಕಾರ್ಯ ನಿರ್ವಹಣೆ ಮೆಚ್ಚುಗೆಗೆ ಪಾತ್ರವಾಯಿತು.

ಬಿಎಫ್‌ಸಿ, ಫತೋರ್ಡಾದ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಭಾನುವಾರ ಸೆಮಿಫೈನಲ್ ಎರಡನೇ ಲೆಗ್ ಆಡಲು ಗೋವಾಕ್ಕೆ ತೆರಳಲಿದೆ.

ಜೆರಾರ್ಡ್ ಝರಗೋಝಾ

ಜೆಮ್ಷೆಡ್‌ಪುರ ತಂಡಕ್ಕೆ ಗೆಲುವು

ಜೆಮ್ಷೆಡ್‌ಪುರ (ಪಿಟಿಐ): ಇಂಜುರಿ ಅವಧಿಯಲ್ಲಿ ಜಾವಿ ಹೆರ್ನಾಂಡೆಜ್ ಗಳಿಸಿದ ಗೋಲಿನ ನೆರವಿನಿಂದ ಆತಿಥೇಯ ಜೆಮ್ಷೆಡ್‌ಪುರ ತಂಡವು ಗುರುವಾರ ಇಂಡಿಯನ್ ಸೂಪರ್ ಲೀಗ್ ಸೆಮಿಫೈನಲ್‌ನ ಮೊದಲ ಲೆಗ್ ಪಂದ್ಯದಲ್ಲಿ 2–1ರಿಂದ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡವನ್ನು ಮಣಿಸಿತು.

ಜೆಮ್ಷೆಡ್‌ಪುರ ತಂಡ ಪರ ಝೇವಿಯರ್ ಸಿವೇರಿಯೊ (24ನೇ ನಿಮಿಷ) ಮತ್ತು ಹೆರ್ನಾಂಡೆಜ್ (90 + 1ನೇ ನಿ.) ಗೋಲು ಗಳಿಸಿದರು. ಬಾಗನ್ ಪರ ಜೇಸನ್ ಕಮಿಂಗ್ಸ್ (37ನೇ ನಿ.) ಚೆಂಡನ್ನು ಗುರಿ ಸೇರಿಸಿದರು. ಕೋಲ್ಕತ್ತದಲ್ಲಿ ಸೋಮವಾರ ರಿವರ್ಸ್ ಲೆಗ್ ಪಂದ್ಯದಲ್ಲಿ ಇದೇ ತಂಡಗಳು ಸೆಣಸಲಿವೆ.

ನಾಲ್ಕರ ಘಟ್ಟಕ್ಕೆ ಮನೀಷ್, ಹಿತೇಶ್

ನವದೆಹಲಿ (ಪಿಟಿಐ): ಭಾರತದ ಮನೀಷ್ ರಾಥೋಡ್, ಹಿತೇಶ್ ಮತ್ತು ಅಭಿನಾಶ್ ಜಾಮವಾಲ್ ಅವರು ಬ್ರೆಜಿಲ್‌ನಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಕಪ್ ಟೂರ್ನಿಯಲ್ಲಿ ಬುಧವಾರ ಸೆಮಿಫೈನಲ್ ತಲುಪಿದರು.

ಜಾಮವಾಲ್ 65 ಕೆ.ಜಿ. ವಿಭಾಗದಲ್ಲಿ ಸರ್ವಾನುಮತದ ತೀರ್ಪಿನಲ್ಲಿ ಜರ್ಮನಿಯ ಡೆನಿಸ್ ಬ್ರಿಲ್ ಅವರನ್ನು ಮಣಿಸಿದರೆ, ಹಿತೇಶ್ 70 ಕೆ.ಜಿ. ವಿಭಾಗದಲ್ಲಿ ಇಟಲಿಯ ಗೇಬ್ರಿಯಲ್ ಗಿಡಿ ರೊಂಟಾನಿ ಅವರನ್ನು ಸೋಲಿಸಿದರು.

55 ಕೆ.ಜಿ. ವಿಭಾಗದಲ್ಲಿ ರಾಥೋಡ್ ಭಿನ್ನತೀರ್ಪಿನ ಆಧಾರದಲ್ಲಿ ಆಸ್ಟ್ರೇಲಿಯಾದ ಯೂಸುಫ್ ಚೊಥಿಯಾ ಅವರನ್ನು ಸೋಲಿಸಿದರು. ಮೂರನೇ ಸುತ್ತಿನವರೆಗೂ ಹಣಾಹಣಿ ಕಂಡುಬಂತು. ಮೂವರು ತೀರ್ಪುಗಾರರು ರಾಥೋಡ್ ಪರ ತೀರ್ಪು ನೀಡಿದರೆ, ಇಬ್ಬರು ತೀರ್ಪುಗಾರರು ರಾಥೋಡ್ ಮತ್ತು ಯೂಸುಫ್ ಅವರಿಗೆ ಸಮಾನ ಪಾಯಿಂಟ್ಸ್ ಕೊಟ್ಟರು. ಸೆಮಿಫೈನಲ್‌ನಲ್ಲಿ ರಾಥೋಡ್, ಕಜಕಸ್ತಾನದ ನೂರ್‌ಸುಲ್ತಾನ್ ಅಲ್ತಿನ್ಬೆಕ್ ಅವರನ್ನು, ಹಿತೇಶ್, ಮಕಾನ್ ಟ್ರೋರ್ ಅವರನ್ನು, ಜಾಮವಾಲ್, ಇಟಲಿಯ ಮಲಂಗ ಅವರನ್ನು ಎದುರಿಸುವರು.

ಶೂಟಿಂಗ್: ವರುಣ್‌ಗೆ ಐದನೇ ಸ್ಥಾನ

ಬ್ಯೂನೊ ಏರ್ಸ್ (ಪಿಟಿಐ): ಭಾರತದ ವರುಣ್ ತೋಮಾರ್ ಮತ್ತು ರವಿಂದರ್ ಸಿಂಗ್ ಅವರು ಐಎಸ್‌ಎಸ್‌ಎಫ್ ವಿಶ್ವಕಪ್‌ನ ಪುರುಷರ 10 ಮೀ. ಏರ್ ರೈಫಲ್‌ನಲ್ಲಿ ಗುರುವಾರ ಕ್ರಮವಾಗಿ ಐದು ಮತ್ತು ಆರನೇ ಸ್ಥಾನ ಪಡೆದರು.

ವರುಣ್ ಮತ್ತು ರವೀಂದರ್ ಇಬ್ಬರೂ ಕ್ವಾಲಿಫಿಕೇಷನ್‌ನಲ್ಲಿ 580 ಸ್ಕೋರ್‌ನೊಡನೆ ಎಂಟು ಶೂಟರ್‌ಗಳ ಫೈನಲ್ ಸುತ್ತನ್ನು ಪ್ರವೇಶಿಸಿದ್ದರು. ಆದರೆ 24 ಶಾಟ್‌ಗಳ ಫೈನಲ್‌ನ 16 ಮತ್ತು 18ನೇ ಶಾಟ್‌ಗಳ ನಂತರ ಅವರಿಗೆ ಪದಕದ ಸಾಧ್ಯತೆ ದೂರವಾಯಿತು.

ಈ ಸ್ಪರ್ಧೆಯಲ್ಲಿ ಕಣದಲ್ಲಿದ್ದ ಭಾರತದ ಇನ್ನೊಬ್ಬ ಶೂಟರ್ ಸೌರಭ್ ಚೌಧರಿ ಕ್ವಾಲಿಫಿಕೇಷನ್ ಸುತ್ತಿನಲ್ಲಿ 577ರ ಸ್ಕೋರ್‌ನಡೊನೆ 16ನೇ ಸ್ಥಾನದಲ್ಲಿ ಮುಗಿಸಿದ್ದರು.

ಮಹಿಳೆಯರ ಸ್ಕೀಟ್ ಸ್ಪರ್ಧೆಗಳೂ ನಡೆದಿದ್ದು, ತಲಾ 25 ಟಾರ್ಗೆಟ್‌ಗಳ ಮೊದಲ ಎರಡು ಸುತ್ತಿನ ನಂತರ ಭಾರತದ ರೈಝಾ ದಿಲ್ಲೋನ್ ಅವರು 25 ರಲ್ಲಿ 25 ಪರಿಪೂರ್ಣ ಅಂಕ ಪಡೆದು ಉತ್ತಮ ಆರಂಭ ಮಾಡಿದ್ದಾರೆ.

ಶುಕ್ರವಾರ ಎರಡು ಫೈನಲ್‌ಗಳು ನಿಗದಿಯಾಗಿವೆ. ಪುರುಷರ ಮತ್ತು ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ಸ್ (3ಪಿ) ಸ್ಪರ್ಧೆಯ ಪದಕಗಳ ನಿರ್ಧಾರವಾಗಲಿದೆ. ಈ ವಿಭಾಗಗಳಲ್ಲಿ ಭಾರತದ ತಲಾ ಮೂವರು ಸ್ಪರ್ಧಿಗಳಿ-ದ್ದಾರೆ. ಒಲಿಂಪಿಯನ್ ಚೈನ್ ಸಿಂಗ್, ಐಶ್ವರಿ ಪ್ರತಾಪ್ ಸಿಂಗ್ ತೋಮಾರ್ ಮತ್ತು ನೀರಜ್ ಕುಮಾರ್ ಪುರುಷರ 3ಪಿ ವಿಭಾಗದಲ್ಲಿ ಕಣಕ್ಕಿಳಿಯಲಿದ್ದಾರೆ.

ಮನು ಭಾಕರ್, ಸಿಮ್ರನ್‌ಪ್ರೀತ್ ಕೌರ್ ಬ್ರಾರ್ ಮತ್ತು ಇಶಾ ಸಿಂಗ್ ಅವರು ಮಹಿಳೆಯರ 25 ಮೀ. ಪಿಸ್ತೂಲ್ ಸ್ಪರ್ಧೆಯ ಮೊದಲ ಪ್ರಿಸಿಷನ್ ಕ್ವಾಲಿಫಿಕೇಷನ್ ಹಂತದಲ್ಲಿ ಪಾಲ್ಗೊಳ್ಳುವರು.